ವಿಶೇಷ ಸಂಚಿಕೆ

# ಯೋಜನಾ

ಅಕ್ಟೋಬರ್ 2014 ಅಭಿವೃದ್ಧಿ ಮಾಸಪತ್ರಿಕೆ ₹ 20/-

## ಅನೌಪಚಾರಿಕ ಕ್ಷೇತ್ರ

ಅನೌಪಚಾರಿಕ ಆರ್ಥಿಕತೆ
ಬಾರ್ಬರಾ ಹ್ಯಾರಿಸ್-ವೈಟ್

ನಗರ ಅನೌಪಚಾರಿಕ ವಲಯ
ಅರುಪ್ ಮಿತ್ರಾ

ಜ್ಞಾನದ ದೃಷ್ಟಿಯಿಂದ ಅಸಂಘಟಿತ ವಲಯ
ಅಮಿತ್ ಬಾಸೊಲೆ

ವಿಶೇಷ ಲೇಖನ
ಪ್ರಧಾನ ಮಂತ್ರಿ ಜನ ಧನ ಯೋಜನೆ
ಪ್ರವಾಕರ್ ಸಾಹೂ




ಕೇಂದ್ರ ಪ್ರಜ್ಞೆ
ಗಾಂಧಿ ಮತ್ತು ನೈರ್ಮಲ್ಯ
ಸುದರ್ಶನ್ ಅಯ್ಯಂಗಾರ್

Yojana (Kannada) October 2014
"Registered" Reg.No.RNP/KA/BGS/2024/2013-2015

Date of Publication 26th September, Posted at Bangalore GPO on 10th October
Total No. of Pages : 72 + 4 Cover Pages

ISSN 0971-8737
Regd.No. RNI 43034/85


# ಬಿಡಿಎ ಆಧುನಿಕ ಬೆಂಗಳೂರಿನ ಶಿಲ್ಪಿ





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಬೆಂಗಳೂರು ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕೆಲವೇ ಮಹಾ ನಗರಗಳಲ್ಲೊಂದು. 2021ರ ವೇಳೆಗೆ ಇಲ್ಲಿಯ ಜನಸಂಖ್ಯೆ 1 ಕೋಟಿ ತಲುಪಲಿದೆ. ಭಾರತದ ತಂತ್ರಜ್ಞಾನ ರಾಜಧಾನಿ, ಸಿಲಿಕಾನ್ ವ್ಯಾಲಿ ಬೆಂಗಳೂರು ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತಿದೆ. ಬೆಂಗಳೂರಿನ ಈ ಭಾರೀ ಮುನ್ನಡೆಗೆ ಇಲ್ಲಿನ ಔದ್ಯಮಿಕ–ಬೌದ್ಧಿಕ ಸಾಮರ್ಥ್ಯಗಳು, ನಿರಂತರ ಪ್ರಗತಿಪರ ಖಾಸಗೀ, ಸರ್ಕಾರೀ ಕಾರ್ಯಚಟುವಟಿಕೆಗಳೇ ಕಾರಣ.

ಇಂದು ಅಂತರರಾಷ್ಟ್ರೀಯ ಮಹಾನಗರವಾಗುತ್ತಿರುವ ಬೆಂಗಳೂರಿನ ರಭಸದ ಬೆಳವಣಿಗೆಗೆ ಅಗತ್ಯವಾದ ಭಾರಿ ಪ್ರಮಾಣದ ವಸತಿ ಸೌಲಭ್ಯ, ರಸ್ತೆ, ಉತ್ತಮ ಸಾರಿಗೆ ವ್ಯವಸ್ಥೆ, ಮೌಲ್ಯಾಧಾರಿತ ಸೇವೆ ಸೌಕರ್ಯಗಳನ್ನು ಒದಗಿಸುವ ಕಾರ್ಯಗಳು ನಿರಂತರವಾಗಿ ಅಷ್ಟೇ ರಭಸದಿಂದ ಸಾಗುತ್ತಿವೆ.

ಬೆಂಗಳೂರಿನ ಸಮರ್ಪಕ ಬೆಳವಣಿಗೆ, ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿಯೇ 1976ರಲ್ಲಿ ಜನ್ಮ ತಳೆದ ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ಮಹಾನಗರದ ಬೆಳವಣಿಗೆಗೆ ಹೊಸ ತಿರುವು ನೀಡಿ, ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಯ ಆಧಾರ ಸ್ತಂಭವಾಗಿ ಬೆಳೆದು ನಿಂತಿದೆ.

### ನಿವೇಶನ ಹಂಚಿಕೆಯಲ್ಲಿ ಸಾಧನೆ

- ನಿರ್ಮಿಸಿರುವ ಬಡಾವಣೆಗಳು–79
- ರಚಿಸಲಾದ ನಿವೇಶನಗಳ ಸಂಖ್ಯೆ–1,44,453
- ರಚಿಸಲಾದ ನಾಗರಿಕ ಸೌಲಭ್ಯ ನಿವೇಶನಗಳು–1,272
- ಒಟ್ಟು ಉದ್ಯಾನ ಮತ್ತು ಆಟದ ಮೈದಾನಗಳು–416

### ವಸತಿ ಯೋಜನೆ

- ವಿವಿಧ ವಿಸ್ತೀರ್ಣದ ಮತ್ತು ವಿವಿಧ ಆದಾಯ ವರ್ಗದ ಜನರಿಗಾಗಿ ಒಟ್ಟು 30,000 ವಸತಿ ಘಟಕಗಳ ನಿರ್ಮಾಣಕ್ಕೆ ಚಾಲನೆ.
- ನಗರದ ಒಟ್ಟು 12 ವಿವಿಧ ಸ್ಥಳಗಳಲ್ಲಿ ವಸತಿ ಸಮುಚ್ಚಯ ನಿರ್ಮಾಣ.
- ಈಗಾಗಲೇ 784 ವಸತಿ ಘಟಕಗಳ ಹಂಚಿಕೆ ಪೂರ್ಣ.
- 6013 ಮನೆಗಳ ನಿರ್ಮಾಣ ಶೀಘ್ರವೇ ಪೂರ್ಣ.
- ಒಂದು, ಎರಡು ಮತ್ತು ಮೂರು ಕೊಠಡಿಗಳ ವಸತಿ ಗೃಹಗಳು.
- ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಿಶೇಷ ರಿಯಾಯಿತಿ ದರದಲ್ಲಿ ಒಂದು ಕೊಠಡಿಯ ವಸತಿ ಗೃಹಗಳು.

### ಕೆಂಪೇಗೌಡ ಬಡಾವಣೆ ನಿರ್ಮಾಣ

- ಪ್ರಾಧಿಕಾರದ ನೂತನ ವಸತಿ ಬಡಾವಣೆ.
- ಒಟ್ಟು 4043 ಎಕರೆಯಲ್ಲಿ ನಿರ್ಮಿಸುವ ಗುರಿ.
- ಸುಮಾರು 63,000 ನಿವೇಶನಗಳ (ಭೂಮಾಲೀಕರ ಪಾಲು ಸೇರಿದಂತೆ) ರಚನೆಗೆ ಅವಕಾಶ.

### ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯ ಗಮನ

- ಸುಗಮ ಸಂಚಾರಕ್ಕಾಗಿ ಆಯಕಟ್ಟಿನ ಜಂಕ್ಷನ್‌ಗಳಲ್ಲಿ 25ಕ್ಕೂ ಹೆಚ್ಚು ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ.
- ಇಂದಿರಾನಗರ, ಬನಶಂಕರಿ, ಎಚ್.ಎಸ್.ಆರ್. ಬಡಾವಣೆ, ಎಚ್.ಬಿ.ಆರ್. ಬಡಾವಣೆ ಮುಂತಾದ ವಿವಿಧ ಬಡಾವಣೆಗಳಲ್ಲಿ 14 ವಾಣಿಜ್ಯ ಸಂಕೀರ್ಣಗಳ ನಿರ್ಮಾಣ.

### ದೂರದೃಷ್ಟಿಯ ಯೋಜನೆಗಳು

- ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣದ ಮೂಲಕ ಸಂಚಾರ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಪರಿವರ್ತನೆ ತರುವ ನಿಟ್ಟಿನಲ್ಲಿ ಬಿ.ಡಿ.ಎ. ಕಾರ್ಯೋನ್ಮುಖವಾಗಿದೆ.

### ಕೆರೆಗಳ ಸಮಗ್ರ ಅಭಿವೃದ್ಧಿ

- ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್ ಒಟ್ಟು 123 ಕೆರೆಗಳನ್ನು ಬಿ.ಡಿ.ಎ.ಗೆ ವಹಿಸಿದೆ.
- ಮೊದಲನೇ ಹಂತದಲ್ಲಿ 13 ಕೆರೆಗಳ ಸಮಗ್ರ ಅಭಿವೃದ್ಧಿ ಸಾಧಿಸಲಾಗಿದೆ.
- ಎರಡನೇ ಹಂತದಲ್ಲಿ 32 ಕೆರೆಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ.
- 3ನೇ ಹಂತದಲ್ಲಿ 78 ಕೆರೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುವುದು.

### ನಗರದ ಪರಂಪರೆ ಸಂರಕ್ಷಣೆ–ನಿರ್ಮಾಣಕ್ಕೆ ಕೊಡುಗೆ

- ಪಾರಂಪಾರಿಕ ತಾಣಗಳಾದ ಲಾಲ್‌ಬಾಗ್ ಕೆರೆ, ಗಾಜಿನ ಮನೆ, ಬ್ಯಾಂಡ್‌ಸ್ಟ್ಯಾಂಡ್, ಗಾಂಧೀಭವನ ಮತ್ತು ಶ್ರೀ ಕಂಠೀರವ ಒಳಾಂಗಣಕ್ಕೆ ಕಾಯಕಲ್ಪ.
- ಬೆಂಗಳೂರಿನ ಹೃದಯ ಭಾಗದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುವ **"ರಾಷ್ಟ್ರೀಯ ಸೈನಿಕ ಸ್ಮಾರಕ"** ನಿರ್ಮಾಣ.
- ಎಂಟು ಎಕರೆ ವಿಸ್ತೀರ್ಣದಲ್ಲಿ ವಿನೂತನ **"ಶಿಲ್ಪೋದ್ಯಾನ"**.

### ಪರಿಷ್ಕೃತ ಮಾಸ್ಟರ್ ಯೋಜನೆ 2015

- ಮುಂಬರುವ ಹತ್ತು ವರ್ಷಗಳಿಗೆ ಈ ಯೋಜನೆ 1,219.50 ಚ.ಕಿ.ಮೀ.ಗಳ ಸ್ಥಳೀಯ ಯೋಜನಾ ಪ್ರದೇಶ ಈ ಯೋಜನೆಗೆ ಸೇರ್ಪಡೆ. ಗ್ರೇಟರ್ ಬೆಂಗಳೂರು ಪ್ರದೇಶವೂ ಇದಕ್ಕೆ ಸೇರ್ಪಡೆ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು –20
www.bdabangalore.org
ಬಿಡಿಎ ಮುಂದಾಳತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಪಥದಲ್ಲಿ


Printed & Published by Dr. (Ms) Sadhana Rout, Additional Director General and Head on behalf of Publications Division Soochna Bhawan, C.G.O. Complex, Lodhi Road, New Delhi - 110 003. & Printed at Omkar Offset Printers, 3/3, 1st Main Road, New Tharagupet, Bangalore - 560 002. Ph. : 080-26708186/7 and Published at 1st Floor, 'F' Wing, Kendriya Sadana, Koramangala, Bangalore - 560 034. Ph : 080 2553 7244 Chief Editor : Rajesh K. Jha, Senior Editor : B.S. Meenakshi.

ಅಕ್ಟೋಬರ್ 2014 ಸಂಚಿಕೆ – 3 ಸಂಪುಟ – 30

# ಯೋಜನಾ

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ ........ 2
ಅನೌಪಚಾರಿಕ ಆರ್ಥಿಕತೆ ........ 3
**– ಬಾರ್ಬರಾ ಹ್ಯಾರಿಸ್–ವೈಟ್**
ಸ್ವಚ್ಛ ಭಾರತ; ಸವಾಲು – ಮಾರ್ಗೋಪಾಯ ........ 9
ನಗರ ಅನೌಪಚಾರಿಕ ವಲಯ ........ 12
**– ಅರುಪ್ ಮಿತ್ರಾ**
ಜ್ಞಾನದ ದೃಷ್ಟಿಯಿಂದ ಅಸಂಘಟಿತ ವಲಯ ........ 17
**– ಅಮಿತ್ ಬಾಸೋಲೆ**
ಮಾಹಿತಿ ಆರ್ಥಿಕತೆಯಲ್ಲಿ ಅನೌಪಚಾರಿಕ ದುಡಿಮೆ ........ 22
**– ಬಾಬು ಪಿ. ರಮೇಶ್**
ಕಾಯಿದೆ ಅನೌಪಚಾರಿಕತೆ; ಒಂದು ವಿಶ್ಲೇಷಣೆ ........ 26
**– ಸುಪ್ರಿಯಾ ರಾವತ್**
ಅನೌಪಚಾರಿಕ ವಲಯ: ನಾಗರಿಕರ ಪಾತ್ರ ........ 31
**– ರಾಜೇಶ್ ಭಟ್ಟಾಚಾರ್ಯ**
ಅನೌಪಚಾರಿಕ ವಲಯದ ಸ್ವರೂಪ ಮತ್ತು ಪರಿಕಲ್ಪನೆ ........ 34
**– ಅಶಿಮಾ ಮುಜುಂದಾರ್**
ಕೆಲಸ ಮತ್ತು ಜೀವನೋಪಾಯದ ಸಮಸ್ಯೆ ........ 39
**– ಡಾ. ಬಿ. ವಿ. ಭೋಸಲೆ**
ಪ್ರಧಾನ ಮಂತ್ರಿ ಜನ ಧನ ಯೋಜನೆ ........ 43
**– ಪ್ರವಾಕರ್ ಸಾಹೂ**
ಗಾಂಧಿ ಮತ್ತು ನೈರ್ಮಲ್ಯ ........ 48
**– ಸುದರ್ಶನ್ ಅಯ್ಯಂಗಾರ್**
ಅಸಂಘಟಿತ ವಲಯ; ಸ್ತ್ರೀಯರ ಸ್ಥಿತಿ–ಗತಿ ........ 54
**– ವಿಮಲ ಕೆ. ಎಸ್.**
ಅಸಂಘಟಿತ ಮಕ್ಕಳ ದುಡಿಮೆ ........ 59
**– ಪಿ.ಪಿ. ಬಾಬುರಾಜ್**
ಪಟಾಕಿ ಕಾರ್ಖಾನೆಗಳು; ಬಾಲಕಾರ್ಮಿಕರ ವಿನಾಶ ........ 63
**– ದಾಸನೂರು ಕೂಸಣ್ಣ**
ಗಾಂಧೀಜಿ ಕನಸಿದ ಹಳ್ಳಿಯ ಸಂಕಥನ ........ 67
**ಡಾ. ಡೊಮಿನಿಕ್ ಡಿ.**
ಗ್ರಾಮಗಳಲ್ಲಿ ತ್ಯಾಜ್ಯ ನಿರ್ವಹಣೆ ........ 70
**ತುಕಾರಾಂ ರಾವ್ ಬಿ.ವಿ.**
ನಿಮಗಿದು ತಿಳಿದಿದೆಯೇ? ........ 71
ವಾರ್ತಾ ವಿಶೇಷ ........ 72

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ.
ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.

ಮುಖ್ಯ ಸಂಪಾದಕರ ಲೇಖನಿಯಿಂದ

## ಭಾರತದ ರೂವಾರಿಗಳು




ಚುಮು ಚುಮು ಬೆಳಗು. ಹಾಲಿನ ಹುಡುಗ ಹಾಲಿನ ಪ್ಯಾಕೇಟ್ ಕೈಗೆ ನೀಡುವಷ್ಟರಲ್ಲೆ, ಪೇಪರ್ ಹುಡುಗ ಎಸೆದ ದಿನಪತ್ರಿಕೆ ಬಂದು ಬೀಳುತ್ತದೆ. ಅಷ್ಟೊತ್ತಿಗಾಗಲೇ, ತಳ್ಳುವ ಗಾಡಿಯಲ್ಲಿ ಸೊಪ್ಪು-ತರಕಾರಿ ಮಾರುವವರ ಪ್ರವರ ಕೇಳುತ್ತದೆ. ಹಾಗೆಯೇ ರದ್ದಿ ಮಾರಾಟಕ್ಕಿದೆಯಾ ಎಂದು ಸೈಕಲ್ ಬೆಲ್ ಮಾಡುತ್ತಾ ವಿಚಾರಿಸುವವನ ಕೂಗು ಸೀಳಿಕೊಂಡು ಬರುತ್ತದೆ. ಈ ಮಧ್ಯೆ ಪಾತ್ರೆ, ಬಟ್ಟೆ, ಮನೆ ಸ್ವಚ್ಛಗೊಳಿಸಲು ಕೆಲಸದಾಕೆ ಧಾವಿಸುತ್ತಾಳೆ. ದೈನಂದಿನ ವಿಧಿ ಮುಗಿಸಿ ಕಚೇರಿಗಾಗಿ ಹೊರಗೆ ಹೊರಡುತ್ತಲೇ ಅಲ್ಲೆ ಇರುವ ಚೌಕದಲ್ಲಿ ಬೂಟು ಪಾಲಿಶ್ ಮಾಡುವ ಹುಡುಗ ಕಾಣುತ್ತಾನೆ. ಅಲ್ಲೆ ಯುವಕನೊಬ್ಬ ಚಹ ಕಾಯಿಸುತ್ತಿರುತ್ತಾನೆ. ಎಳನೀರು, ಹಣ್ಣು ಮಾರಾಟ ಮಾಡುವವರೂ ಗೋಚರಿಸುತ್ತಾರೆ.

ಹೀಗೆ ನಗರ-ಪಟ್ಟಣ ಬದುಕಿನಲ್ಲಿ ಪ್ರತಿಹೆಜ್ಜೆಯಲ್ಲೂ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವವರ ಸಾಲೇ ಕಾಣ ಸಿಗುತ್ತದೆ. ಈ ಪಟ್ಟಿ ಅಲ್ಲೆ ನಿಲ್ಲುವುದಿಲ್ಲ. ಹಾಗೆ ಮುಂದೆ ಸಾಗಿದರೆ ಆಟೊ ರಿಕ್ಷಾ ಚಾಲಕರು, ರಿಕ್ಷಾ ತುಳಿಯುವವರು, ಲಾರಿ ಚಾಲಕರು, ಕ್ಲೀನರ್ಸ್, ರಸ್ತೆ ಬದಿಯ ಬಟ್ಟೆ, ಪ್ಲಾಸ್ಟಿಕ್ ವಸ್ತು ಮಾರಾಟಗಾರರು, ಚಪ್ಪಲಿ ಹೊಲೆಯುವವರು, ಕಚೇರಿ ಬಳಿ ಸೆಕ್ಯುರಿಟಿ, ವಾಚ್‌ಮನ್, ಆಫೀಸ್ ಬಾಯ್...., ಬಟ್ಟೆ ಹೊಲಿಯುವವರು, ಧಾರ್ಮಿಕ ಸ್ಥಳಗಳಲ್ಲಿನ, ಅರ್ಚಕರು, ಪೂಜಾರಿಗಳು. ಬಹುಷ್ಯಃ ಈ ಪಟ್ಟಿಯಲ್ಲಿ ಇಲ್ಲಿ ಇನ್ನೂ ಒಳಗೊಳ್ಳದವರ ಸಂಖ್ಯೆಯೇ ಹೆಚ್ಚು. ಹೀಗಾಗಿ ಅನೌಪಚಾರಿಕ ಕ್ಷೇತ್ರದ್ದು ವಿರಾಟ್ ಸ್ವರೂಪ.

ಗ್ರಾಮ ಜೀವನದಲ್ಲಿ ಹೇಳುವುದಾದರೆ, ಕೃಷಿಯಲ್ಲಿ ತೊಡಗಿರುವ ಶೇಕಡ 70 ಭಾಗದಷ್ಟು ಜನರು, ಕೃಷಿ ಕಾರ್ಮಿಕರು, ಮೀನುಗಾರಿಕೆ, ಹೈನುಗಾರಿಕೆ, ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ ಮೊದಲಾದ ಕಸುಬುಗಳಲ್ಲಿ ಕಣ್ಣಿಗೆ ಕಾಣುವವರೆಲ್ಲ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವವರು; ಅಂದರೆ, ಯಾವುದೇ ನಿಗದಿತ ನಿರ್ದಿಷ್ಟ ಆದಾಯ ಇರದವರು. ಇದರ ಅಗಾಧತೆ ನೋಡಿದರೆ, ಭಾರತದ ಆರ್ಥಿಕತೆ ನಿಂತಿರುವುದೇ ಈ ಅನೌಪಚಾರಿಕ ಕ್ಷೇತ್ರದ ಮೇಲೆ ಎಂದು ಸ್ಪಷ್ಟವಾಗುತ್ತದೆ. ಅದರದ್ದು ಬಹುಮುಖ ಆಯಾಮ.

ಮಾನವಶಾಸ್ತ್ರಜ್ಞ, ಬ್ರಿಟನ್ನಿನ ಕೀತ್ ಹಾರ್ಟ್, ಘಾನಾದಲ್ಲಿ ಮಾಡಿದ ಅಧ್ಯಯನದಲ್ಲಿ "ಅನೌಪಚಾರಿಕ ಕ್ಷೇತ್ರ"ದ ಮೊದಲ ಪರಿಕಲ್ಪನೆ ನೀಡಿದ್ದಾನೆ. ನಂತರ 1970 ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಈ ರಂಗದಲ್ಲಿ, ಗೌರವಯುತ ಕೆಲಸ, ಕೆಲಸದ ಹಕ್ಕು, ದುಡಿಮೆ ಹಕ್ಕು ಸಾಮಾಜಿಕ ಭದ್ರತೆ ವಿಚಾರಗಳನ್ನು ಪ್ರಸ್ತಾಪಿಸಿತು. ಈ ಕ್ಷೇತ್ರ ಈಗ ಬೃಹದಾಕಾರವಾಗಿ ಬೆಳೆದಿದೆ. ಹೀಗಾಗಿ ಈ ಕ್ಷೇತ್ರದ ಆರ್ಥಿಕ ಅಂಶಗಳ ಬಗ್ಗೆ ನೀತಿ ನಿರೂಪಕರು ಗಮನ ಕೇಂದ್ರೀಕರಿಸಬೇಕಾಗಿದೆ.

2009-10ರ ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ಸಮೀಕ್ಷೆಯಂತೆ ಕೃಷಿ ಕ್ಷೇತ್ರದ ಶೇ 90 ಹಾಗೂ ಕೃಷಿಯೇತರ ರಂಗದ ಶೇ 70 ರಷ್ಟು ಜನ ಈ ಅನೌಪಚಾರಿಕ ಕ್ಷೇತ್ರದಲ್ಲಿ ಬರುತ್ತಾರೆ. ಹೀಗಾಗಿ ಇದು ಆರ್ಥಿಕತೆಯ ಉಳಿಕೆ ಭಾಗ ಅಲ್ಲ. ಸ್ಪಷ್ಟವಾಗಿ ಹೇಳಬೇಕೆಂದರೆ ಆರ್ಥಿಕತೆಯ ಮುಖ್ಯಭಾಗ. ಭಾರತದಲ್ಲಿ ಅನೌಪಚಾರಿಕ ರಂಗದಲ್ಲಿ ಉದ್ಯೋಗದ ಪ್ರಮಾಣದ ಏರಿಕೆ ತೃಪ್ತಿದಾಯಕವಾಗಿಲ್ಲದಿದ್ದರೂ ಅದು ಆರ್ಥಿಕತೆಯ ಪ್ರಚ್ಛನ್ನ ಅಂಗವಾಗಿ ಮುಂದುವರೆದಿದೆ. ಸಂಘಟಿತ ಕ್ಷೇತ್ರ ಹಿಂದೆ ಬಿದ್ದಿದ್ದರೂ, ಉತ್ಪಾದಕತೆ, ನೈಜ ಕೂಲಿ, ಬಂಡವಾಳ ಸಂಗ್ರಹ ವಿಷಯದಲ್ಲಿ ಸುಧಾರಣೆ ಕಂಡುಬಂದಿದೆ. ಅನೌಪಚಾರಿಕ ಕ್ಷೇತ್ರವನ್ನು ನಿಂತ ನೀರೆಂದು ಪರಿಗಣಿಸುವುದು ತಪ್ಪಾಗುತ್ತದೆ. ಈ ಕ್ಷೇತ್ರದ ಕೌಶಲ್ಯವನ್ನು ಇದೇನು "ಬ್ರಹ್ಮ ವಿದ್ಯೆ ಅಲ್ಲ, ಲೋಕ ವಿದ್ಯೆ" ಎಂದು ಉಪೇಕ್ಷಿಸುವಂತೆಯೇ ಇಲ್ಲ.

ಈ ನಿಟ್ಟಿನಲ್ಲಿ ಅನೌಪಚಾರಿಕ ಆರ್ಥಿಕತೆಯನ್ನು ಮುಖ್ಯವಾಹಿನಿಯ ವ್ಯವಸ್ಥೆಗೆ ಕರೆತರಲು ಒಂದು ಸೂಕ್ತ ನಿಯಂತ್ರಣ ಚೌಕಟ್ಟಿನ ಅಗತ್ಯವಿದೆ. ಅದು ಈ ಕ್ಷೇತ್ರದ ದುಡಿಮೆದಾರರಿಗೆ ಗೌರವಯುತ ಬಾಳು-ಗಳಿಕೆ ತಂದುಕೊಡುವಂತಿರಬೇಕು. ಈ ಕ್ಷೇತ್ರದ ಜನರಿಗೆ ಸಾಮಾಜಿಕ ರಕ್ಷಣೆ ದೊರಕಬೇಕು. ಅವರು ಅಸಹಾಯಕರಾಗಿ ಯಾವುದೇ ಮೊತ್ತಕ್ಕೆ ದುಡಿಯುವಂತಾಗಬಾರದು. ದೇಶವನ್ನು ಒಂದು ನೈಜ ತಯಾರಿಕಾ ರಾಷ್ಟ್ರವನ್ನಾಗಿಸುವಲ್ಲಿ ಈ ರೂವಾರಿಗಳನ್ನು ಮರೆಯುವಂತೆಯೇ ಇಲ್ಲ. ❑

# ಅನೌಪಚಾರಿಕ ಆರ್ಥಿಕತೆ

ಬಾರ್ಬರಾ ಹ್ಯಾರಿಸ್-ವೈಟ್
ಕನ್ನಡಕ್ಕೆ : ಎಸ್. ಕುಮಾರ್



ಹೊಸ ಅಧ್ಯಯನಗಳ ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ ಅನೌಪಚಾರಿಕ ಆರ್ಥಿಕತೆ ಬದಲಾವಣೆ ಪ್ರತಿರೋಧಿಯಲ್ಲ. ಆದರೆ, ಭಾರತದ ಉನ್ನತ ಬೆಳವಣಿಗೆಗೆ ಎಲ್ಲ ರೀತಿಯ ಸಾಕ್ಷಾತ್ಕಾರಗಳಿಗೆ ಮಾರ್ಗವಾಗಿ ಅದನ್ನು ಕಂಡುಕೊಳ್ಳಬೇಕಾಗಿದೆ. ಭಾರತದ ಆರ್ಥಿಕ ನಿರೂಪಕರು ಈ ಸವಾಲನ್ನು ಗುರುತಿಸಿ, ಸಾಧನೆಗೆ ಮಾರ್ಗ ಸುಗಮಗೊಳಿಸಬೇಕಾಗಿದೆ.

ಭಾರತದ ಅನೌಪಚಾರಿಕ ಆರ್ಥಿಕತೆ, ಅದರ ಗಾತ್ರ ಹಾಗೂ ಪ್ರಾಮುಖ್ಯತೆ ದೃಷ್ಟಿಯಿಂದಾಗಿ ಜಗತ್ತಿನಲ್ಲೆ ವಿಶಿಷ್ಟವೆದ್ದೆನಿಸಿದೆ. ಸರ್ಕಾರದಿಂದ ಅಥವಾ ಯಾವುದೇ ಕಾನೂನಿನ ನಿಯಂತ್ರಣಕ್ಕೊಳಪಡದ, ನೊಂದಾಯಿತವಲ್ಲದ ಚಟುವಟಿಕೆಯನ್ನು ಅನೌಪಚಾರಿಕ ಆರ್ಥಿಕತೆಯೆಂದು ಕರೆಯಲಾಗಿದೆ. ಆದರೆ, ಶೈಕ್ಷಣಿಕ ದಾರ್ಶನಿಕರು ಈ ಪರಿಕಲ್ಪನೆಯನ್ನು ಟೀಕಿಸುತ್ತಾರೆ. ಆದರೆ ಜನಸಾಮಾನ್ಯರು ಇದನ್ನು ಅರಿತುಕೊಂಡಿದ್ದಾರೆ. ಆದ್ದರಿಂದ ಯೋಜಕರು ತಮ್ಮ ಪರಿಕಲ್ಪನೆಯ ಆದ್ಯಗಮನವನ್ನು ಇದರತ್ತ ಹರಿಸಬೇಕಾಗಿದೆ. ಈ ಲೇಖನದಲ್ಲಿ ಇತ್ತೀಚಿನ ಕೆಲವು ಸಂಶೋಧನೆಗಳನ್ನು ಆಧರಿಸಿ, ನೀತಿ ಮತ್ತು ಯೋಜನೆಗಳಲ್ಲಿರುವ ತೊಡಕುಗಳನ್ನು ವಿಶ್ಲೇಷಿಸಲಾಗಿದೆ.

### ರಚನೆ ಮತ್ತು ಸಂಬಂಧ

ಮೊದಲನೆಯದಾಗಿ ಅನೌಪಚಾರಿಕ ಕ್ಷೇತ್ರ ತಾತ್ಕಾಲಿಕ ಸ್ವರೂಪದ್ದಲ್ಲ. 1970ರಲ್ಲಿ ಪ್ರಚಲಿತಕ್ಕೆ ಬಂದ ಈ ಪರಿಕಲ್ಪನೆ ನೊಂದಾಯಿತವಲ್ಲದ ಚಟುವಟಿಕೆಗಳು ಔಪಚಾರಿಕ, ದೇಶ ನಿರ್ಮಿತಿಯ ಭರಾಟೆ, ಔದ್ಯೋಗೀಕರಣ (ಕೃಷಿ ಸೇರಿದಂತೆ) ನಗರೀಕರಣ ಬ್ಯಾಂಕಿಂಗ್ ಕ್ಷೇತ್ರದ ಬೆಳವಣಿಗೆ ನಡುವೆ ಕುಗ್ಗಿ ಹೋಗಬಹುದೆಂದು ಭಾವಿಸಲಾಗಿತ್ತು. 'ಅಭಿವೃದ್ಧಿಯ ದಶಕ'ಗಳೇ ಕಳೆದು ಹೋದರೂ ಅನೌಪಚಾರಿಕ ಕ್ಷೇತ್ರದ ಜಾಲ, ಅನೇಕ ಇನ್ನಿತರ ಆರ್ಥಿಕತೆಗಳ ವಿನ್ಯಾಸಗಳೊಡನೆ ಸಮ್ಮಿಳಿತಗೊಂಡು ಬಿಟ್ಟಿದೆ. ಈ ಇನ್ನಿತರ ಆರ್ಥಿಕತೆಗಳಡಿ ಇರುವ ಔಪಚಾರಿಕ ನೊಂದಾಯಿತ ಚಟುವಟಿಕೆಗಳು ಅನೌಪಚಾರಿಕ ಕ್ಷೇತ್ರವನ್ನು ಉಪಗುತ್ತಿಗೆ ವಲಯವನ್ನಾಗಿ ಮಾಡಿಕೊಂಡು ನೇರವಾಗಿ ಶೋಷಿಸುತ್ತಿವೆ. ಅಷ್ಟೇ ಅಲ್ಲ. ಅನೌಪಚಾರಿಕ ಕ್ಷೇತ್ರದಲ್ಲಿ ಕಡಿಮೆ ಕೂಲಿಗೆ ಸಿಗುವ ಸೇವೆ ಮತ್ತು ಉತ್ಪನ್ನಗಳಿಂದ ಲಾಭ ಪಡೆಯುತ್ತಿವೆ. ಹೀಗಾಗಿ ಅಸಂಘಟಿತ ಕ್ಷೇತ್ರವೆಂದು, ಮೇಲ್ತೋರಿಕೆಗೆ ಟೀಕೆಗೊಳಗಾಗುತ್ತಿದ್ದರೂ ಅನೌಪಚಾರಿಕ ಕಾರ್ಮಿಕ ವರ್ಗ ಬೆಳೆಯುತ್ತಲೇ ಇದೆ.

ನೀತಿ ನಿರೂಪಣೆ ಮತ್ತು ಜಾರಿಯ ಸಾಧನ ಮಾರ್ಗಗಳನ್ನು ಅನೌಪಚಾರಿಕಗೊಳಿಸಲಾಗಿದೆ ಎಂದು ಭಾವಿಸಿದ ಸಂದರ್ಭಗಳಲ್ಲಿ ಗುರಿ ನಿರ್ದಿಷ್ಟದ ಫಲಾನುಭವಿ ಇತರ ಫಲಾನುಭವಿಗಳಿಗಿಂತ ಹೆಚ್ಚು ಏಕೆ ಬಲಿಪಶುವಾಗುತ್ತಾನೆ ಎಂಬ ಬಗ್ಗೆ ಅಧ್ಯಯನ ನಡೆಸಲಾಗಿತ್ತು

ಚುನಾವಣೆಗಳಿಗೆ ನಿಧಿ ನೆರವು ವಿಚಾರ ಗಮನಿಸಿದಾಗ, ಅನೌಪಚಾರಿಕ ಆರ್ಥಿಕತೆ ಹಾಗೂ ಕಪ್ಪು ಆರ್ಥಿಕತೆ, ಭಾರತದ ಪ್ರಾತಿನಿಧಿಕ ರಾಜಕೀಯದ ತಪ್ಪಿಸಿಕೊಳ್ಳಲಾಗದ ಆಧಾರಗಳಾಗಿವೆ.

ಎರಡನೆಯದಾಗಿ ಭಾರತದ ಅನೌಪಚಾರಿಕ ಆರ್ಥಿಕತೆ ಅಂಚಿನ ಚಟುವಟಿಕೆಯಲ್ಲ ಅಥವಾ ಇನ್ನಿತರ ಬ್ರಿಕ್ಸ್ (ಬ್ರೆಜಿಲ್, ರಶಿಯಾ, ಭಾರತ, ಚೀನಾ, ಸೌತ್ ಆಫ್ರಿಕಾ) ದೇಶಗಳಲ್ಲಿ ಇದ್ದಂತೆ ಒಂದು ಸಣ್ಣ ಭಾಗವಾಗಿ ಉಳಿದಿಲ್ಲ. ಭಾರತದ ಅಂದಾಜು ಶೇ. 92.5 ರಷ್ಟು ಜೀವನೋಪಾಯ ಮಾರ್ಗಗಳು ನೊಂದಾಯಿತವುಗಳಲ್ಲ. ಇವು ದೇಶದ ಜಿಡಿಪಿಗೆ ಮೂರರಲ್ಲಿ ಎರಡು ಭಾಗದಷ್ಟು ಪ್ರಮಾಣದಲ್ಲಿ ಕಾಣಿಕೆ

ಎಮರೈಟಸ್ ಪ್ರೊಫೆಸರ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ.

| ಪಟ್ಟಿ : ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನಾ ಜಾರಿಯಲ್ಲಿ ಕಂಡುಬಂದ ಅನೌಪಚಾರಿಕ – ಔಪಚಾರಿಕ ಚಲಾವಣೆ | | |
|---|---|---|
| **ಚಲಾವಣೆ ನಮೂನೆ** | **ರಾಜಕೀಯ ತಂತ್ರಜ್ಞಾನ** | **ರಾಜಕೀಯ ಕಾರ್ಯತಂತ್ರ** |
| 1. ಚಲಾವಣೆಯಲ್ಲಿ ಔಪಚಾರಿಕ ಬದಲಾವಣೆ | * ಸ್ವಸಹಾಯ ಗುಂಪುಗಳಲ್ಲಿ ಬಿಪಿಎಲ್‌ಯೇತರ ಸದಸ್ಯರ ಸೇರ್ಪಡೆ<br>* ಉದ್ದೇಶಪೂರ್ವಕ ಅಲ್ಲದ ಹೊಣೆಗಾರಿಕೆ ನಿರ್ವಹಿಸದ ತಪ್ಪಿತಸ್ಥರೂ ಕೂಡ ಈಗ ಅರ್ಹರು<br>* ಶೇ. 30 ರಷ್ಟನ್ನು ಬಿಪಿಎಲ್ ಜನರಿಗೆ ಕೊಡಬೇಕೆಂದು ನಿಯಮ ರದ್ದತಿ<br>* ಬ್ಯಾಕ್ ಎಂಡ್ ಸಬ್ಸಿಡಿ<br>* ಎಸ್‌ಹೆಚ್‌ಜಿ ಖಾತೆಗೆ ನೇರವಾಗಿ ನಗದು ಅಥವಾ ಚೆಕ್ ಮೂಲಕ ಹಣದ ಬಟವಡೆ<br>* ಮುಕ್ತ ಮಾರುಕಟ್ಟೆಯಲ್ಲಿ ದನ ಅಥವಾ ಇನ್ನಿತರ ಜಾನುವಾರುಗಳ ಖರೀದಿ | * ಹೊಸ ಚುನಾಯಿತ ಸರ್ಕಾರಗಳಿಂದ ಹೊಸ / ಪರಿಷ್ಕೃತ ಬಡತನ ನಿರ್ಮೂಲನಾ ನೀತಿ ಪ್ರಕಟ |
| 2. ಉಪೇಕ್ಷಿತ ಔಪಚಾರಿಕ ಚಲಾವಣೆ | * 30% ಬಿಪಿಎಲ್ ಜನರಿಗೆ ಸೌಲಭ್ಯ<br>* ಪ್ರಮುಖ ಚಟುವಟಿಕೆಗಳು<br>8 ಉದ್ದೇಶ ಪೂರ್ವಕವಲ್ಲದ ಹೊಣೆಗಾರಿಕೆ ನಿರ್ವಹಿಸದ ತಪ್ಪಿತಸ್ಥರ ಅರ್ಹತೆ<br>* 80% ಹೆಚ್ಚು ಹೊಣೆಗಾರಿಕೆ ನಿರ್ವಹಿಸದ ತಪ್ಪಿತಸ್ಥರು ಇರುವ ಪಂಚಾಯತ್‌ಗಳು ಸೇವೆಯಿಂದ ಹೊರಗೆ | * ಗ್ರಾಮಸಭೆಗಳಲ್ಲಿ ಸ್ವಸಹಾಯ ಗುಂಪುಗಳ ಸದಸ್ಯರ ಆಯ್ಕೆ<br>* ಸಂಸತ್ತಿನ ಅಧಿವೇಶನ ಇರುವಾಗಲೇ ಡಿಆರ್‌ಡಿಎಗಳು ಜಿಲ್ಲಾ ಸಮಿತಿ ಸಭೆಗಳನ್ನು ನಡೆಸುವ ಕಾರಣ ಸಂಸದರ ಗೈರು ಹಾಜರಿ<br>* ಪಿಎಸಿ ವರದಿ ಶಿಫಾರಸುಗಳ ಕಡೆಗಣನೆ |
| 3. ಕಡಿಮೆ ಪ್ರಮಾಣದ ಔಪಚಾರಿಕ ಚಲಾವಣೆ | * ರಾಜ್ಯಗಳಿಂದ ಕಡಿಮೆ ಪ್ರಮಾಣದ ಹಣಬಳಕೆ<br>* ರಾಜ್ಯಗಳು ತಮ್ಮ ಪಾಲಾದ ಶೇ. 25% ಹಣವನ್ನು ಹಾಕಿಲ್ಲ.<br>* ಕೇಂದ್ರದಿಂದ ಅನುದಾನ ಕಡಿತ<br>* ಯೋಜಿತ ಮುಂಗಡ ಪತ್ರದಲ್ಲಿ ಸಂಪನ್ಮೂಲ ಕಡಿತ<br>* ಕಡಿಮೆ ಪ್ರಮಾಣದ ಹಣಕಾಸು ನೆರವು<br>* ಕಡಿಮೆ ಸಾಲ ನೀಡಿಕೆ ಕ್ರೋಢೀಕರಣ<br>* ಮಂಜೂರಾತಿಯಲ್ಲಿ ವಿಳಂಬ<br>* ವರ್ಷಾಂತ್ಯಕ್ಕೆ ಸಾಲ ಅರ್ಜಿಗಳ ವರ್ಗೀಕರಣ<br>* ಸರ್ಕಾರದೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಂಡ ಸ್ವಸಹಾಯ ಗುಂಪುಗಳಿಗೆ ಸಕಾಲದಲ್ಲಿ ಇಲಾಖೆಗಳಿಂದ ಹಣಕಾಸು ನೆರವು ಒದಗಿಲ್ಲ. | * ಜಿಲ್ಲಾ ಯೋಜನೆ ಮತ್ತು ವಿಚಕ್ಷಣ ದಳ, ನಿಗಾ ಸಮಿತಿಗಳು ನಿಯಮಿತವಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿಲ್ಲ.<br>* ಕಡಿಮೆ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಾಗಿದೆ ಎಂದು ಪಿಎಸಿಯಿಂದ ವರದಿ |
| 4. ಅಧಿಕೃತ ನಿರ್ದೇಶನಗಳು ಇಲ್ಲದ ಕಾರಣ ಔಪಚಾರಿಕ ಚಲಾವಣೆ | * ಜಿಲ್ಲಾ ಆಡಳಿತ, ತಿಂಗಳಿಗೆ ರೂ. 30 – 50 ಉಳಿತಾಯ ಮಾಡುವಂತೆ ಸ್ವಸಹಾಯ ಗುಂಪುಗಳ ಸದಸ್ಯರನ್ನು ಪ್ರೋತ್ಸಾಹಿಸಿದೆ. | * ತಾಲ್ಲೂಕು ಅಥವಾ ಜಿಲ್ಲಾ ಮಟ್ಟಕ್ಕೆ ಬದಲಾಗಿ ರಾಜ್ಯಮಟ್ಟದಲ್ಲಿ ಬಿಪಿಎಲ್ ಕನಿಷ್ಠ ಮಿತಿ ನಿರ್ಧಾರ<br>* ಸರ್ಕಾರೇತರ ಸಂಸ್ಥೆ ಆಯ್ಕೆ ಮಾಡುವಾಗ ಪಾರದರ್ಶಕ ಪದ್ಧತಿ ಇಲ್ಲ. ಡಿಆರ್‌ಡಿಎ ಅಧಿಕಾರಿಗಳೇ ಫಲಾನುಭವಿ ಆಯ್ಕೆ ಮಾಡುವ ಕಾರಣ ಎಲ್ಲಾ ಪ್ರಕರಣಗಳಲ್ಲೂ ಸರ್ಕಾರೇತರ ಸಂಸ್ಥೆಯ ಅನುಭವ ಅಥವಾ ಅರ್ಹತೆ ಪರಿಗಣನೆಗೆ ಬಂದಿರಲಿಕ್ಕಿಲ್ಲ. |
| 5. ಇದರಿಂದಾಗಿ ಅನೌಪಚಾರಿಕ ಚಲಾವಣೆ ಅಭ್ಯಾಸ | * ಗುರಿ ನಿರ್ದೇಶನ ಮುಂದುವರೆಯುತ್ತದೆ.<br>* ಗಢ್‌ಚಿರೋಲಿಯಲ್ಲಿ ವರ್ಷಾರ್ಧದಲ್ಲಿ ಹೊಂದಾಣಿಕೆ ನಡೆಯಿತು. | * ಥಾರ್ ಗ್ರಾಮ ಪಂಚಾಯತ್‌ಗಳು ಶಕ್ಯ ಸಾಲಗಾರರ ಗುರುತನ್ನು ದೃಢ ಪಡಿಸಿವೆ. |

| ಚಲಾವಣೆ ನಮೂನೆ | ರಾಜಕೀಯ ತಂತ್ರಜ್ಞಾನ | ರಾಜಕೀಯ ಕಾರ್ಯತಂತ್ರ |
|---|---|---|
| 6. ಅನೌಪಚಾರಿಕ | * ಸ್ವಸಹಾಯ ಗುಂಪುಗಳಾಗಿ ಇಓಗಳು ಠೇವಣಿ ಇಟ್ಟಿದ್ದಾರೆ. | * ಥಾರ್ ಗ್ರಾಮ ಪಂಚಾಯ್ತಿ ಎಲ್ಲವನ್ನೂ ಒದಗಿಸಿದೆ. |
| 7. ಕೆಲಸದ ಸುಲಭ ಚಲಾವಣೆ | * ಮಹಿಳೆಯರ ಮತ್ತು ಪುರುಷರ ಸ್ವಸಹಾಯ ಗುಂಪು ರಚನೆ – ಇದರಲ್ಲಿ ಒಂದೇ ಕುಟುಂಬ ಸದಸ್ಯರು ಹಾಗೂ ಪತಿ / ಪತ್ನಿ, ಗುಂಪಿನ ಸದಸ್ಯರಾಗಿದ್ದರು.<br>* ಈ ಗುಂಪುಗಳನ್ನು ಅರ್ಹತಾ ಪಟ್ಟಿಗೆ ಸೇರಿಸಲು ಸ್ವಸಹಾಯ ಗುಂಪುಗಳಿಗೆ ಅಸ್ತಿತ್ವದ ಹಿರಿತನ ಒದಗಿಸಿರುವುದು.<br>* ಎಲ್ಲ ಸ್ವಸಹಾಯ ಗುಂಪುಗಳಿಗೆ ಸಿಗದ ಪೂರಕ ತರಬೇತಿ.<br>* ವರ್ಗೀಕರಣ ಅರ್ಹತೆಯನ್ನು ಸಡಿಲಗೊಳಿಸಿದ ಕಾರಣ. ಸ್ವಸಹಾಯ ಗುಂಪುಗಳು ಗುಣಮಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಪರಿಸ್ಥಿತಿ; ಇಲ್ಲಿ ಮತ್ತೆ ಹೊಂದಾಣಿಕೆ.<br>* ವರ್ಗೀಕರಣದ ಗುಂಪುಗಾರಿಕೆ<br>* ಸ್ವಸಹಾಯ ಗುಂಪಿನ ಸದಸ್ಯರೆಲ್ಲರಿಗೂ ಸಾಲ ವಿತರಣೆ<br>* ಸಂದರ್ಭದಲ್ಲಿ ಹಾಜರಿರಬೇಕೆಂದು ಬ್ಯಾಂಕಿನ ನಿರ್ದೇಶನ<br>* ಧರ್ ಮತ್ತು ಗಢ್ ಚಿರೋಲಿಗಳಲ್ಲಿ ಸಾಂಪ್ರದಾಯಿಕ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ.<br>* ಬದಲಿ ಯೋಜನಾ ಪ್ರಸ್ತಾಪ ಸಲ್ಲಿಸಲಾಗಿತ್ತು.<br>* ಗಢ ಚಿರೋಲಿಯಲ್ಲಿ ವರ್ಷದ ಮಧ್ಯಾವಧಿಯಲ್ಲಿ ಹೊಂದಾಣಿಕೆ ಮಾಡಿರುವುದು ಕಂಡುಬಂದಿದೆ. | * ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ಸಾಕ್ಷಿ – ದಾಖಲೆಗಳ ಅಗತ್ಯ.<br>* ದೀರ್ಘಾವಧಿ ಒಟ್ಟಾರೆ ಪರಿಶೀಲನೆಗೆ ಬದಲು ರಾಜಕಾರಣಿಗಳಿಂದ ಎಸ್‌ಜಿಎಸ್‌ವೈ ಪ್ರಕರಣವಾರು ದೂರುಗಳ ಪರಿಶೀಲನೆ<br>* ಎಸ್‌ಜಿಹೆಚ್‌ಗಳ ಕಾರ್ಯ ನಿರ್ವಹಣೆಯ ಪತಿ/ಗಂಡಸು ಸಂಬಂಧಿಕರ ಒಳಗೊಳ್ಳುವಿಕೆ<br>* ಸ್ಥಳೀಯ ಧುರೀಣರ ಮೂಲಕ ಸಂಪನ್ಮೂಲ ಎಸ್‌ಹೆಚ್‌ಜಿಗಳ ಸಂಪರ್ಕ |
| 8. ಹಿತಾಸಕ್ತಿ ಕಾಪಾಡಿಕೊಳ್ಳಲು ಅನೌಪಚಾರಿಕ ಅಭ್ಯಾಸದ ಚಲಾವಣೆ | * ನಿಧಿಯನ್ನು ಬೇರೆ ಉದ್ದೇಶಗಳಿಗಾಗಿ ಬಳಸಲಾಯಿತು.<br>* ಯೋಜನೆ ಮೊತ್ತ / ಸಹಾಯಧನವನ್ನು ಪೂರ್ತಿಯಾಗಿ ವಿತರಿಸಿಲ್ಲ. ದೊಡ್ಡ ಯೋಜನೆಗಳಿಗೆ ಕೂಡ ಶೇ. 50 ರಷ್ಟು ಮಾತ್ರ ಹಣ ಬಿಡುಗಡೆಯಾಗಿದೆ.<br>* ರೂ. 50 ಸಾವಿರ ಮೊತ್ತಕ್ಕಿಂತ ಹೆಚ್ಚಿನ ಸಾಲಕ್ಕೆ ಭೂಭದ್ರತೆ ಒದಗಿಸುವಂತೆ ಬ್ಯಾಂಕ್‌ಗಳಿಂದ ಶರತ್ತು.<br>* ಉದ್ದೇಶಪೂರ್ವಕವಲ್ಲದ ಹೊಣೆಗಾರಿಕೆ ನಿರ್ವಹಿಸದ ತಪ್ಪಿತಸ್ಥರನ್ನು ಅನರ್ಹಗೊಳಿಸಲಾಗಿದೆ.<br>* ಸರ್ಕಾರಿ ಮತ್ತು ಬ್ಯಾಂಕ್ ಅಧಿಕಾರಿಗಳಿಂದ ಪಾಲನಾ ಭ್ರಷ್ಟಾಚಾರ<br>* ಸಾಲ ಮರುಪಾವತಿ ಇಲ್ಲ.<br>* ಸ್ವಸಹಾಯ ಗುಂಪುಗಳು ಸದಸ್ಯರಿಗೆ ವ್ಯಯಕ್ತಿಕವಾಗಿ ಸಾಲ ವಿತರಿಸಲಾಗಿದೆ. ಗುಂಪಿಗೆ ವಿತರಿಸಲಾಗಿಲ್ಲ. ಹೀಗಾಗಿ ವ್ಯಕ್ತಿಗಳು ಬ್ಯಾಂಕಿಗೆ ನೇರವಾಗಿ ಹಣ ಪಾವತಿಸಿದ್ದಾರೆ.<br>* ಸಣ್ಣ ಪ್ರಮಾಣ ಸಾಲವನ್ನು ಅನೇಕ ಗುಂಪುಗಳಿಗೆ ವಿತರಿಸುವ ಬದಲು ದೊಡ್ಡ ಮೊತ್ತವನ್ನು ಕೆಲವೇ ಗುಂಪುಗಳಿಗೆ ವಿತರಿಸಿದ ಕಾರಣ ಸಾಲ ಮರುಪಾವತಿ ಸಂಭವನೀಯತೆ ಭಯಕ್ಕೆ ಕಾರಣವಾಯಿತು. | * ಬಿಪಿಎಲ್ ಕುಟುಂಬಗಳ ಸಂಖ್ಯೆಯಲ್ಲಿ ಹೆಚ್ಚಳ<br>* ಬಿಪಿಎಲ್ ಕನಿಷ್ಠ ಅರ್ಹತೆಯನ್ನು ತಾಲ್ಲೂಕಾ – ಜಿಲ್ಲಾ ಮಟ್ಟಕ್ಕೆ ಬದಲು ರಾಜ್ಯ ಮಟ್ಟದಲ್ಲಿ ನಿಗದಿಪಡಿಸಿರುವುದು<br>* ಸಾಲಮನ್ನಾ ಮಾಡಲಾಗುವುದೆಂಬ ರಾಜಕಾರಣಿಗಳ ಹೇಳಿಕೆ.<br>* ಎನ್‌ಜಿಓ ಒಪ್ಪಂದ ಹಾಗೂ ವಿಶೇಷ ಯೋಜನೆಗಳಲ್ಲಿ ಗ್ರಾಹಕ ಪಟ್ಟಿ ವಿಚಾರದಲ್ಲಿ ಭ್ರಷ್ಟಾಚಾರ.<br>* ರಾಜಕಾರಣಿಗಳು ತಮ್ಮ ಬೆಂಬಲಿಗರ ಉದ್ದೇಶಗಳಿಗಾಗಿ ಸ್ವಸಹಾಯಗುಂಪು ಹುಟ್ಟು ಹಾಕಿ ಎಸ್‌ಜಿಎಸ್‌ವೈ ಅಡಿ ತರಬೇತಿ ಗುತ್ತಿಗೆ ಪಡೆಯುವುದು.<br>* ಸರ್ಕಾರಿ ಗುತ್ತಿಗೆ (ಮಧ್ಯಾಹ್ನದ ಬಿಸಿಯೂಟ ಶಾಲಾ ಸಮವಸ್ತ್ರ)ಯನ್ನು ಸ್ಥಳೀಯ ರಾಜಕಾರಣಿಗಳು ತಮ್ಮದಾಗಿಸಿಕೊಂಡಿರುವುದು.<br>* ರಾಜಕಾರಣಿಗಳು – ರಾಜಕಾರಣಕ್ಕಾಗಿ ಮಹಿಳೆಯರನ್ನು ಸಂಘಟಿಸಲು ಈ ವೇದಿಕೆ ಬಳಸಿಕೊಳ್ಳಲು ಅವಕಾಶವಾಗಿದೆ. |

| ಚಲಾವಣೆ ನಮೂನೆ | ರಾಜಕೀಯ ತಂತ್ರಜ್ಞಾನ | ರಾಜಕೀಯ ಕಾರ್ಯತಂತ್ರ |
|---|---|---|
| | * ಬ್ಯಾಂಕುಗಳು, ಕಿರು ನೀರಾವರಿ ಯೋಜನೆಗಳಿಗೆ ಸಾಲ ನೀಡುವಾಗ ಪತಿ ಹೆಸರಿನಲ್ಲಿ ಭೂಮಿ ಇದ್ದರೆ ಪತ್ನಿಗೆ ನೀಡಿದ್ದಾರೆ.<br>* ಡಿಆರ್‌ಡಿಎಗಳು, ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಖಾತೆ ತೆರೆಯುವರೆಗೂ ಹಣ ನೀಡಿಲ್ಲ. | |
| 9. ಜಾರಿಯ ನಂತರ ಕಾನೂನು ಬದ್ಧತೆ ನೀಡಲಾದ ಅನೌಪಚಾರಿಕ ಚಲಾವಣೆಗಳು | * ಶೇ. 30 ರಷ್ಟು ಬಿಪಿಎಲ್ ಜನಸಂಖ್ಯೆಗೆ ಪ್ರಯೋಜನ ಒದಗಿಸಲಾಗಿಲ್ಲ. ಆದ್ದರಿಂದ ಈ ಕಟ್ಟುಪಾಡು ಕೈಬಿಡಲಾಯಿತು.<br>* ವಿವಿಧೋದ್ದೇಶಿತ ಗುಂಪುಗಳು ಅರ್ಹರಲ್ಲದಿದ್ದರೂ ಅವುಗಳಿಗೆ ಅವಕಾಶ ನೀಡಲಾಯಿತು.<br>* ಬ್ಯಾಂಕುಗಳು, ನೀಡದ ಸಬ್ಸಿಡಿ ವಾಪಾಸು ಮಾಡಿವೆ. ಆದರೆ ಇದನ್ನೇ ಸಾಧನೆ ಎಂದು ತೋರಿಸಲಾಗಿದೆ.<br>* 80%ಕ್ಕೂ ಹೆಚ್ಚು ಹೊಣೆಗಾರಿಕೆ ನಿರ್ವಹಿಸದ ತಪ್ಪಿತಸ್ಥರು ಇರುವ ಪಂಚಾಯತ್‌ಗಳನ್ನು ಸೇವೆಯಿಂದ ಕೈಬಿಡಬೇಕೆಂಬ ನಿಯಮ ಹಿಂತೆಗೆದುಕೊಳ್ಳಲಾಯಿತು. | * ಅಂತ್ಯೋದಯದಲ್ಲಿ ಕೈಬಿಡಲಾಗಿದೆ. |
| 10. ಸೂಕ್ತ ಶಿಕ್ಷೆ ಇಲ್ಲದ ಕಾರಣ ಮುಂದುವರೆದ ಅನೌಪಚಾರಿಕ ಚಲಾವಣೆ ಅಭ್ಯಾಸಗಳು | * ಸಾಲ ವಸೂಲಾತಿಯಲ್ಲಿ ಪರಿಣಾಮಕಾರಿ ಕ್ರಮಗಳಿಲ್ಲದ ಕಾರಣ ಸಾಲ ಮರುಪಾವತಿ ಆಗಿರುವುದಿಲ್ಲ. | * ಸೂಕ್ತ ಶಿಕ್ಷೆ ಇಲ್ಲದ ಕಾರಣ ಭ್ರಷ್ಟಾಚಾರ ಅಭ್ಯಾಸಗಳು ಮುಂದುವರೆಯಬಹುದು. |

ನೀಡುತ್ತಿದ್ದು ಇಳಿಮುಖವಾಗುವ ಲಕ್ಷಣದಲ್ಲೇ ಇಲ್ಲ. ಲಭ್ಯವಾಗಿರುವ ಅಂಕಿಅಂಶಗಳು ಆರ್ಥಿಕ ಒತ್ತಡಕ್ಕೆ ಸಿಲುಕಿದ ಅಂಕಿ ಅಂಶಗಳಾಗಿವೆ. ಇನ್ನೊಂದು ರೀತಿಯದು ಸಣ್ಣ ಪ್ರಮಾಣದ ಸಮೀಕ್ಷೆಗಳಿಂದ ದೊರಕಿದ ಅಂಕಿ ಅಂಶಗಳು. ಇವುಗಳನ್ನು ದೊಡ್ಡವಾಗಿ ಅನ್ವಯಿಸಬೇಕಾಗುತ್ತದೆ. ಇವು ವರ್ಗ ಮತ್ತು ಪರಿಕಲ್ಪನೆ ಬಳಸಿ ತಿಳಿದುಕೊಳ್ಳಬಹುದಾದ ಎರಡು ವಿವಿಧ ಮಾರ್ಗಗಳಾಗಿವೆ. ಇವೆಂದೂ ರಾಷ್ಟ್ರೀಯ ಲೆಕ್ಕ ಅಂಕಿ ಅಂಶಗಳೊಂದಿಗೆ ತಾಳೆ ಹೊಂದಿಲ್ಲ. ಆದರೆ, ಅನೌಪಚಾರಿಕ ಆರ್ಥಿಕತೆ ಸ್ವಾತಂತ್ರ್ಯಾನಂತರದ ಯೋಜನೆಗಳ ನಡುವೆಯೂ ಉದ್ಯೋಗ ಸೃಷ್ಟಿಸಿ ಬೆಳವಣಿಗೆಗೆ ತನ್ನ ಕೊಡುಗೆ ನೀಡುತ್ತಲೇ ಬಂದಿದೆ.



ಮೂರನೆಯದಾಗಿ ಅನೌಪಚಾರಿಕ ಆರ್ಥಿಕತೆ ಕೇವಲ ಬಡತನದ ತವರಾಗಿಲ್ಲ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಹೇಳುವಂತೆ ಎಲ್ಲ ಅಗೌರವದ (ಕೆಲಸದ ತಾಣದಲ್ಲಿ ಹಕ್ಕಿಲ್ಲದ, ಸಾಮಾಜಿಕ ರಕ್ಷಣೆಯ ಹಕ್ಕು ಪ್ರತಿಪಾದಿಸಿದ ಸಂಘಟನೆ ಹಕ್ಕಿಲ್ಲದ) ಕೆಲಸ ಪರಿಸ್ಥಿತಿ ಅನೌಪಚಾರಿಕ ಕ್ಷೇತ್ರದಲ್ಲಿದೆ. ಈ ಕಾರ್ಮಿಕರಿಗೆ ನಾಗರಿಕರಾಗಿ ಕಲ್ಯಾಣ ಯೋಜನೆಯ ಪ್ರಯೋಜನ ದೊರಕಿವೆಯೇ ಹೊರತು ಕಾರ್ಮಿಕ ಸ್ಥಾನ ಮಾನದಿಂದಲ್ಲ. ಅನೌಪಚಾರಿಕ ಆರ್ಥಿಕತೆಯಲ್ಲಿ ಸಂಪತ್ತು ಸಂಗ್ರಹ ಇದೆ. ಅನೌಪಚಾರಿಕ ಆರ್ಥಿಕತೆಯು ಸಂಪತ್ತು ಮತ್ತು ಬಡತನಗಳಿಗೆ ಸಂಬಂಧ ಕಲ್ಪಿಸುವ ಸಂಪರ್ಕ ಸೇತುವಾಗಿದೆ.

ನಾಲ್ಕನೆಯದಾಗಿ ಅನೌಪಚಾರಿಕ ಕ್ಷೇತ್ರ ಅಸಂಘಟಿತವಾಗಿದೆ. ಈ ರೀತಿ ಅಂಕಿ ಅಂಶ ಮತ್ತು ಅಧಿಕೃತ ದಾಖಲೆಗಳಲ್ಲಿ ನಮೂದಾಗಿದ್ದರೂ, ಅನೌಪಚಾರಿಕ ಕ್ಷೇತ್ರ ಸಂಘಟಿತವಾಗಿಲ್ಲವೆಂದು ಒಪ್ಪುತ್ತಿಲ್ಲ. ಅದು ಹೇಗೆ ಸಂಘಟಿತವಾಗಿದೆ ಎಂಬುದನ್ನು ತಿಳಿದರೆ, ಉತ್ಪಾದನಾ ಸ್ಥಿತಿಯನ್ನು ಸುಧಾರಿಸಲು ನೆರವಾಗುತ್ತದೆ. ಅನೌಪಚಾರಿಕ ಮಾರುಕಟ್ಟೆಗಳು ಸರ್ಕಾರದ

ನಿಯಂತ್ರಣಕ್ಕೊಳಪಟ್ಟಿಲ್ಲ. ಆದರೆ, ಸಾಮಾಜಿಕ ನಿಯಂತ್ರಣಕ್ಕೆ ಒಳಪಟ್ಟಿವೆ. ಸಾವಿರಾರು ವಾಣಿಜ್ಯೋದ್ಯಮ ಸಂಘಟನೆಗಳು, ಹತ್ತಾರು ಸಾವಿರ ವ್ಯಾಪಾರಿ ಸಂಘಟನೆಗಳು ಸಾಮಾಜಿಕ ನಿಯಂತ್ರಣ ನಡೆಸುತ್ತಿವೆ. ಅವು ಕಲಿಕೆ, ಉದ್ಯೋಗಕ್ಕೆ ಪ್ರವೇಶ, ಕೆಲಸದ ಜಾಗದ ಲಭ್ಯತೆ ಬಗ್ಗೆ ನಿಯಂತ್ರಣ ಹೊಂದಿವೆ ಅವರೇ ಅನೌಪಚಾರಿಕವಾಗಿ, ಉದ್ಯೋಗಿಯ ಕೌಶಲ್ಯ, ಸಾಮರ್ಥ್ಯ ಪ್ರಮಾಣೀಕರಿಸುತ್ತಾರೆ. ಬೆಲೆ ನಿಗದಿ ಮಾಡುತ್ತಾರೆ. ಗುತ್ತಿಗೆಯ ವಿಷಯದ ವಿವಾದಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಅನ್ವಯಿತ ಮಾರುಕಟ್ಟೆಯನ್ನು (ವಿಶೇಷವಾಗಿ ಕಾರ್ಮಿಕ ಮಾರುಕಟ್ಟೆ) ಆಳುತ್ತಾರೆ. ಅವರು, ಸಾಮುದಾಯಿಕ ವಿಮೆಗೆ ವ್ಯವಸ್ಥೆ ಮಾಡುತ್ತಾರೆ. ಸರ್ಕಾರಗಳಿಂದ ಬರಬಹುದಾದ ಬೆದರಿಕೆಗಳ ವಿರುದ್ಧ ಪ್ರತಿಭಟಿಸುತ್ತಾರೆ, ಹಕ್ಕು ಪ್ರತಿಪಾದಿಸುತ್ತಾರೆ. "ಬಾಡಿಗೆ" ಸೃಷ್ಟಿಸಿ, ಅವುಗಳನ್ನು ಸರ್ಕಾರಿ ಅಧಿಕಾರಿಗಳೊಂದಿಗೆ ಹಂಚಿಕೊಳ್ಳುತ್ತಾರೆ ತಂತ್ರಜ್ಞಾನ ಕುರಿತಾದ ಆವಿಷ್ಕಾರಕ ಮಾಹಿತಿ ನೀಡುತ್ತಾರೆ. ಹೀಗೆ ಎಲ್ಲವನ್ನೂ ಮಾಡುತ್ತಾರೆ. ಇದಲ್ಲದೆ ಗುರುತಿನ "ಮೆದು" ಅಂಶಗಳಾದ ಲಿಂಗ, ಜನಾಂಗ ಧರ್ಮ, ಸ್ಥಳ, ಭಾಷೆ, ಜಾತಿ ಮೊದಲಾದವು ಬಂಡವಾಳಶಾಹಿ ಆರ್ಥಿಕತೆಗೆ ಹೆಚ್ಚು ಸೂಕ್ತವೆನಿಸಿದೆ. ವಾಸ್ತವಿಕವಾಗಿ ಇವು ಆರ್ಥಿಕ ಅವಕಾಶ, ಪ್ರವೇಶ ಮತ್ತು ಅಭ್ಯಾಸಗಳ ಮೆದು ನಿಯಂತ್ರಣಗಳಲ್ಲ; ಕಠಿಣ ನಿಯಂತ್ರಣಗಳಾಗಿ ಹೊರಹೊಮ್ಮಿವೆ. ಇವು ಬಂಡವಾಳ ಮತ್ತು ಕಾರ್ಮಿಕರ ಸಂಚಲನೆಯನ್ನು ಮಿತಗೊಳಿಸುತ್ತವೆ. ಆದರೆ, ಆದರೊಂದಿಗೆ ಆರ್ಥಿಕ ಬೆಳವಣಿಗೆಗೆ ಸ್ಥಿರತೆ ಒದಗಿಸುತ್ತವೆ.

ಐದನೆಯದಾಗಿ ಅನೌಪಚಾರಿಕ ಆರ್ಥಿಕತೆ, ಸಣ್ಣ ಆರ್ಥಿಕತೆಗೆ ಮಾತ್ರ ಸೀಮಿತವಾಗಿಲ್ಲ. ಶೇ 95ರಷ್ಟು ಉದ್ದಿಮೆಗಳು 5ಕ್ಕೂ ಕಡಿಮೆ ಉದ್ಯೋಗಿಗಳನ್ನು ಹೊಂದಿವೆ. ಇದರ ಸರಾಸರಿ 1990 ರಲ್ಲಿ 2.9 ಇದ್ದದ್ದು 2005 ರಲ್ಲಿ 2.4ಕ್ಕೆ ಇಳಿಯಿತು. ಆರ್ಥಿಕ ಉದಾರೀಕರಣ ಸಣ್ಣ ಉದ್ದಿಮೆಗಳ ಹೊಳೆಯನ್ನೇ ಹರಿಸಿದೆ. ಉದ್ದಿಮೆ ಸಣ್ಣ ಇರುವ ಕಾರಣ ಅವು ಕಾರ್ಮಿಕ ಕಾಯ್ದೆಗೆ ಒಳಪಡುವುದಿಲ್ಲ. ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಇರುವುದಿಲ್ಲ. ಉದ್ದಿಮೆಯ ಮಾಲಿಕನೇ ಕಾರ್ಮಿಕನೆಂದು ಗುರುತಿಸಲ್ಪಟ್ಟಿರುತ್ತಾನೆ. ಉದ್ಯೋಗದಾರನೂ ಉದ್ಯೋಗಿಯ ಹಕ್ಕು



ಚಲಾಯಿಸುತ್ತಾನೆ. ಶೇ 95 ರಷ್ಟು ಇಂತಹ ಮಾಲಿಕತ್ವದ ಉದ್ದಿಮೆಗಳಲ್ಲಿ ಬಹುತೇಕವು ಸಗಟು, ಚಿಲ್ಲರೆ, ಹಾಗೂ ಸ್ವ ಉದ್ಯೋಗದ ಕಿರು ಸಾಮಗ್ರಿ ಉತ್ಪಾದಕರ (ಪಿಸಿಪಿ) ಪಟ್ಟಿಯಲ್ಲಿ ಬರುತ್ತವೆ. ಭಾರತದ ಔಪಚಾರಿಕ ಹಾಗೂ ಅನೌಪಚಾರಿಕ ಎರಡೂ ಕ್ಷೇತ್ರಗಳಲ್ಲಿ ಕಿರು ಸಾಮಗ್ರಿ ಉತ್ಪಾದಕ ಉದ್ದಿಮೆಯೇ ಅತಿ ಸಾಮಾನ್ಯದ ಜೀವನೋಪಾಯ ಮಾರ್ಗವಾಗಿದೆ.

ಇದು ಸಣ್ಣದಾಗಿದ್ದರೂ, ಸಂಕೀರ್ಣಮಯವಾಗಿದೆ ಇಲ್ಲಿ ಎರಡು ಮಾನದಂಡಗಳಿವೆ. ಮೊದಲನೆಯದು ನಮೂನೆಯ ವೈವಿಧ್ಯತೆ, ಮತ್ತು ಸ್ವತಂತ್ರ, ಸ್ವಾಯತ್ತ ಆರ್ಥಿಕ ಚಟುವಟಿಕೆ ಹಾಗೂ ಅವಲಂಬಿತ, ಕೂಲಿ ಕಾರ್ಮಿಕ. ಎರಡನೆಯದು ಸ್ವಪ್ರೇರಣೆಯ ಹೂಡಿಕೆ ಮತ್ತು ಸಂಯುಕ್ತ ಬಂಡವಾಳದ ಹತಾಶ ಮನೋಭಾವದ ಚಟುವಟಿಕೆ ನಡುವಿನ ವ್ಯತ್ಯಾಸ. ಈ ಎರಡೂ ಮಾನದಂಡಗಳಿಗೆ ಸಂಬಂಧಿಸಿದಂತೆ ಅಂಕಿ ಅಂಶಗಳು ಲಭ್ಯವಾಗಿಲ್ಲ. ಸಣ್ಣ ಘಟಕಗಳು ಸಣ್ಣ ಪ್ರಮಾಣದ ಹೂಡಿಕೆ ಮಾಡಿರುವುದರಿಂದ ಅವುಗಳ ಉತ್ಪಾದನಾ ತಂತ್ರ ವಿಭಿನ್ನವಾಗಿರುತ್ತದೆ.

ಅವು ಲಾಭಾಂಶಕ್ಕಿಂತ ಉತ್ಪಾದನೆಗೆ ಆದ್ಯತೆ ನೀಡಬಹುದು. ಕುಟುಂಬದವರೇ ಸೇರಿ ಕೆಲಸ ಮಾಡುವುದರಿಂದ ಮಾರುಕಟ್ಟೆಯಲ್ಲಿ ಅದರ ಮೌಲ್ಯಮಾಪನ ಸೇರಿಸದೆ ಬಂಡವಾಳ ಹೂಡಿಕೆ ಮೊತ್ತಕ್ಕೆ ಸೀಮಿತಗೊಳಿಸಬಹುದು. ಆದರೆ ಅವರೆಂದೂ ಹಣಕಾಸು ಸಂಗ್ರಹಿಸಿಡುವ ಬಂಡವಾಳಶಾಹಿಗಳಲ್ಲ ತಮ್ಮ ಅನೌಪಚಾರಿಕ ಉದ್ದಿಮೆಗಾಗಿ ಸಾಲ ಮಾಡುತ್ತಾರೆ, ಪಿತ್ರಾರ್ಜಿತ ಆಸ್ತಿ ವರ್ಗಾವಣೆ ಮಾಡುತ್ತಾರೆ.

ಅನೌಪಚಾರಿಕ ಆರ್ಥಿಕತೆ ಸಣ್ಣ ಉದ್ದಿಮೆಗಳಲ್ಲಷ್ಟೇ ಅಲ್ಲ ದೊಡ್ಡ ಉದ್ದಿಮೆಗಳಿಗೂ ವ್ಯಾಪಿಸಿದೆ. ಆದರೆ ಈ ಬಗೆಗಿನ ಅಂಕಿ ಅಂಶಗಳು ಒಂದೇ ತೆರನಾಗಿಲ್ಲ. ಕಾರ್ಪೊರೆಟ್ ರಂಗದ ಶೇ 40 ರಿಂದ 80 ಪ್ರಮಾಣದ ಕಾರ್ಮಿಕ ವರ್ಗದ ನೊಂದಣಿಯೇ ಆಗಿರುವುದಿಲ್ಲ. ಉದ್ಯೋಗಿಗಳಿಗೆ ಕಾರ್ಮಿಕರ ಹಕ್ಕುಗಳ ಬಗ್ಗೆ ಗೊತ್ತೇ ಇರುವುದಿಲ್ಲ. ಸರ್ಕಾರಿ ವ್ಯವಸ್ಥೆಯಲ್ಲಿ ಕೂಡ ಗೇಟ್‌ಕೀಪರ್‌ಗಳು ನೊಂದಣಿಯಾಗದ ಉಪಗುತ್ತಿಗೆದಾರರು ಪರೋಕ್ಷವಾಗಿ ಕಾರ್ಯನಿರ್ವಹಿಸುವುದು ಔಪಚಾರಿಕ ಕ್ಷೇತ್ರದೊಳಗೆ ಅನೌಪಚಾರಿಕ ರಂಗವನ್ನು ಕಂಡಂತಾಗುತ್ತದೆ.

ಕಲ್ಲಿದ್ದಲು ಕ್ಷೇತ್ರದಲ್ಲಿ ಇತ್ತೀಚೆಗೆ ನಡೆಸಿದ ಅಧ್ಯಯನದಲ್ಲಿ ಈ ಮೇಲಿನ ಅಂಶಗಳು ವ್ಯಕ್ತವಾಗಿದೆ. ಕೆಲವು ಸಂದರ್ಭ ಹೊರತುಪಡಿಸಿದರೆ, ಭಾರತದ ಅನೌಪಚಾರಿಕ ಆರ್ಥಿಕತೆ ಒಂದು ರೀತಿಯ ಮೇಲುಸ್ತುವಾರಿಯಲ್ಲೇ ಕಾರ್ಯನಿರ್ವಹಿಸುತ್ತಿದೆ. ಮಾಧ್ಯಮಗಳ ಕೂಗಿನ ನಡುವೆ, ಕಾರ್ಪೊರೆಟ್ ರಂಗ ಹೊರಹೊಮ್ಮುತ್ತಿರುವ ಈ ಸಂದರ್ಭದಲ್ಲಿಯೂ ಅನೌಪಚಾರಿಕ ಆರ್ಥಿಕತೆ ಭಾರತದ ಬಹುದೊಡ್ಡ ಅಂಗವಾಗಿಯೇ ಇದೆ. ಇದು ಹಾಗೆಯೇ ಉಳಿಯುತ್ತದೆಯೇ ಅಥವಾ ಯೋಜಕರು ಇದನ್ನು ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸುತ್ತಾರೊ ಪ್ರಶ್ನೆಗೆ ಉತ್ತರಕ್ಕೆ ಕಾದುನೋಡಬೇಕಾಗಿದೆ.


**ನೀತಿ ಯೋಜನೆಗಳ ಪ್ರಶ್ನೆ**

ಅನೌಪಚಾರಿಕ ಆರ್ಥಿಕತೆಯ ಸಣ್ಣ ಉದ್ದಿಮೆಗಳಿಗಾಗಿ ಭಾರತದಲ್ಲಿ ಆರ್ಥಿಕ ಯೋಜನೆಗಳಿವೆಯೇ? ಇದು ಬಹು ಚರ್ಚಿತ

ವಿಷಯವಾಗಿದೆ ಕೆಲವರು ಇಲ್ಲವೆಂದು ವಾದಿಸುತ್ತಾರೆ. ನಿರುದ್ಯೋಗ ಹೆಚ್ಚಳಕ್ಕೆ ಇದೂ ಕಾರಣ ಎನ್ನುತ್ತಾರೆ. ಸಣ್ಣ ಉದ್ದಿಮೆಗಳ ಉತ್ಪಾದನೆಗಳನ್ನು ನೀತಿ ನಿರೂಪಕರು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎನ್ನುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಔಪಚಾರಿಕ ರಂಗವನ್ನು ಬಂಡವಾಳಶಾಹಿಯಾಗಿ ನೋಡದವರು, ಆರ್ಥಿಕ ಯೋಜನೆಗಳಿವೆ ಎಂದು ಪ್ರತಿಪಾದಿಸುತ್ತಾರೆ. 'ಹಸಿರು ಕ್ರಾಂತಿ ಮತ್ತು ಕೃಷಿ ಜನಪ್ರಿಯತೆ'ಯ ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಯೋಜನೆಗಳಿವೆ. ಆದರೆ ಎಲ್ಲವೂ ಯಶ ಕಂಡಿಲ್ಲ ಎನ್ನುತ್ತಾರೆ. ಮತ್ತೊಂದು ಕಡೆ, ಯೋಜನೆಗಳು ಒಂದಕ್ಕೊಂದು ಪೂರಕವಾಗಿಲ್ಲ. ಒಂದು ಅವುಗಳನ್ನು ರಕ್ಷಿಸಿದರೆ, ಮತ್ತೊಂದರ ಉಪಕ್ರಮ ಅವುಗಳ ಮೇಲೆ ದಾಳಿ ನಡೆಸಿದಂತಿದೆ ಎನ್ನುವ ಕೂಗಿದೆ. ಯೋಜನೆಗಳ ನಡುವೆ ಪರಸ್ಪರ ಸಹಕಾರ ಇಲ್ಲದಿರುವುದು, ನಿರೂಪಣೆ ಸಂದರ್ಭದ ಅವ್ಯವಸ್ಥಿತ ನಿಯೋಜನೆ ತೋರಿಸುತ್ತದೆ.

21ನೇ ಶತಮಾನದಲ್ಲಿ ನೀತಿ ಅನುಸರಣೆ ಮತ್ತು ಸರ್ಕಾರಿ ನಿಯಂತ್ರಣ ಅನೌಪಚಾರಿಕ ಕ್ಷೇತ್ರದತ್ತ ವಿಸ್ತೃತಗೊಳ್ಳುತ್ತಿವೆ. ಕೃಷಿ ಮಾರುಕಟ್ಟೆ ನಿಯಂತ್ರಣ ಕಾಯ್ದೆ ಮುಂದಿಟ್ಟು ರೈತರ ಹಾಗೂ ವ್ಯಾಪಾರಸ್ಥರ ನಡುವಿನ ವಹಿವಾಟು ಅನುಸರಣೆ ಗಮನಿಸಿ ಕಾರ್ಪೊರೆಟ್ ಮೌಲ್ಯಸರಣಿಗಳ ಅವಶ್ಯಕತೆಗೆ ಇವು ಅಪ್ರಸ್ತುತವಾಗಿವೆ ಎಂದು ಟೀಕಿಸಲಾಗುತ್ತಿದೆ. ಆದರೆ ಈ ಅನುಸರಣೆ ಆಯ್ದ ಕ್ಷೇತ್ರಕ್ಕೆ ಮಾತ್ರ ಅನ್ವಯಿಸುತ್ತದೆ. ಒಂದು ಸಂಸ್ಥೆ ಪರವಾನಗಿ ಪಡೆದು ಸ್ಥಳೀಯ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಳ್ಳುತ್ತದೆ. ಆದರೆ ಅದು ಕಾರ್ಮಿಕ ಹಾಗೂ ಪರಿಸರ ಕಾಯ್ದೆಗಳನ್ನು ಪಾಲಿಸುವುದಿಲ್ಲ. ವಾಣಿಜ್ಯ ಹಾಗೂ ಮುನ್ಸಿಪಲ್ ತೆರಿಗೆಗಳನ್ನು ಅನಿಯಮಿತವಾಗಿ, ಬೇಕಾಬಿಟ್ಟಿಯಾಗಿ ತುಂಬುತ್ತದೆ. ಅದು ಪೂರೈಕೆದಾರರಿಂದ, ಸಾಗಾಟದಾರರಿಂದ ಅನಧಿಕೃತಗಳಂತಹ ಒಳಸುರಿವುಗಳನ್ನು ಖರೀದಿಸಬಹುದು.

ಮೂರನೆಯದಾಗಿ ಈ ನೀತಿ ಆಯ್ಕೆಯಲ್ಲಿ ಒಂದು ಸಾಮಾನ್ಯ ಮಾದರಿ ಇದೆ. ಭಾರತದಲ್ಲಿ ಬಂಡವಾಳ ಹೂಡಿಕೆ ವರ್ಗ ಪ್ರೋತ್ಸಾಹಧನ ಪಡೆಯುವುದಕ್ಕಾಗಿ ಸರ್ಕಾರ ತರುವ ಯಾವುದೇ ಶಿಸ್ತಿನ ನಿರ್ಬಂಧಗಳನ್ನು ಪ್ರತಿರೋಧಿಸುತ್ತಲೇ ಬಂದಿವೆ. ಈ ಎಲ್ಲ ಹಿನ್ನಲೆಗಳಲ್ಲಿ ಸರ್ಕಾರಕ್ಕೆ ನಿಯಂತ್ರಣಗಳನ್ನು ಕಟ್ಟುನಿಟ್ಟಾಗಿ



ಜಾರಿಗೆ ತರುವ ಉದ್ದೇಶವಿಲ್ಲ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ನಾಲ್ಕನೆಯದಾಗಿ, ನೀತಿ ಪ್ರಕ್ರಿಯೆ. ತೀರಾ ವ್ಯಾಪಕವಾಗಿದ್ದು, ಅವುಗಳಿಂದ ಪ್ರಯೋಜನದ ಮಾತಿರಲಿ, ಅವುಗಳ ಅಸ್ತಿತ್ವವನ್ನು ಗುರುತಿಸಲಾಗದಂತಿದೆ. ಜಾರಿ ಹಂತದಲ್ಲಿರುವ ರಾಜಕಾರಣವನ್ನು ನೀತಿಹಂತದಲ್ಲಿ ಗುರುತಿಸಿದ ಕಾರಣ ಈ ತೊಂದರೆ ತಲೆದೋರಿದೆ. ಈ ವಿಚಾರದಲ್ಲಿ ಪಾಠ ಕಲಿಯಲು ಒಂದೇ ಅನುಭವ ಸಾಕಾಗುತ್ತಿಲ್ಲ. ಉದಾಹರಣೆಗೆ ಬೆಂಗಳೂರಿನ ಭೂ–ಕಬಳಿಕೆ ಪ್ರಕರಣಗಳು. ಇದರಲ್ಲಿ ಕಬಳಿಕೆಗೆ ಯೋಜನೆಯಲ್ಲಿನ ಲೋಪದೋಷಗಳೂ ಕಾರಣವಾಗಿವೆ.

ಮತ್ತೊಂದು ಉದಾಹರಣೆ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿನ ಬಡತನ ನಿವಾರಣೆ ಕಾರ್ಯಕ್ರಮಗಳು. ಇವುಗಳ ಕಾರ್ಯತಂತ್ರ – ಜಾರಿ ತಂತ್ರಗಳ ನಿರೂಪಣೆಯಲ್ಲಿರುವ ಲೋಪದೋಷ ಅಧಿಕಾರಿ ವರ್ಗಗಳಲ್ಲಿರುವ ಇತರ ಹಿತಾಸಕ್ತಿ. (ಪಟ್ಟಿ ನೋಡಿ). ಅಧಿಕಾರಿಗಳು ಅಧಿಕೃತ ನಿರ್ದೇಶನಗಳನ್ನು ಬದಿಗೊತ್ತಿ ತಮಗೆ ಸುಲಭವಾಗುವ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ವಿಷಯ ಎದ್ದು ಕಾಣುತ್ತದೆ.

ಮೂರನೆಯ ಅಧ್ಯಯನ ಹರ್ಯಾಣದ ಕೃಷಿ ಮತ್ತು ಕೊಯ್ಲು, ಧಾನ್ಯ ಪೂರೈಕೆ ವಿಷಯ ಸಂಬಂಧಿಸಿದ್ದಾಗಿದೆ. ಇಲ್ಲಿ ಭೂಮಿಗೆ ಸಂಬಂಧಿಸಿದ ವಿಚಾರಗಳಲ್ಲಿ ಜಾತಿ ವಿಷಯ ತಲೆ ಹಾಕುತ್ತಿದ್ದು ರಾಜ್ಯದ ಕಾಯ್ದೆಗಳನ್ನು ಬದಿಗೊತ್ತಿರುವುದು ಸ್ಪಷ್ಟವಾಗಿ ಗೋಚರವಾಗಿದೆ. ನಿಯಂತ್ರಿತ ಮಾರುಕಟ್ಟೆ ಕಾಯ್ದೆ ಇದ್ದರೂ ಕೂಡಾ ಇವುಗಳನ್ನು ಉಪೇಕ್ಷಿಸಲಾಗಿದೆ. ದವಸ ಧಾನ್ಯಗಳ ಗುಣಮಟ್ಟದ ವಿಷಯದಲ್ಲಿ ಅಧಿಕಾರಿಗಳು ವಿಶೇಷ ಸೇವಾಶುಲ್ಕ (ಲಂಚ) ಪಡೆದಿದ್ದಾರೆ. ಇವರ ನೆರವಿನಿಂದ ಪರ್ಯಾಯ, ಅಕ್ರಮ ಮಾರುಕಟ್ಟೆ ವ್ಯವಸ್ಥೆಯೇ ನಡೆದಿದೆ. ಕಾರ್ಯ ಸುಗಮಗೊಳಿಸಲು ಏಕಗವಾಕ್ಷದ ಲಂಚ ವ್ಯವಸ್ಥೆಗೂ ಏಜೆಂಟರೂ ಮುಂದಾಗಿದ್ದಾರೆ. ಬುಕಿಂಗ್ ಏಜೆಂಟ್‌ಗಳು, ಕಮಿಷನ್ ಏಜೆಂಟರುಗಳು, ಅನೌಪಚಾರಿಕ ಬ್ಯಾಂಕರ್‌ಗಳು, ಅಧಿಕಾರಿಗಳು, ರಾಜಕಾರಣಿಗಳು ಇದರ ಫಲಾನುಭವಿಗಳಾಗಿದ್ದಾರೆ.

ಸರ್ಕಾರ ರೂಪಿಸುವ ನೀತಿ ಅಸ್ಪಷ್ಟ ಇರುವಾಗ ತೊಂದರೆಗಳು ಯಾವ ಮಟ್ಟದಲ್ಲಿ ಇರುತ್ತದೆ ಎನ್ನುವುದಕ್ಕೆ ಈ ಮೇಲಿನ ಅಧ್ಯಯನದಿಂದ ವ್ಯಕ್ತವಾದ ಅಂಶಗಳೇ ಸಾಕ್ಷಿ.

ಹೊಸ ಅಧ್ಯಯನಗಳ ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ ಅನೌಪಚಾರಿಕ ಆರ್ಥಿಕತೆ ಬದಲಾವಣೆ ಪ್ರತಿರೋಧಿಯಲ್ಲ. ಆದರೆ, ಭಾರತದ ಉನ್ನತ ಬೆಳವಣಿಗೆಗೆ ಎಲ್ಲ ರೀತಿಯ ಸಾಕ್ಷಾತ್ಕಾರಗಳಿಗೆ ಮಾರ್ಗವಾಗಿ ಅದನ್ನು ಕಂಡುಕೊಳ್ಳಬೇಕಾಗಿದೆ. ಭಾರತದ ಆರ್ಥಿಕ ನಿರೂಪಕರು ಈ ಸವಾಲನ್ನು ಗುರುತಿಸಿ, ಸಾಧನೆಗೆ ಮಾರ್ಗ ಸುಗಮಗೊಳಿಸಬೇಕಾಗಿದೆ. ❑

# ಸ್ವಚ್ಛ ಭಾರತ; ಸವಾಲು – ಮಾರ್ಗೋಪಾಯ

## ಸ್ವಾತಂತ್ರ್ಯಕ್ಕಿಂತ ಶೌಚ ನೈರ್ಮಲ್ಯ ಮುಖ್ಯ – ಗಾಂಧೀಜಿ

ನಿರ್ಮಲ್ ಭಾರತ್ ಅಭಿಯಾನವನ್ನು ಪುನರ್‌ವಿನ್ಯಾಸಗೊಳಿಸಿ ಸ್ವಚ್ಛಭಾರತ್ ಮಿಷನ್ ರೂಪುಗೊಳಿಸಲಾಗಿದೆ. ಇದು – ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಮತ್ತು ಸ್ವಚ್ಛ ಭಾರತ ಮಿಷನ್ (ನಗರ) ಎಂಬ ಎರಡು ಅಂಗ ಮಿಷನ್‌ಗಳನ್ನು ಒಳಗೊಂಡಿದೆ. ಸ್ವಚ್ಛ ಭಾರತ (ನಗರ) ಮಿಷನ್‌ಗೆ ಸಂಬಂಧಿಸಿದ ವಿಧಿವಿಧಾನಗಳಿಗೆ ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ಅನುಮೋದನೆ ನೀಡಿದೆ. ಈ ಯೋಜನೆ ಪ್ರಾರಂಭದ ದಿನ ಅಕ್ಟೋಬರ್ 2, 2014 ಗುರಿ ಅವಧಿ – 5 ವರ್ಷಗಳು.

ನಗರಗಳನ್ನು, ಬಯಲು ಮಲವಿಸರ್ಜನೆ ಮುಕ್ತಗೊಳಿಸುವುದು, ಮಲಹೊರುವ ಪದ್ಧತಿ ನಿರ್ಮೂಲನೆ, ಕಕ್ಕಸು ಮನೆಗಳ ಸುಧಾರಣೆ, ಪೌರ ಘನತ್ಯಾಜ್ಯಗಳ ವ್ಯವಸ್ಥಿತ ನಿರ್ವಹಣೆ ಮೊದಲಾದ ಉದ್ದೇಶಗಳನ್ನು ಈ ಕಾರ್ಯಕ್ರಮ ಒಳಗೊಂಡಿದೆ. ಈ ಯೋಜನೆಯನ್ನು 4041 ನಗರಗಳಲ್ಲಿ 62,000 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು. ಇದಕ್ಕಾಗಿ ಕೇಂದ್ರ ಸರ್ಕಾರ 14,623 ಕೋಟಿ ರೂ. ನೀಡಲಿದ್ದು ಉಳಿದ ಹಣವನ್ನು ರಾಜ್ಯಸರ್ಕಾರ ಖಾಸಗಿ ಸಂಸ್ಥೆಗಳಿಂದ ಕ್ರೋಢೀಕರಿಸಲಾಗುವುದು.

ನಗರ ಮಿಷನ್‌ಗಾಗಿ ಕೇಂದ್ರದ ನಗರಾಭಿವೃದ್ಧಿ ಸಚಿವಾಲಯ ನೋಡಲ್ ಏಜೆನ್ಸಿಯಾಗಿದ್ದು ಗ್ರಾಮೀಣ ಮಿಷನ್‌ಗಾಗಿ ಕೇಂದ್ರ ಕುಡಿಯುವ ನೀರು ಮತ್ತು ಶೌಚ ವ್ಯವಸ್ಥೆ ಸಚಿವಾಲಯ ನೋಡಲ್ ಏಜೆನ್ಸಿಯಾಗಿರುತ್ತದೆ. ವೈಯಕ್ತಿಕ ಗುಂಪು ಹಾಗೂ ಸಮುದಾಯ ಶೌಚಾಲಯ ನಿರ್ಮಾಣ, ಹಳ್ಳಿಗಳಲ್ಲಿ ಗ್ರಾಮ ಪಂಚಾಯತ್‌ಗಳ ಮೂಲಕ ಘನ ಹಾಗೂ ದ್ರವ ತ್ಯಾಜ್ಯಗಳ ವ್ಯವಸ್ಥಿತ ನಿರ್ವಹಣೆಯಿಂದ ಗ್ರಾಮ ನೈರ್ಮಲ್ಯ ಸಾಧಿಸುವ ಮೂಲಕ 2019ರ ವೇಳೆಗೆ ಭಾರತವನ್ನು ಬಯಲು ಶೌಚಾಲಯ ಮುಕ್ತ ದೇಶವನ್ನಾಗಿಸುವುದು ಸ್ವಚ್ಛ ಭಾರತ ಅಭಿಯಾನದ ಮೂಲೋದ್ದೇಶವಾಗಿದೆ. ಅದೇ ವೇಳೆ ಬೇಡಿಕೆಯಾಧಾರದ ಮೇಲೆ ಮನೆಮನೆಗೆ ನಲ್ಲಿಗಳ ಸಂಪರ್ಕ ಕಲ್ಪಿಸುವಂತಾಗಲು ಎಲ್ಲ ಹಳ್ಳಿಗಳಲ್ಲಿ ನೀರಿನ ಪೈಪು ಹಾಕಿಸಬೇಕಾಗಿದೆ. ಇದನ್ನು ಎಲ್ಲ ಸಚಿವಾಲಯಗಳು, ಕೇಂದ್ರ ಹಾಗೂ ರಾಜ್ಯ ಯೋಜನೆಗಳು, ಕಾರ್ಪೋರೇಟ್‌ಗಳ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮಗಳ ಮತ್ತು ದ್ವಿಪಕ್ಷೀಯ–ಬಹುಪಕ್ಷೀಯ ನೆರವು ಹಾಗೂ ಇತರ ಆವಿಷ್ಕಾರದ ಹಣಕಾಸು ನೆರವು–ಹೀಗೆ ಎಲ್ಲ ಸಹಕಾರ ಮತ್ತು ಒಮ್ಮತದ ಪ್ರಯತ್ನಗಳ ಮೂಲಕ ಸಾಧಿಸಬೇಕಿದೆ. ಭಾರತದ ಜನಸಂಖ್ಯೆ 121 ಕೋಟಿ. ಅಂದರೆ ವಿಶ್ವದ



ಒಟ್ಟು ಜನಸಂಖ್ಯೆಯ ಆರರಲ್ಲಿ ಒಂದು ಭಾಗದಷ್ಟು ಜನ ಭಾರತದ ನಿವಾಸಿಗಳು. 1980ರ ದಶಕದ ಆರಂಭದಲ್ಲಿ ಗ್ರಾಮೀಣ ಶೌಚ ಸೌಲಭ್ಯ ಕೇವಲ ಶೇಕಡ ಒಂದರಷ್ಟಿತ್ತು. 2011ರ ಜನಗಣತಿ ಪ್ರಕಾರ ಶೇ 72.2 ರಷ್ಟು ಜನಸಂಖ್ಯೆ, 16.78 ಕೋಟಿ ಕುಟುಂಬಗಳ ಮೂಲಕ 6,38,000 ಹಳ್ಳಿಗಳಲ್ಲಿ ನೆಲೆಸಿವೆ. ಇವುಗಳಲ್ಲಿ 5.48 ಕೋಟಿ ಕುಟುಂಬ (ಶೇ 32.7)ಗಳಿಗೆ ಮಾತ್ರ ಶೌಚಾಲಯ ಸೌಲಭ್ಯ ಇದೆ. ಉಳಿದ ಶೇ 67.3 ಪ್ರಮಾಣದ ಗ್ರಾಮೀಣರಿಗೆ ಶೌಚಾಲಯ ಸೌಲಭ್ಯವೇ ಇಲ್ಲ. ನಂತರ ಅಂದರೆ 2012–2013ರಲ್ಲಿ ಕುಡಿಯುವ ನೀರು ಮತ್ತು ಶೌಚ ಸೌಲಭ್ಯ ಸಚಿವಾಲಯ ನಡೆಸಿದ ಬೇಸ್‌ಲೈನ್ ಸಮೀಕ್ಷೆಯಲ್ಲಿ ಶೇ 40.35 ಗ್ರಾಮೀಣ ಮನೆಗಳಿಗೆ ಮಾತ್ರ ಶೌಚಾಲಯ ಸೌಲಭ್ಯ ಲಭ್ಯ ಇರುವುದು ಕಂಡುಬಂದಿದೆ. ಗ್ರಾಮೀಣ ಭಾಗದ ಸುಮಾರು 59 ಕೋಟಿ ಜನರು ಬಯಲುಗಳಲ್ಲಿ ಮಲವಿಸರ್ಜನೆ ಮಾಡುತ್ತಾರೆ. ಇದನ್ನೇ ರೂಢಿಸಿಕೊಂಡ ಜನರ ಮನಸ್ಸನ್ನು ಅಭ್ಯಾಸವನ್ನು ಬದಲಿಸಬೇಕಾಗಿದೆ. ಇವರಲ್ಲಿ ಅನೇಕರಿಗೆ ಶೌಚಾಲಯ ಸೌಲಭ್ಯ ಇದೆ. ಆದರೂ, ಅವರು ಬಯಲಲ್ಲೇ ಮಲವಿಸರ್ಜನೆ ಮಾಡಲು ಬಯಸುತ್ತಾರೆ. ಹೀಗಾಗಿ ನಮ್ಮ ಮುಂದಿರುವ ಸವಾಲೆಂದರೆ, ಈ ಮಂದಿಗೆ ಶೌಚಾಲಯ ಬಳಕೆಯ ಅವಶ್ಯಕತೆ ಮನದಟ್ಟುಮಾಡಿ ಅವರಲ್ಲಿ ವರ್ತನಾ ಬದಲಾವಣೆ ತರುವುದಾಗಿದೆ. ಇದರೊಂದಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾರ್ಯಕ್ರಮ ಮತ್ತು ನಿರ್ಮಲ್ ಭಾರತ ಅಭಿಯಾನಗಳ ಸಂಯೋಜನಾ ಸಮಸ್ಯೆ, ಶೌಚಾಲಯ ಬಳಕೆಗಾಗಿ ನೀರು ಪೂರೈಕೆ, ಬಳಕೆಯಲ್ಲಿರದ ಶೌಚಾಲಯ ನಿರ್ವಹಣೆ, ಗ್ರಾಮೀಣ ನಿರ್ಮಲೀಕರಣ ಯೋಜನೆಗಳ ಜಾರಿಯಲ್ಲಿ ಕ್ಷೇತ್ರಮಟ್ಟದಲ್ಲಿ ಶ್ರದ್ಧಾಭಾವದ ಸಿಬ್ಬಂದಿ ಕೊರತೆ ಮೊದಲಾದ ಸಮಸ್ಯೆಗಳೂ ಇವೆ.

**ಮಾರ್ಗೋಪಾಯ** : ಜನರ ಮನಃಪರಿವರ್ತನೆ ಅತೀ ಮುಖ್ಯ. ಮಾಹಿತಿ, ಶಿಕ್ಷಣ ಮತ್ತು ಸಂವಹನ ವಿಷಯಗಳಿಗೆ

**2013ರ ಬೇಸ್‌ಲೈನ್ ಸಮೀಕ್ಷೆ ಪ್ರಕಾರ ಶೌಚಾಲಯ ಸೇವೆ ಅಗತ್ಯದ ವಿವರ**

| ಕ್ರ.ಸಂ | ಘಟಕ | ಸಂಖ್ಯೆ |
|---|---|---|
| | ಭಾರತದಲ್ಲಿರುವ ಕುಟುಂಬಗಳು | 17.13 ಕೋಟಿ |
| 1 | ವೈಯಕ್ತಿಕ ಕೌಟುಂಬಿಕ ಶೌಚಾಲಯ | 11.11 ಕೋಟಿ (ಇದರಲ್ಲಿ 8,84,39,786 ಮಾತ್ರ ಅರ್ಹರು) |
| 2 | ಶಾಲಾ ಶೌಚಾಲಯ | 56,928 |
| 3 | ಅಂಗನವಾಡಿ ಶೌಚಾಲಯ | 1,07,695 |
| 4 | ಸಮುದಾಯ ಶೌಚಾಲಯ ಸಂಕೀರ್ಣ | 1,14,315 |
| **ಸೌಲಭ್ಯ ಅಗತ್ಯವಿರುವ ಕುಟುಂಬ / ಮನೆಗಳು** | | |
| | **ಬೇಸ್‌ಲೈನ್ ಸಮೀಕ್ಷೆಯಂತೆ ಅಗತ್ಯವಿರುವ ಕುಟುಂಬಗಳು** | **11.11 ಕೋಟಿ** |
| | ಅನರ್ಹ ಎಪಿಎಲ್ ಕುಟುಂಬಗಳು | 0.88 ಕೋಟಿ |
| | ಕಾರ್ಯ ನಿರ್ವಹಿಸದ ಘಟಕಗಳು | 1.39 ಕೋಟಿ |
| | **ಒಟ್ಟು ಅರ್ಹ ಬಿಪಿಎಲ್ ಮತ್ತು ಎಪಿಎಲ್ ಕುಟುಂಬಗಳು** | **8.84 ಕೋಟಿ** |

ಸಂಬಂಧಿಸಿದ ಬಹುತೇಕ ಹಣಕಾಸು, ನಿಧಿ ಇರುವುದೇ ರಾಜ್ಯ ಸರ್ಕಾರಗಳ ಬಳಿ. ಆದ್ದರಿಂದ ರಾಜ್ಯಸರ್ಕಾರಗಳು ವಿದ್ಯಾರ್ಥಿಗಳು ಆಶಾ, ಅಂಗನವಾಡಿ ಕಾರ್ಯಕರ್ತೆಯರು ವೈದ್ಯರು, ಶಿಕ್ಷಕ ಶಿಕ್ಷಕಿಯರು, ವಲಯ ಸಮನ್ವಯಕರು.... ಹೀಗೆ ಮೊದಲಾದವರಿಂದ ಮನೆ-ಮನೆ ಭೇಟಿ ನಡೆಸಿ ಮುಖತಃ ವ್ಯಕ್ತಿಗತ ಸಂವಹನ ಮೂಲಕ ಮನಃಪರಿವರ್ತನೆಗೆ ಆದ್ಯತೆ ಮೇಲೆ ಮುಂದಾಗಬೇಕು. ಇದಲ್ಲದೆ ಕಿರುಚಲನಚಿತ್ರ, ಸಿಡಿ, ಟಿವಿ, ರೇಡಿಯೊ, ಡಿಜಿಟಲ್ ಸಿನೆಮಾ, ಕರಪತ್ರಗಳ ಮೂಲಕ ಮಾಹಿತಿ ಒದಗಿಸಬೇಕಾಗುತ್ತದೆ. ಸ್ಥಳೀಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಪಟುಗಳು / ಚಿತ್ರನಟ ನಟಿಯರನ್ನು ದೃಶ್ಯ-ಶ್ರಾವ್ಯ ಮಾಧ್ಯಮಗಳಲ್ಲಿ ಬಳಸಿಕೊಂಡು ಸುರಕ್ಷಿತ ಶೌಚ ಅಭ್ಯಾಸ ಮಾಡಿಕೊಳ್ಳುವಂತೆ ಜನರ ಮನ ಸೆಳೆದುಕೊಳ್ಳಬೇಕಾಗಿದೆ. ಯೋಜನೆಯ ಮೂಲದಲ್ಲೆ ನೀರು ಮತ್ತು ಶೌಚಾಲಯ ವ್ಯವಸ್ಥೆ ಎರಡೂ ಇರುವಂತೆ, ಕೊಳಾಯಿ ನೀರು ಪೂರೈಕೆ ಮತ್ತು ಕುಟುಂಬ ಶೌಚಾಲಯ ಯೋಜನೆಗಳನ್ನು ಒಟ್ಟೊಟ್ಟಿಗೆ ನಿರ್ವಹಿಸಲು ಜಿಲ್ಲಾಮಟ್ಟದ ವಿವರ ಯೋಜನಾ ವರದಿಗಳ ಮೂಲಕ ರಾಜ್ಯಮಟ್ಟದ ಯೋಜನಾ ಮಂಜೂರಾತಿ ಸಮಿತಿಯಿಂದ ಅನುಮೋದನೆ ಪಡೆಯಬೇಕಾಗುತ್ತದೆ ಹಾಗೂ ಬಡತನ ರೇಖೆಗಿಂತ ಮೇಲಿರುವ ಜನರು ಬ್ಯಾಂಕುಗಳ ಮೂಲಕ ಆದ್ಯತೆ ಮೇಲೆ ಹಣಕಾಸು ನೆರವು ಪಡೆಯಬಹುದಾಗಿದೆ. ಸದ್ಯ ಗುತ್ತಿಗೆ ಆಧಾರದ ಮೇಲೆ ವಲಯ ಸಮನ್ವಯಕರು ಮತ್ತು ಸ್ವಚ್ಛತಾದೂತರು ಕಾರ್ಯ ನಿರ್ವಹಿಸುತ್ತಿದ್ದು ಇಂತಹ ಅನಾವಶ್ಯಕ ಪುನರಾವರ್ತನೆ ತಪ್ಪಿಸಲು ಕುಡಿಯುವ ನೀರು ಪೂರೈಕೆ ಮತ್ತು ಶೌಚವ್ಯವಸ್ಥೆ ಇಲಾಖೆಗಳನ್ನು ವಿಲೀನಗೊಳಿಸಿ, ಆಡಳಿತಾತ್ಮಕವಾಗಿ ಬಲಪಡಿಸಲಾಗುವುದು. ವ್ಯಕ್ತಿಗತ ಸಂವಹನ ಮೂಲಕ ಜನರನ್ನು ಪ್ರೇರೇಪಿಸಲು ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಶಾಲಾಮಕ್ಕಳು, ಸ್ಥಳೀಯ ಮಹಿಳಾ ಸಂಘಟನೆಗಳನ್ನು ಬಳಸಿಕೊಳ್ಳುವ ಬಗ್ಗೆಯೂ ಚಿಂತನೆ ನಡೆಸಲಾಗುವುದು. ಈ ದೀಕ್ಷಾದಳ ಪರಿಮಿತಿಯಲ್ಲೆ ಕಂಪನಿ ಕಾಯ್ದೆಯಡಿ, ವಿಶೇಷ ಉದ್ದೇಶ ವಾಹಕ (ಎಸ್‌ಪಿವಿ) ಕಂಪನಿಯೊಂದನ್ನು ಸ್ಥಾಪಿಸಲಾಗುವುದು. ಈ ಕಂಪನಿ ಇದಕ್ಕೆ ಸಂಬಂಧಿಸಿದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಒಳಗೊಂಡಂತೆ, ಸರ್ಕಾರಿ ಹಾಗೂ ಸರ್ಕಾರೇತರ ಹಣವನ್ನು ನಿರ್ವಹಿಸಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸುವ ನೀರು-ಶೌಚಾಲಯ ಕಾಮಗಾರಿ ಕುರಿತ ವಿಶೇಷ ಯೋಜನಾ ನಿರ್ವಹಣೆ ಸಲಹಾಕಾರ ಪಿಎಂಸಿಯಾಗಿಯೂ ಈ ಕಂಪನಿ ಕೆಲಸ ಮಾಡಲಿದೆ. ಸಮುದಾಯ, ಶೌಚಾಲಯ, ಸಮುದಾಯ ನೀರು ಸಂಸ್ಕರಣೆ ಘಟಕ ಮೊದಲಾದ ಆದಾಯದ ಮೂಲದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ನಿರ್ವಹಿಸಲಿದೆ. ರಾಜ್ಯಸರ್ಕಾರ ಬಯಸಿದಲ್ಲಿ ನೀರು ಮತ್ತು ಶೌಚಾಲಯ ಯೋಜನೆಗಳಿಗೆ ಸಂಬಂಧಿಸಿದ ಬಹು ಗ್ರಾಮ ಪೈಪ್‌ಲೈನ್ ಯೋಜನೆಗಳ ಜಿಲ್ಲಾ ಡಿಪಿಆರ್ ತಯಾರಿಸಲು, ಐಇಸಿ / ಐಪಿಸಿ ಚಟುವಟಿಕೆಗಳನ್ನು ಶುಲ್ಕಾಧಾರದ ಮೇಲೆ ಸಲಹಾಕಾರ - ಪಿಎಂಸಿಯಾಗಿ ನಿರ್ವಹಿಸಲು ಈ ಕಂಪನಿ ಸಿದ್ಧವಿರುತ್ತದೆ. ಸ್ವಚ್ಛ ಭಾರತ (ಎನ್‌ಬಿಎ)ಅಭಿಯಾನಯಡಿ ಮುಂದಿನ 5 ವರ್ಷಗಳಲ್ಲಿ ಅಂದರೆ 2019ರ ವೇಳೆಗೆ ವಾರ್ಷಿಕ 177 ಲಕ್ಷದಂತೆ 8.84 ಕೋಟಿ ಕುಟುಂಬಗಳಿಗೆ ಶೌಚಾಲಯ ಸೇವೆ ಕಲ್ಪಿಸಬೇಕಾಗಿದೆ. ಶೌಚಾಲಯ ಸೇವಾ ನೀಡಿಕೆ ಪ್ರಗತಿ ಪ್ರಸ್ತುತ ಶೇ 3 ಇದ್ದು 2019ರ ವೇಳೆಗೆ ಗುರಿ ಸಾಧಿಸಲು ಇದನ್ನು ಮೂರು ಪಟ್ಟು ಹೆಚ್ಚು ಅಂದರೆ ಶೇ. 10ಕ್ಕೆ ಹೆಚ್ಚಿಸಬೇಕಾಗುತ್ತದೆ. ಸದ್ಯ ಪ್ರತಿದಿನ 14,000 ಶೌಚಾಲಯ ನಿರ್ಮಿಸಲಾಗುತ್ತಿದ್ದು ಹೊಸ ಕ್ರಿಯಾ ಯೋಜನೆ ದಿನಂಪ್ರತಿ ಸಾಧನೆಯನ್ನು 48,000ಕ್ಕೇರಿಸಲು ಉದ್ದೇಶಿಸಿದೆ. ಇದೇ ವೇಳೆ 2.27 ಕೋಟಿ (ಅರ್ಹತಾ ಪಟ್ಟಿಯೊಳಗೆ ಬಾರದ ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗಾಗಿ ಮತ್ತು ಕೆಟ್ಟು ಹೋಗಿರುವ ಶೌಚಾಲಯ ದುರಸ್ತಿ ಸೇರಿದಂತೆ) ಶೌಚಾಲಯಗಳನ್ನು ನಿರ್ಮಿಸಬೇಕಾಗಿದೆ. ಮಾಹಿತಿ, ಶಿಕ್ಷಣ, ಸಂವಹನ, ವ್ಯಕ್ತಿಗತ ಸಂವಹನ ಬಳಸಿ, ನಬಾರ್ಡ್, ಸಿಬ್ಡಿ, ಮೂಲಕ ಶೌಚಾಲಯ ನಿರ್ಮಾಣಕ್ಕೆ ಆದ್ಯತೆ ಮೇಲೆ ಕಿರುಹಣಕಾಸು ನೆರವು ಕಲ್ಪಿಸಬೇಕಾಗಿದೆ. ಸದ್ಯ ಚಾಲ್ತಿಯಲ್ಲಿರುವ 'ಜನ ಭಾಗೀದಾರಿ' ಯೋಜನೆ ಮುಂದುವರೆಯಲಿದ್ದು ಪ್ರತಿ ಫಲಾನುಭವಿಗೆ ರೂ. 400/- ದೊರೆಯಲಿದ್ದು, ಫಲಾನುಭವಿ ತನಗೆ ಬೇಕಾದಂತೆ ಹೆಚ್ಚಿನ ಹಣವನ್ನು ವಿನಿಯೋಗಿಸಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಲೀಕರಣದ ಜಾರಿ ವ್ಯವಸ್ಥೆಯನ್ನು ಬಲಗೊಳಿಸಲು ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ● ನೀರು ಮತ್ತು ನಿರ್ಮಲೀಕರಣಕ್ಕೆ ಸಂಬಂಧಿಸಿದಂತೆ 2019 ರ ವೇಳೆಗೆ 'ಸ್ವಚ್ಛ ಭಾರತ'ಕ್ಕೆ ಬದ್ಧವಾಗಿರುವಂತೆ ರಾಜ್ಯ ಸರ್ಕಾರಗಳೊಂದಿಗೆ, ತಿಳಿವಳಿಕೆ ಪತ್ರಗಳಿಗೆ ಸಹಿ ಹಾಕಲಾಗುವುದು. ರಾಜ್ಯಮಟ್ಟದಲ್ಲಿ ಈ ಎರಡೂ ಪರಿಯೋಜನೆಗಳ ನಡುವೆ ಹಣಕಾಸು ವಿನಿಮಯಕ್ಕೆ ಅವಕಾಶವಾಗಲು, 2015 ರ ವೇಳೆಗೆ ಏಕೀಕೃತ ವ್ಯವಸ್ಥೆಯಾಗುವಂತೆ ನೋಡಿಕೊಳ್ಳಲಾಗುವುದು. ● ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ವೆಚ್ಚವಾಗದಂತೆ

ರಾಜ್ಯಸರ್ಕಾರಗಳಿಗೆ ಹಣ ಬಿಡುಗಡೆಯನ್ನು "ಸಕಾಲ" ಪರಿಕಲ್ಪನೆಯಲ್ಲಿ ಮಾಡಲಾಗುವುದು. ● ಕ್ಷೇತ್ರವರದಿ, ಜಿಲ್ಲೆಗಳ ಡಿಪಿಆರ್ ವರದಿ ಆಧರಿಸಿ ನೀರು ಮತ್ತು ಶೌಚಾಲಯಗಳಿಗೆ ಒಂದಾಗಿ ಹಣ ಬಿಡುಗಡೆ ಮಾಡಲಾಗುವುದು. ● ಕೇಂದ್ರ ಮಟ್ಟದಲ್ಲಿ ವಿಶೇಷ ಉದ್ದೇಶ ವಾಹಕ (ಎಸ್‌ಪಿವಿ) ಕಂಪನಿಯೊಂದನ್ನು ಯೋಜನೆ ನಿರ್ವಹಣೆ ಸಲಹಾಕಾರನಾಗಿ ಸ್ಥಾಪಿಸಿ, ಆ ಮೂಲಕ ಕಾರ್ಪೊರೇಟ್, ಸಾಮಾಜಿಕ ಹೊಣೆಗಾರಿಕೆ ಸಿಎಸ್‌ಆರ್ ನಿಧಿ – ಸಾರ್ವಜನಿಕ – ಖಾಸಗಿ – ಪಾಲುದಾರಿಕೆ. ಯೋಜನೆ (ಸಮುದಾಯ ಶೌಚಾಲಯ, ನೀರು ಶುದ್ಧೀಕರಣ ಮೊದಲಾದ ಯೋಜನೆ) ನಿರ್ವಹಿಸಲಾಗುವುದು. ಎಸ್‌ಪಿವಿ, ಐಇಸಿ ಹಾಗೂ ಐಪಿಸಿ ಕಾರ್ಯಗಳನ್ನು ಮಾಡುತ್ತದೆ. ಯಾವುದೇ ಪ್ರೋತ್ಸಾಹಧನಕ್ಕೆ ಅರ್ಹವಾಗಿರದ ಕುಟುಂಬಗಳಿಗೂ ಶೌಚ ವ್ಯವಸ್ಥೆ ಕಲ್ಪಿಸಿಕೊಳ್ಳಲು ನೆರವಾಗುವಂತೆ, ಶೌಚಾಲಯದೊಂದಿಗೇ ಬಚ್ಚಲು–ಸ್ನಾನಕ್ಕೆ ಅವಕಾಶವಿರುವ ಘಟಕ ಕಟ್ಟಿಕೊಳ್ಳಲು ನಬಾರ್ಡ್, ಸಿಡ್ಬಿ (ಆದ್ಯತಾ ವಲಯದ ಬ್ಯಾಂಕು) ಮೂಲಕ ಕಿರುಸಾಲ ಸೌಲಭ್ಯ ಕಲ್ಪಿಸಲಾಗುವುದು. ● ಗ್ರಾಮ ಪಂಚಾಯತ್‌ಗಳಿಗೆ ಶೌಚ ಚಟುವಟಿಕೆ ವಿಷಯದಲ್ಲಿ ಮಾಹಿತಿ ಒದಗಿಸಿ, ಸಾಮರ್ಥ್ಯ ವರ್ಧಿಸಲು, ಬ್ಲಾಕ್ ಮಟ್ಟದಲ್ಲಿ ನಿರ್ಮಲೀಕರಣ ಸಮನ್ವಯಕರನ್ನು ನಿಯೋಜಿಸಲಾಗುವುದು. ● ಪ್ರತಿ ಗ್ರಾಮ ಪಂಚಾಯತ್‌ಗೊಬ್ಬ ಸ್ವಚ್ಛತಾ ದೂತನನ್ನು ಗುರುತಿಸಲಾಗುವುದು. ನಿರ್ಮಲೀಕರಣ ವಿಷಯದಲ್ಲಿ ಆ ವ್ಯಕ್ತಿಯನ್ನು ಸನ್ನದ್ಧಗೊಳಿಸುವುದಲ್ಲದೆ, ಸಾಧನೆ ಆಧಾರಿತ ಪ್ರೋತ್ಸಾಹ ಧನವನ್ನು ನೀಡಲಾಗುವುದು. ● ಮನೆ ಮಟ್ಟದಲ್ಲಿ ಪ್ರೋತ್ಸಾಹನ ನಿಗಾ ಕೆಲಸವನ್ನು ಸಚಿವಾಲಯದ ಎಂಐಎಸ್ ಮೂಲಕ ನಿರ್ವಹಿಸಲಾಗುವುದು. ಇದಲ್ಲದೆ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಹಿರಿಯ ಅಧಿಕಾರಿಗಳು ಸರಪಂಚರೊಂದಿಗೆ ನೇರವಾಗಿ ಮಾತನಾಡಿ, ಅಭಿಪ್ರಾಯವನ್ನು ಪಡೆಯಬೇಕಾಗುತ್ತದೆ. ನಿರ್ಮಿಸಲಾದ ಶೌಚಾಲಯಗಳ ನೈಜ ಬಳಕೆ ಕೇಂದ್ರವಾಗಿಟ್ಟುಕೊಂಡು ವಾರ್ಷಿಕ ನಿರ್ಮಲೀಕರಣ ಸಮೀಕ್ಷೆ ನಡೆಸಿ ಅಂಕಿ ಅಂಶ ಮಾಹಿತಿ ಕಲೆಹಾಕಲಾಗುವುದು. ನಿರ್ಮಲ್ ಗ್ರಾಮ ಪುರಸ್ಕಾರ್ ಬದಲು, ವ್ಯಾಪಕ ಅವಕಾಶದ ಪಂಚಾಯತ್ ರಾಜ್ ಸಂಸ್ಥೆಗಳೂ ಗ್ರಾಮ–ತಾಲ್ಲೂಕು (ಬ್ಲಾಕ್) ಜಿಲ್ಲಾ ಇತರ ಸಂಸ್ಥೆಗಳು, ವ್ಯಕ್ತಿಗಳು, ಅಧಿಕಾರಿಗಳು, ಉತ್ತಮ ಹವ್ಯಾಸಿಗಳು, ಸರ್ಕಾರೇತರ ಸಂಸ್ಥೆಗಳನ್ನು ಒಳಗೊಂಡಂತೆ 'ಸ್ವಚ್ಛ ಭಾರತ್ ಪುರಸ್ಕಾರ' ಆರಂಭಿಸಲಾಗುವುದು.

**ಸಂಯೋಜನೆ** : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ ಎಂಎನ್‌ಆರ್ ಇಜಿಎ ಅನ್ನು ವಿವಿಧ ಯೋಜನೆಗಳ ಜತೆ ಸಂಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗುವುದು. ವೈಯಕ್ತಿಕ ಕುಟುಂಬ ಶೌಚಾಲಯ ನಿರ್ಮಾಣಕ್ಕಾಗಿ ಐಎವೈ ಜತೆ, ಸಿಎಸ್‌ಸಿ ನಿರ್ಮಾಣಕ್ಕಾಗಿ ಬಿಆರ್‌ಜಿಎಫ್ ಜತೆ, ಶಾಲೆ ಮತ್ತು ಅಂಗನವಾಡಿ ಶೌಚಾಲಯಗಳಿಗಾಗಿ ಎಂಹೆಚ್‌ಆರ್‌ಡಿ ಮತ್ತು ಎಂಡಬ್ಲ್ಯುಸಿಡಿ ಕಾರ್ಯಕ್ರಮಗಳ ಜತೆ, ಸಂಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ● ವೈಯಕ್ತಿಕ ಕುಟುಂಬ ಶೌಚಾಲಯ, ಶಾಲೆ, ಅಂಗನವಾಡಿ ಶೌಚಾಲಯ ಮತ್ತು ಸಮುದಾಯ ಶೌಚ ಸಂಕೀರ್ಣಗಳಿಗೆ ನೀರು ಪೂರೈಕೆ ಖಾತರಿಪಡಿಸಲು ಎನ್‌ಆರ್‌ಡಿಡಬ್ಲ್ಯುಪಿ ಜತೆ, ● ಗ್ರಾಮ ಪಂಚಾಯತ್‌ಗಳು ಆದ್ಯತೆ ಮೇಲೆ ನಿರ್ಮಲೀಕರಣ ಚಟುವಟಿಕೆಗಳನ್ನು ರಾಜೀವ್‌ಗಾಂಧಿ ಪಂಚಾಯತ್ ಸಶಕ್ತೀಕರಣ ಯೋಜನೆ ಮೂಲಕ ತೆಗೆದುಕೊಳ್ಳುವಂತೆ ಪಂಚಾಯತ್ ರಾಜ್ ಸಚಿವಾಲಯದೊಂದಿಗೆ ● ಶಾಲೆಗಳಲ್ಲಿ ಅಂಗನವಾಡಿಗಳಲ್ಲಿ ಮತ್ತು ಸಿಎಸ್‌ಸಿಗಳು ಮತ್ತು ಎಸ್‌ಎಲ್‌ಡಬ್ಲ್ಯುಎಂ (ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ) ಯೋಜನೆಗಳು, ನೀರುಪೂರೈಕೆ ಯೋಜನೆಗಳಿಗೆ ಎಂಪಿಎಲ್‌ಎಡಿಎಸ್, ಎಂಎಲ್‌ಎಎಲ್‌ಎಡಿಎಸ್ ನಿಧಿಗಳ ಬಳಕೆ ಕೇಂದ್ರೀಯ ಸಾರ್ವಜನಿಕ ರಂಗದ ಉದ್ದಿಮೆಗಳು ಹಾಗೂ ಇತರ ಕಂಪನಿಗಳ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಗಳ ಸಂಯೋಜನೆ; ಇದಲ್ಲದೆ ರಾಜ್ಯಮಟ್ಟದ ರಾಜ್ಯ ನೀರು ಮತ್ತು ನಿರ್ಮಲೀಕರಣ ದೀಕ್ಷಾದಳ ಮತ್ತು ಜಿಲ್ಲಾಮಟ್ಟದ ಡಿಡಬ್ಲ್ಯುಎಸ್‌ಎಂಗಳು ಸಿಎಸ್‌ಆರ್ ನಿಧಿ ಪಡೆಯುವಂತೆ ಪ್ರೋತ್ಸಾಹಿಸಲಾಗುವುದು. ಎಲ್ಲ ಅಂಗನವಾಡಿಗಳಲ್ಲಿ ಶೌಚಾಲಯ–ಕುಡಿಯುವ ನೀರು ಸೌಲಭ್ಯಕ್ಕಾಗಿ ಸಮಗ್ರ ಮಹಿಳಾ ನಿರ್ಮಲೀಕರಣ ಸಂಕೀರ್ಣಗಳನ್ನು ರೂಪಿಸಲು ಡಬ್ಲುಸಿಡಿ ಸಚಿವಾಲಯದೊಂದಿಗೆ ಸಂಯೋಜನೆ ನಡೆಸಲಾಗುವುದು.



**ಸಮುದಾಯ ನೇತೃತ್ವದ ಸಂಪೂರ್ಣ ನಿರ್ಮಲೀಕರಣ** : ಬಯಲು ಮಲವಿಸರ್ಜನೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವಂತೆ ಸಮುದಾಯಗಳ ಮನಸ್ಸು, ಪ್ರೇರೇಪಿಸಲು ಸಮುದಾಯ ನೇತೃತ್ವದ ಸಂಪೂರ್ಣ ನಿರ್ಮಲೀಕರಣ ಯೋಜನೆ, ಒಂದು ಹೊಸ ಆವಿಷ್ಕಾರ ಪೂರ್ಣ ಪದ್ಧತಿಯೆನಿಸಿದೆ. ಇದರಲ್ಲಿ ಜನ ಸಮುದಾಯಕ್ಕೆ ಬಯಲು ಮಲ ವಿಸರ್ಜನೆ ಕುರಿತಂತೆ ಸ್ವಂತ ಹೇಳಿಕೆ ಮತ್ತು ವಿಶ್ಲೇಷಣೆ ಮೂಲಕ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಾಗುತ್ತದೆ ಹಾಗೂ ಬಯಲು ಮಲವಿಸರ್ಜನೆ ಮುಕ್ತ ಪ್ರದೇಶವನ್ನಾಗಿಸಲು ತಮ್ಮದೇ ಕ್ರಮ ಕೈಗೊಳ್ಳಲು ಮುಂದಾಗುತ್ತಾರೆ. ಸಮುದಾಯ ನೇತೃತ್ವದ ಸಂಪೂರ್ಣ ನಿರ್ಮಲೀಕರಣದ ಉದ್ದೇಶ, ಶೌಚಾಲಯ ನಿರ್ಮಾಣ, ಅದರ ವ್ಯವಸ್ಥಿತ ಬಳಕೆ ತನ್ಮೂಲಕ ಸ್ವಾಸ್ಥ್ಯ ಪಾಲನೆ; ಇದಕ್ಕಾಗಿ ಜನರ ಮನವೊಲಿಸಿ ಅವರ ವರ್ತನೆಯಲ್ಲಿ ಬದಲಾವಣೆ ತರುವುದಾಗಿದೆ; ಬಯಲು ಮಲವಿಸರ್ಜನೆ ಮುಕ್ತ ಹಳ್ಳಿಗಳನ್ನು ರೂಪಿಸುವುದಾಗಿದೆ. ಕೆಲವೇ ಜನರು ಬಯಲು ಮಲವಿಸರ್ಜನೆಗೆ ಮುಂದಾದರೂ, ಎಲ್ಲರ ಆರೋಗ್ಯವೂ ಆಸ್ವಾಸ್ಥ್ಯದ ಅಪಾಯ ಎದುರಿಸಬೇಕಾಗುತ್ತದೆ. ಆದ್ದರಿಂದ ಸಿಎಲ್‌ಟಿಎಸ್, ಸಮುದಾಯದ ಆಶೋತ್ತರಗಳಲ್ಲಿ ಬದಲಾವಣೆ ಸ್ಥಳೀಯ ಮಟ್ಟದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಮೂಲಕ ಸಮುದಾಯಕ್ಕೆ ಹೆಚ್ಚಿನ ಮಾಲೀಕತ್ವ, ಸುಸ್ಥಿರತೆ ತಂದುಕೊಡಲು ಪ್ರಯತ್ನಿಸುತ್ತದೆ. ಇದಕ್ಕೆ ವೈಯಕ್ತಿಕ ಪ್ರೋತ್ಸಾಹಗಳಿಗಿಂತ, ರಾಜ್ಯ ಆಡಳಿತದೊಂದಿಗೆ ನಿಕಟ ವಿಚಾರ ವಿನಿಮಯ ಅಗತ್ಯವೆಂದು ತೋರುತ್ತದೆ. ಆದರೂ ಆರಂಭಿಕ ಹಂತದಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಅನುದಾನ ಮತ್ತು ಬಯಲು ಮಲವಿಸರ್ಜನೆಯಿಂದ ಮುಕ್ತವಾಗುವ ಹಳ್ಳಿಗಳಿಗೆ ಪುರಸ್ಕಾರ ನೀಡುವುದನ್ನು ಪರಿಗಣಿಸಲಾಗುವುದು.

(ಮೂಲ : ಕುಡಿಯುವ ನೀರು ಮತ್ತು ಶೌಚ ಸೌಲಭ್ಯ ಸಚಿವಾಲಯ, ರಾಜ್ಯಸರ್ಕಾರಗಳಿಗೆ ಕಳುಹಿಸಿದ ಕರಡು ಒಕ್ಕಣೆ) ❑

# ನಗರ ಅನೌಪಚಾರಿಕ ವಲಯ

ಅರುಪ್ ಮಿತ್ರಾ
ಕನ್ನಡಕ್ಕೆ : ಕಣ್ಮಣಿ



**ಅನೌಪಚಾರಿಕ ವಲಯದಲ್ಲಿರುವ ಉದ್ದಿಮೆಗಳು ಭೌತಿಕವಾಗಿ ಮತ್ತು ಆರ್ಥಿಕವಾಗಿ ಸದೃಢವಾಗಿಲ್ಲದೇ ಇರುವುದು ಉತ್ಪಾದನೆ ಮತ್ತು ಆದಾಯವನ್ನು ಕುಂಠಿತಗೊಳಿಸುತ್ತದೆ. ಇದು ಅನೌಪಚಾರಿಕ ವಲಯಕ್ಕೆ ಇರುವ ಬಹುದೊಡ್ಡ ಅಡಚಣೆಯಾಗಿದೆ.**

ನಗರ ಅನೌಪಚಾರಿಕ ವಲಯವು ಜೀವನೋಪಾಯಕ್ಕೆ ಅಗತ್ಯವಿರುವ ಆದಾಯವನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದಿಂದ ವಲಸೆ ಬಂದಿರುವ ಮತ್ತು ನಗರ ಪ್ರದೇಶದ ಕೊಳೆಗೇರಿ ಪ್ರದೇಶಗಳಲ್ಲಿ ವಾಸಿಸುವ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಆದಾಯ ಒದಗಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಹೀಗಾಗಿ ಅನೌಪಚಾರಿಕ ವಲಯದ ಗಾತ್ರ ಮತ್ತು ರಚನೆಯ ಪ್ರಕ್ರಿಯೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಈ ವಲಯದಿಂದ ಉದ್ಭವಿಸುವ ಗುತ್ತಿಗೆ ವ್ಯವಸ್ಥೆ ಮತ್ತು ಪೂರಕ ವಿಷಯಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ದಿನಗಳಲ್ಲಿ ಕಂಡು ಬಂದ ಬದಲಾವಣೆ ಹಾಗೂ ಈ ಬದಲಾವಣೆಯಿಂದ ಉದ್ಯೋಗ ಮತ್ತು ಉದ್ಯೋಗಿಗಳ ಕಾರ್ಯಕ್ಷಮತೆ ಮೇಲೆ ಉಂಟಾಗಿರುವ ಪರಿಣಾಮವನ್ನು ಸಹ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಭಾರತೀಯ ಸಂದರ್ಭದಲ್ಲಿ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ಕಳೆದ 25–30 ವರ್ಷಗಳ ಅವಧಿಯಲ್ಲಿ ಹಲವಾರು ಅಧ್ಯಯನಗಳು ನಡೆದಿವೆ. ಇದರಂತೆ ಜೀವನೋಪಾಯಕ್ಕಾಗಿ ಆದಾಯವನ್ನು ತಂದು ಕೊಡುವಲ್ಲಿ ವಿಫಲವಾಗುವ ಕೃಷಿಕ್ಷೇತ್ರವನ್ನು ತ್ಯಜಿಸುವ ಜನರಿಗೆ ಗ್ರಾಮೀಣ ಭಾಗದಲ್ಲಿಯೇ ಇರುವ ಕೃಷಿಯೇತರ ವಲಯ ಅಥವಾ ಉತ್ತಮ ಉತ್ಪಾದನಾ ಸಾಮರ್ಥ್ಯವಿರುವ ನಗರ ಪ್ರದೇಶದಲ್ಲಿನ ಉದ್ದಿಮೆಗಳು ಸಹ ಕೆಲಸವನ್ನು ನೀಡುವುದಿಲ್ಲ. ಹೀಗಾಗಿ ಇಂತಹ ಕಾರ್ಮಿಕರು ಅನಿವಾರ್ಯವಾಗಿ ಕಡಿಮೆ ಆದಾಯ ತರುವ ಅನೌಪಚಾರಿಕ ವಲಯಗಳಿಗೆ ಮೊರೆ ಹೋಗುತ್ತಾರೆ. ಕ್ಷಿಪ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆ ಕಾರ್ಮಿಕರ ಅಗತ್ಯತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಆದರೆ, ನಗರ ಪ್ರದೇಶದಲ್ಲಿ ಕಾರ್ಮಿಕರ ಅಗತ್ಯ ಹೆಚ್ಚುತ್ತಿದ್ದರೂ ಬಹುತೇಕ ಕಾರ್ಮಿಕರು ನಗರ ಪ್ರದೇಶದ ಕೆಲಸಕ್ಕೆ ಬೇಕಾದ ಕೌಶಲ್ಯ ಹೊಂದಿರುವುದಿಲ್ಲ ಅಥವಾ ಅಲ್ಪ ಕುಶಲತೆ ಹೊಂದಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಅಭಿವೃದ್ಧಿ ಪ್ರಕ್ರಿಯೆಯು ಬಂಡವಾಳ ಮತ್ತು ಕೌಶಲಗಳ ಮೇಲೆ ಹಿಂದೆಂದಿಗಿಂತಲೂ ಹೆಚ್ಚು ಅವಲಂಬಿತವಾಗುತ್ತಿದೆ. ಇದರ ನೇರ ಪರಿಣಾಮವೆಂದರೆ, ಉತ್ತಮ ಆದಾಯ ತರುವ ಉದ್ಯೋಗಗಳಿಗೆ ಬದಲಾಗಿ ಸಣ್ಣ ಪುಟ್ಟ ಕೆಲಸ ಮಾಡುವುದು ಅನೌಪಚಾರಿಕ ವಲಯದಲ್ಲಿರುವವರಿಗೆ ಅನಿವಾರ್ಯವಾಗುತ್ತದೆ. ಹೀಗಾಗಿ ಅನೌಪಚಾರಿಕ ವಲಯದಲ್ಲಿನ ಉದ್ಯೋಗಾವಕಾಶ ಮತ್ತು ವಿವಿಧ ರೀತಿಯ ಬಡತನದ (ಬಳಕೆಯ ಬಡತನ, ವಸತಿ, ಆರೋಗ್ಯ, ಶಿಕ್ಷಣ ಪಡೆಯುವಲ್ಲಿ ಬಡತನ ಇತ್ಯಾದಿ). ನಡುವೆ ಸಂಬಂಧ ಇರುವುದು ಎದ್ದು ಕಾಣುತ್ತದೆ.

## ಗಾತ್ರ

ದೇಶದ ಒಟ್ಟು ಉದ್ಯೋಗಿಗಳ ಪೈಕಿ ಅನೌಪಚಾರಿಕ ವಲಯದಲ್ಲಿರುವ ಉದ್ಯೋಗಿಗಳ ಪಾಲು ಹೆಚ್ಚು. ಈ ವಲಯವು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಅರ್ಥಶಾಸ್ತ್ರ ಪ್ರಾಧ್ಯಾಪಕರು, ಆರ್ಥಿಕ ಬೆಳವಣಿಗೆ ಸಂಸ್ಥೆ, ದೆಹಲಿ. Email - arup@iegindia.org

ಸಾಮಾನ್ಯವಾಗಿ ಅನೌಪಚಾರಿಕ ವಲಯವನ್ನು ಹೀಗೆ ವಿವರಿಸಬಹುದು. "ಬಂಡವಾಳ ಮತ್ತು ಕಾರ್ಮಿಕರ ಸಂಖ್ಯೆ ಅನುಪಾತ ಕಡಿಮೆ ಇರುವ, ಕಡಿಮೆ ಗುಣಮಟ್ಟದ ತಂತ್ರಜ್ಞಾನದೊಂದಿಗೆ, ಕಡಿಮೆ ಪ್ರಮಾಣದ ಉತ್ಪಾದನಾ ಚಟುವಟಿಕೆ ಹೊಂದಿರುವ ವಲಯವೇ ಅನೌಪಚಾರಿಕ ವಲಯ" ಎನಿಸುತ್ತದೆ.

ಔಪಚಾರಿಕ ಅಥವಾ ಅನೌಪಚಾರಿಕ ವಲಯದಲ್ಲಿ ಯಾವುದೇ ಒಂದು ಉದ್ದಿಮೆ ತನ್ನ ಕಾರ್ಯಾಚರಣೆಯನ್ನು ಆರಂಭಿಸುವುದು ಆ ಉದ್ದಿಮೆಯನ್ನು ನಡೆಸುವವರ ಹಾಗೂ ಅದರಲ್ಲಿ ಕೆಲಸ ಮಾಡುವವರ ಕೌಶಲ ಮತ್ತು ಶೈಕ್ಷಣಿಕ ಅರ್ಹತೆ ಮೇಲೆ ಅವಲಂಬಿಸಿದೆ. ಕಡಿಮೆ ಬಂಡವಾಳ ಮತ್ತು ಗುಣಮಟ್ಟವಲ್ಲದ ಮಾನವ ಸಂಪನ್ಮೂಲ ಹೊಂದಿರುವ ಉದ್ದಿಮೆಗಳ ಪೈಕಿ ಅನೇಕ ಘಟಕಗಳು ಅನೌಪಚಾರಿಕ ವಲಯದಲ್ಲಿಯೇ ಉಳಿದುಕೊಂಡು ಬಿಡುತ್ತವೆ. ಒಂದು ವೇಳೆ ಉತ್ತಮ ಗುಣಮಟ್ಟದ ಶಿಕ್ಷಣ, ಮಾರುಕಟ್ಟೆಯ ಆಗುಹೋಗುಗಳ ಕುರಿತ ಸಮರ್ಪಕ ತಿಳುವಳಿಕೆ, ಪತ್ತಿನ ಬಗ್ಗೆ ಮಾಹಿತಿ, ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕರಾರುವಾಕ್ ಮಾಹಿತಿ ಹೊಂದುವಲ್ಲಿ ಸಫಲವಾದದ್ದೇ ಆದಲ್ಲಿ ಆ ಉದ್ದಿಮೆಯ ಉತ್ಪಾದನೆ ಹೆಚ್ಚಾಗಿ, ಕಾರ್ಯಾಚರಣೆಯ ಪ್ರಮಾಣವೂ ವಿಸ್ತಾರಗೊಳ್ಳುತ್ತದೆ.

ಈ ಮೂಲಕ ಅನೌಪಚಾರಿಕ ವಲಯ ಅಥವಾ ಅಸಂಘಟಿತ ವಲಯವು ಔಪಚಾರಿಕ ಅಥವಾ ಸಂಘಟಿತ ವಲಯವಾಗಿ ಮೇಲ್ದರ್ಜೆಗೇರಲು ಸಾಧ್ಯವಾಗುತ್ತದೆ. ಆದರೆ, ಈ ಮೇಲ್ದರ್ಜೆಗೇರುವ ಪ್ರಕ್ರಿಯೆ ಎಂಬುದು ಉದ್ದಿಮೆಯ ಒಟ್ಟಾರೆ ಬಂಡವಾಳದ ಮೇಲೆ ಅವಲಂಬಿತವಾಗಿರುತ್ತದೆ. ಒಂದು ವೇಳೆ ಔಪಚಾರಿಕ ವಲಯದಲ್ಲಿ ನೊಂದಣಿ ಪ್ರಕ್ರಿಯೆ ಮತ್ತು ಕಾರ್ಮಿಕರಿಗೆ ಸಂಬಂಧಿಸಿದಂತೆ ಕಾನೂನುಗಳು ಕಠಿಣವಾಗಿದ್ದ ಪಕ್ಷದಲ್ಲಿ ಉದ್ದಿಮೆದಾರರು ಅನೌಪಚಾರಿಕ ವಲಯದಲ್ಲಿಯೇ ತಮ್ಮ ಘಟಕದ ಉತ್ಪಾದನಾ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸುತ್ತಾರೆ. ಈ ನಿರ್ಧಾರದಿಂದ ಉದ್ದಿಮೆಯು ಸಣ್ಣ ಮಾರುಕಟ್ಟೆ ಮೇಲೆಯೇ ಅವಲಂಬಿತವಾಗಬೇಕಾಗುತ್ತದೆ. ಅನೌಪಚಾರಿಕ ವಲಯವು ಕಾರ್ಮಿಕರು ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಮೃದು ಧೋರಣೆ ಹೊಂದಿರುವುದೇ ಇದಕ್ಕೆ ಕಾರಣ. ಇಂತಹ ಸನ್ನಿವೇಶಗಳಲ್ಲಿ ಅನೌಪಚಾರಿಕ ವಲಯದಲ್ಲಿರುವ ಉದ್ದಿಮೆಗಳು ಸಹ ತಂತ್ರಜ್ಞಾನ ವಿಷಯದಲ್ಲಿ ಹೆಚ್ಚು ಸಶಕ್ತವಾಗಿರುವವಲ್ಲದೇ, ಹೆಚ್ಚು ಸ್ಪರ್ಧಾತ್ಮಕವಾಗಿಯೂ ಇರುತ್ತವೆ. ಇನ್ನು, ಅನೌಪಚಾರಿಕ ವಲಯದಲ್ಲಿನ ಉದ್ಯೋಗಾವಕಾಶ ಕುರಿತು ಹೀಗೆ ವ್ಯಾಖ್ಯಾನಿಸಬಹುದು. ಗ್ರಾಮೀಣ ಅಥವಾ ನಗರ ಪ್ರದೇಶದಲ್ಲಾಗಲಿ ಅನೌಪಚಾರಿಕ ವಲಯದಲ್ಲಿನ ಉದ್ಯೋಗಗಳ ಅನುಪಾತ ಹೆಚ್ಚು ಇರುತ್ತದೆ. ಅದರಲ್ಲೂ ಅನೌಪಚಾರಿಕ ವಲಯದ ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳ ಪ್ರಮಾಣ ಹೆಚ್ಚು ಎಂದರೆ ಅಚ್ಚರಿ ಎನಿಸದು. ಅದೇ ರೀತಿ ಕೃಷಿಯೇತರ ಕ್ಷೇತ್ರದಲ್ಲಿ ಭಾರಿ ಸಂಖ್ಯೆಯಲ್ಲಿ ಕಾರ್ಮಿಕರು ಇರುವುದು ಕಂಡು ಬರುತ್ತದೆ.

ವಸ್ತುಶಃ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಉದ್ಯೋಗಿಗಳ ಸಂಖ್ಯೆಯಲ್ಲಿ ಅಂತಹ ವ್ಯತ್ಯಾಸ ಕಂಡು ಬರುವುದಿಲ್ಲ. ಲಿಂಗ ಆಧಾರಿತ ಕೆಲಸಗಾರರ ವಿಷಯದಲ್ಲಿಯೂ ಇದೇ ಮಾತನ್ನು ಹೇಳಬಹುದು. ಉದ್ಯೋಗದಲ್ಲಿರುವ ಒಟ್ಟು ಮಹಿಳೆಯರ ಸಂಖ್ಯೆಗೆ ಹೋಲಿಸಿದರೆ ಕೇವಲ ಅನೌಪಚಾರಿಕ ವಲಯದಲ್ಲಿ ಕಾರ್ಯ ನಿರತ ಮಹಿಳೆಯರ ಸಂಖ್ಯೆ ಕಡಿಮೆ. ಇದು ಇದೇ ವಲಯದಲ್ಲಿ ಕೆಲಸ ಮಾಡುವ ಪುರುಷರ ಸಂಖ್ಯೆಗಿಂತಲೂ ಕಡಿಮೆ ಇರುವುದು ಕಂಡು ಬರುತ್ತದೆ. ಇಷ್ಟಾದರೂ ಈ ಎಲ್ಲ ವಿವರಣೆಗಳು ವಾಸ್ತವ ಚಿತ್ರಣ ನೀಡುವುದಿಲ್ಲ ಎಂದೇ ಹೇಳಬಹುದು. ಎನ್‌ಎಸ್‌ಎಸ್(2009–10) ನೀಡುವ ವಿವರಣೆಯಂತೆ, ಅಂತಿಮವಾಗಿ ತಮ್ಮ ಸ್ವಂತ ಉಪಯೋಗಕ್ಕೆ ಬಳಕೆಯಾಗುವ ಉತ್ಪನ್ನಗಳ ಉತ್ಪಾದನೆಯಲ್ಲಿ ತೊಡಗಿರುವ ಕುಟುಂಬ ಒಡೆತನ ಉದ್ದಿಮೆಗಳನ್ನು ಹೊರತುಪಡಿಸಿ ಉಳಿದ ಉದ್ದಿಮೆಗಳ ಉದ್ಯೋಗಿಗಳನ್ನು (ಸ್ವಂತ ಹಾಗೂ ಸಹಭಾಗಿತ್ವದ ಉದ್ದಿಮೆಗಳು) ಒಳಗೊಂಡ ಕ್ಷೇತ್ರವೇ ಅನೌಪಚಾರಿಕ ವಲಯ ಎನಿಸಿಕೊಳ್ಳುತ್ತದೆ. ಹಾಗೆ ನೋಡಿದರೆ ಮನೆ ಕೆಲಸದಲ್ಲಿ ನಿರತರಾದವರು ಸಹ ಅನೌಪಚಾರಿಕ ವಲಯದ ಭಾಗವೇ ಆಗಿರುತ್ತಾರೆ. ಆದರೆ, ಮನೆಕೆಲಸಗಳಲ್ಲಿ ತೊಡಗಿರುವವರನ್ನು ಪರಿಗಣಿಸದಿದ್ದರೆ, ಅನೌಪಚಾರಿಕ ವಲಯದಲ್ಲಿನ ಉದ್ಯೋಗಾವಕಾಶಗಳ ಗಾತ್ರವನ್ನೇ ಗೌಣಮಾಡಿದಂತಾಗುತ್ತದೆ. ಇದನ್ನು ಕೋಷ್ಟಕ–1ರಲ್ಲಿ ವಿವರಿಸಲಾಗಿದೆ.



ಮನೆಕೆಲಸದ ವಲಯಕ್ಕೆ ಇರುವ ನಮ್ಯತೆ ಕಾರಣದಿಂದಾಗಿ ಈ ವಲಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಕೆಲಸದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದುವೇಳೆ ಈ ಮನೆ ವಲಯದ ಅವಗಣನೆ ಮಾಡಿದರೆ ಅನೌಪಚಾರಿಕ ವಲಯದಲ್ಲಿ ಮಹಿಳೆಯರಿಗೆ ಹೆಚ್ಚು ಉದ್ಯೋಗ ಸಿಗುವುದನ್ನು ತಡೆದಂತಾಗುತ್ತದೆ. ಅನೌಪಚಾರಿಕ ವಲಯದ ಉದ್ದಿಮೆಗಳು ಪ್ರಾಸಂಗಿಕ ಅಥವಾ ಅಲ್ಪಾವಧಿಯ ಕರಾರಿನ ಮೇಲೆ ಕಾರ್ಯ ನಿರ್ವಹಿಸುವ ಕಾರ್ಮಿಕರನ್ನು ಅಥವಾ ಔಪಚಾರಿಕ ವಲಯದ ಅನಿಯಮಿತ ಕಾರ್ಮಿಕರನ್ನು ಒಳಗೊಂಡಿರುತ್ತದೆ. ಇದರ ಜೊತೆಗೆ, ಅನೌಪಚಾರಿಕ ವಲಯದ ಉದ್ದಿಮೆಗಳು ಮತ್ತು ಕುಟುಂಬ ವಲಯದಲ್ಲಿನ ಉದ್ಯೋಗದ ಗಾತ್ರ ಸ್ವಾಭಾವಿಕವಾಗಿ ದೊಡ್ಡದಾಗಿರುತ್ತದೆ. ಇಂತಹ ಮಿತಿಗಳ ಹೊರತಾಗಿಯೂ ಭಾರತದ ಅನೌಪಚಾರಿಕ ವಲಯದಲ್ಲಿನ ಉದ್ಯೋಗದ ಗಾತ್ರ (ಕೋಷ್ಟಕದಲ್ಲಿ ವಿವರಿಸಿದಂತೆ) ದೊಡ್ಡದು ಅದರಲ್ಲೂ ವಿಶೇಷವಾಗಿ ಕೃಷಿಯೇತರ ಚಟುವಟಿಕೆಗಳಲ್ಲಿ ಹೆಚ್ಚಿರುವುದು ಕಂಡು ಬರುತ್ತದೆ.

## ಹೊಸ ಪ್ರವೃತ್ತಿ

ಉದ್ಯೋಗದಲ್ಲಿನ ಅಭಿವೃದ್ಧಿ ಮತ್ತು ಅದರ ಪ್ರತಿಫಲ ನಿಸ್ಸಂದೇಹವಾಗಿಯೂ ಒಂದು ಉದ್ಯಮದ ಸಾಧನೆಯ ಸೂಚ್ಯಂಕಗಳಾಗಿವೆ. ಅಸಂಘಟಿತ ಅಥವಾ ಅನೌಪಚಾರಿಕ ವಲಯದಲ್ಲಿರುವ ಅನೇಕ ಉದ್ದಿಮೆಗಳಲ್ಲಿ ಉದ್ಯೋಗದ ಬೆಳವಣಿಗೆ ಋಣಾತ್ಮಕವಾಗಿರುವುದು ಕಂಡುಬಂದಿದೆ. ಆದಾಗ್ಯೂ ಜವಳಿ, ಚರ್ಮ, ಅಲೋಹ ಖನಿಜ ಉತ್ಪನ್ನಗಳು, ಮೂಲ ಲೋಹ ಹಾಗೂ ಲೋಹದ ಉತ್ಪನ್ನಗಳಲ್ಲಿ ನಿರತ ಕೈಗಾರಿಕೆಗಳು ಧನಾತ್ಮಕ ಪ್ರಗತಿದರ ದಾಖಲಿಸಿವೆ. ಸಮೀಕ್ಷೆ ಸಂಗ್ರಹಿಸಿದ ಅಂಕಿ–

ಸಂಖ್ಯೆ ಎಎಂಇ ಅಂದರೆ ಗೃಹ ಕೈಗಾರಿಕೆ ಅಥವಾ ಕುಟುಂಬದಲ್ಲಿನ ಕೆಲಸವನ್ನು ತೋರಿಸುತ್ತದೆ.

| ಕೋಷ್ಟಕ–1 ಅನೌಪಚಾರಿಕವಲಯದ ಗಾತ್ರ (ಶೇಕಡಾವಾರು) ರಾಷ್ಟ್ರೀಯ ಅಂಕಿ–ಅಂಶ(2009–10) | | | | | | |
|---|---|---|---|---|---|---|
| ವಲಯ | ಕೃಷಿ | | | ಕೃಷಿಯೇತರ | | |
| | ಪುರುಷರು | ಮಹಿಳೆಯರು | ವ್ಯಕ್ತಿಗಳು | ಪುರುಷರು | ಮಹಿಳೆಯರು | ವ್ಯಕ್ತಿಗಳು |
| ಗ್ರಾಮೀಣ | 90.6 | 95.0 | 93.4 | 73.0 | 64.1 | 71.3 |
| ನಗರ | 88.3 | 97.7 | 92.5 | 68.3 | 60.1 | 66.9 |

ಮೂಲ : ಎನ್ ಎಸ್ ಎಸ್ ನ ಉದ್ಯೋಗ– ನಿರುದ್ಯೋಗ ಅಂಕಿ–ಅಂಶ, 2009–10

ಈ ಅಂಕಿ – ಸಂಖ್ಯೆಗಳನ್ನು ಆಧಾರವಾಗಿಟ್ಟುಕೊಂಡು 2009–10ರಲ್ಲಿ ದೆಹಲಿಯಲ್ಲಿ ಗುಣಾತ್ಮಕ ಸಮೀಕ್ಷೆ ಕೈಗೊಳ್ಳಲಾಯಿತು. ಈ ಸಮೀಕ್ಷೆಯಲ್ಲಿ ಕಂಡು ಬಂದ ಅಂಶಗಳೆಂದರೆ, ಜವಳಿ ಉದ್ಯಮದ ಸಾಧನೆ ಉತ್ತಮವಾಗಿರುತ್ತಲ್ಲದೆ, ಈ ಉದ್ಯಮದಲ್ಲಿನ ಉದ್ಯೋಗಿಗಳು ಉತ್ತಮ ಆದಾಯ ಪಡೆದಿದ್ದರು. ದೆಹಲಿಯ ಸುಂದರ ನಗರ ಪ್ರದೇಶದಲ್ಲಿ ಕೈಗೊಂಡ ಕ್ಷೇತ್ರೀಯ ಸಮೀಕ್ಷೆ ಹೊಲಿಗೆ, ಕಸೂತಿ, ಆಭರಣ ತಯಾರಿಕೆ, ಪ್ಯಾಕೇಜಿಂಗ್ ಉದ್ಯಮದಲ್ಲಿ ಕಾರ್ಮಿಕರು ಹೆಚ್ಚಾಗಿ ಇರುವುದನ್ನು ಗುರುತಿಸಿತು. ಸಣ್ಣ ಮತ್ತು ದೊಡ್ಡ ಅಂಗಡಿಗಳಿಗೆ ಉತ್ಪನ್ನಗಳನ್ನು ಪೂರೈಕೆ ಮಾಡುವ ಗುತ್ತಿಗೆದಾರರ ಮೂಲಕವೇ ಈ ಕಾರ್ಮಿಕರು ಕೆಲಸವನ್ನು ಪಡೆಯುತ್ತಿದ್ದರು. ಈ ಕಾರ್ಮಿಕರು ತಯಾರಿಸಿದ ಕೆಲ ಉತ್ಪನ್ನಗಳು ನಿರ್ದಿಷ್ಟ ಕಂಪನಿಗಳ ಬ್ರ್ಯಾಂಡ್‌ನಡಿ ಮಾರಾಟವಾಗುತ್ತಿದ್ದರೆ, ಉಳಿದವು ಹಾಗೆಯೇ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವುದು ಸಹ ಕಂಡು ಬಂದಿತು. ಈ ಉತ್ಪನ್ನಗಳ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳನ್ನು ಕಾರ್ಮಿಕರಿಗೆ ಪೂರೈಸುತ್ತಿದ್ದ ಗುತ್ತಿಗೆದಾರರೇ ನಿಯಮಿತವಾಗಿ ಉತ್ಪನ್ನಗಳನ್ನು ಸಹ ಸಂಗ್ರಹಿಸುತ್ತಿದ್ದರು. ಆದರೆ, ಈ ಉತ್ಪನ್ನಗಳ ತಯಾರಿಕೆಗೆ ಕಾರ್ಮಿಕರು ಹಾಕುವ ಶ್ರಮಕ್ಕೆ ಹೋಲಿಸಿದರೆ, ಅವರಿಗೆ ನೀಡುವ ಕೂಲಿ ಹಣ ಅತ್ಯಲ್ಪವೇ ಆಗಿರುತ್ತದೆ.

| ಕೋಷ್ಟಕ–2 : ಉದ್ಯೋಗದ ಪ್ರಗತಿ ಮತ್ತು ಅಸಂಘಟಿತ ಉತ್ಪಾದನೆಯಲ್ಲಿ ಜಿವಿಎ, 2005–06ನೇ ರಿಂದ 2010–11ರ ವರೆಗೆ | | | | | | |
|---|---|---|---|---|---|---|
| | ಓಎಎಂಇ | | ಉದ್ದಿಮೆ | | ಒಟ್ಟು | |
| ಕೈಗಾರಿಕೆ | ಉದ್ಯೋಗಿಗಳು | ಜಿವಿಎ ಕೋಟಿ ರೂ.ಗಳಲ್ಲಿ (2004–05ರ ದರದಂತೆ) | ಉದ್ಯೋಗಿಗಳು | ಜಿವಿಯ ಕೋಟಿ ರೂ.ಗಳಲ್ಲಿ (2004–05ರ ದರದಂತೆ) | ಉದ್ಯೋಗಿಗಳು | ಜಿವಿಯ ಕೋಟಿ ರೂ.ಗಳಲ್ಲಿ (2004–05ರ ದರದಂತೆ) |
| ಆಹಾರ ಉತ್ಪನ್ನಗಳು; ಪಾನೀಯ, ತಂಬಾಕು | –6.77 | 2.12 | –3.39 | –1.20 | –5.94 | 0.35 |
| ಜವಳಿ ಮತ್ತು ಚರ್ಮ | 2.48 | 15.14 | 0.46 | 9.84 | 1.79 | 12.07 |
| ಕಾಗದ ಮತ್ತು ಉತ್ಪನ್ನ | –13.35 | –4.04 | 15.53 | 23.45 | –0.64 | 17.29 |
| ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು | –17.36 | –4.70 | –2.01 | 4.59 | –10.99 | 2.95 |
| ಅಲೋಹ ಖನಿಜ ಉತ್ಪನ್ನಗಳು | –4.91 | 2.01 | 11.27 | 9.03 | 3.97 | 7.67 |
| ಮೂಲ ಲೋಹಗಳು | 13.34 | 19.06 | –2.30 | –12.92 | 2.52 | 9.10 |
| ಲೋಹ ಉತ್ಪನ್ನಗಳು | –3.69 | 9.65 | 4.77 | 1.47 | 1.82 | 2.54 |
| ಯಂತ್ರ ಮತ್ತು ಸಲಕರಣೆಗಳು | –26.19 | –14.44 | –8.65 | –5.70 | –12.64 | –6.60 |
| ಸಾರಿಗೆ ಸಲಕರಣೆ | –5.64 | 15.63 | –7.70 | 4.20 | – 7.52 | 4.70 |
| ಇತರ ಉತ್ಪಾದನೆಗಳು | –1.32 | 12.79 | 4.43 | 7.77 | 0.89 | 9.47 |
| ಎಲ್ಲ ಉದ್ದಿಮೆಗಳು | –2.45 | 9.58 | 1.85 | 5.25 | –0.86 | 6.72 |

ಮೂಲ : ಅಸಂಘಟಿತ ಉತ್ಪಾದನಾ ಉದ್ದಿಮೆಗಳ ಕುರಿತು 2005–06ನೆ ಮತ್ತು 2010–11ರಲ್ಲಿ ರಾಷ್ಟ್ರೀಯ ಮಾದರಿ

ಕೂಲಿದರ ಕಾಲಾನುಕ್ರಮದಲ್ಲಿ ಕಡಿಮೆಯಾಗಿದೆ ಎಂಬ ಬಗ್ಗೆ ಸ್ಪಷ್ಟ ಸಾಕ್ಷ್ಯಾಧಾರಗಳು ಸಹ ಇಲ್ಲ. ಕಾರ್ಮಿಕರ ಜೀವನ ಮಟ್ಟ ಕುಸಿದಿಲ್ಲ ಎಂಬುದೇ ಸಮಾಧಾನ ತರುವ ವಿಷಯ. ಅಂದರೆ, ಇಷ್ಟೇ ಪ್ರಮಾಣದ ಆದಾಯ ಗಳಿಸಲು ಕಾರ್ಮಿಕರು ಹೆಚ್ಚು ಗಂಟೆಗಳ ಕಾಲ ದುಡಿಯಬೇಕಾಗುತ್ತದೆ. ಇನ್ನೊಂದೆಡೆ ಕಾರ್ಮಿಕರು ನೇರವಾಗಿ ಅಂಗಡಿಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಮುಂದಾಗುತ್ತಿಲ್ಲ. ಅಂಗಡಿಕಾರರು ಸಹ ಇಂತಹ ಉತ್ಪನ್ನಗಳನ್ನು ಖರೀದಿಸಲು ಮುಂದೆ ಬರುವುದಿಲ್ಲ. ಈ ವಿದ್ಯಮಾನವೇ ದಲ್ಲಾಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸುತ್ತದೆ. ದಲ್ಲಾಳಿಗಳು (ಮಧ್ಯವರ್ತಿಗಳು) ಸಾಕಷ್ಟು ಲಾಭವನ್ನು ಗಳಿಸುತ್ತಾರೆ. ಹೀಗಾಗಿ ಇಂತಹ ಸನ್ನಿವೇಶದಲ್ಲಿ ದಲ್ಲಾಳಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂದಾದರೆ ಇಂತಹ ಉತ್ಪಾದನಾ ಘಟಕಗಳಿಗೆ ಮಾರುಕಟ್ಟೆ ಒದಗಿಸುವ ಕಾರ್ಯವನ್ನು ಸರ್ಕಾರಗಳು ಮತ್ತು ನಾಗರಿಕ ಸಮಾಜವೇ ಮಾಡುವುದು ಅಗತ್ಯ.

ಗುಣಮಟ್ಟ ಉತ್ತಮವಾಗಿರಬೇಕು ಎಂಬ ಪ್ರಶ್ನೆ –ಕಾಳಜಿ ಇರುವ ಕೆಲವು ಕಂಪನಿಗಳ ಹೆಸರಿನಲ್ಲಿ ಮಾರಾಟವಾಗುವ ಉತ್ಪನ್ನಗಳ ತಯಾರಿಕೆಗೆ ನಿಯಮಿತವಾಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಕಚ್ಚಾವಸ್ತುಗಳ ಹಾಗೂ ಉತ್ಪನ್ನಗಳ ಪೂರೈಕೆ ಇರುತ್ತದೆ. ಆದರೆ, ಈ ವಿದ್ಯಮಾನದಿಂದ ಕಾರ್ಮಿಕರ ಕೂಲಿದರದಲ್ಲಿ ಯಾವುದೇ ಹೆಚ್ಚಳ ಕಂಡು ಬರುವುದಿಲ್ಲ. ಉತ್ತಮವಾಗಿ ತಯಾರಿಕೆಯಲ್ಲಿ ತೊಡಗುವವರ ಸಂಖ್ಯೆಯೂ ದೊಡ್ಡದಾಗಿ ಇರುವುದು ಇದಕ್ಕೆ ಪ್ರಮುಖ ಕಾರಣ. ವಾಸ್ತವದಲ್ಲಿ ಇದು ಖರೀದಿದಾರರ ಮಾರುಕಟ್ಟೆ ಎನ್ನಬಹುದು. ಏಕೆಂದರೆ ಇಲ್ಲಿ ಗುತ್ತಿಗೆದಾರರೇ ಉತ್ಪನ್ನದ ದರವನ್ನು ನಿಗದಿಪಡಿಸುತ್ತಾರಲ್ಲದೇ ಈ ದರವನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಯಾವುದೇ ಚೌಕಾಶಿಗೆ ಇಲ್ಲಿ ಅವಕಾಶ ಇರುವುದಿಲ್ಲ. ಇನ್ನೂ, ಸ್ಪಷ್ಟವಾಗಿ ಹೇಳಬೇಕು ಎಂದರೆ, “ಖರೀದಿಸಿ ಇಲ್ಲವೇ ಬಿಟ್ಟು ಬಿಡಿ’ ಎಂಬ ತತ್ವವೇ ಇಲ್ಲಿ ಬಳಕೆಯಲ್ಲಿದೆ. ಇಂತಹ ಸಂದರ್ಭಗಳಲ್ಲಿ ನಾಗರಿಕ ಸಮಾಜದ ಪಾತ್ರ ಮುಖ್ಯವಾಗುತ್ತದೆ.

ಕೆಲವು ಸಂಸ್ಥೆಗಳು ಗುತ್ತಿಗೆದಾರರು ನೀಡುವ ದರಕ್ಕಿಂತ ಹೆಚ್ಚಿನ ದರ ನೀಡಿ ಉತ್ಪನ್ನಗಳನ್ನು ಖರೀದಿಸಲು ಸಿದ್ಧರಿರುತ್ತಾರೆ. ಆದರೆ, ನಾಗರಿಕ ಸಮಾಜ ಇಂತಹ ಉತ್ಪನ್ನಗಳನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತದೆ. ಹೀಗಾಗಿ ಉದ್ಯೋಗಿಗಳು ಸಹಜವಾಗಿಯೇ ಖಾಸಗಿ ಗುತ್ತಿಗೆದಾರರತ್ತ ಮುಖ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಗುತ್ತಿಗೆದಾರರು ನೀಡುವ ದರಕ್ಕೆ ಸಂಬಂಧಿಸಿದಂತೆ ನಾಗರಿಕ ಸಮಾಜ ಏನೂ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ.

ಈ ದರ ಸಮರ ಕುರಿತು ಅರಿವು ಹೊಂದಿದ್ದರೂ ಸಹ ಔಪಚಾರಿಕವಾಗಿ ಆಗಲಿ ಅಥವಾ ಅನೌಪಚಾರಿಕವಾಗಿ ಆಗಲಿ ಉದ್ಯೋಗಿಗಳ ಯೂನಿಯನ್ ಅಸ್ತಿತ್ವದಲ್ಲಿ ಇರುವುದಿಲ್ಲ. ಸಮನ್ವಯದ ಕೊರತೆ ಪರಿಣಾಮ ಈ ಉದ್ಯೋಗಿಗಳು ತಮಗೆ ಸಿಗಬೇಕಾದ ಕೂಲಿ ಹಣದಲ್ಲಿ ಹೆಚ್ಚಳ ಮಾಡುವಂತೆ ಒತ್ತಡ ಹೇರಲೂ ಆಗುವುದಿಲ್ಲ. ಪ್ರಸ್ತುತ ದರಕ್ಕಿಂತ ಕಡಿಮೆ ದರ ನೀಡಿ ಕೆಲಸಗಾರರನ್ನು ದುಡಿಸಿಕೊಳ್ಳಲೂ ಸಾಧ್ಯವಿಲ್ಲ. ಇನ್ನೊಂದೆಡೆ ಗುತ್ತಿಗೆದಾರರ ನಡುವೆ ಉತ್ತಮ ಸಂಬಂಧ ಇರುವುದರಿಂದ ದರದಲ್ಲಿ ಯಾವುದೇ ಪರಿಷ್ಕರಣೆ, ಹೆಚ್ಚಳ ಸಾಧ್ಯವಿಲ್ಲ ಎಂಬ ಸ್ಥಿತಿ ಇದೆ. ಅಲ್ಲದೇ, ಗುತ್ತಿಗೆದಾರರೇ ಕಚ್ಚಾವಸ್ತುಗಳನ್ನು ಪೂರೈಸಿದರೂ, ಸ್ವತಂತ್ರ ಉದ್ದಿಮೆ ಸ್ಥಾಪಿಸಲು ಬೇಕಾದ ಸಾಲ ಸೌಲಭ್ಯ ಹಾಗೂ ಮಾರುಕಟ್ಟೆ ಬೆಂಬಲ ಪಡೆಯುವ ಸ್ಥಿತಿಯಲ್ಲಿ ಉದ್ಯೋಗಿಗಳು ಇರುವುದಿಲ್ಲ.

ಮನೆಗಳಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳನ್ನು ಖರೀದಿಸಿ, ರಫ್ತು ಮಾಡುವ ಸಾಮರ್ಥ್ಯ ಹೊಂದಿರುವ ಹಲವು ಪ್ರತಿಷ್ಠಿತ ಕಂಪನಿಗಳು ಉಪ ಗುತ್ತಿಗೆ ನೀಡುವ ಪರಿಪಾಠ ಹೊಂದಿವೆ. ಈ ವ್ಯವಸ್ಥೆಯಲ್ಲಿ ಅಧಿಕ ಲಾಭ ಸಿಕ್ಕರೂ ಅದು, ಕೆಳ ಹಂತದ ಉದ್ಯೋಗಿಗೆ ತಲುಪುವುದಿಲ್ಲ. ಇದಕ್ಕೆ ಎರಡು ಕಾರಣಗಳನ್ನು ನೀಡಬಹುದು. ಒಂದು ಉದ್ಯೋಗಿಗಳ ಸಂಖ್ಯೆ ಅಧಿಕವಾಗಿರುವುದು ಮತ್ತೊಂದು ಮಧ್ಯವರ್ತಿಗಳು ಪ್ರಮುಖ ಪಾತ್ರ ವಹಿಸುವುದು.

ಉದ್ದಿಮೆ ಯಶಸ್ವಿಯಾಗಿ ನಡೆಯಬೇಕು ಎಂದರೆ, ಉತ್ಪನ್ನದ ಗುಣಮಟ್ಟ ಪ್ರಮುಖ ಅಳತೆಗೋಲಾಗುತ್ತದೆ. ಇದನ್ನು ಸಾಧಿಸುವ ಸಲುವಾಗಿ ಕಂಪನಿಗಳು ತಮ್ಮ ವಹಿವಾಟನ್ನು ಹೆಚ್ಚಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವ ಬದಲು ಉದ್ಯೋಗಿಗಳನ್ನೇ ಹೆಚ್ಚು




ಕಾಲಾವಧಿಗಾಗಿ ದುಡಿಸಿಕೊಳ್ಳುತ್ತವೆ. ಯಶಸ್ವಿ ಉದ್ದಿಮೆ ಪಟ್ಟ ಸಿಗಬೇಕು ಎಂದಾದರೆ ಹೆಚ್ಚು ವೇತನ ನೀಡುವ ಮೂಲಕ ಕಾರ್ಮಿಕರನ್ನು ಕಂಪನಿಯಲ್ಲಿ ಮುಂದುವರಿಯುವಂತೆ ಮಾಡಿ, ಪರಸ್ಪರ ಲಾಭ ಸಿಗುವುದನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಆದರೆ, ಅನೌಪಚಾರಿಕ ವಲಯದ ಕಾರ್ಮಿಕರಿಗೆ ಅನುಕೂಲ ಎನಿಸುವಂತಹ ಯಾವುದೇ ವ್ಯವಸ್ಥೆಯ ಕುರುಹುಗಳು ಕಾಣ ಸಿಗುವುದಿಲ್ಲ. ಅದೇ ರೀತಿ ಅನೌಪಚಾರಿಕ ವಲಯದಲ್ಲಿ ಚಾಲ್ತಿಯಲ್ಲಿರುವಂತೆ ಕಾರ್ಮಿಕರಿಗೆ ಪ್ರತಿ ಉತ್ಪಾದನೆಗೆ ನೀಡಲಾಗುವ ವೇತನ ದರದಲ್ಲಿ ಸಹ ಯಾವುದೇ ಹೆಚ್ಚಳವಾಗುವ ಸೂಚನೆಯೂ ಇಲ್ಲ ಎನ್ನಬಹುದು. ಆದರೆ, ನಿಯಮಿತವಾಗಿ ಉದ್ಯೋಗ ದೊರೆಯುವುದೇ ಉದ್ಯೋಗಿಗಳಿಗೆ ಸಿಗುವ ಲಾಭವಾಗಿದೆ. ಅನಿಯಮಿತವಾಗಿ ಉದ್ಯೋಗ ದೊರೆಯುವುದಕ್ಕೆ ಹೆಸರುವಾಸಿಯಾಗಿರುವ ಅನೌಪಚಾರಿಕ ವಲಯದ ಕೆಲವು ಉಪ ವಲಯಗಳಲ್ಲಿ ನಿಯಮಿತವಾಗಿ ಉದ್ಯೋಗಾವಕಾಶ ಇರುವುದನ್ನು ಕಾಣಬಹುದು. ದೀರ್ಘಾವಧಿಯಲ್ಲಿ ಈ ಮಾದರಿ ಧನಾತ್ಮಕ ಪರಿಣಾಮವನ್ನು ಉಂಟು ಮಾಡಲಿದೆ. ಉದ್ಯೋಗದಲ್ಲಿನ ಸ್ಥಿರತೆ, ಮಾರುಕಟ್ಟೆಯೊಂದಿಗೆ ಉತ್ತಮ ಸಂಪರ್ಕ ಹಾಗೂ ಉದ್ಯಮಶೀಲ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯವಿರುವ ಕೌಶಲಗಳನ್ನು ಕರಗತ ಮಾಡಿಕೊಳ್ಳಲು ಉದ್ಯೋಗಿಗಳಿಗೆ ಅವಕಾಶ ನೀಡುವುದರಿಂದ ಅನೌಪಚಾರಿಕ ವಲಯದಲ್ಲಿ ಉತ್ಪಾದನೆ ಹೆಚ್ಚುತ್ತದೆ. ಆದರೆ, ಔಪಚಾರಿಕ ವಲಯದಲ್ಲಿನ ಕೆಲ ಘಟಕಗಳನ್ನು ಅನೌಪಚಾರಿಕ ವನ್ನಾಗಿಸುವ ಪ್ರಕ್ರಿಯೆ ಫಲವಾಗಿ ಉತ್ಪಾದನೆ ಹೆಚ್ಚಳದಂತಹ ಧನಾತ್ಮಕ ಬೆಳವಣಿಗೆಗಳೇ ತಟಸ್ಥಗೊಳ್ಳುವ ಸಂಭವವೂ ಇದೆ. ಈ ಔಪಚಾರಿಕ ವಲಯವು ಅನೌಪಚಾರಿಕ ವಲಯವಾಗುವ ಪ್ರಕ್ರಿಯೆ ಕೆಳಹಂತದ ವ್ಯವಸ್ಥೆಯಲ್ಲಿ ಕಂಡು

ಬಂದರೂ (ಉದಾಹರಣೆಗೆ ಕೈಗಾರಿಕೆಗಳಲ್ಲಿನ ಕಾರ್ಮಿಕರು, ವಿಶ್ವವಿದ್ಯಾಲಯ ಮತ್ತು ಸರ್ಕಾರಿ ಕಚೇರಿ ಸೇರಿದಂತೆ ವಿವಿಧ ಸಂಘಟನೆಗಳಲ್ಲಿರುವ ಡಿ ದರ್ಜೆ ನೌಕರರು) ವಿವಿಧ ಹಂತಗಳಲ್ಲಿ ಅಡಕವಾಗಿರುವುದನ್ನು ಕಾಣಬಹುದು. ಅನೌಪಚಾರಿಕ ವಲಯದ ಉತ್ಪಾದನಾ ಘಟಕದಲ್ಲಿ ಕಂಡು ಬರುವ ಬದಲಾವಣೆಗಳು ಗಮನಾರ್ಹ. ಗಾರ್ಮೆಂಟ್, ಚರ್ಮ ಹದಗೊಳಿಸುವುದು, ಹರಳು ಮತ್ತು ಆಭರಣ ತಯಾರಿಕೆಯಂತಹ ಸಣ್ಣ ಉದ್ಯಮಗಳು ದೊಡ್ಡ ಉದ್ದಿಮೆಗಳೊಂದಿಗೆ ಸಂಪರ್ಕ ಹೊಂದುವ ಮೂಲಕ ಔಪಚಾರಿಕ ವಲಯದ ಭಾಗಗಳೇ ಆಗಿವೆ. ಇನ್ನೊಂದೆಡೆ ಬೃಹತ್ ಉದ್ದಿಮೆಗಳು ನಿರಂತರವಾಗಿ ಕಚ್ಚಾ ವಸ್ತುಗಳನ್ನು ಪೂರೈಕೆ ಮಾಡುತ್ತವೆ. ಈ ಹಿನ್ನೆಲೆಯಲ್ಲಿ ಸಣ್ಣ ಅನೌಪಚಾರಿಕ ವಲಯವು ಕಾರ್ಯಾಚರಣೆಯಲ್ಲಿ ಎದುರಿಸಬಹುದಾದ ಅನಿಶ್ಚಿತತೆ ಕಡಿಮೆಯಾಗಿದೆ ಎನ್ನಬಹುದು. ಈ ಸಣ್ಣ ಉದ್ದಿಮೆಗಳು ಸಾಲದ ನೆರವು ಅಥವಾ ಉತ್ಪನ್ನಗಳ ಮಾರಾಟಕ್ಕೆ ಮಳಿಗೆಗಳಿಗಾಗಿ ಹುಡುಕಾಡಬೇಕಾದ ಅಗತ್ಯ ಕಂಡು ಬರುವುದಿಲ್ಲ. ಬದಲಾಗಿ ಕಚ್ಚಾವಸ್ತುಗಳು ಮತ್ತು ಉತ್ಪಾದನೆಗೆ ಬೇಕಾದ ಇತರ ಸಾಮಗ್ರಿಗಳು ಘಟಕಗಳ ಬಾಗಿಲಿಗೇ ಸಿಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಇಂತಹ ಉಪಕ್ರಮಗಳಿಂದ ಒಟ್ಟಾರೆ ಆಗುವ ಪರಿಣಾಮ ಎಂದರೆ, ಉಪಗುತ್ತಿಗೆ (ಸಬ್ ಕಂಟ್ರ್ಯಾಕ್ಟ್) ಮತ್ತು ಪೂರಕ ಘಟಕಗಳ ಸ್ಥಾಪನೆಯಿಂದಾಗಿ ಬೃಹತ್ ಉದ್ದಿಮೆಗಳು ಸಣ್ಣ ಘಟಕಗಳಾಗಿ ಪರಿವರ್ತನೆಗೊಳ್ಳುತ್ತವೆ. ಇದರಿಂದಾಗಿ ಜಾಗತೀಕರಣವು ಬಡವರ ಪರವಾಗಿ ಇರುತ್ತದೆ ಎಂಬ ನಿರೀಕ್ಷೆ ಸಹಜ. ಆದರೆ, ದೆಹಲಿಯ ಸುಂದರನಗರಿಯಲ್ಲಿ ಕೈಗೊಂಡ ಕ್ಷೇತ್ರ ಅಧ್ಯಯನದಿಂದ ಇಂತಹ ನಿರೀಕ್ಷೆಗೆ ವಿರುದ್ಧವಾದ ಅಂಶಗಳೇ ಕಂಡು ಬಂದವು.

### ಉಪಸಂಹಾರ

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಅನೌಪಚಾರಿಕ ವಲಯದಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಉದ್ಯೋಗಿಗಳು ಇರುವುದು ಕಂಡು ಬರುತ್ತದೆ. ಆದರೆ, ನಗರದ ವಿಸ್ತಾರ (ಗಾತ್ರ) ಮತ್ತು ಅಲ್ಲಿನ ಆರ್ಥಿಕ ಚಟುವಟಿಕೆಗಳು ಬದಲಾದಂತೆ ಅನೌಪಚಾರಿಕ ವಲಯದ ಸ್ವರೂಪವೂ ಬದಲಾಗುವುದು ಆಶಾದಾಯಕ ಎನಿಸುವುದು. ಮೊದಲ ವರ್ಗದ ನಗರಗಳಲ್ಲಿ ಅನೌಪಚಾರಿಕ ವಲಯದ ಚಲನಶೀಲತೆ ಗುರುತಿಸಬಹುದಾಗಿದೆ. ಪ್ರಗತಿಯತ್ತ ದಾಪುಗಾಲು ಹಾಕುತ್ತಿರುವ ನಗರದಲ್ಲಿನ ವ್ಯಕ್ತಿಗಳು ಉತ್ತಮ ಕೌಶಲಗಳನ್ನು ಮೈಗೂಡಿಕೊಂಡರೆ ಉತ್ತಮ ಆದಾಯ ಹೊಂದುವ ಸಾಧ್ಯತೆಗಳು ಹೆಚ್ಚು. ಹೀಗಾಗಿ ಅನೌಪಚಾರಿಕ ವಲಯವು ಏಕರೂಪವಾಗಿ ಸ್ಥಿರತೆ ಅಥವಾ ಜಡತ್ವ ಹೊಂದಿಲ್ಲ ಎನ್ನಬಹುದು. ಆದರೆ, ಆರ್ಥಿಕ ಪ್ರಗತಿಯ ಸಂದರ್ಭದಲ್ಲಿ ವ್ಯಕ್ತಿಗಳ ಜೀವನೋಪಾಯಕ್ಕೆ ಉತ್ತಮ ಆದಾಯಮೂಲ ಒದಗಿಸುವ ಸಾಮರ್ಥ್ಯಕ್ಕೆ ಒತ್ತು ನೀಡುತ್ತದೆ. ನಾವು ಕೈಗೊಂಡ ಗುಣಾತ್ಮಕ ಸಮೀಕ್ಷೆಯಿಂದ ಅನೌಪಚಾರಿಕ ವಲಯದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ವಿವರಿಸಲು ಸಾಧ್ಯವಾಗಿದೆ. ಉದಾಹರಣೆಗೆ, ಗುತ್ತಿಗೆ ವ್ಯವಸ್ಥೆ ಮತ್ತು ಪೂರಕ ವ್ಯವಸ್ಥೆಗಳು ಉದ್ಯೋಗ ಮತ್ತು ಸಾಧನೆ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಮುಖ್ಯ ಎನಿಸುತ್ತದೆ.



ಅನೌಪಚಾರಿಕ (ಅಸಂಘಟಿತ) ಉತ್ಪಾದನಾ ವಲಯದಲ್ಲಿ 2005–06 ಮತ್ತು 2010–11ರ ಅವಧಿಯಲ್ಲಿ ಉದ್ಯೋಗಾವಕಾಶಗಳ ಬೆಳವಣಿಗೆ ಋಣಾತ್ಮಕವಾಗಿತ್ತು. ಆಗಿನ ಸಂಬಂಧದಲ್ಲಿನ ಸ್ಪರ್ಧೆಗೆ ತೆರೆದಿಕೊಳ್ಳುವಲ್ಲಿ ಅನೌಪಚಾರಿಕ ವಲಯ ಸಮರ್ಥವಾಗಿರದೇ ಉದ್ಯೋಗಿಗಳ ಸಂಖ್ಯೆ ಕಡಿಮೆ ಮಾಡುವ ಪ್ರಯತ್ನ ನಡೆಸಿದ್ದು ಇದಕ್ಕೆ ಕಾರಣವಾಗಿರಬಹುದು. ದೇಶದ ಅಸಂಘಟಿತ ವಲಯದ ಉತ್ಪನ್ನಗಳ ಗುಣಮಟ್ಟ ಕಳಪೆ ಇರುವ ಪರಿಣಾಮ, ರಫ್ತು ಕ್ಷೀಣವಾಗಿತ್ತು. ಜಾಗತೀಕರಣ ಸಂದರ್ಭದಲ್ಲಿ ಚೀನಾ ಮೂಲದ ಉದ್ದಿಮೆಗಳು ಬಳಸುವ ರೀತಿಯಲ್ಲಿ ದೇಶೀಯ ಉದ್ದಿಮೆಗಳು ಅವಕಾಶಗಳನ್ನು ಬಳಸಿಕೊಳ್ಳುವುದು ಕನಸಿನ ಮಾತೇ ಸರಿ. ಆಧುನಿಕರಣಗೊಳ್ಳದೇ ಇರುವುದು, ಐಸಿಟಿ ಸುಲಭವಾಗಿ ಸಿಗದೇ ಇರುವುದರಿಂದ ಉತ್ಪನ್ನಗಳಲ್ಲಿ ವೈವಿಧ್ಯತೆಯಾಗಲಿ ಅಥವಾ ಉತ್ಪನ್ನಗಳ ಗುಣಮಟ್ಟದಲ್ಲಿ ಔನ್ನತ್ಯ ಸಾಧಿಸಲಾಗಲಿ ಸಾಧ್ಯವಾಗಿಲ್ಲ. ಕೈಗಾರಿಕೆಗಳು ದೇಶದ ಅಭಿವೃದ್ಧಿಗೆ ಸಹಾಯಕವಾಗಲಿ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರದ ಇತ್ತೀಚಿನ ಪ್ರಯತ್ನಗಳು ಸಾಧುವಲ್ಲ ಎಂದು ಕಂಡುಬಂದಿದೆ. ದೇಶದ ಅಸಂಘಟಿತ ಅಥವಾ ಅನೌಪಚಾರಿಕ ವಲಯವು ಉದ್ಯೋಗ ಸೃಷ್ಟಿ ಅಥವಾ ಅಭಿವೃದ್ಧಿಗೆ ತನ್ನದೇ ಕೊಡುಗೆ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಎಂಬುದೇ ಇದಕ್ಕೆ ಕಾರಣ. ಅನೌಪಚಾರಿಕ ವಲಯದಲ್ಲಿರುವ ಉದ್ದಿಮೆಗಳು ಭೌತಿಕವಾಗಿ ಮತ್ತು ಆರ್ಥಿಕವಾಗಿ ಸದೃಢವಾಗಿಲ್ಲದೇ ಇರುವುದು ಉತ್ಪಾದನೆ ಮತ್ತು ಆದಾಯವನ್ನು ಕುಂಠಿತಗೊಳಿಸುತ್ತದೆ. ಇದು ಅನೌಪಚಾರಿಕ ವಲಯಕ್ಕೆ ಇರುವ ಬಹುದೊಡ್ಡ ಅಡಚಣೆಯಾಗಿದೆ. ಈ ವಲಯದಲ್ಲಿನ ಉತ್ಪನ್ನಗಳ ಮಾರಾಟಕ್ಕೆ ಗುತ್ತಿಗೆದಾರರನ್ನೇ ಅವಲಂಬಿಸಬೇಕಿದೆ. ಇದರಿಂದ ಲಾಭದ ಪ್ರಮಾಣ ಗಣನೀಯವಾಗಿ ಕುಸಿಯಲಿದೆ. ಈ ಅಂಶಗಳು ಅನೌಪಚಾರಿಕ ವಲಯಕ್ಕೆ ಸಂಬಂಧಪಟ್ಟಂತೆ ನೀತಿಯನ್ನು ಅನುಷ್ಠಾನಕ್ಕೆ ತರಬೇಕೆಂಬ ಪ್ರತಿಪಾದನೆಗೆ ಪುಷ್ಟಿನೀಡುತ್ತವೆ. ಅಲ್ಲದೇ, ಇಂತಹ ಕ್ರಮಗಳು ಕೆಳ ಹಂತದವರೆಗಿನ ಕಾರ್ಮಿಕರಿಗೆ ಆಗುವ ನಷ್ಟವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ. ❑

# ಜ್ಞಾನದ ದೃಷ್ಟಿಯಿಂದ ಅಸಂಘಟಿತ ವಲಯ

**ಅಮಿತ್ ಬಾಸೋಲೆ**
**ಕನ್ನಡಕ್ಕೆ : ಕೆ. ಶಿವಕುಮಾರ**



**ಸಂಶೋಧನೆ, ಮಾಹಿತಿ ವರ್ಗಾವಣೆ, ಹೊಸ ಆವಿಷ್ಕಾರ ಮತ್ತಿತರ ವಿಚಾರಗಳು ಅನೌಪಚಾರಿಕ ವಲಯದ ನಿರ್ವಹಣೆಗೆ ಪೂರಕವಾಗಿವೆ. ನೀತಿ ನಿಯಮಾವಳಿಗಳನ್ನು ಮೀರಿ ಸಾಂಪ್ರದಾಯಿಕ ಜ್ಞಾನದ ಜೊತೆಗೆ ಲೋಕವಿದ್ಯೆಯ ಘನತೆ, ಸಮಾನ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ರಾಜಕೀಯ ಆಂದೋಲನವೂ ಅತ್ಯಗತ್ಯವಾಗಿದೆ.**

ಸಾಮಾನ್ಯವಾಗಿ ಕಡಿಮೆ ನುರಿತ ಅಥವಾ ಕೌಶಲ್ಯರಹಿತ ಕೆಲಸ ಕ್ಷೇತ್ರವನ್ನು ಅನೌಪಚಾರಿಕ ವಲಯ ಎಂದು ಭಾವಿಸಲಾಗಿದೆ. ಅನೌಪಚಾರಿಕ ಕಾರ್ಯಪಡೆಯ ಸಂಸ್ಥೆ ಅಥವಾ ಕೈಗಾರಿಕೆಗಳ ಬಹುತೇಕ ಕೌಶಲ್ಯರಹಿತ ದುಡಿಮೆಯನ್ನು ಅಸಂಘಟಿತ ವಲಯ ಎಂಬುದಾಗಿ ರಾಷ್ಟ್ರೀಯ ಅಸಂಘಟಿತ ವಲಯದ ಉದ್ಯಮಗಳ ಆಯೋಗ (ಎನ್‌ಸಿಇಯುಎಸ್) ಗುರುತಿಸಿದೆ. ಈ ತೀರ್ಮಾನ ಎರಡು ಪ್ರಾಯೋಗಿಕ ಸತ್ಯವನ್ನು ಅವಲಂಬಿಸಿದೆ. ಮೊದಲನೆಯದು ಅನೌಪಚಾರಿಕ ವಲಯದ ಕಾರ್ಮಿಕರ ತಳಮಟ್ಟದ ಶಿಕ್ಷಣ, ತರಬೇತಿ, ಕಡಿಮೆ ವೇತನ ಹಾಗೂ ಇನ್ನೊಂದು ಕಡಿಮೆ ಉತ್ಪಾದಕತೆ. ಈ ಲೇಖನದಲ್ಲಿ ಈ ಎರಡೂ ಅಂಶಗಳನ್ನು ಒಳನೋಟವನ್ನು ಕೂಲಂಕಷವಾಗಿ ಪರಿಗಣಿಸಲಾಗಿದೆ. ಈ ವಿಚಾರದಲ್ಲಿ ನೀತಿ ಮತ್ತು ಶೈಕ್ಷಣಿಕ ವಿಧಾನಗಳಲ್ಲಿ ಏನೇ ವೈರುಧ್ಯಗಳಿದ್ದರೂ ಜ್ಞಾನದ ವರ್ಗಾವಣೆ ಮತ್ತು ಕೌಶಲ್ಯ ರಚನೆಯ ಸಂಸ್ಥೆಗಳಲ್ಲಿ ಸಂಸ್ಥಾಪಿತ ಅಸಾಂಪ್ರದಾಯಿಕ ಜ್ಞಾನದ ದೊಡ್ಡ ಭಂಡಾರವೇ ಅಡಗಿದೆ ಎಂಬುದು ನನ್ನ ನಿಲುವು. ಈ ಲೇಖನ ಮುಂಬೈನಲ್ಲಿ ಬೀದಿ ಬದಿ ಆಹಾರ ಮಾರಾಟಗಾರರು ಮತ್ತು ಬನಾರಸ್‌ನಲ್ಲಿರುವ ನೇಯ್ಗೆ ಕೆಲಸದಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರ ಕ್ಷೇತ್ರ ಅಧ್ಯಯನ, ಸಣ್ಣ ಕೈಗಾರಿಕೆಗಳು ಮತ್ತು ಎನ್‌ಎಸ್‌ಎಸ್ ಸಮೀಕ್ಷೆಯ ಪ್ರಾಯೋಗಿಕ ದತ್ತಾಂಶಗಳನ್ನು ಒಳಗೊಂಡಿದೆ.

ಸಾಂಪ್ರದಾಯಿಕ ಮತ್ತು ದೇಶೀಯ ಜ್ಞಾನ (ಟಿಕೆ/ಐಕೆ)ವು ಆಧುನಿಕ ಜ್ಞಾನಕ್ಕಿಂತ ಭಿನ್ನವಾಗಿದೆ ಎಂಬುದನ್ನು ಗುರುತಿಸಿರುವ ವಿಶ್ವಬ್ಯಾಂಕ್ ಮತ್ತು ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆಯಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಇತ್ತೀಚೆಗೆ ಜ್ಞಾನ ಉತ್ಪಾದನೆ ಮತ್ತು ವರ್ಗಾವಣೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿವೆ. ಶತಮಾನಗಳ ಕಾಲದಿಂದ ರೈತರು, ಕುಶಲಕರ್ಮಿಗಳು, ಮಹಿಳೆಯರು ಮತ್ತು ಸ್ಥಳೀಯ ಜನರು ಪೋಷಿಸಿಕೊಂಡು ಬಂದಿರುವ ಜೀವ ವೈವಿಧ್ಯ, ಕೃಷಿ ಅರಣ್ಯ, ಪರಿಸರ, ಔಷಧ, ಕರಕುಶಲ ಕಲೆಗಳ ಜ್ಞಾನದ ಭಂಡಾರವನ್ನು ತಿಳಿಸುವ, ವಿಶ್ಲೇಷಿಸುವ, ಅಧ್ಯಯನ ಮಾಡಿ ಪ್ರಚುರ ಪಡಿಸುವ ದೊಡ್ಡ ಪ್ರಮಾಣದ ಸಾಹಿತ್ಯ ರಚನೆಯ ಪ್ರಕ್ರಿಯೆ ಜಗತ್ತಿನಾದ್ಯಂತ ನಡೆಯುತ್ತಿದೆ. ಇದೇ ಜನರೇ ಅನೌಪಚಾರಿಕ ಆರ್ಥಿಕತೆಯ ಕಾರ್ಮಿಕರು. ಅನೌಪಚಾರಿಕ ಕಾರ್ಮಿಕರು ಮತ್ತು ಉದ್ಯಮಿಗಳು ಕೃಷಿ ಮತ್ತು ಕರಕುಶಲ ಮಾತ್ರವಲ್ಲದೆ ಆಹಾರ, ಬಟ್ಟೆ ಉದ್ಯಮ, ಉಡುಪು, ಪ್ಲಾಸ್ಟಿಕ್, ಕಟ್ಟಡ ನಿರ್ಮಾಣ, ಪಾತ್ರೆಗಳು, ಲೋಹಗಳು, ಯಂತ್ರಗಳು ವೈವಿಧ್ಯಮಯ ಕೈಗಾರಿಕೆಗಳು ಸಾಮಾನ್ಯವಾಗಿ ಆಧುನಿಕ ತಂತ್ರಜ್ಞಾನ ಬಳಕೆ ಮಾಡುತ್ತಿದ್ದಾರೆ ಮತ್ತು ಅವು ಸಾಂಪ್ರದಾಯಿಕ ಉದ್ಯಮ ಹಣೆಪಟ್ಟಿಗೆ ಸರಿಹೊಂದಿಕೊಳ್ಳುತ್ತಿಲ್ಲ. ಹೀಗಾಗಿ ಅನೌಪಚಾರಿಕ ವಲಯದ ಬಗ್ಗೆ ಟಿ.ಕೆ/ಐಕೆ ಮಾದರಿಯಲ್ಲಿ ಇವುಗಳನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡಿಲ್ಲ. ಜನರ ಜ್ಞಾನವು ಔಪಚಾರಿಕ ಶಿಕ್ಷಣ ಅಥವಾ ತರಬೇತಿ ಪಡೆಯದ ಕೌಶಲವನ್ನು ಒಳಗೊಂಡಿದೆ. ಆದರೆ ಜ್ಞಾನಮೀಮಾಂಸೆ ಮತ್ತು ಮೌಲ್ಯ ವ್ಯವಸ್ಥೆಯನ್ನು ಮೀರಿದೆ. ಇದನ್ನು ತಜ್ಞರು ಲೋಕವಿದ್ಯೆ ಎಂದು ಗುರುತಿಸಿದ್ದಾರೆ. ದೇಶದಲ್ಲಿ ಬಹುಸಂಖ್ಯಾತ

ಸಹಾಯಕ ಪ್ರಾಧ್ಯಾಪಕರು, ಮೈಸ್ಯಾಚುಸೆಟ್ಸ್ ವಿಶ್ವವಿದ್ಯಾಲಯ ಬೋಸ್ಟನ್. E-mail : abasole@gmail.com

ಜನರು ಬಳಸುವ ಲೋಕವಿದ್ಯೆಯಿಂದ ಭಾರತವನ್ನು ಜ್ಞಾನ ಸಂಸ್ಥೆಗೆ ರೂಪಾಂತರಿಸುವ ಕೆಲಸವನ್ನು ನಾವು ಮಾಡಬೇಕಾಗಿದೆ.

### ವೇತನ, ಉತ್ಪಾದಕತೆ ಮತ್ತು ಕೌಶಲಗಳ ನಡುವಿನ ಪ್ರಶ್ನೆ

ಕಡಿಮೆ ವೇತನ ಮತ್ತು ಕಡಿಮೆ ಉತ್ಪಾದಕತೆಯ ಅಸಾಂಪ್ರದಾಯಿಕ ವಲಯಕ್ಕೆ ಕಡಿಮೆ ಕೌಶಲ್ಯದ ತಳಹದಿ ಕಾರಣ ಎನ್ನಲಾಗುತ್ತಿದೆ. ವಾಸ್ತವವಾಗಿ ಕೌಶಲ್ಯ, ಉತ್ಪಾದಕತೆ ಮತ್ತು ವೇತನದ ನಡುವಿನ ಸಂಬಂಧ ತೀರಾ ಸಂಕೀರ್ಣವಾಗಿದೆ ಮತ್ತು ಇದನ್ನು ಸಾಂಸ್ಥಿಕ ಹಾಗೂ ರಚನಾತ್ಮಕ ಅಂಶಗಳೆಂದು ಗುರುತಿಸಲಾಗುತ್ತಿದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯ ರಚನಾತ್ಮಕತೆಯು ಹೆಚ್ಚುವರಿ ಕಾರ್ಮಿಕರ ಅಸ್ತಿತ್ವದಲ್ಲಿದೆ. ಔಪಚಾರಿಕ ವಲಯದ ಫಲಿತಾಂಶಗಳಿಂದ ವ್ಯಾಪಕ ಕೆಲಸ ಬಹುತೇಕ ಹೊರಗಿಟ್ಟು, ಉತ್ಪನ್ನ ಮಾರುಕಟ್ಟೆಯ ತೀವ್ರ ಪೈಪೋಟಿಯಲ್ಲಿ ಉದ್ಯೋಗದ ಕೊರತೆ ಮತ್ತು ಅನೌಪಚಾರಿಕ ಕಾರ್ಮಿಕ ಮಾರುಕಟ್ಟೆ ಕಾರ್ಮಿಕರ ನಡುವೆ ಸಣ್ಣ ಉದ್ಯಮಿಗಳು ಬಲವಂತವಾಗಿ ತಮ್ಮ ವ್ಯಾಪಾರವನ್ನು ಆರಂಭಿಸಬೇಕಾಗಿದೆ. ಔಪಚಾರಿಕ– ಅನೌಪಚಾರಿಕ ಗಳಿಕೆಯ ಅಂತರದ ಪರೀಕ್ಷೆಯು ಕೆಲಸಗಾರರ ಗುಣಲಕ್ಷಣಗಳನ್ನಷ್ಟೇ (ಕೌಶಲ್ಯದಂತಹ) ಅಲ್ಲದೆ ಸಂಸ್ಥೆಯ ಗಾತ್ರ, ಉತ್ಪನ್ನ ಮಾರುಕಟ್ಟೆಯಲ್ಲಿ ಸ್ಪರ್ಧೆ ಪ್ರಮಾಣ, ಬಂಡವಾಳ ಮತ್ತು ಕಾರ್ಮಿಕರ ಪ್ರಮಾಣಗಳ ರಚನಾತ್ಮಕ ಅಂಶಗಳ ಸರಾಸರಿಯನ್ನೂ ಒಳಗೊಂಡಿದೆ ಎಂಬುದನ್ನು ಒಂದು ವಲಯದ ಸಂಶೋಧನೆ ತಿಳಿಸುತ್ತದೆ. ಇನ್ನೂ ಮುಂದುವರಿದು, ಮಾರುಕಟ್ಟೆ ಧಾರಣೆಯು ಉತ್ಪನ್ನ ಮಾರುಕಟ್ಟೆಯಲ್ಲಿ ಮೌಲ್ಯವರ್ಧಿತ ಕೆಲಸಗಾರನನ್ನು ಅವಲಂಬಿಸಿದೆ ಮತ್ತು ಉತ್ಪಾದನೆ ಮಾರುಟ್ಟೆಯಲ್ಲಿ ಸ್ಪರ್ಧೆಯ ತೀವ್ರತೆಯು ಉತ್ಪನ್ನಗಳ ಧಾರಣೆಯನ್ನು ಇಳಿಮುಖ ಮಾಡುತ್ತವೆ. ಮಾರುಕಟ್ಟೆಯ ಹಿಡಿತ ಸಾಧಿಸಲು ಉದ್ಯಮಗಳು ಕಡಿಮೆ ಉತ್ಪಾದನೆಯ ಮೂಲಕ ಕಾಣಿಸಿಕೊಳ್ಳುತ್ತವೆ ಎಂಬುದು ಇದರರ್ಥ.

ನುರಿತ ಕುಶಲ ಕಾರ್ಮಿಕರೇ ಆಗಿದ್ದರೂ ಹೆಚ್ಚುವರಿ ಕಾರ್ಮಿಕರು ಇದ್ದಾಗ ಕಡಿಮೆ ಉತ್ಪಾದಕತೆ, ಸಾಮರ್ಥ್ಯದ



ಕೊರತೆಯ ಕಾರಣಕ್ಕಾಗಿ ಆರ್ಥಿಕತೆಯಲ್ಲಿ ಕೌಶಲ್ಯ ಮತ್ತು ಕಾರ್ಮಿಕರ ಗುಣಲಕ್ಷಣಗಳು ಗೌಣವಾಗುತ್ತವೆ ಎಂಬುದು ಇನ್ನೊಂದು ರೀತಿಯ ಗೊಂದಲದ ಸಂಗತಿ (ನಾರಿಂಗ 1999; ಲೇಯಿಬಲ್ ಮತ್ತು ರಾಯ್ 2004). ಉತ್ಪಾದಕತೆಯಲ್ಲಿ ಗಳಿಸಿದ ಹೆಚ್ಚು ಲಾಭವು ಮಾಲಿಕರಿಗೆ ಸೇರುವುದು. ಮಾರುಕಟ್ಟೆಯಲ್ಲಿ ಉತ್ಪಾದನೆಯು ಹೆಚ್ಚು ಸ್ಪರ್ಧಾತ್ಮಕವಾಗಿದ್ದರೆ ಕಾರ್ಮಿಕರಿಗಿಂತ ಖರೀದಿದಾರರು ಕಡಿಮೆ ಬೆಲೆಗೆ ಪಡೆಯುವರು (ಹೆಯಿಂಟ್ 2006). ಉದಾಹರಣೆಗೆ ಬನಾರಸ್‌ನ ನೇಯ್ಗೆ ಉದ್ಯಮದಲ್ಲಿ ಪವರ್‌ಲೂಮ್‌ಗಳು ಕೈಮಗ್ಗಕ್ಕಿಂತ ಹತ್ತು ಪಟ್ಟು ಹೆಚ್ಚು ಉತ್ಪಾದನೆ ಮಾಡುತ್ತವೆ. ಆದರೆ ತಾಸಿನ ಲೆಕ್ಕಕ್ಕೆ ವೇತನ ಹೋಲಿಸಿದರೆ ಎರಡೂ ವೇತನಗಳು ಒಂದೇ ಆಗಿವೆ.

### ಜ್ಞಾನದ ಗಣನೆ ಏನು?

ಅನೌಪಚಾರಿಕ ಕಾರ್ಮಿಕರು, ಕೌಶಲ್ಯರಹಿತರು ಎಂಬ ಗ್ರಹಿಕೆ ಮೇಲೆ ನಿರೂಪಿಸಿದ ಆರ್ಥಿಕ ಅಂಶಗಳ ಮೇಲೆ ಅವಲಂಬಿತವಾಗಿಲ್ಲ. ಪ್ರತಿಷ್ಠೆ ಅಥವಾ ವಿವಿಧ ರೀತಿಯ ಮೌಲ್ಯಗಳನ್ನು ಹೊಂದಿದ ಸಾಮಾಜಿಕ ಅಂಶಗಳು ಮತ್ತು ಜ್ಞಾನದ ಎಣಿಕೆಯಂತಹ ತಾತ್ವಿಕ ಅಂಶಗಳು ಮಹತ್ವದ್ದಾಗಿವೆ.

ಉದಾಹರಣೆಗೆ, ಅಸಾಂಪ್ರದಾಯಿಕ ವಲಯದಲ್ಲಿ ಮಹಿಳೆಯರ ಜ್ಞಾನ ಮತ್ತು ಹೆಚ್ಚಿನ ಪ್ರಮಾಣದಲ್ಲಿರುವ ತಳ ಹಂತದ ಕಾರ್ಮಿಕರ ವರ್ಗ ಪಾರಂಪರಿಕವಾಗಿ ಕಡೆಗಣಿಸಲ್ಪಟ್ಟಿವೆ (ಇಲ್ಯೆಯಾ 2009). ಅಸಾಧಾರಣ ಪ್ರತಿಭೆ ಮತ್ತು ವರ್ಷಾನುಗಟ್ಟಲೆ ಅನೌಪಚಾರಿಕ ತರಬೇತಿ ಪಡೆದಿದ್ದರೂ ಮಹಿಳೆಯರು ಮಾಡುವ ಕೆಲಸವನ್ನು 'ಕಡಿಮೆ ಕೌಶಲ'ವೆಂದು ಗುರುತಿಸಲಾಗುತ್ತಿದೆ ಎಂದು ಎನ್‌ಸಿಇಯುಎಸ್ ಟಿಪ್ಪಣಿ ಮಾಡಿದೆ (ಸೇನ್‌ಗುಪ್ತ 2007;84). ಉದಾಹರಣೆಗೆ ಜವಳಿ ಮತ್ತು ಸೆರಾಮಿಕ್ ಉದ್ಯಮದಲ್ಲಿ ಮಹಿಳೆಯರು (ಎಂಬ್ರಾಯಿಡರಿ ಅಥವಾ ಜೇಡಿ ಮಣ್ಣಿನ ಸಿದ್ಧತೆ) ಕೌಶಲ್ಯದ ಕೆಲಸ ನಿರ್ವಹಿಸುವರು. ಆದರೆ ಅವರೆಲ್ಲ ಕಡಿಮೆ ವೇತನ ಪಡೆಯುವ ಕಾರ್ಮಿಕರು (ಸೇನ್‌ಗುಪ್ತ). ಬನಾರಸ್‌ನಲ್ಲಿ ಎಂಬ್ರಾಯಿಡರಿ ಕೆಲಸ ಮಾಡುವ ಮಹಿಳೆಯರು ತೀರಾ ಕಡಿಮೆ ಅಂದರೆ ಇಡೀ ದಿನಕ್ಕೆ ಕೇವಲ 25–30 ರೂಪಾಯಿ ವೇತನ ಪಡೆಯುತ್ತಾರೆ. ಮಹಿಳೆಯರಲ್ಲಿ ಕೌಶಲ 'ಸ್ವಾಭಾವಿಕ'ವಾಗಿದ್ದು ಮತ್ತು ಅದನ್ನು 'ಬಿಡುವಿನ ಸಮಯದಲ್ಲಿ ಕೈಗೊಳ್ಳುವುದರಿಂದ ಅವರಿಗೆ ಕಡಿಮೆ ಪ್ರಮಾಣದ ಸಂಭಾವನೆ ನೀಡಲಾಗುತ್ತದೆ ಎಂಬುದನ್ನು ವ್ಯಾಪಾರಿಗಳಷ್ಟೇ ಅಲ್ಲ ಮಹಿಳಾ ಕಾರ್ಮಿಕರೂ ಸಮರ್ಥಿಸಿಕೊಳ್ಳುವರು.

ಅನೌಪಚಾರಿಕ ಕ್ಷೇತ್ರದ ಜ್ಞಾನ ನೆಲೆ ಗುರುತಿಸಲು ನಡೆಸಿದ ಅಧಿಕೃತ ಸಮೀಕ್ಷೆ ಲೋಕವಿದ್ಯೆಯನ್ನು ಸೂಕ್ತವಾಗಿ ಗುರುತಿಸಿಲ್ಲ. ಉದ್ಯಮಗಳಲ್ಲಿ ಅಳವಡಿಸಿಕೊಂಡಿರುವ ತಾಂತ್ರಿಕ ಜ್ಞಾನದ ಮೂಲಗಳ ಬಗ್ಗೆ ಮೂರು ಮತ್ತು ನಾಲ್ಕನೇ ಅಖಿಲ ಭಾರತ ಸಣ್ಣ ಕೈಗಾರಿಕೆಗಳ (ಭಾರತ ಸರ್ಕಾರ 2012, 2014) ಗಣತಿಗಳಲ್ಲಿ ಮಾಹಿತಿ ಕೇಳಲಾಗಿತ್ತು. (ಟೇಬಲ್ 1) ಶೇ. 90ರಷ್ಟು ನೋಂದಾವಣೆಯಾಗದ (ಅಂದರೆ ಅನೌಪಚಾರಿಕ) ಉದ್ಯಮಗಳು ಎರಡೂ

ವರ್ಷಗಳಲ್ಲಿ ಯಾವುದೇ ವಿಭಾಗದಲ್ಲಿಯೂ 'ಮೂಲ ಇಲ್ಲ' ಎಂದೇ ಗುರುತಿಸಿವೆ. ಚಿಕ್ಕದು ಅಥವಾ ದೊಡ್ಡದು ಎಂಬುದಲ್ಲ; ಕೆಲವು ತಾಂತ್ರಿಕ ಜ್ಞಾನದ ಬಂಡವಾಳ ಬಳಸಿಕೊಂಡು ಉತ್ಪಾದನೆ ಮಾಡುತ್ತಿರುವ ಮತ್ತು ಬದಲಾವಣೆ ಆಧರಿಸಿದ ನಾವಿನ್ಯಗಳ ಆಧಾರದ, ಬದಲಾಗುತ್ತಿರುವ ಸಂಪನ್ಮೂಲಗಳ ಆಧಾರದಲ್ಲಿ ಅಥವಾ ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ಹೇಗೆ (ಅದು ಹೇಗೆ ಏರಿಕೆಯಾಗುತ್ತಿದೆ ಅಥವಾ ಸಣ್ಣದು) ಕೆಲಸ ನಿರ್ವಹಿಸುತ್ತಿವೆ ಎಂಬುದರ ಸಮೀಕ್ಷೆಗೆ ಅನೌಪಚಾರಿಕ ವಲಯದಲ್ಲಿರುವ ಜ್ಞಾನದ ಕೆಲಸವನ್ನು ಗುರುತಿಸಲು ಶಕ್ಯವಾಗಿಲ್ಲ. ಇದಕ್ಕೆ ಕುಶಲಕರ್ಮಿಗಳು ಮತ್ತು ಕಾರ್ಮಿಕರ ಮನೆತನದ ಜ್ಞಾನ, ಅವರ ಅನಔಪಚಾರಿಕ ಸಂಪರ್ಕಜಾಲ, ಅನುಕರಣೆಯ ಸಾಮರ್ಥ್ಯ ಮತ್ತು ತಮ್ಮ ಅಗತ್ಯಗಳಿಗೆ ತಕ್ಕಂತೆ ಔಪಚಾರಿಕ ಜ್ಞಾನದ ಅಳವಡಿಕೆಯನ್ನು ಹಿಡಿದಿರುವ ವಿನ್ಯಾಸನವನ್ನು ಒಳಗೊಂಡಿರದಿರುವುದು ಇದಕ್ಕೆ ಕಾರಣ.

ಇತ್ತೀಚಿನ ಎನ್‌ಎಸ್‌ಎಸ್ ಉದ್ಯೋಗ– ನಿರುದ್ಯೋಗ ಸಮೀಕ್ಷೆ (2011–12)ರ ಪ್ರಕಾರ, ದೇಶದ 15 ವರ್ಷ ವಯಸ್ಸಿಗಿಂತ ಹೆಚ್ಚಿನ ಶೇ 70ರಷ್ಟು ಗ್ರಾಮೀಣ ಮತ್ತು ಶೇ 43ರಷ್ಟು ನಗರ ಪ್ರದೇಶದ ಪುರುಷರು ಮಾಧ್ಯಮಿಕ ಮಟ್ಟಕ್ಕಿಂತ ಕಡಿಮೆ ಶಿಕ್ಷಣ ಪಡೆದಿದ್ದಾರೆ (ಮಹಿಳೆಯಲ್ಲಿ ಇವರ ಪ್ರಮಾಣ ಶೇ 83 ಮತ್ತು 55). ಕಾರ್ಯಕ್ಷೇತ್ರವೂ ಸೇರಿದಂತೆ ಹೆಚ್ಚು ವೃತ್ತಿ ಆಧಾರಿತ ಕೌಶಲ್ಯಗಳ ತರಬೇತಿಯೂ ವಿರಳವಾಗುತ್ತಿದೆ. ಉದ್ಯೋಗಗಳ ಇಯುಎಸ್ ದತ್ತಾಂಶಗಳ ವರದಿಯೂ ಸಹ ಶೇ 89ರಷ್ಟು ಜನ ಯಾವುದೇ ಔಪಚಾರಿಕ ಅಥವಾ ಅನೌಪಚಾರಿಕ ತಾಂತ್ರಿಕ ಅಥವಾ ವೃತ್ತಿಪರ ತರಬೇತಿ ಪಡೆದಿಲ್ಲ. ಇದರ ಆಧಾರ ಮತ್ತು ಎನ್‌ಸಿಇಯುಎಸ್ ತೀರ್ಮಾನಿಸಿದ ಎನ್‌ಎಸ್‌ಎಸ್ ದತ್ತಾಂಶಗಳ ಆಧಾರದ ಮೇಲೆ 15 ವರ್ಷ ವಯಸ್ಸಿನ ಮೇಲಿನ ಸುಮಾರು 90ರಷ್ಟು ಜನ ಯಾವುದೇ ರೀತಿಯ ಕೌಶಲ ಹೊಂದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ (ಸೇನ್‌ಗುಪ್ತ ಇಟಿ. ಎಎಲ್.2009:191). ಈ ತೀರ್ಮಾನವನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ವರ್ಷಾನುಗಟ್ಟಲೆ ಶಾಲೆಗಳಲ್ಲಿ ಓದಿ, ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರಮಾಣಪತ್ರ ಸ್ವೀಕರಿಸಿ, ಇತ್ಯಾದಿ

**ಟೇಬಲ್ 1 : ನೊಂದಾಯಿಸದ ಸಣ್ಣ ಪ್ರಮಾಣದ ಉದ್ಯಮ ವಲಯದ ತಾಂತ್ರಿಕ ವಿವರಗಳ ಮೂಲ**

| ಮೂಲ | 2001 | 2007 |
|---|---|---|
| ವಿದೇಶ | 0.67 | 0.80 |
| ದೇಶಿ ಸಹಯೋಗದೊಂದಿಗೆ | 5.58 | 2.11 |
| ದೇಶಿ ಸಂಶೋಧನೆ ಮತ್ತು ಅಭಿವೃದ್ಧಿ | 4.84 | 3.22 |
| ಯಾವುದೂ ಇಲ್ಲ | 88.91 | 92.83 |

ಮೂಲಗಳು : ಸಣ್ಣ ಕೈಗಾರಿಕೆಗಳ 3ನೇ ಗಣತಿ, 2000–2001 ಮತ್ತು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ 4ನೇ ಗಣತಿ, 2006–07.

ಪ್ರಕ್ರಿಯೆಗಳನ್ನು ಒಳಗೊಂಡ ಸಾಂಪ್ರದಾಯಿಕ ಸಮೀಕ್ಷೆಯೊಂದಿಗೆ ಅನೌಪಚಾರಿಕ ವಲಯದಲ್ಲಿನ ಜ್ಞಾನದ ಉತ್ಪಾದನೆಯಿಲ್ಲದೆ ನೈಸರ್ಗಿಕ ಕೌಶಲ್ಯ ಪಡೆಯುವ ಪ್ರಕ್ರಿಯೆಯನ್ನು ಸಮೀಕರಿಸುವುದು ಕಷ್ಟಕರ ಎಂಬುದು ನನ್ನ ಅನಿಸಿಕೆ. ಅನೌಪಚಾರಿಕ ವಲಯದಲ್ಲಿ ಇವು ಗೈರಾಗುತ್ತವೆ. ಈ ಪ್ರಕ್ರಿಯೆಯು ಜ್ಞಾನ ಪಡೆಯುವ ಬದಲಿಗೆ ಜೀವನೋಪಾಯ ಕಂಡುಕೊಳ್ಳಲು ಅಂತರ್ಗತವಾಗುತ್ತದೆ. ಶೈಕ್ಷಣಿಕವಾಗಿ ಮತ್ತು ಯೋಜನಾ ಕೆಲಸದಲ್ಲಿ ಪಡೆದ ಔಪಚಾರಿಕ ಶಿಕ್ಷಣ ಪ್ರಕ್ರಿಯೆಯು ಏಕಪಕ್ಷೀಯವಾಗಿದೆ ಎಂಬುದನ್ನು ಐತಿಹಾಸಿಕವಾಗಿ ಗುರುತಿಸಲಾಗುತ್ತಿದೆ. ಇದಲ್ಲದೆ ಕೆಲವು ಅನೌಪಚಾರಿಕ ಕ್ಷೇತ್ರದ ಕಾರ್ಮಿಕರಿಗೆ ತಾವು ಸರಳವಾಗಿ ಪಡೆದ ಶಿಕ್ಷಣದ ಹೊರತಾಗಿ ಹೆಚ್ಚಿನ ತರಬೇತಿ ತಮ್ಮ ಜ್ಞಾನಕ್ಕೆ ಪೂರಕವಾಗುತ್ತದೆ ಎಂಬುದರ ಬಗ್ಗೆ ಅರಿವಿಲ್ಲ.

'ನಿಮ್ಮ ಉದ್ಯಮದಲ್ಲಿ ಕಾರ್ಮಿಕರು ಹೇಗೆ ಕೌಶಲ್ಯವನ್ನು ಪಡೆಯುವರು' ಎಂದು ಬನಾರಸ್‌ನ ಸಿಹಿ ತಯಾರಿಕಾ ಘಟಕದ ಮಾಲಿಕರೊಬ್ಬರನ್ನು ಕೇಳಿದಾಗ, 'ಇದರಲ್ಲಿ ಅಧ್ಯಯನದ ಮೌಲ್ಯ ಏನೂ ಇಲ್ಲ' ಎಂದು ಸಾಮಾನ್ಯ ಭಾವನೆಯನ್ನು ವ್ಯಕ್ತಪಡಿಸಿದರು. ಇದೇ ಸಮಯದಲ್ಲಿ ಈ ಶ್ರೇಣಿಗಳು ನ್ಯಾಯಯುತವಾಗಿಲ್ಲ ಎಂಬ ಅರಿವು ಮೂಡುತ್ತಿದೆ. ಒಂದೇ ಪ್ರಮಾಣದ ಅನೌಪಚಾರಿಕ ತರಬೇತಿ ವಿರುದ್ಧ ಔಪಚಾರಿಕ ಡಿಪ್ಲೊಮಾ ಅಥವಾ ಪ್ರಮಾಣಪತ್ರ ಪಡೆದು ಕಾರ್ಮಿಕ ಮಾರುಕಟ್ಟೆಯಲ್ಲಿ ಆಗುತ್ತಿರುವ ತರಬೇತಿ ತಾರತಮ್ಯ ಮತ್ತು ಮೌಲ್ಯಮಾಪನದ ಬಗ್ಗೆ ಆಗಾಗ್ಗೆ ಬನಾರಸ್‌ನಲ್ಲಿ ನೇಕಾರರು ಹೋರಾಟ ನಡೆಸಿದ್ದಾರೆ. ವಿಜ್ಞಾನ ಇತಿಹಾಸದಿಂದ ಮನೋ ವಿಜ್ಞಾನದವರೆಗಿನ ಜ್ಞಾನ ನಿರ್ವಹಣೆಯಲ್ಲಿ ವಿವಿಧ ಕ್ಷೇತ್ರಗಳಿಂದ ಪಡೆದ ಅನೌಪಚಾರಿಕ ಜ್ಞಾನದ ಕಲಿಕೆಯು ಔಪಚಾರಿಕ ಜ್ಞಾನಕ್ಕಿಂತ ಕಡಿಮೆ ಅಲ್ಲ. ತತ್ವ ಶಾಸ್ತ್ರ, ಗಣಿತ, ವಿಜ್ಞಾನದ ಸೃಷ್ಟಿಯಲ್ಲಿ ಕರಕುಶಲಕರ್ಮಿಗಳು, ಕೈಕೆಲಸಗಾರರು ಔಪಚಾರಿಕ ಕಲಿಕೆಯಿಂದ ದೂರ ಉಳಿಯದೆ ಪ್ರಾಯೋಗಿಕ ಸಮಸ್ಯೆಗಳನ್ನು ಬಿಡಿಸುವ ತಂತ್ರದ ಜೊತೆಗೆ ಬೆಳೆದರು ಎಂಬುದನ್ನೂ ಇತಿಹಾಸಜ್ಞರು ಗುರುತಿಸಿದ್ದಾರೆ (ಕಾನರ್ 2005). ವಿಶಿಷ್ಟ ಕರಕುಶಲಕರ್ಮಿಯು ದೈನಂದಿನ ಕರಕುಶಲಗಳ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನದ ಕೊಂಡಿಯಾಗಿ ರೂಪುಗೊಂಡಿದ್ದಾನೆ. ಬರ್ನೆಟ್ (200:17) ರೂಪಿಸಿದ ಕೆಲಸ ಜ್ಞಾನ; ದೃಷ್ಟಿಕೋನದ ಜ್ಞಾನ ನಿರ್ವಹಣಾ ಕ್ಷೇತ್ರದಲ್ಲಿ ಕೆಲಸದ ಜ್ಞಾನ ಉತ್ಪಾದನೆ ಮತ್ತು ಕೆಲಸವು ಜ್ಞಾನ ಪರೀಕ್ಷೆಯ ಸಾಧನವಾದಾಗ ಜ್ಞಾನವು ಮನ್ನಣೆ ಪಡೆದು, ಅಧಿಕೃತ ರೂಪ ಮದ್ರೆ ಹೊಂದುತ್ತದೆ. ಬರೀ ಕೆಲಸ ಮಾತ್ರವಲ್ಲ; ಕಲಿಕೆಯು ಅಭ್ಯಾಸವೂ ಆಗಿದೆ. ಉದಾಹರಣೆಗೆ ನೇಯ್ಗೆ ಕೆಲಸ ಮಾಡುವ ಕಾರ್ಯಾಗಾರದಲ್ಲಿ ಮನೆಯ ಅಪ್ಪ, ಅಣ್ಣ ಇತರರು ಕೆಲಸ ಮಾಡುವಾಗ ಮಕ್ಕಳು, ಅಲ್ಲಿರುವ ವಸ್ತುಗಳನ್ನೇ ಬಳಸಿಕೊಂಡು ಬ್ಯಾಡ್ಮಿಂಟನ್ ಆಡುತ್ತಿರುತ್ತಾರೆ. ಅವರಿಗೆ ನೇಯ್ಗೆ ಕಲಿಕೆಯನ್ನೇ ಮಾಡಬೇಕಿಲ್ಲ. ಅಲ್ಲಿರುವ ವಸ್ತುಗಳು, ಶಬ್ದ, ಪಾರಿಭಾಷಿಕ ಶಬ್ದ, ದೃಷ್ಟಿ ಇತ್ಯಾದಿಗಳೇ ವೃತ್ತಿಗೆ ಪೂರಕವಾಗಿ ಕಲಿಸಿಕೊಡುತ್ತವೆ (ವುಡ್ 2008). ಅನೌಪಚಾರಿಕ ವಲಯದಲ್ಲಿ ಜ್ಞಾನದ ಉತ್ಪಾದನೆಯ ಅರಿವು ಮತ್ತು ವಿಸ್ತರಣೆಯನ್ನ ಸೈದ್ಧಾಂತಿಕ ದೃಷ್ಟಿಕೋನದಲ್ಲಿ ಬಳಸಬಹುದಾಗಿದೆ.

### ಲೋಕ ವಿದ್ಯೆ ಸಂಸ್ಥೆಗಳು

ಆರ್ಥಿಕತೆಯ ಉದ್ಯಮಗಳ ತರಬೇತಿ ಮತ್ತು ವೃತ್ತಿ ಆಧಾರಿತ ತರಬೇತಿಯ ವಿಚಾರದಲ್ಲಿ ಅನೌಪಚಾರಿಕ ವಲಯದಲ್ಲಿ

ಸಾಕಷ್ಟು ಇತಿಮಿತಿಗಳಿದ್ದರೂ ಔಪಚಾರಿಕ ಶಿಕ್ಷಣಕ್ಕಿಂತ ಹಲವು ಪಟ್ಟು ಜನಸೇವೆಯಲ್ಲಿ ತೊಡಗಿಸಿಕೊಂಡಿವೆ. ಔಪಚಾರಿಕ ಶಿಕ್ಷಣದಲ್ಲಿ ಸೇವೆ ವಿರಳವಾಗುತ್ತಿದೆ ಎಂಬುದನ್ನು ಲೇಖನವು ತಿಳಿಸುತ್ತದೆ. ಅನೌಪಚಾರಿಕ ಆರ್ಥಿಕತೆ ಅಭಿವೃದ್ಧಿಯ, ಕೆಲವು ಕೌಶಲ್ಯಗಳನ್ನು ಹೊರತುಪಡಿಸಿ ಉದ್ಯಮಶೀಲತೆಗಳು ಮತ್ತು ಆನುವಂಶೀಯ ಪದ್ಧತಿಯ ಕೌಶಲ್ಯಗಳ ವರ್ಗಾವಣೆಯ ಮಹತ್ವವನ್ನು ಸಮಕಾಲೀಕನ ಕಸಬುದಾರ ಸಂಸ್ಥೆಗಳ ಸಮೀಕ್ಷೆಯೂ ಇದೇ ವಿಚಾರವನ್ನು ಪ್ರತಿಪಾದಿಸುತ್ತವೆ (ಬಿಸ್ವಾಸ್ ಮತ್ತು ರಾಜ್ 1996). ಅಲ್ಲಿ ತರಬೇತಿ ಮತ್ತು ರಚನಾತ್ಮಕ ತರಬೇತಿಯ ಸೌಲಭ್ಯಗಳನ್ನು ಒಳಗೊಂಡಿಲ್ಲ. ಇದು ಕೌಶಲಗಳ ಅಧ್ಯಯನಕ್ಕೆ ದೊಡ್ಡ ತೊಡಕು. ಆದರೆ ನಮ್ಮ ಪರಿಶೀಲನೆಯ ಪದ್ಧತಿಯೂ ಸರಿಯಾಗಿಲ್ಲ. ಅನೌಪಚಾರಿಕ ತರಬೇತಿ ಪದ್ಧತಿಯಲ್ಲಿ ಸಾಮಾನ್ಯ ಜೀವನ ಮತ್ತು ಕೆಲಸ ಸಂಪೂರ್ಣವಾಗಿ ಬೆಸೆದುಕೊಂಡಿರುವುದರಿಂದ ಅಧ್ಯಯನಕ್ಕೆ ಪ್ರಮುಖ ಅಡ್ಡಿಯಾಗಿದೆ. ಕಲಿಕೆ ಪ್ರಕ್ರಿಯೆ ನಿಗದಿತ ಸ್ಥಳ ಅಥವಾ ಸಮಯದಲ್ಲಿ ನಡೆಯುತ್ತಲೇ ಇರುತ್ತದೆ. ತರಬೇತಿ ಅಥವಾ ಕಲಿಕೆಯ ಪ್ರಮಾಣವೂ ಅರ್ಹತೆಯಲ್ಲಿ ದಾಖಲಾಗುತ್ತಿಲ್ಲ. ತರಬೇತಿ ಸಂದರ್ಭದಲ್ಲಿ ತರಬೇತುದಾರರಿಗೆ, ತರಬೇತಿ ಪಡೆಯುವ ಉದ್ಯಮಶೀಲತಾ ಅಭ್ಯರ್ಥಿಗಳಿಗೆ ವೇತನ ನೀಡಿದರೂ ತರಬೇತಿಗೆ ಶುಲ್ಕ ಇರುವುದಿಲ್ಲ. ಕುಟುಂಬ, ಜಾತಿ, ಲಿಂಗ ಸಮುದಾಯಗಳ ಸಂಬಂಧಗಳು ಆ ಆರ್ಥಿಕತೆಯ ಪ್ರಕ್ರಿಯೆಯಲ್ಲಿ ಹುದುಗಿವೆ. ಇದಕ್ಕೆ ಜನಾಂಗ ವಿವರಣೆಯ ಹಿನ್ನೆಲೆಯ ಮಾರ್ಗ ಅಗತ್ಯ.

ಜ್ಞಾನ ಸಂಸ್ಥೆಗಳ (ಕೌಶಲ್ಯ ಪಡೆಯುವುದು, ನಾವಿನ್ಯತೆ, ಆವಿಷ್ಕಾರ, ಸಂಸ್ಥೆಗಳ ನಡುವಿನ ಜ್ಞಾನದ ವಿನಿಮಯ ಇತ್ಯಾದಿ) ಬಗೆಗಿನ ಅಂಶಗಳನ್ನು ಅನೌಪಚಾರಿಕ ವಲಯದ ವಿಚಾರದಲ್ಲಿ ಅರ್ಥ ಮಾಡಿಕೊಳ್ಳುವ ಮಟ್ಟ, ಕೌಶಲ್ಯರಹಿತ ಕಾರ್ಮಿಕರ ಬಗೆಗಿನ ತಪ್ಪುಗ್ರಹಿಕೆಯಿಂದಾಗಿ ಕುಗ್ಗುತ್ತಿವೆ ಎಂಬುದು ಸ್ಪಷ್ಟವಾಗುತ್ತಿದೆ. ಅನೌಪಚಾರಿಕ ವಲಯದುದ್ದಕ್ಕೂ ಕುಟುಂಬ ಆಧಾರಿತ ಅಥವಾ ಕುಟುಂಬರಹಿತ ತರಬೇತಿಗಳು ತಿಂಗಳುಗಟ್ಟಲೆ ಅಥವಾ ಕೆಲವು ವರ್ಷಗಳ ಕಾಲ ನಡೆಯುತ್ತಲೇ ಇರುತ್ತವೆ. ಅನೌಪಚಾರಿಕ ತರಬೇತಿಗೆ (ಜಾತಿ ಅಥವಾ ಲಿಂಗ ನೀತಿಗಳ ಸಾಂಸ್ಥಿಕ ಅಡ್ಡಿಗಳು



ಸಾಕಷ್ಟಿದ್ದರೂ) ಔಪಚಾರಿಕ ಶಿಕ್ಷಣದ ಪ್ರವೇಶಕ್ಕೆ ಇರುವಂತೆ ಆರ್ಥಿಕ ಒತ್ತಡ ಅಥವಾ ಅಡ್ಡಿಗಳು ಇಲ್ಲ. ತರಬೇತಿಯಲ್ಲಿ ವೈಯಕ್ತಿಕ ಶಿಸ್ತು, ಕಲಿಕೆಯ ಆಸೆಗೆ ಪ್ರಾಮುಖ್ಯತೆ ನೀಡಿ, ಕಾರ್ಮಿಕರಿಗೆ ತರಬೇತಿ ನೀಡಲು ಶಿಕ್ಷಣ ಪದ್ಧತಿಯನ್ನು ರಚನಾತ್ಮಕವಾಗಿ ಅಭಿವೃದ್ಧಿಪಡಿಸಬಹುದು. ಕುಶಲಕಲೆ ಕುಶಲಕರ್ಮಿ, ಅನುಭವಿ ಕಾರ್ಮಿಕರಲ್ಲಿಯೇ ಮೂರ್ತವಾಗಿರುವುದ ರಿಂದ ಕಾರ್ಯವಿಧಾನ ಮತ್ತು ನಿಯಮಿತ ರೂಪುರೇಷೆಗಳ ಮಿತಿ ಇದ್ದಾಗ್ಯೂ ಉದ್ಯಮಗಳ ಮಾಲಿಕರು ತಮ್ಮ ಕುಶಲಕರ್ಮಿ ಕಾರ್ಮಿಕರ ಬಿಡುಗಡೆಗೊಳಿಸದೆ ರಕ್ಷಣೆಗೆ ಆದ್ಯತೆ ನೀಡುವರು. ಕಾರ್ಮಿಕರೂ ಸಹ ವೈವಿಧ್ಯಮಯ ಕೌಶಲ್ಯ ಕಲಿಯಲು, ಹೆಚ್ಚಿನ ಆದಾಯ ಗಳಿಕೆಗಾಗಿ ಹೊಸ ಉದ್ಯೋಗಗಳನ್ನು ಅರಸುವುದು ಉದ್ಯಮ ಕ್ಷೇತ್ರದಲ್ಲಿ ಸಹಜವಾಗಿದೆ. ಇಲ್ಲಿ ಕಾರ್ಮಿಕರು ಉತ್ಪಾದನೆ ಆಧಾರ ಉದ್ಯೋಗಗಳಿಗೆ ಮಾತ್ರವಲ್ಲ; ಸಂವಹನ ಕಲೆಯಂತಹ ಮೃದು ಕೌಶಲ್ಯಗಳತ್ತಲೂ ಒಲವು ತೋರುವರು.

ಅದನ್ನು ತಮ್ಮೊಳಗೆ ಅಳವಡಿಸಿಕೊಳ್ಳಲು ಗಮನ ನೀಡುವರು. ಮುಂಬೈನ ರಸ್ತೆ ಬದಿಯಲ್ಲಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡುವ ಕಾರ್ಮಿಕರು, ಟ್ಯಾಕ್ಸಿ ಚಾಲಕರು, ಪ್ರವಾಸಿ ಮಾರ್ಗದರ್ಶಕರು, ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಇಂಗ್ಲಿಷ್ ಭಾಷೆ ಕಲಿಕೆಯನ್ನು ಸಂದರ್ಶನವನ್ನೂ ನಡೆಸಲಾಗಿದೆ. ಅದರ ಪ್ರಕಾರ, ಕೆಲಸಗಾರರು ಕೌಶಲ್ಯ ಅಭಿವೃದ್ಧಿಗೆ ಪೂರಕವಾದ ಭಾಷೆಯನ್ನು ತಮ್ಮ ಹಿರಿಯರು, ಮೇಲ್ವಿಚಾರಕರು ಮಾತ್ರವಲ್ಲದೆ ಗ್ರಾಹಕರ ಜೊತೆಗಿನ ಚರ್ಚೆ, ಸಾರ್ವಜನಿಕ ಜಾಹೀರಾತು ಫಲಕಗಳು, ಗೋಡೆ ಬರಹಗಳು, ಮೊಬೈಲ್‌ನ ಹೊಸ ತಂತ್ರಜ್ಞಾನ ಸೇರಿದಂತೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಕಲಿಯುವರು. ತಂತ್ರಜ್ಞಾನವನ್ನು ಕಲಿಕೆಗಾಗಿ ಸಮರ್ಪಕವಾಗಿ, ಸಮರ್ಥವಾಗಿ ಬಳಸಿಕೊಳ್ಳುವರು. ಮುಂಬೈನ ಒಂದು ಲಿಂಕ್ ರಸ್ತೆಯಲ್ಲಿ ಪ್ರವೇಶ ನಿಷೇಧಿಸಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರು ಕೇಳಿದ ಪ್ರಶ್ನೆಗೆ ಅದೇ ರಸ್ತೆಯ ಪ್ರಮುಖ ವ್ಯಾಪಾರಿಯೊಬ್ಬರು ಹೇಳಿದ್ದು, "ಈ ರಸ್ತೆ ಶಾಲೆಯಾಗಿ ಪರಿವರ್ತನೆಯಾಗುತ್ತಿದೆ" ಎಂದು ಸಹಜವಾಗಿ ಹೇಳಿದ್ದಾರೆ. ಕಲಿಕೆಯ ಬಲ ಇಲ್ಲಿಯೇ ಅಡಗಿದೆ ಎಂಬುದನ್ನು ಬಾರ್ಬರಾ (2004) ಗುರುತಿಸಿದ್ದಾರೆ. ಕಡಿಮೆ ಪ್ರಮಾಣದಲ್ಲಿ ಲಭ್ಯವಿರುವ ಸಂಪನ್ಮೂಲದಲ್ಲಿಯೇ ಆವಿಷ್ಕಾರ, ಅಳವಡಿಕೆಗೆ ಒತ್ತು ನೀಡಿ, ಸುಪ್ತ ಪ್ರತಿಭೆಗೆ ಬೆಳವಣಿಗೆಗೆ, ಕಲಿಕೆಯ ಪ್ರವೇಶಕ್ಕೆ ಎದುರಾಗುವ ತೊಡಕುಗಳನ್ನು ತಾವಾಗಿಯೇ ನಿವಾರಿಸಲು ಪ್ರಯತ್ನ ಮಾಡುವರು. ಆದರೆ ಇದರಲ್ಲಿ ಒಂದು ಮುಖ್ಯವಾದ ತೊಡಕಿದೆ. ಸೈದ್ಧಾಂತಿಕ ತಿಳಿವಳಿಕೆಯ ಕೊರತೆ, ಅದರ ಪರಿಣಾಮ, ಹೊಸ ತಾಂತ್ರಿಕತೆ, ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವಾಗಲೂ ಎದುರಾಗುವ ಸಮಸ್ಯೆಯಾಗಿದೆ ಎಂಬುದನ್ನು ಅವರು ಗುರುತಿಸಿದ್ದಾರೆ. ಕೊನೆಯದಾಗಿ, ಈ ಕ್ಷೇತ್ರದಲ್ಲಿ ವಿಸ್ತೃತ ಚರ್ಚೆ ಸುಲಭವಲ್ಲ. ಅದಾಗ್ಯೂ ಲೇಖನದಲ್ಲಿ ಅನೌಪಚಾರಿಕ

ವಲಯದಲ್ಲಿ ಸಾಂಸ್ಥಿಕ ಮಟ್ಟದ ಆವಿಷ್ಕಾರಗಳ ಮಹತ್ವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.ಅನೌಪಚಾರಿಕ ವಲಯ ವ್ಯಾಪ್ತಿಯ ರಸ್ತೆ ಬದಿಯ ಆಹಾರ ಮತ್ತು ಸಿಹಿ ತಿನಿಸುಗಳ ವ್ಯಾಪಾರಸ್ಥರು, ಸಣ್ಣ ವ್ಯಾಪಾರಗಳ ಮಾಲೀಕರಿಗೆ ತಾವು ಉತ್ಪಾದಿಸುವ ಉತ್ಪನ್ನಗಳ ಬಗ್ಗೆ ವಿಶೇಷ ನಂಬಿಕೆ ಮತ್ತು ಹೆಚ್ಚು ಹೆಮ್ಮೆ. ಅದರ ಮೂಲಕ ಖ್ಯಾತಿ ಗಳಿಸಲು ಇಚ್ಛಿಸುವರು. ಹೊಸ ತಿನಿಸುಗಳ ತಯಾರಿಯಲ್ಲಿ ವಿಭಿನ್ನ ಪ್ರಯೋಗ ನಡೆಸಿ, ಅವುಗಳನ್ನು ತಮ್ಮ ಉತ್ಪಾದನೆಯ ಪಟ್ಟಿಯಲ್ಲಿ ಸೇರಿಸುತ್ತಿರುವರು. ಬೌದ್ಧಿಕ ಆಸ್ತಿ ಹಕ್ಕು ಇರದ ಕಾರಣ ಕರಕುಶಲ ಉದ್ದಿಮೆಗಳು ತಮ್ಮ ಉತ್ಪನ್ನಗಳ ಉತ್ಪಾದನೆಯ ಗುಟ್ಟನ್ನು ಜತನದಿಂದ ಕಾಯ್ದುಕೊಳ್ಳುವವು. ಹೊಸ ಆವಿಷ್ಕಾರದ ಉನ್ನತಿಗೆ ಆದ್ಯತೆ ನೀಡುತ್ತಲೇ ಮೂಲಸ್ವರೂಪವನ್ನು ಪೋಷಿಸಿಕೊಳ್ಳುವರು. ಲೋಕವಿದ್ಯೆಯು ಹೊಸ ಆವಿಷ್ಕಾರ, ಸಂಶೋಧನೆ, ಪ್ರಯೋಗಗಳನ್ನು ಅಳವಡಿಸಿಕೊಳ್ಳುತ್ತಲೇ ಬೆಳೆಯುತ್ತವೆ. ವಿಸ್ತಾರ ಪಡೆಯುತ್ತವೆ. ನಮಗೆ ಗೊತ್ತಿರುವಂತೆಯೇ ಅಪ್ಪಟ ಕರಕುಶಲ ಉದ್ದಿಮೆ ಎನಿಸಿರುವ ಕೈಮಗ್ಗಗಳೂ ಸಹ ಪವರ್‌ಲೂಮ್‌ಗೆ ತಮ್ಮ ತಂತ್ರಜ್ಞಾನವನ್ನು ಬದಲಿಸಿಕೊಂಡಿದೆ. ಪಾರಂಪರಿಕ ಸಾಂಸ್ಥಿಕ ಉದ್ದಿಮೆ ಮಹತ್ವವನ್ನು ಉಳಿಸಿಕೊಂಡು ಹೊಸ ಆವಿಷ್ಕಾರವನ್ನು ಆಧುನಿಕ ಕೈಗಾರಿಕೆ ರೀತಿಯಲ್ಲಿ ಒಪ್ಪುವಂತೆ ಅಳವಡಿಸಿಕೊಳ್ಳುತ್ತಿವೆ (ಹೇನ್ಸ್ 2012). ಆದರೆ ಈ ನಿಟ್ಟಿನಲ್ಲಿ ಎರಡೂ ಕಡೆ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಪರ ಕೆಲಸ ಆಗಿಲ್ಲ ಎಂದು ರಾಷ್ಟ್ರೀಯ ಜ್ಞಾನ ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ.

## ನಿರ್ಣಯ

ಔಪಚಾರಿಕ ಶೈಲಿಯ ಶಾಲಾ ಪದ್ಧತಿ ಅಥವಾ ಸಾಕಷ್ಟು ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿರುವ ಅನೌಪಚಾರಿಕ ವಲಯದ ಜ್ಞಾನ ಸಂಸ್ಥೆಗಳು ಎಂಬಿತ್ಯಾದಿ ವಾದಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಬೇಡ. ಆದರೆ ಈಗ ಅಸ್ತಿತ್ವದಲ್ಲಿರುವ ವೃತ್ತಿ ಕೌಶಲ್ಯಗಳನ್ನು ಒಳಗೊಂಡ ವ್ಯವಸ್ಥೆಯು, ಸಾಂಪ್ರದಾಯಿಕ ಕೆಲಸದ ಪದ್ಧತಿಯು ಸಾಕೇ? ಎಂಬುದು ಎನ್‌ಸಿಇಯುಎಸ್ ನ ಪ್ರಶ್ನೆ (ಸೇನ್‌ಗುಪ್ತ; 2009;9). ಇದಕ್ಕೆ 'ಇಲ್ಲ' ಎಂದು ಹೇಳಬಹುದು. ಪಾರಂಪರಿಕ ವೃತ್ತಿಗಳಿಗೆ ಕೌಶಲ್ಯಗಳನ್ನು ಒಳಗೊಂಡು, ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ, ಸುಧಾರಿಸುವ ಮತ್ತು ಆದಾಯ ಹೆಚ್ಚಿಸುವ ಒಳ್ಳೆಯ ವಿನ್ಯಾಸ ರೂಪಿಸಿ, ಮಾಹಿತಿ ನೀಡಿ ಅರಿವು ಮೂಡಿಸುವ ಮೂಲಕ ಅನೌಪಚಾರಿಕ ವೃತ್ತಿ ಕೌಶಲ್ಯಗಳನ್ನು ಉತ್ತಮಪಡಿಸಿದರೆ ಸಾಕಷ್ಟು ಸುಧಾರಣೆ ಕಾಣಬಹುದು. ಆದರೆ ಸರ್ಕಾರ ನಡೆಸುವ ವೃತ್ತಿ ಆಧಾರಿತ ಅನೌಪಚಾರಿಕ ವಲಯದ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳು ಯಶಸ್ವಿಯಾಗುತ್ತಿಲ್ಲ. ಈ ಸಂಸ್ಥೆಗಳು ಸಾಂಪ್ರದಾಯಕ ಕುಶಲಕರ್ಮಿ ಕಾರ್ಮಿಕರು ಮತ್ತು ಅನೌಪಚಾರಿಕ ವಲಯದ ಉದ್ಯಮಗಳ ಸಂಪರ್ಕದಿಂದ ದೂರ ಉಳಿದಿವೆ (ಅಬಿದ್ ಪು. 10). ಸದ್ಯ ಅಸ್ತಿತ್ವದಲ್ಲಿರುವ ಅಸಾಂಪ್ರದಾಯಿಕ ವೃತ್ತಿ ಸಂಸ್ಥೆಗಳ ಜೊತೆಗೆ ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರ ಪಾಲ್ಗೊಳ್ಳುವಿಕೆ ಮೂಲಕ ವೃತ್ತಿ ಕೌಶಲಗಳನ್ನು ಒಳಗೊಂಡ ಅನೌಪಚಾರಿಕ ಕೌಶಲಗಳನ್ನು ಅಭಿವೃದ್ಧಿ ಪಡಿಸಲು ಇರುವ ಪರ್ಯಾಯ ಮಾರ್ಗ. ಇದಕ್ಕೆ ನೈಜಿರಿಯಾದಂತಹ ಅಭಿವೃದ್ಧಿಶೀಲ ರಾಷ್ಟ್ರವು ಅಲ್ಲಿಯ ರಾಷ್ಟ್ರೀಯ ಮುಕ್ತ ಉದ್ಯಮಶೀಲತಾ ಯೋಜನೆ (ಎನ್‌ಒಎಎಸ್) ಮೂಲಕ ಕೈಗೊಂಡ ಕೆಲಸ ಮತ್ತು ಇಂಥ ಇತರ ಯೋಜನೆಗಳು ಮಾದರಿಯಾಗಬಲ್ಲವು ಎಂಬುದನ್ನು ಎನ್‌ಎಸ್‌ಇಯುಎಸ್ (ಅಬಿದ್ ಪು 40–41) ವಿಸ್ತೃತವಾಗಿ ವಿಶ್ಲೇಷಿಸಿದೆ. ಜ್ಞಾನ ಉತ್ಪಾದನೆ, ಸಂಶೋಧನೆ, ಮಾಹಿತಿ ವರ್ಗಾವಣೆ, ಹೊಸ ಆವಿಷ್ಕಾರ ಮತ್ತಿತರ ವಿಚಾರಗಳು ಅನೌಪಚಾರಿಕ ವಲಯದ ನಿರ್ವಹಣೆಗೆ ಪೂರಕವಾಗಿವೆ. ಈ ನಿಟ್ಟಿನಲ್ಲಿ ವಿಭಿನ್ನ ದೃಷ್ಟಿಕೋನದಲ್ಲಿ ಸಂಶೋಧನೆ ಅಗತ್ಯವಾಗಿದೆ. ಅಂತಿಮವಾಗಿ ನೀತಿ ನಿಯಮಾವಳಿಗಳನ್ನು ಮೀರಿ ಸಾಂಪ್ರದಾಯಿಕ ಜ್ಞಾನದ ಜೊತೆಗೆ ಲೋಕವಿದ್ಯೆಯ ಘನತೆ, ಸಮಾನ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ರಾಜಕೀಯ ಆಂದೋಲನವೂ ಅತ್ಯಗತ್ಯವಾಗಿದೆ. ❑



## ಆರೋಗ್ಯದ ಬಗ್ಗೆ ಸಾಮಾನ್ಯ ಜ್ಞಾನ



**ನಾವು ನಮ್ಮ ದೇಹದೊಳಗೆ ಗಾಳಿ, ಆಮ್ಲಜನಕವನ್ನು ಶ್ವಾಸಕೋಶಗಳ ಮೂಲಕ ಮಾತ್ರವಲ್ಲ; ಚರ್ಮದ ಮೂಲಕವೂ ತೆಗೆದುಕೊಳ್ಳುತ್ತೇವೆ. ನಮ್ಮ ಚರ್ಮದಲ್ಲಿ ಅಪಾರ ಸಂಖ್ಯೆಯಲ್ಲಿ ಅತಿ ಸೂಕ್ಷ್ಮವಾದ ರಂಧ್ರಗಳಿರುತ್ತವೆ. ಇವುಗಳ ಮೂಲಕವೂ ನಾವು ಗಾಳಿಯನ್ನು ತೆಗೆದಿಕೊಳ್ಳುತ್ತೇವೆ. ಉತ್ತಮ ಆರೋಗ್ಯಕ್ಕೆ ಶುದ್ಧ ಹವೆ ಮುಖ್ಯ. ಇದಕ್ಕಾಗಿಯೇ ನಾವು ನಮ್ಮ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು. ಪ್ರತಿಯೊಬ್ಬರೂ ಈ ವಿಚಾರ ಅರಿತಿರಬೇಕು. ಮಗುವಿಗೆ ಸೂಕ್ತ ಗ್ರಹಣಶಕ್ತಿ ಬರುತ್ತಲೂ ಈ ಬಗ್ಗೆ ಮನದಟ್ಟು ಮಾಡಿಕೊಡಬೇಕು. ಗಬ್ಬು ವಾಸನೆ ಹೊಡೆಯುವ ಶೌಚಾಲಯ, ಮೂತ್ರವಿಸರ್ಜನೆಯಿಂದ ಕೊಳೆತು ನಾರುವ ರಸ್ತೆ ಬದಿ ಎಲ್ಲವೂ ಗಾಳಿಯನ್ನು ಪರಿಸರವನ್ನು ಅಶುದ್ಧಗೊಳಿಸುತ್ತವೆ. ಪ್ರಾಣಿಗಳಾದ ಬೆಕ್ಕು, ನಾಯಿಗಳು ಏನು ಮಾಡುತ್ತವೆ ಗೊತ್ತೆ? ತಮ್ಮ ಮಲವಿಸರ್ಜನೆ ನಂತರ, ನೆಲ ತೆರೆದು ಮಣ್ಣನ್ನು ಮಲದ ಮೇಲೆ ಹಾಕುತ್ತವೆ. ಇದು ವಾಸನೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಅದಕ್ಕಿಂತ, ರೋಗವಾಹಕ ನೊಣ, ಕೀಟಾಣುಗಳು ಅಲ್ಲಿ ಕುಳಿತುಕೊಳ್ಳಲು ಅವಕಾಶವೇ ಆಗುವುದಿಲ್ಲ. ಅನೇಕ ಬಾರಿ ನಮ್ಮ ಶೌಚಾಲಯಗಳು ಸ್ವಚ್ಛವಾಗಿಯೇ ಇರುವುದಿಲ್ಲ. ನಾವು ಮಲವಿಸರ್ಜನೆಗೆ ಬಳಸಿದ ಶೌಚಾಲಯವನ್ನು ನಾವೇ ತೊಳೆಯಲು ನಾಚಿಕೆಯೇಕೆ? ಅದನ್ನು ಸ್ವಚ್ಛಗೊಳಿಸಲು ಬೇರೆಯವರು ಬರಬೇಕೆ? ನಮ್ಮಲ್ಲಿ ಕಂಡಕಂಡಲ್ಲಿ ಉಗುಳುವ ದುರಭ್ಯಾಸವಿದೆ. ರಸ್ತೆ ಮೇಲೆ, ಕಟ್ಟಡಗಳ ಮೂಲೆಗಳಲ್ಲಿ ಉಗಿಯುವವರಿದ್ದಾರೆ. ಉಗುಳಿನಲ್ಲಿ ಅಂಟುಜಾಡ್ಯ ಇರಬಹುದು. ದುರಭ್ಯಾಸಗಳನ್ನು ಬಿಡಬೇಕು. ಉತ್ತಮ ಅಭ್ಯಾಸಗಳಿಂದ ಬಹುತೇಕ ಎಲ್ಲ ರೋಗಗಳನ್ನು ದೂರವಿಡಬಹುದು.**

**ಇಂಡಿಯನ್ ಒಪಿನಿಯನ್, 8-2-1913**

# ಮಾಹಿತಿ ಆರ್ಥಿಕತೆಯಲ್ಲಿ ಅನೌಪಚಾರಿಕ ದುಡಿಮೆ

ಬಾಬು ಪಿ. ರಮೇಶ್
ಕನ್ನಡಕ್ಕೆ : ದಿವ್ಯಾ



**ಭಾರತದ ಐಟಿ-ಐಟಿಇಎಸ್/ ಬಿಪಿಓ ವಲಯಗಳ ಅತ್ಯಂತ ಪ್ರಮುಖವಾದ ಮತ್ತು ಗೋಚರ ವಿಭಾಗವೆಂದರೆ ಕಾಲ್ ಸೆಂಟರ್‌ಗಳು. ಕಾಲ್ ಸೆಂಟರ್‌ಗಳ ಪ್ರಾಮುಖ್ಯತೆ ಜಿಡಿಪಿ ಕಡೆಗೆ ಕೊಡುಗೆ ಕೊಡುವ ಪರಿಭಾಷೆಯಲ್ಲಿ ಮಾತ್ರವಲ್ಲದೆ ಈ ಸಂಸ್ಥೆಗಳು ಒದಗಿಸಿದ ಅಧಿಕ ಪ್ರಮಾಣದ ಉದ್ಯೋಗದ ದೃಷ್ಟಿಯಿಂದಲೂ ಸಹ ಇದೆ.**

ಅನೌಪಚಾರಿಕ ವಲಯದಲ್ಲಿನ ಕೆಲಸ ಸಾಮಾನ್ಯವಾಗಿ ಹಲವಾರು ವಿಧದ ಉದ್ಯೋಗ ಅಭದ್ರತೆ ಮತ್ತು ಕಾರ್ಮಿಕರದೋಷಗಳ ಗುಣಲಕ್ಷಣಗಳಿಂದ ನಿರೂಪಿತಗೊಂಡಿದೆ. ಕಡಿಮೆ ವ್ಯವಸ್ಥಿತವಾಗಿರುವ ಕೆಲಸದ ಸ್ಥಳಗಳು, ಅನೌಪಚಾರಿಕ ಕೆಲಸದ ಒಪ್ಪಂದಗಳ ಪ್ರಾಬಲ್ಯತೆ, ನಿರ್ದಿಷ್ಟ ಮಾಲೀಕ, ನೌಕರನ ಸಂಬಂಧಗಳು, ಕಡಿಮೆವೇತನಗಳು, ವಿಸ್ತರಿಸಲ್ಪಟ್ಟ ಕೆಲಸದ ಗಂಟೆಗಳು, ಅಪಾಯಕಾರಿ ಕೆಲಸದ ಸ್ಥಿತಿಗಳು, ಹೆಚ್ಚಿನ ಮಟ್ಟದ ಕೆಲಸ ತೀವ್ರತೆ ಮತ್ತು ಶೋಷಣೆ, ಸಾಮಾಜಿಕ ಭದ್ರತೆಯ ಕೊರತೆ ಈ ಕ್ಷೇತ್ರದ ಸಾಮಾನ್ಯ ಅಂಶಗಳು.

ಭಾರತದಲ್ಲಿ ಕಾಲ್ ಸೆಂಟರ್ ಕೆಲಸವನ್ನು ಆಧುನಿಕ ಸೇವಾ ವಲಯದ ಉದ್ಯೋಗದಲ್ಲಿ ಒಂದು ಸೂರ್ಯೋದಯ ಎನ್ನಲಾಗಿದೆ. ಆಯೋಜಿತವಾಗಿರುವ ಕಾರ್ಯಸ್ಥಳಗಳಲ್ಲಿ, ಪ್ರಧಾನವಾಗಿ ತೋರುವ (ಸಾಮಾನ್ಯವಾಗಿ ಬೆರಗುಗೊಳಿಸುವ ಕಟ್ಟಡಗಳಲ್ಲಿ ಜೊತೆಗೆ ಆಧುನಿಕ ಸೌಲಭ್ಯ ಮತ್ತು ತಂತ್ರಜ್ಞಾನ ಹೊಂದಿದ). ಕಾಲ್ ಸೆಂಟರ್‌ನಲ್ಲಿರುವ ಉದ್ಯೋಗಗಳು ಆರ್ಥಿಕತೆಯ ಔಪಚಾರಿಕ ವಲಯಕ್ಕೆ ಸೇರುತ್ತವೆ. ಈ ಉದ್ಯಮಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಳಪಟ್ಟು ನಿರ್ಧಾರವಾಗಿರುವಂತೆ ಕೆಲವು ನಿಯಂತ್ರಿತ ಚೌಕಟ್ಟಿನೊಳಗೆ ಕೆಲಸ ಮಾಡುತ್ತಿವೆ. ಇದಲ್ಲದೆ, ಈ ಕೆಲಸಗಳು ಸಾಮಾನ್ಯವಾಗಿ ಉತ್ತಮ ವೇತನ, ಸೌಕರ್ಯಗಳು ಮತ್ತು ಪರಿಹಾರ ಪ್ಯಾಕೇಜ್‌ಗಳಿಗೆ ಹೆಸರುವಾಸಿಯಾಗಿದೆ, ಅಲ್ಲಿ ಕಾರ್ಯ ಸ್ಥಳಗಳು ಹೊಂದಿಕೊಳ್ಳುವ, ಶಕ್ತಗೊಳಿಸುವ ಮತ್ತು ಸಬಲೀಕರಿಸುವುದೆಂದು ವಿಶ್ಲೇಶಿಸಲಾಗಿದೆ. ಇನ್ನೂ, ಸೂಕ್ಷ್ಮ ಪ್ರಾಯೋಗಿಕ ಅಧ್ಯಯನಗಳ ಆಧಾರಿತ ಹತ್ತಿರದ ವಿಶ್ಲೇಷಣೆ, ತನ್ನ ಔಪಚಾರಿಕ ಹೆಗ್ಗುರುತನ್ನು ಸೂಚಿಸುವ ಮೂಲಕ ಈ ಉದ್ಯೋಗದಲ್ಲಿನ ಕೆಲಸ ಮತ್ತು ಕಾರ್ಮಿಕರ ಅಭದ್ರತೆಗೆ ಆಧಾರವಾಗಿರುವ ವ್ಯಾಪ್ತಿಯನ್ನು ತಿಳಿಸುತ್ತದೆ. ಈ ಲೇಖನದ ನಂತರದ ಭಾಗದಲ್ಲಿ ಸಂದರ್ಭಕ್ಕೆ ಮತ್ತು ಪರಿಕಲ್ಪನೆಗೆ ತಕ್ಕಂತೆ ಬೆಳವಣಿಗೆ, ವಿಕಾಸ ಮತ್ತು ಹೊರಗುತ್ತಿಗೆ ಕ್ಷೇತ್ರದ ವಿಷಯಾಂತರಗಳು ಮತ್ತು ಭಾರತದಲ್ಲಿನ ಕಾಲ್ ಸೆಂಟರ್ ಕೆಲಸದ ಅಂಶಗಳನ್ನು ವಿವರಿಸಲಾಗಿದೆ.

### ಹೊರಗುತ್ತಿಗೆ ಆಗಮನ ಮತ್ತು ಭಾರತದಲ್ಲಿ ಅದರ ಬೆಳವಣಿಗೆ ಮತ್ತು ವಿಕಾಸ

ವ್ಯಾಪಾರ ಹೊರಗುತ್ತಿಗೆ ಪ್ರಕ್ರಿಯೆ (ಬಿಪಿಓ) ಕಾಲ್ ಸೆಂಟರ್ ಕೆಲಸವನ್ನು ಸಂಘಟಿಸುವ ಕೇಂದ್ರ ತತ್ವವಾಗಿದೆ. ಈ ಸಂಸ್ಥೆಯ ಕೆಲಸದ ಮಾದರಿ ಪ್ರಕಾರ, ಮೂಲ ಸಂಸ್ಥೆಯ ಕೆಲವು ಮುಖ್ಯವಲ್ಲದ ಪ್ರಕ್ರಿಯೆಗಳನ್ನು ನಿರ್ದಿಷ್ಟವಾದ ಮೊದಲು ಗುರುತಿಸಲ್ಪಟ್ಟ ಅಂಗಸಂಸ್ಥೆ ಉದ್ಯಮಗಳಿಗೆ ಸ್ಥಳಾಂತರಿಸಲಾಗಿದೆ. ಹೊರಗುತ್ತಿಗೆಯ ತರ್ಕ ಸಾಕಷ್ಟು ಹಳೆಯದಾದರೂ ಮತ್ತು ಹಿಂದಿನಿಂದಲೂ ಅದರ ಮೂಲ ಸ್ವರೂಪಗಳನ್ನು ವಿಶ್ವದಾದ್ಯಂತ ಅಭ್ಯಾಸ ಮಾಡಿಕೊಂಡಿದ್ದರೂ, ಪಾಶ್ಚಿಮಾತ್ಯ ಜಗತ್ತಿನ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿನ ತೀವ್ರ ಮಟ್ಟದ ವ್ಯಾಪಾರ ಸ್ಪರ್ಧೆಯ ಸನ್ನಿವೇಶದಲ್ಲಿಈ ಸ್ವರೂಪದ ಸಂಸ್ಥೆ ಕೆಲಸದ ಮೇಲೆ ಅತಿಯಾದ ಭರವಸೆ 1980 ರಿಂದ ಅನಿವಾರ್ಯವಾಗಿದೆ. ವೆಚ್ಚ ಕನಿಷ್ಠೀಕರಣಗಳ ನಿರಂತರ ಅನ್ವೇಷಣೆ ಅನೇಕ ಸಂಸ್ಥೆಗಳಿಗೆ ಅವರ ಕೆಲವೊಂದು

ಸಹ ಪ್ರಾಧ್ಯಾಪಕರು, ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ, ದೆಹಲಿ. Email : babu@ignou.ac.in

ಪ್ರಮುಖವಲ್ಲದ ಪ್ರಕ್ರಿಯೆಗಳನ್ನು ಮೊದಲೇ ಗುರುತಿಸಲಾದ ಸಹಾಯಕ ಸಂಸ್ಥೆಗಳ ಅಗ್ಗದ ಕಾರ್ಮಿಕರ ಸ್ಥಳಗಳಲ್ಲಿ ವರ್ಗಾವಣೆ ಮಾಡಲು ಪ್ರೇರೇಪಿಸಿತು. ಹೊರಗುತ್ತಿಗೆ ಕೆಲಸದ ಪ್ರಕ್ರಿಯೆಗಳನ್ನು ಸೂಕ್ತವಾಗಿ ಸಂಯೋಜಿಸಲು (ಮೂಲ ಸಂಸ್ಥೆಯ ಅಗತ್ಯದ ಪ್ರಕಾರ) ಸ್ಪರ್ಧಾತ್ಮಕ ವೆಚ್ಚ ಮತ್ತು ಪರಿಣಾಮಕಾರಿ ತಾಂತ್ರಿಕ ಸಾಧ್ಯತೆಗಳ ಲಭ್ಯತೆ ಪೂರಕ ಅಂಶವಾಗಿದ್ದು ದೂರದ ಸ್ಥಳಗಳಲ್ಲಿ ಕೆಲಸದ ಪ್ರಕ್ರಿಯೆಗಳ ಮರುಸ್ಥಳಾಂತರಕ್ಕೆ ಬೆಂಬಲಿಸಿದೆ. ಅಂತೆಯೇ, ಮೊದಲ ಸೆಟ್‌ನ ಬಿಪಿಓ ಸಂಸ್ಥೆಗಳು ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಸಣ್ಣ ಪಟ್ಟಣಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊರಹೊಮ್ಮಿವೆ. ಗ್ರಾಮೀಣ ವೇತನಕ್ಕೆ ಹೋಲಿಸಿದರೆ ನಗರದ ವೇತನ ಆಕರ್ಷಕವಾಗಿ ಅಧಿಕವಾದಂತೆ, ಆಶ್ರಯಿಸಿರುವ ಹೊರಗುತ್ತಿಗೆ ಆಯ್ಕೆಗಳು ಮೂಲ ಸಂಸ್ಥೆಗಳಿಗೆ ಅನೇಕ ಕಾರ್ಮಿಕರನ್ನು ಕಡಿಮೆ ವೆಚ್ಚದಲ್ಲಿ ಆಕರ್ಷಿಸುವ ಅವಕಾಶ ನೀಡಿದೆ. ಪಾಶ್ಚಿಮಾತ್ಯ ಜಗತ್ತಿನಲ್ಲಿ ಈ ಹಂತದ ಹೊರಗುತ್ತಿಗೆಯನ್ನು 'ದೇಶೀಯ ವಲಯದ ಹೊರಗುತ್ತಿಗೆ' ಹಂತ (ಅಥವಾ ಕೇವಲ 'ಹೊರಗುತ್ತಿಗೆ') ಎಂದು ಕರೆಯಲಾಗುತ್ತಿದೆ. ಕೆಲಸದ ಪ್ರಕ್ರಿಯೆಗಳು ನಡೆಯುತ್ತಿದ್ದಂತೆ / ಉದ್ಯೋಗಗಳನ್ನು ನಿರ್ದಿಷ್ಟ ದೇಶದ ಗಡಿಯೊಳಗೆ ಮಾತ್ರ ವರ್ಗಾಯಿಸಲಾಗುತ್ತದೆ. 1990ರ ಮಧ್ಯದ ತರುವಾಯ, ಪಾಶ್ಚಿಮಾತ್ಯ ಹೊರಗುತ್ತಿಗೆ ಕಂಪೆನಿಗಳು ತಮ್ಮ ಎರಡನೆಯ ಹಂತಕ್ಕೆ ಪ್ರವೇಶಿಸಿದವು 'ಆಫ್ ಶೋರಿಂಗ್' (ಸಾಗರೋತ್ತರ), ಕೆಲಸ ಪ್ರಕ್ರಿಯೆಗಳಲ್ಲಿನ ಗಡಿಯಾಚೆಗಿನ ಗಮನಾರ್ಹ ಬೆಳವಣಿಗೆ ಜಾಗತಿಕ ದಕ್ಷಿಣದಲ್ಲಿರುವ ಅಗ್ಗದ ಕಾರ್ಮಿಕ ಸ್ಥಳಗಳಿಗೆ ವರ್ಗಾವಣೆಗೊಳ್ಳುತ್ತಿದೆ (ಉದಾಹರಣೆಗೆ – ಭಾರತ, ಫಿಲಿಪ್ಪೀನ್ಸ್). ಉದ್ಯೋಗ ಸ್ವೀಕರಿಸಿದ ದೇಶಗಳಲ್ಲಿನ ಹಲವಾರು ನಿಯಮಗಳು / ಅಂಶಗಳು ಉತ್ಪಾದನೆಯ ವ್ಯವಸ್ಥೆಗಳ ಇಂತಹ ಬೃಹತ್ತಗಡಿಯಾಚೆಗಿನ ವಿಸ್ತರಣೆಯನ್ನು ಸುಲಭಗೊಳಿಸಿದೆ. ಅಂತೆಯೇ, 1990 ರ ಮಧ್ಯದಿಂದ, ಭಾರತದ ಹೊಸ ಪೀಳಿಗೆಯ ಉದ್ಯೋಗಗಳಲ್ಲಿ ಗುರುತಿಸಬಲ್ಲ ಏರಿಕೆ ಕಂಡುಬಂದಿದೆ, ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಒದಗಿಸಿದ ಸೇವೆಗಳು / ವ್ಯಾಪಾರ ಪ್ರಕ್ರಿಯೆಯ ಹೊರಗುತ್ತಿಗೆ (ಐಟಿ–ಐಟಿಇಎಸ್ / ಬಿಪಿಓ) ವಲಯದಲ್ಲಿ. ಪ್ರಸ್ತುತವಾಗಿ, ಭಾರತ ಜಾಗತಿಕ ಹೊರಗುತ್ತಿಗೆ ಉದ್ಯಮದಲ್ಲಿ ಪ್ರಮುಖ ಪಾತ್ರದಾರಿಯಾಗಿದೆ ಮತ್ತು ಐಟಿ–ಐಟಿಇಎಸ್/ಬಿಪಿಓ ಭಾರತದ ಆರ್ಥಿಕತೆಯಲ್ಲಿ ವೇಗವಾಗಿ ಬೆಳೆಯುತ್ತಿರುವ ವಲಯಗಳಲ್ಲಿ ಒಂದಾಗಿದೆ.ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್‌ವೇರ್ ಅಂಡ್ ಸರ್ವಿಸಸ್ ಕಂಪನೀಸ್ (ನ್ಯಾಸ್ಕಾಂ) ನ ಅಂದಾಜಿನ ಪ್ರಕಾರ, ಭಾರತದಲ್ಲಿನ ಮಾಹಿತಿ ತಂತ್ರಜ್ಞಾನದ ಮತ್ತು ವ್ಯಾಪಾರ ಪ್ರಕ್ರಿಯೆಯ ಹೊರಗುತ್ತಿಗೆಯ (ಬಿಪಿಓ) ಅತ್ಯಂತ ಪ್ರಮುಖ ವ್ಯಾಪಾರದಲ್ಲಿನ ಜಿಡಿಪಿ ವಲಯದ ಪಾಲು 1998 ರಲ್ಲಿ 1.2% ನಿಂದ 2012 ರಲ್ಲಿ ಸುಮಾರು 7.5% ಗೆ ಹೆಚ್ಚಿದೆ.2013–14 ರ ಆರ್ಥಿಕ ಸಮೀಕ್ಷೆ ವರದಿ ತಿಳಿಸಿರುವಂತೆ, 2012 ರ 52% ಗೆ ಹೋಲಿಸಿದರೆ, 2013 ರಲ್ಲಿ ಭಾರತ 55% ಗಿಂತ ಹೆಚ್ಚು ಒಟ್ಟು ಜಾಗತಿಕ ಸೋರ್ಸಿಂಗ್ ಮಾರುಕಟ್ಟೆ ಹೊಂದಲು ಕಾರಣವಾಯಿತು (ಇಂಜಿನಿಯರಿಂಗ್ ಸೇವೆಗಳು ಮತ್ತು ಆರ್ ಅಂಡ್ ಡಿ ಹೊರತುಪಡಿಸಿ). ಸಮೀಕ್ಷೆಯ ಪ್ರಕಾರ 2013–14 ರ ಅವಧಿಯಲ್ಲಿ, ವ್ಯವಹಾರ ಪ್ರಕ್ರಿಯೆ ನಿರ್ವಹಣ (ಬಿಪಿಎಂ) ವಲಯ (ಹಾರ್ಡ್‌ವೇರ್ ಹೊರತುಪಡಿಸಿ) 10.3% ರಷ್ಟು ಬೆಳೆದು 105 ಶತಕೋಟಿ ಡಾಲರ್‌ಗೆ ಹೆಚ್ಚಿತು. ಮಾಹಿತಿ ತಂತ್ರಜ್ಞಾನ ಕುರಿತ ನೀತಿ ಈ ಉದ್ಯಮದ ಆದಾಯವನ್ನು ಗಮನಿಸಿದಾಗ 2011–12 ರ 100 ಬಿಲಿಯನ್ ಡಾಲರ್‌ನಿಂದ 2020 ರ ಹೊತ್ತಿಗೆ 300 ಬಿಲಿಯನ್ ಡಾಲರ್‌ಗೆ ಮತ್ತು ರಫ್ತನ್ನು 2011–12 ರ 69 ಬಿಲಿಯನ್ ಡಾಲರ್‌ನಿಂದ 2020 ರ ಹೊತ್ತಿಗೆ 200 ಬಿಲಿಯನ್ ಡಾಲರ್‌ಗೆ ಹೆಚ್ಚಿಸುವ ಗುರಿ ಹೊಂದಿದೆ. ಈ ಕ್ಷೇತ್ರದ ಸಾಧನೆ ಉದ್ಯೋಗ ನೀಡುವಲ್ಲೂ ಕೂಡ ಸಾಕಷ್ಟು ಪ್ರಭಾವಶಾಲಿಯಾಗಿದೆ. 2013–14 ರಲ್ಲಿ ಸುಮಾರು 3.1 ಮಿಲಿಯನ್ ಕೆಲಸಗಾರರಿಗೆ ನೇರ ಉದ್ಯೋಗದ ಅವಕಾಶವನ್ನು ಹೊರತುಪಡಿಸಿ ಪರೋಕ್ಷವಾಗಿ ಇನ್ನೂ 10 ಮಿಲಿಯನ್ ಕೆಲಸಗಾರರನ್ನು ನೇಮಿಸಲಾಗಿದೆ. ಭಾರತದಲ್ಲಿನ ಐಟಿ–ಐಟಿಇಎಸ್ ಬಿಪಿಓ ಕ್ಷೇತ್ರದ ಬೆಳವಣಿಗೆಯನ್ನು ವಿಶಾಲವಾಗಿ ಎರಡು ಹಂತಗಳಲ್ಲಿ ವಿಂಗಡಿಸಬಹುದು. ಮೊದಲ ಹಂತದಲ್ಲಿ (ಸುಮಾರು 1990 ರ ಮಧ್ಯದಿಂದ 2005 ರ ವರೆಗೆ), ಉದ್ಯೋಗ ಮುಖ್ಯವಾಗಿ ಅಂತಾರಾಷ್ಟ್ರೀಯ ವಿಭಾಗದ ಕ್ಷೇತ್ರದಲ್ಲಿ ರಚಿತವಾಗಿದೆ. ಈ ಹಂತದ ಅವಧಿಯಲ್ಲಿ, ನೌಕರರು ಪ್ರಧಾನವಾಗಿ ಅಂತಾರಾಷ್ಟ್ರೀಯ ಹೊರಗುತ್ತಿಗೆ ವ್ಯಾಪಾರ



ಪ್ರಕ್ರಿಯೆಗಳಲ್ಲಿ ತೊಡಗಿದ್ದರು. ಈ ಹಂತದ ನಂತರ ಇತ್ತೀಚಿನ ವರ್ಷಗಳಲ್ಲಿ (2005 ರ ನಂತರದಿಂದ), ದೇಶೀಯ ಆರ್ಥಿಕತೆಯೊಳಗೆ ಐಟಿ–ಐಟಿಇಎಸ್–ಬಿಪಿಓ ಉದ್ಯೋಗದ ವಿಸ್ತರಣೆ ಸ್ಥಿರವಾಗಿದೆ. 2009 ರ ಒಳಗೆ ದೇಶೀಯ ವಲಯದಲ್ಲಿ ರಚಿತವಾದ ಉದ್ಯೋಗ ಸುಮಾರು 4,50,000 ಆಗಿತ್ತು ಮತ್ತು ಒಟ್ಟಾರೆ ಬೆಳವಣಿಗೆ ಪ್ರವೃತ್ತಿಗಳು ಸೂಚಿಸುವಂತೆ ದೇಶೀಯ ಉದ್ಯೋಗ ಅವಕಾಶಗಳು ಸ್ಥಿರವಾಗಿ ಏರಿವೆ. ನ್ಯಾಸ್ಕಾಂನ ಅಂದಾಜಿನ ಪ್ರಕಾರ, ದೇಶೀಯ ಐಟಿ–ಬಿಪಿಓ ಮಾರುಕಟ್ಟೆ 2012 ರಲ್ಲಿ 20.7% ರಷ್ಟು ಪರಿಣಾಮಕಾರಿ ಪ್ರಮಾಣದಲ್ಲಿ ಏರುತಲಿತ್ತು.

### ಕಾಲ್ ಸೆಂಟರ್

ಭಾರತದ ಐಟಿ–ಐಟಿಇಎಸ್/ ಬಿಪಿಓ ವಲಯಗಳ ಅತ್ಯಂತ ಪ್ರಮುಖವಾದ ಮತ್ತು ಗೋಚರ ವಿಭಾಗವೆಂದರೆ ಕಾಲ್ ಸೆಂಟರ್‌ಗಳು, ಆದರೂ ಕ್ಷೇತ್ರ ಬೇರೆ ಕೃತಿಗಳು/ ಉದ್ಯೋಗಗಳನ್ನು ಒಳಗೊಂಡಿದೆ ಉದಾಹರಣೆಗೆ: ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅಭಿವೃದ್ಧಿ, ವೈದ್ಯಕೀಯ ಪ್ರತಿಲೇಖನ, ಪದ ಸಂಸ್ಕರಣೆ ಮತ್ತು ಡೆಸ್ಕ್ಟಾಪ್ ಮುದ್ರಣ, ಕಾನೂನು ಮತ್ತು ಹಣಕಾಸು ಪ್ರಕ್ರಿಯೆ ಹೊರಗುತ್ತಿಗೆ: ಬ್ಯಾಕ್ ಆಫೀಸ್ ಕಾರ್ಯಾಚರಣೆಗಳು, ವಿನ್ಯಾಸ ಮತ್ತು ಗ್ರಾಫಿಕ್ಸ್ ಅಭಿವೃದ್ಧಿ ಮತ್ತು ಮುಂತಾದವು. ಕಾಲ್ ಸೆಂಟರ್ ಗಳ ಪ್ರಾಮುಖ್ಯತೆ ಜಿಡಿಪಿ ಕಡೆಗೆ ಕೊಡುಗೆ ಕೊಡುವ ಪರಿಭಾಷೆಯಲ್ಲಿ ಮಾತ್ರವಲ್ಲದೆ ಈ ಸಂಸ್ಥೆಗಳು ಒದಗಿಸಿದ ಅಧಿಕ ಪ್ರಮಾಣದ ಉದ್ಯೋಗದ ದೃಷ್ಟಿಯಿಂದಲೂ ಸಹ ಇದೆ.

ಕಾಲ್ ಸೆಂಟರ್‌ಗಳ ಹೆಸರೇ ಸೂಚಿಸುವಂತೆ ಕಾಲ್‌ಸೆಂಟರ್‌ಗಳಲ್ಲಿ ಟೆಲಿಸೇಲ್ಸ್ / ಮಾರುಕಟ್ಟೆ ಮತ್ತು ಕಸ್ಟಮರ್ ಕೇರ್/ ಸಂಪರ್ಕ ಕಾರ್ಯಾಚರಣೆಗಳ ಭಾಗವಾಗಿ ಒಳನಾಡಿನ ಮತ್ತು ಹೊರನಾಡಿನ ಫೋನ್ ಕಾಲ್‌ಗಳ ನಿರ್ವಹಣೆಯನ್ನು ಪ್ರಮುಖ ಕೆಲಸವಾಗಿ ಕೈಗೊಳ್ಳಲಾಗುತ್ತದೆ.

ಇದರ ಹೊರತಾಗಿ, ಕೆಲವು ಕಾಲ್‌ಸೆಂಟರ್‌ಗಳು ಕಚೇರಿ ಸೇವೆಗಳನ್ನು ಹೊರತುಪಡಿಸಿದ (ಉದಾ, ಸಂಬಳ, ಬಿಲ್ಲಿಂಗ್) ಮತ್ತು ಇತರ ಗ್ರಾಹಕ ಬೆಂಬಲ (ಉದಾ, ಡಾಟಾ ಸಂಕಲನ) ಪ್ರಕ್ರಿಯೆಗಳ ಜೊತೆ ಕೂಡ ವ್ಯವಹರಿಸುತ್ತವೆ. ಜಾಗತಿಕವಾಗಿ ಹಾಗೆಯೇ ಭಾರತದಲ್ಲಿ, ಈ ಉದ್ಯಮಗಳಲ್ಲಿರುವ ಬಹುತೇಕ ಕಾಲ್ ಸೆಂಟರ್‌ಗಳು ಮತ್ತು ವರ್ಕ್ ಫೋರ್ಸ್‌ಗಳು ಧ್ವನಿ ಆಧಾರಿತ ಕೆಲಸದಲ್ಲಿ ತೊಡಗಿರುತ್ತವೆ. ಆದಾಗ್ಯೂ, ಎಲ್ಲಾ ಕಾಲ್‌ಸೆಂಟರ್‌ಗಳು ಧ್ವನಿ ಆಧಾರಿತ ಕೆಲಸವನ್ನು ಮಾತ್ರ ಅಗತ್ಯವಾಗಿ ವ್ಯವಹರಿಸುತ್ತವೆ ಎಂದು ಭಾವಿಸುವುದು ತಪ್ಪು. ಧ್ವನಿ ಆಧಾರಿತವಲ್ಲದ ಕಾಲ್‌ಸೆಂಟರ್‌ಗಳು ಕೂಡ ಇವೆ, ಅವು ಮುಖ್ಯವಾಗಿ ಅಂತರ್ಜಾಲ ಆಧಾರಿತ ಪರಸ್ಪರ ಕ್ರಿಯೆಗಳಲ್ಲಿ (ಮತ್ತು / ಅಥವಾ ಇಮೇಲ್ ಸಂವಹನ) ವ್ಯವಹರಿಸುತ್ತವೆ. ಮೂಲ ಗ್ರಾಹಕರ ಸಮೂಹದ ಆಧಾರದ ಮೇಲೆ, ಭಾರತದಲ್ಲಿ ಕಾಲ್ಸೆಂಟರ್‌ಗಳನ್ನೂ ಎರಡಾಗಿ ವಿಭಾಗಿಸಬಹುದು; ನಿರ್ಬಂಧಿತ ಮತ್ತು ನಿರ್ಬಂಧಿತವಲ್ಲದ (ಅಥವಾ ತೃತೀಯ ವ್ಯಕ್ತಿ) ಕಾಲ್ಸೆಂಟರ್‌ಗಳು. ಬಂಧಿತ ಕೇಂದ್ರಗಳು ಒಬ್ಬಗ್ರಾಹಕನ ಕೆಲಸದ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಪೂರೈಸಿದರೆ, ನಂತರದ ಉದ್ಯಮಗಳ ಗುಂಪು ಅನೇಕ ಗ್ರಾಹಕರನ್ನು ಪೂರೈಸುತ್ತವೆ. ಭಾರತದಲ್ಲಿ, ಎಲ್ಲಾ ಪ್ರವರ್ತಕ ಕಾಲ್ಸೆಂಟರ್‌ಗಳು ಬಂಧಿತ ಪ್ರಕೃತಿಯಲ್ಲಿದ್ದವು, ಪ್ರಸ್ತುತ ಈ ಬಹುತೇಕ ಸಂಸ್ಥೆಗಳು ತೃತೀಯ ಕಾರ್ಯಾಚರಣೆಗಳಿಂದಾಗಿ ನಡೆಯುತ್ತಿವೆ. ಕೆಲಸ ಮತ್ತು ಕೆಲಸದ ತಂಡಗಳು ಸಾಮಾನ್ಯವಾಗಿ ಬಹುರೂಪದ ಕಾಲ್ಸೆಂಟರ್‌ಗಳು ಏಕರೂಪದ ಅಸ್ತಿತ್ವಗಳಲ್ಲ ಎನ್ನುವುದೂ ಸಹ ಗಮನಿಸುವುದು ಮುಖ್ಯವಾಗಿದೆ. ಕಾಲ್ಸೆಂಟರ್‌ಗಳ ನಡುವೆ ಸಾಕಷ್ಟು ವ್ಯತ್ಯಾಸಗಳು ಈ ಪರಿಭಾಷೆಯಲ್ಲಿ ಉಂಟಾಗುತ್ತವೆ. ಉದ್ಯಮದ ಆಕಾರ, ಪ್ರಕೃತಿ ಮತ್ತು ಪ್ರಕ್ರಿಯೆಗಳು ಒಳಗೊಂಡಿರುವ, ಕೆಲಸದ ಕಾಲಮಾನ, ಪರಿಹಾರ ಪ್ಯಾಕೇಜ್ಗಳು, ದೈಹಿಕ ಕೆಲಸಪರಿಸ್ಥಿತಿಗಳು, ಗ್ರಾಹಕ ಸಮೂಹ, ಗ್ರಾಹಕರ ಮತ್ತು ಕಾರ್ಮಿಕರ ಸಾಮಾಜಿಕ–ಆರ್ಥಿಕ ಪರಿಸ್ಥಿತಿ ಮೊದಲಾದ ಅಂಶಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

### ಎರಡು ವಿಭಾಗಗಳು : ಅಂತಾರಾಷ್ಟ್ರೀಯ ಮತ್ತು ದೇಶೀಯ ಕಾಲ್‌ಸೆಂಟರ್‌ಗಳು

ಒಟ್ಟಾರೆ ಐಟಿ–ಐಟಿಇಎಸ್ / ಬಿಪಿಓ ಕ್ಷೇತ್ರದ ವಲಯದಲ್ಲಿ, ಕಾಲ್ ಸೆಂಟರ್ ಗಳ ಪ್ರವೇಶ ಮತ್ತು ವಿಸ್ತರಣೆ ಎರಡು ಹಂತಗಳಲ್ಲಿ ನಡೆಯಿತು. 1990 ರ ಮಧ್ಯದಿಂದ ಪ್ರಾರಂಭವಾದ ಮೊದಲ ಹಂತ, ಪ್ರಧಾನವಾಗಿ 'ಅಂತಾರಾಷ್ಟ್ರೀಯ ಕಾಲ್‌ಸೆಂಟರ್‌ಗಳ' ಆಗಮನ ಮತ್ತು ವಿಸ್ತರಣೆಯಿಂದ ನಿರೂಪಿತಗೊಂಡಿದೆ. ಈ ಹಂತದ ಅವಧಿಯಲ್ಲಿ, ಭಾರತದಲ್ಲಿನ ಬಹುತೇಕ ಎಲ್ಲಾ ಕಾಲ್‌ಸೆಂಟರ್‌ನ ಚಟುವಟಿಕೆಗಳು ಅಂತಾರಾಷ್ಟ್ರೀಯ ಹೊರಗುತ್ತಿಗೆ ಸೇವಾ ವಲಯ ಕೆಲಸದ ಭಾಗವಾಗಿದ್ದವು, ಅಲ್ಲಿ ಪ್ರಮುಖವಾಗಿ ಇಂಗ್ಲೀಷ್ ಸಂವಹನದ ಮಾಧ್ಯಮವಾಗಿತ್ತು (ಧ್ವನಿ ಆಧಾರಿತ ಅಥವಾ ಧ್ವನಿ ಆಧಾರಿತವಲ್ಲದ ಯಾವುದೇ ಆಗಿರಲಿ). ಆದರೆ ನಂತರದ ಮತ್ತು ಪ್ರಸ್ತುತ ಹಂತದಲ್ಲಿ, ಸುಮಾರು 21 ನೇ ಶತಮಾನದ ಮೊದಲ ದಶಕದ ಮಧ್ಯದಲ್ಲಿ ಪ್ರಾರಂಭವಾದ, ದೇಶೀಯ ಕಾಲ್‌ಸೆಂಟರ್‌ಗಳಲ್ಲಿ ಒಂದು ಗೋಚರ ಬೆಳವಣಿಗೆ ಮತ್ತು ವಿಸ್ತರಣೆ ಕಂಡುಬಂದಿದೆ, ಅಲ್ಲಿ ನೌಕರರು ಪ್ರಧಾನವಾಗಿ ದೇಶದೊಳಗಿನ ಗ್ರಾಹಕರ ಅಗತ್ಯ ಪೂರೈಸುತ್ತಾರೆ. ಈ ಕೇಂದ್ರಗಳಲ್ಲಿನ ಸಂವಹನ ಮಾಧ್ಯಮ ಸ್ಥಳೀಯ ಗ್ರಾಹಕರ ಅಗತ್ಯಗಳ ಪ್ರಕಾರ ಬದಲಾಗುತ್ತದೆ. ಅಂತೆಯೇ, ಇಂಗ್ಲೀಷ್, ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳನ್ನು ವಿವಿಧ ಹಂತಗಳು ಮತ್ತು ಸಂಯೋಜನೆಗಳಲ್ಲಿ ಬಳಸಲಾಗುತ್ತದೆ.

ಅಂತಾರಾಷ್ಟ್ರೀಯ ಮತ್ತು ದೇಶೀಯ ಕಾಲ್ಸೆಂಟರ್‌ಗಳ ನಡುವಿನ ವ್ಯತ್ಯಾಸ ಕೇವಲ ಸಂಸ್ಥೆಗಳ ಭಾಷಾಶಾಸ್ತ್ರ ವ್ಯತ್ಯಾಸದ ವಿಷಯಗಳಲ್ಲಿ ಮಾತ್ರವಲ್ಲದೆ ಇನ್ನು ಅನೇಕ ಅಂಶಗಳನ್ನು ಒಳಗೊಂಡಿದೆ. ಉದಾಹರಣೆಗೆ, ಪ್ರಾಯೋಗಿಕ ಅಧ್ಯಯನಗಳು ಸೂಚಿಸುವಂತೆ, ಗಡಿಯಿಂದಾಚೆಗಿನ ಕಾಲ್ಸೆಂಟರ್‌ಗಳಲ್ಲಿ ಕೆಲಸಮಾಡುವ ಕಾರ್ಮಿಕರು ತಮ್ಮ ದೇಶೀಯ ವಿಭಾಗದ ಪ್ರತಿರೂಪಗಳಿಗೆ ಹೋಲಿಸಿದರೆ ಶಿಕ್ಷಣವಂತರು ಮತ್ತು ಆರ್ಥಿಕವಂತರಾಗಿರುತ್ತಾರೆ. ಹಿಂದಿನ ವಿಭಾಗದಲ್ಲಿದ್ದ ಹೆಚ್ಚಿನಕಾರ್ಮಿಕರು ನಗರದ ಕೆನೆಪದರ ವರ್ಗಕ್ಕೆ (ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಮೃದ್ಧಿಹೊಂದಿದ ಭಾಗಗಳು) ಸೇರಿರುತ್ತಾರೆ. ಜೊತೆಗೆ ಒಳ್ಳೆಯ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿರುತ್ತಾರೆ. ದೇಶೀಯ ಕಾಲ್ಸೆಂಟರ್‌ಗಳಲ್ಲಿರುವ ಉತ್ತಮ ಪ್ರಮಾಣದ ಕಾರ್ಮಿಕರು ಗ್ರಾಮೀಣ ಪ್ರದೇಶದವರಾಗಿರುತ್ತಾರೆ ಮತ್ತು ನಗರ ಪ್ರದೇಶದವರು ಹೆಚ್ಚಾಗಿ ಆರ್ಥಿಕವಾಗಿ/ ಸಾಮಾಜಿಕವಾಗಿ ದುರ್ಬಲ ಹಿನ್ನೆಲೆಯಿಂದ ಬಂದಿರುತ್ತಾರೆ. ಈ ಕಾರ್ಮಿಕರ ಶೈಕ್ಷಣಿಕ ಮತ್ತು ಕೌಶಲ್ಯದ ಮಟ್ಟಗಳೂ ಸಹ ತುಲನಾತ್ಮಕವಾಗಿ ಕೆಳಮಟ್ಟದ್ದಾಗಿರುತ್ತದೆ. ಅಂತಾರಾಷ್ಟ್ರೀಯ ಮತ್ತು ದೇಶೀಯ ಕಾಲ್ಸೆಂಟರ್‌ಗಳ ನಡುವೆ ನೀಡಿರುವ ಕಾರ್ಯಸ್ವರೂಪ ಮತ್ತು ಕಾರ್ಮಿಕರ ಹಿನ್ನೆಲೆ ವ್ಯತಿರಿಕ್ತವಾಗಿರುವುದರಿಂದ, ಕೆಲಸ ಮತ್ತು ಉದ್ಯೋಗದ ಅಭದ್ರತೆಗಳನ್ನು ಈ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಲು ಸಮಂಜಸವಾಗಿದೆ.



### ಅಂತಾರಾಷ್ಟ್ರೀಯ ಕಾಲ್ಸೆಂಟರ್‌ಗಳಲ್ಲಿ ಉದ್ಯೋಗ ಅಭದ್ರತೆ ಮತ್ತು ಕಾರ್ಮಿಕ

ಭಾರತದಲ್ಲಿನ ಪ್ರವರ್ತಕ ಅಧ್ಯಯನಗಳನ್ನು ಕೈಗೊಂಡ ಸಂಶೋಧಕರು ಕಾಲ್‌ಸೆಂಟರ್‌ಗಳ ಆರಂಭಿಕ ಹಂತದಲ್ಲಿನ ಹರಡುವಿಕೆ ಮತ್ತು ಬೆಳವಣಿಗೆ ವಲಯದಲ್ಲಿ ದುರ್ಬಲ ಉದ್ಯೋಗ ನೆಲೆಯನ್ನು ನೋಡಿದ್ದಾರೆ. ಅಧ್ಯಯನಗಳು ಒದಗಿಸಿದ ವಿವರಣಾತ್ಮಕ ವಿಶ್ಲೇಷಣೆಯು ತುಲನಾತ್ಮಕವಾಗಿ ಹೆಚ್ಚಿನ ಸಂಬಳ ಮತ್ತು ಬೆರಗುಗೊಳಿಸುವ ಕೆಲಸದ ವಾತಾವರಣದ ಹೊರತಾಗಿಯೂ (ದೇಶೀಯ ಆರ್ಥಿಕತೆಯ ಬೇರೆ ವಲಯಗಳಿಗೆ ಹೋಲಿಸಿದರೆ), ಈ ವಲಯವನ್ನು ಉದ್ಯೋಗದ ಕಡಿಮೆ ಭದ್ರತೆಯಿಂದ ಗುರುತಿಸಲಾಗುತ್ತದೆ, ಹೊಂದಿಕೊಳ್ಳುವ ಉದ್ಯೋಗ ಅಭ್ಯಾಸಗಳಿಂದಾಗುವ ಪ್ರತಿಕೂಲಪರಿಣಾಮಗಳು, ಅನುಚಿತವಾದ ಸಾಮಾಜಿಕ ಭದ್ರತಾ ಕ್ರಮಗಳು, ಕಟ್ಟುನಿಟ್ಟಾದ ಕೆಲಸದ ಸಂಸ್ಥೆ ಜೊತೆ ಕಠಿಣ ನಿಯಂತ್ರಣ ಕಾರ್ಯ ವಿಧಾನಗಳು, ವೃತ್ತಿ / ಕೌಶಲ್ಯ ಸುಧಾರಣೆಗೆ ನೀರಸವ್ಯಾಪ್ತಿ, ಒಟ್ಟಾರೆ ಕೆಲಸಗಾರರ ಅನುಪಸ್ಥಿತಿ, ದುರ್ಬಲ ಸಾಮಾಜಿಕ ಸಂವಾದದವ್ಯವಸ್ಥೆ ಮತ್ತು ಇತ್ಯಾದಿಗಳನ್ನು ಸ್ಥಾಪಿಸಿತು.

ಗುತ್ತಿಗೆ/ಯೋಜನೆಯ ಆಧಾರಿತ ಕಾರ್ಯ ಯೋಜನೆಗಳ ಮೇಲೆ

ಅದರ ಅತಿಯಾದ ಅವಲಂಬನೆಯ ಕಾರಣದಿಂದಾಗಿ ಅಂತಾರಾಷ್ಟ್ರೀಯ ವ್ಯಾಪಾರಹೊರಗುತ್ತಿಗೆ (ಬಿಪಿಒ) ವ್ಯವಸ್ಥೆ ಮೂಲಕ ಹುಟ್ಟಿಕೊಂಡ ಈ ವಲಯದಲ್ಲಿನ ಕೆಲಸದ ಅಭದ್ರತೆ ತೀವ್ರವಾಗಿದೆ ಎಂದು ತೋರಿಸಲಾಗಿದೆ. ಉದ್ಯೋಗಸಂದರ್ಭಗಳು ಆರ್ಥಿಕತೆಯಲ್ಲಿ 'ಜನ್ಯ'ವಾಗಿವೆಯಾದರೂ ವಾಸ್ತವವಾಗಿ 'ರಚಿತವಾಗಿದೆ', ಶಾಶ್ವತವಾದ ಕೆಲಸ ಮತ್ತು ಸಂಬಂಧಿಸಿದ ಭದ್ರತೆಗಳು ಸಾಮಾನ್ಯವಾಗಿ ವಿರುದ್ಧವಾದ ರಂಗ ಎಂದು ಪರಿಗಣಿಸಲಾಗಿದೆ. ಇದು ವ್ಯಾಪಕವಾಗಿ ಅರ್ಥವಾಗಿರುವಂತೆ ಜಾಗತಿಕ ಉತ್ಪಾದನೆಸರಪಳಿಗಳ ಬೇಡಿಕೆಯಲ್ಲಿರುವ ಚೌಕಟ್ಟು ಮತ್ತು ಅದರತರ್ಕದ ಆಧಾರ ವಾಗಿರುವ ವೆಚ್ಚ ಕಡಿತಗೊಳಿಸುವಿಕೆ ಈ ವಲಯಗಳ ಸಂಸ್ಥೆಗಳಲ್ಲಿ ತರ್ಕಬದ್ಧಕೆಲಸ ಮತ್ತು ಕಾರ್ಯಪಡೆಯ ಕಡೆಗೆ ಕಠಿಣ ಪ್ರಯತ್ನಗಳನ್ನು, ಕಟ್ಟುನಿಟ್ಟಿನ ವ್ಯವಸ್ಥೆಗಳ ಕೆಲಸ ಸಂಘಟನೆಪಾಲನೆ, ಮೇಲ್ವಿಚಾರಣೆ ಮತ್ತು ನಿಯಂತ್ರಣದ ಮೂಲಕ ಅನುಸರಿಸಲು ಪ್ರೇರೇಪಿಸಿತು. ಹೊಸ ಆರ್ಥಿಕತೆಯಲ್ಲಿ ಟೈಲರಿಸ್ಟಿಕ್ ಸೂತ್ರಗಳ ಮಿತಿಮೀರಿದ ಬಳಕೆ ಪರಿಣಾಮ ಕೆಲಸ ತೀವ್ರಗೊಳಿಸುವಿಕೆಗೆ ಕಾರಣವಾಯಿತು, ಇದರಿಂದ ಎಷ್ಟು ವ್ಯಸನವಾಯಿತೆಂದರೆ ತುಂಬಾ ಕಾರ್ಮಿಕರು 'ಸೈಬರ್ಕೂಲಿಗಳಾದರು'. ಅಲ್ಲದೆ ಅಲೌಕಿಕಗಂಟೆಗಳು, ತಡಸಮಯ ಕೋಷ್ಟಕಗಳು ಮತ್ತು ಅಸಾಮಾನ್ಯ ರೂಢಿಗಳಿಂದ (ಉದಾ, 'ಲೊಚತಿಒನಲ್ ಮಸ್ಕಿನ್ಗ್' – ಅಲ್ಲಿ ನೌಕರರು ಮಿಥ್ಯಾನಾಮಗಳನ್ನು ಹೊಂದಿರುತ್ತಾರೆ) ಮಿತಿಮೀರಿದ ಕ್ಲೈಂಟ್ ಆಧಾರಿತ ವಲಯದಲ್ಲಿ, ನೌಕರರು ಸಾಮಾನ್ಯವಾಗಿ 'ಸಾಮಾಜಿಕವಾಗಿ ಹೊರತುಪಡಿಸಿದ' ಮತ್ತು 'ಅವಹೇಳನಕಾರಿಸಂದರ್ಭಗಳಲ್ಲಿ' ತಮ್ಮನ್ನು ಕಂಡುಕೊಳ್ಳುತ್ತಾರೆ. ನೌಕರರ ಅತ್ಯಂತ ಮೂಲಭೂತ ಹಕ್ಕುಗಳಾದ ಸಂಘಟನೆಯ ಹಕ್ಕುಗಳಿಗೆ ಅವಕಾಶವಿಲ್ಲದಿರುವುದು ಹಾಗೂ ಅದರ ಪರಿಣಾಮವಾದ ಭಾಗವಹಿಸುವಿಕೆ ಹಾಗೂ ಹಕ್ಕುಗಳ ಕುರಿತು ಧ್ವನಿಯೆತ್ತುವ ಅವಕಾಶಹೀನತೆಯೂ ಸಹ ವರದಿಯಾಗಿದೆ. (ರಮೇಶ್ 2007). ಹುಷಾರಾಗಿ ರೂಪಿಸಲ್ಪಟ್ಟ ಸಾಂಸ್ಥಿಕ ಉಪಕ್ರಮಗಳಿಂದ ನೌಕರರನ್ನು ಕೇವಲ "ವ್ಯಕ್ತಿ"ಗಳಾಗಿಯಷ್ಟೇ ಉಳಿಸಿ, ಅವರು ಸಂಸ್ಥೆ ಬಯಸುವ ಒಂದು ಕನಿಷ್ಠ ಮಟ್ಟದಲ್ಲಷ್ಟೇ ಸಂಘಟಿತರಾಗಲು ಸಾಧ್ಯವಾಗುವಂತೆ ಮಾಡಲಾಗುತ್ತದೆ. ಬದಲಾದ ಹೊಸ ಮಾನವಸಂಪನ್ಮೂಲ ನಿರ್ವಹಣೆಯಲ್ಲಿ ಉದ್ಭವಿಸಿದ "ಕಾಳಜಿ ತೆಗೆದುಕೊಳ್ಳುವ, ಜವಾಬ್ದಾರಿಯುತ ವ್ಯವಸ್ಥಾಪಕ" ರೂ ಸಹ ನೌಕರರು ತಮ್ಮ ಸಾಂಪ್ರದಾಯಿಕ ಜತೆಗಾರಿಗೆ / ಕೂಡಿಕೆಯ ಮೂಲಕ ಸಂಘಟಿತಗೊಳ್ಳುವುದನ್ನು ತಪ್ಪಿಸಲು ಮಾಡುವ ಹಂಚಿಕೆಗಳನ್ನು ಗುರುತಿಸಬಹುದಾಗಿದೆ.

### ದೇಶಿ ಕಾಲ್‌ಸೆಂಟರ್‌ಗಳಲ್ಲಿನ ಹೆಚ್ಚಿದ ಅಭದ್ರತೆಗಳು

ಈ ಉದ್ಯೋಗದಲ್ಲಿಯ ಗುಣಮಟ್ಟವು "ಹೊರಗುತ್ತಿಗೆ ಕ್ರಾಂತಿ" ಎಂದು ಕರೆಯಲಾಗುವ ಎರಡನೇ (ಹಾಗೂ ಈಗಿನ) ಘಟ್ಟದಲ್ಲಿ ಇನ್ನಷ್ಟು ಹೆಚ್ಚಿದೆ. ಈಗ ದೇಶಿ ಮಾರುಕಟ್ಟೆಯ ಸಂಸ್ಥೆಗಳಿಗೆ ಈ ಕಾಲ್ ಸೆಂಟರುಗಳು ಕೆಲಸ ಮಾಡುತ್ತಿವೆ. ದೇಶಿ ಕಾಲ್‌ಸೆಂಟರ್‌ಗಳ ಮೇಲಿನ ಪ್ರವರ್ತಕ ಅಧ್ಯಯನದಲ್ಲಿ ಹೇಳಲ್ಪಟ್ಟ ಪ್ರಕಾರ ದೇಶಿ ಕಾಲ್‌ಸೆಂಟರ್‌ಗಳು – ಕೆಲಸದ ರೂಪುರೇಷೆ, ಕೆಲಸದ ಷರತ್ತುಗಳು, ಉದ್ಯೋಗ ಸಂಬಂಧಗಳು, ಕೆಲಸಗಾರರ ಗುಣಮಟ್ಟ – ಇತ್ಯಾದಿಗಳ ಅಧಾರದಲ್ಲಿ ಅಂತಾರಾಷ್ಟ್ರೀಯ ಕಾಲ್‌ಸೆಂಟರ್‌ಗಳಿಗಿಂತಲೂ ತುಂಬ ಭಿನ್ನವಾಗಿವೆ. ಕೆಲಸದ ಅವಧಿ, ಸಮಯ ಹಾಗೂ ಗ್ರಾಹಕರ ಬದಲಾದ ಬೇಡಿಕೆಗಳಲ್ಲಿನ ಬದಲಾವಣೆಯ ಹೊರತಾಗಿಯೂ, ದೇಶಿ ಕಾಲ್‌ಸೆಂಟರ್‌ಗಳಲ್ಲಿ ಹೆಚ್ಚಿನ ಉದ್ಯೋಗ ಅಭದ್ರತೆ ಹಾಗೂ ಒಳ್ಳೆಯದಲ್ಲದ ಉದ್ಯೋಗ ವಾತಾವರಣಗಳು ಕಂಡುಬರುತ್ತವೆ. ಈ ಉದ್ಯೋಗಗಳು ಕನಿಷ್ಠ ಸಂಬಳ, ಸಂತೋಷದಾಯಕವಲ್ಲದ ಕೆಲಸದ ಪರಿಸರ, ಕನಿಷ್ಠ ಮಟ್ಟದ ನೈಪುಣ್ಯದ ಅವಶ್ಯಕತೆ – ಇವುಗಳಿಂದ ಕೂಡಿದ್ದಾಗಿವೆ.

ಅಂತಾರಾಷ್ಟ್ರೀಯ ಮಟ್ಟದ ಕಾಲ್ ಸೆಂಟರ್‌ಗಳಂತೆ ಇವು ಅಲ್ಲ. ಈ ದೇಶಿ ಸಂಸ್ಥೆಗಳು ಕನಿಷ್ಠ ಮಟ್ಟದ ಸೌಲಭ್ಯಗಳು, ಅತ್ಯಂತ ಪುರಾತನ ತಂತ್ರಜ್ಞಾನ, ಅವಶ್ಯಕತೆಗಳ ಪೂರೈಕೆ ಇಲ್ಲದಿರುವ ಕೆಲಸದ ಪರಿಸರಗಳಿಂದ ಕೂಡಿರುತ್ತವೆ. ಇಕ್ಕಟ್ಟಾದ ಕೆಲಸ ಸ್ಥಳ, ಮೇಲುಸ್ತುವಾರಿ ನೋಡಿಕೊಳ್ಳುವ ಮೇಸ್ತ್ರಿಗಳಂತಹವರಿಂದ ಕೂಡಿ ಈ ಸಂಸ್ಥೆಗಳು ಅಸಂಘಟಿತ ವಲಯದ "ಬೆವರುಕಾರ್ಖಾನೆ" ಗಳಂತೆ ಕಾಣುತ್ತವೆ: ಅಂತಲ್ಲಿ ಬಿಗಿಯಾದ ನಿಯಮಾವಳಿಗಳು, ಹೆಚ್ಚಿದ ಕೆಲಸದ ಅವಧಿ,



ಸರ್ವಾಧಿಕಾರಿ ನಿರ್ವಹಣಾ ಮಂಡಳಿಗಳು ಇರುತ್ತವೆ. ಈ ದಟ್ಟ ಹಾಗೂ ಹೆಚ್ಚಿದ ಶೋಷಣೆಗೆ ಇಲ್ಲಿ ಎಲ್ಲೆಯೇ ಇಲ್ಲ, ಕಾರಣ ನೌಕರರ ಸಂಘಟನೆಗಳ ಅನುಪಸ್ಥಿತಿಯೇ ಆಗಿದೆ. ಕೌಶಲ ಹೆಚ್ಚಿಸಿಕೊಳ್ಳುವ ಬೇರೆ ದಾರಿಗಳೇ ಇಲ್ಲದೆ ಈ ನೌಕರರು ಸದಾ "ಕೆಳಮಟ್ಟದ" ಹಾಗೂ ಯಾವತ್ತೂ ಕೆಲಸ ಕಳೆದುಕೊಳ್ಳುವ ಭಯದ ದುಸ್ಥಿತಿಯಲ್ಲಿಯೇ ಬದುಕುತ್ತಿರುತ್ತಾರೆ. ಮತ್ತು, ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಕಲ್ಯಾಣದ ಪ್ರಯತ್ನಗಳೇ ಇಲ್ಲದೇ ಇವು ಸೊರಗುತ್ತವೆ. ಈ ಕುರಿತಾದ ಇನ್ನೊಂದು ಅಧ್ಯಯನ (ಟೇಲರ್ ಮತ್ತು ಇತರರು 2013) ಕೂಡಾ ಈ ಐ.ಟಿ ಮತ್ತು ಐ.ಟಿ ಸಂಬಂಧಿತ ಸೇವೆಗಳು–ಬಿ.ಪಿ.ಓ ಗಳಲ್ಲಿನ ಉದ್ಯೋಗದ ವಾತಾವರಣವು ಅಂತಾರಾಷ್ಟ್ರೀಯ ಕ್ಷೇತ್ರಕ್ಕೆ ಹೋಲಿಸಿದರೆ ಅಷ್ಟೇನೂ ಆಶಾದಾಯಕವಾಗಿಲ್ಲ ಎಂದು ತಿಳಿಸುತ್ತದೆ.

### ಮುಗಿಸುವ ಮುನ್ನ:

ಈ ವಿಶ್ಲೇಷಣೆಯಿಂದ ತಿಳಿದುಬರುವ ರೀತಿಯಲ್ಲಿ ಕಾಲ್ ಸೆಂಟರ್ ಗಳಲ್ಲಿನ ಉದ್ಯೋಗಗಳು – ಅವುಗಳ ಸಾಂಸ್ಥಿಕ ಕಾರ್ಯಕ್ಷೇತ್ರ, ನಿಯಂತ್ರಕಗಳಿಗೆ ಬದ್ಧತೆ, ಸ್ಪಷ್ಟವಾದ ನಿಯಮಗಳು, ಉದ್ಯೋಗದ ವಿಧಿಗಳು – ಇತ್ಯಾದಿಗಳಿಂದ ವ್ಯವಸ್ಥಿತವಾಗಿಯೇ ಕಂಡರೂ ಅವುಗಳಲ್ಲಿನ ಇನ್ನು ಕೆಲವು ಗುಣದೋಷಗಳು ಈ ಕ್ಷೇತ್ರವನ್ನು ಅವ್ಯವಸ್ಥಿತ ಕ್ಷೇತ್ರಗಳನ್ನೇ ಹೆಚ್ಚು ಹೋಲುವಂತೆ ಮಾಡುತ್ತವೆ. ಹೀಗಾಗಿ, ನೀತಿ, ಯೋಜನೆಗಳ ರೂಪುಗೊಳಿಸುವಿಕೆಯ ಸಂದರ್ಭದಲ್ಲಿ ಈ ಉದ್ಯೋಗ–ಅಭದ್ರತೆಯನ್ನು ಗಮನಿಸಿ, ಅವುಗಳನ್ನು ನಿವಾರಿಸುವ ಅವಶ್ಯಕತೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಾಹಿತಿ ಸಂಬಂಧಿತ ಆರ್ಥಿಕತೆಯಲ್ಲಿರುವ ಇತರ ಗುಣಮಟ್ಟರಹಿತ, ವಿಶಿಷ್ಟ ಉದ್ಯೋಗಗಳನ್ನೂ ವಿಶ್ಲೇಷಿಸಿ ಅರ್ಥಮಾಡಿಕೊಳ್ಳುವ ಅಗತ್ಯವನ್ನು ಇದು ಸೂಚಿಸುತ್ತದೆ. ❑

# ಕಾಯಿದೆ ಅನೌಪಚಾರಿಕತೆ; ಒಂದು ವಿಶ್ಲೇಷಣೆ

**ಸುಪ್ರಿಯಾ ರಾವತ್**
**ಕನ್ನಡಕ್ಕೆ : ಟಿ. ಎಸ್. ರಘುನಾಥ್**



**ಅನೌಪಚಾರಿಕತೆಯೆನ್ನುವ ಕಲ್ಪನೆಯನ್ನು ಸ್ವೀಕರಿಸುವಲ್ಲಿರುವ ಸಮಸ್ಯೆಯೆಂದರೆ ಅದು ಎಷ್ಟನ್ನು ತೋರ್ಪಡಿಸಿಕೊಂಡಿದೆಯೋ ಅಷ್ಟನ್ನೇ ಗುಟ್ಟಾಗಿ ಇಟ್ಟುಕೊಂಡಿರುವಂಥದ್ದು. ಅನೌಪಚಾರಿಕ ಚಟುವಟಿಕೆಗಳು ಯೋಚನೆ ಮಾಡಿದಷ್ಟೂ ವೈವಿಧ್ಯವಾಗಿರುವಂಥವು.**

ಕಳೆದ ಹತ್ತು ವರ್ಷಗಳಿಂದ ಅನೌಪಚಾರಿಕ ಆರ್ಥಿಕತೆಯ ಬಗ್ಗೆ ಶೈಕ್ಷಣಿಕ ವಲಯ ಹಾಗೂ ಕಾಯಿದೆ ರೂಪಿಸುವವರಲ್ಲಿ ಆಸಕ್ತಿ ಪುನರುಜ್ಜೀವಿತಗೊಂಡಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಹಾಗೂ ಭಾರತ ಸರ್ಕಾರಗಳು ಅನೌಪಚಾರಿಕತೆಯ ಬಗ್ಗೆ ಆಸಕ್ತಿ ತೋರುವಲ್ಲಿ ಮುಂಚೂಣಿಯಲ್ಲಿವೆ. 1970ಕ್ಕೂ ಮೊದಲೇ ಅನೌಪಚಾರಿಕ ಆರ್ಥಿಕ ಚಟುವಟಿಕೆಯ ಬಗ್ಗೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಪ್ರಾರಂಭದ ಉತ್ಸಾಹ ತೋರಿದ್ದು 2000ದ ಪ್ರಾರಂಭದ ಹೊತ್ತಿಗೆ ಅದು ಹೆಚ್ಚಿನ ಜಾಗರೂಕ ಪ್ರಸ್ತಾಪದ ತಿರುವು ಪಡೆದುಕೊಂಡಿತ್ತು (ಐಎಲ್‌ಒ 2002), ಆ ಹೊತ್ತಿಗೆ ಭಾರತ ಸರ್ಕಾರವು ತೀರಾ ತಡವಾಗಿ ಅಂದರೆ 2004 ರಲ್ಲಿ ಅಸಂಘಟಿತ ಘಟಕಕ್ಕೆ ಸಂಬಂಧಿಸಿದಂತೆ ಉದ್ದಿಮೆಗಳ ರಾಷ್ಟ್ರೀಯ ಆಯೋಗವನ್ನು ರಚಿಸುವ ಘಟ್ಟ ತಲುಪಿತು. ಪ್ರಾರಂಭ ತಡವಾಯಿತಾದರೂ, ಭಾರತೀಯ ಪಾರ್ಲಿಮೆಂಟ್ ಅನೌಪಚಾರಿಕ ಕಾರ್ಮಿಕರನ್ನೊಳಗೊಂಡ ದೇಶದ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಗೆ ಸಂಬಂಧಿಸಿದಂತೆ ಸಾಮಾಜಿಕ ಸುರಕ್ಷತಾ ಕಾನೂನನ್ನು ಜಾರಿಗೊಳಿಸಿತು. 'ಅಸಂಘಟಿತ ಕಾರ್ಮಿಕ ವರ್ಗದ ಸಾಮಾಜಿಕ ಸುರಕ್ಷತಾ ಕಾನೂನು 2008' ಎಂಬುದು ಇದಾಗಿದ್ದು, ದೇಶದಲ್ಲಿನ ಅನೌಪಚಾರಿಕ ಕೆಲಸಗಾರ ಬದುಕಿನ ಸ್ಥಿತಿ–ಗತಿಗಳು ಉತ್ತಮಗೊಳಿಸುವ ಗುರಿಹೊಂದಿವೆ. ಇದೇ ಸಂದರ್ಭದಲ್ಲಿ ಐಎಲ್‌ಓ ಅನೌಪಚಾರಿಕತೆಯನ್ನು ಔಪಚಾರಿಕವಾಗಿ ಪರಿವರ್ತನೆಗೊಳಿಸುವ ಕಾಯಿದೆಯೊಂದನ್ನು ರೂಢಿಸುವ ಪ್ರಕ್ರಿಯೆಯಲ್ಲಿದೆ. ಜಾಗತಿಕವಾಗಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರ ಹಿತಾಸಕ್ತಿಗೆ ಒತ್ತು ನೀಡಿದ್ದು (ಪ್ರಧಾನವಾಗಿ ದಕ್ಷಿಣ ಜಗತ್ತನ್ನು ಗಮನಿಸಿ) ಭಾರತದ ಸಂದರ್ಭದಲ್ಲಿ, ಶೇಕಡಾ 90ಕ್ಕಿಂತ ಹೆಚ್ಚಿನ ಕಾರ್ಯಪಡೆಯಿದ್ದು ಬಹುಮುಖ್ಯ ಅಂಶವೆಂದರೆ, ಅನೌಪಚಾರಿಕತೆಯನ್ನು ಔಪಚಾರಿಕತೆಗೆ ಪರಿವರ್ತಿಸುವ ಯತ್ನದಲ್ಲಿ ಯಾರೊಬ್ಬರ ಸಂದರ್ಭ ಹಾಗೂ ಗೊತ್ತುಗುರಿಗಳ ಬಗ್ಗೆ ಎಚ್ಚರದಿಂದಿರಬೇಕಾಗುತ್ತದೆ.

### 'ಔಪಚಾರಿಕತೆ' ಎಂಬ ಕಲ್ಪನೆ ಹಾಗೂ ಅನೌಪಚಾರಿಕತೆ

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಅನೌಪಚಾರಿಕತೆಯೆಂಬ ಘಟಕಕ್ಕೆ ಸಂಬಂಧಿಸಿದ ವಿಷಯವನ್ನು ಬ್ರಿಟಿಷ್ ಮಾನವ ಶಾಸ್ತ್ರಜ್ಞನಾಗಿದ್ದ ಕೀತ್ ಹಾರ್ಟ್‌ನ ಘಾನಾ ದೇಶದ ಅಧ್ಯಯನದಿಂದ ಬಹುಬೇಗನೆ ಎತ್ತಿಕೊಂಡಿತು. ಯುನೈಟೆಡ್ ಕಿಂಗ್‌ಡಮ್‌ನಿಂದ ಬಂದವನಾಗಿದ್ದು, ಎಲ್ಲಿ ಕೈಗಾರಿಕೆಯು ಅಧಿಕಾರವರ್ಗದವರಿಂದ ನಿಯಂತ್ರಣ ಹಾಗೂ ನಿರ್ವಹಣೆಗೊಳಗಾಗಿತ್ತೋ, ಎಲ್ಲಿ ಕಾಯಿದೆಯ ವಿಷಯಗಳು ಚೆನ್ನಾಗಿ ಅಭಿವೃದ್ಧಿಗೊಂಡಿದ್ದವೋ ಹಾಗೆಯೇ ಒಂದು ಸಾಂಸ್ಥಿಕ ಚೌಕಟ್ಟಿಗೊಳಪಟ್ಟಿದ್ದವೋ ಅಂತಹವನಿಗೆ ಘಾನಾದಲ್ಲಿ ಕೈಗೊಂಡಿದ್ದ ಆರ್ಥಿಕ ಚಟುವಟಿಕೆಯ ವ್ಯಾಪಕತೆಯು ಹೊಸದಾದುದಾಗಿತ್ತು. ಆತ ಬೀದಿ ವ್ಯಾಪಾರಿಗಳು, ಜೈವಿಕ ಶ್ರಮಜೀವಿಗಳು ಹಾಗೂ ತುಂಡು ಕೆಲಸಗಾರರಾಗಿದ್ದ ಘಾನಾದ ನಗರ ಕಾರ್ಮಿಕರ ಚಟುವಟಿಕೆಗಳನ್ನು 'ಅನೌಪಚಾರಿಕ' ಎಂದು ಹೆಸರಿಸಿದಾಗ, ಆತನ ಗಮನದಲ್ಲಿ ಇಂಗ್ಲೆಂಡಿನಲ್ಲಿದ್ದ ಕೈಗಾರಿಕೆಗಳು

ಸಂಶೋಧಕಿ, ಅಂತರ ವಿಶ್ವವಿದ್ಯಾಲಯ ಸಂಶೋಧನಾ ಕೇಂದ್ರ, ಲ್ಯಾವಲ್ ಯೂನಿವರ್ಸಿಟಿ, ಕೆನಡಾ. Email : supriyonujs@gmail.com

ಹಾಗೂ ಇತರೆ ಬಂಡವಾಳಷಾಹಿ ಕೈಗಾರಿಕಾ ದೇಶಗಳು ಪರಾಮರ್ಶೆರ್ಯ ಚೌಕಟ್ಟಿನಲ್ಲಿದ್ದವು. ಆತನ ಪ್ರಕಾರ, ಘಾನಾ ದೇಶದ ಆರ್ಥಿಕ ಚಟುವಟಿಕೆಗಳು ಇಂಗ್ಲೆಂಡ್‌ನ ಕೈಗಾರಿಕೆಗಳ ಮಾದರಿಗೆ ಹೊಂದಿಕೊಳ್ಳುವಂಥ ವಿಶಿಷ್ಟ ಸ್ವರೂಪ ಹೊಂದಿಲ್ಲದ ಕಾರಣದಿಂದಾಗಿ, ಆರ್ಥಿಕ ಚಟುವಟಿಕೆಗಳು ಅನೌಪಚಾರಿಕವಾಗಿದ್ದವು (ಹಾರ್ಟ್, 2006 : 22–23)

ಹೀಗಾಗಿ, ಅನೌಪಚಾರಿಕವೆಂಬ ಕಲ್ಪನೆಯ ನಿರ್ದಿಷ್ಟ ಅನುಷ್ಠಾನವೆಂಬ ಪರಿಕಲ್ಪನೆಯ ಅದೂ ಒಂದು ವಿಶಿಷ್ಟ ಸ್ವರೂಪವೆಂಬ ಅರ್ಥವುಳ್ಳದ್ದರಿಂದ ಹುಟ್ಟಿಕೊಂಡಿದ್ದಾಗಿದೆ. ಅಂತಹ ವಿಶಿಷ್ಟ ಸ್ವರೂಪವುಳ್ಳದ್ದರ ಆಧಾರದಿಂದಲೇ ಅನೌಪಚಾರಿಕವೆಂಬ ಕಲ್ಪನೆಯು ಅಭಿವೃದ್ಧಿಗೊಂಡಿದ್ದು ಅದು ಕೇವಲ ಒಂದು ನಿರ್ದಿಷ್ಟತೆಯುಳ್ಳದ್ದು ಅಥವಾ ಒಂದು ಮಾದರಿಯೇ ಆಗಿದೆ. ಆರ್ಥಿಕ ಏರ್ಪಾಟು ಸ್ಪಷ್ಟವಾಗಿ ಗುರುತಿಸುವಂಥ ಉದ್ಯೋಗದಾತ – ಉದ್ಯೋಗಿಯ ಸಂಬಂಧದ ಆಧಾರ ಹೊಂದಿದ್ದು ಆದು ನಿರ್ದಿಷ್ಟವಾದ ಕೆಲಸ ಮಾಡುವ ಸ್ಥಳದ ಮೇಲೆ ಆಧಾರಗೊಂಡಿರುತ್ತದೆ ಮಾತ್ರವಲ್ಲ ನಿರ್ಧಾರಯುತ ಹಕ್ಕು ಬಾಧ್ಯತೆಗಳಿಂದ ನಿಯಂತ್ರಿತವಾಗಿರುತ್ತದೆ ಹಾಗೂ ವಿಶಿಷ್ಟ ಸಮಾಜವೊಂದರ ಸಂದರ್ಭವನ್ನೊಳಗೊಂಡಂತೆ, ವಿಶಿಷ್ಟ ಕಾಲಮಾನದಲ್ಲಿ ಅಭಿವೃದ್ಧಿಗೊಂಡಿದ್ದು ಸರ್ಕಾರವೊಂದರ ಮೇಲುಸ್ತುವಾರಿಯ ಮಾದರಿಯಾಗಿರುತ್ತದೆ. ಗಣನೀಯ ಸಂಖ್ಯೆಯ ಆರ್ಥಿಕ ಚಟುವಟಿಕೆಗಳು ಆಗ, ಈಗಲೂ ಸಹ ಆ ಮಾದರಿಯ ಇಂದಿನ ಬಹುಸಂಖ್ಯಾತ ವಿಶ್ವದ ಕಾರ್ಮಿಕರ ಅನುಭವಗಳನ್ನು ಅನುರಣಗೊಳಿಸುತ್ತಿಲ್ಲ ಹಾಗೂ ಅನುಕರಣಗೊಳಿಸುತ್ತಿರಲಿಲ್ಲ. (ಐಎಲ್‌ಒ 2013) ಹಾಗಾದಲ್ಲಿ ನಾವು ಅನೌಪಚಾರಿಕವೆಂಬ ಕಲ್ಪನೆಯು ಯಾವುದೇ ಪರಿಕಲ್ಪನೆಗೆ ಸಂಬಂಧಿಸಿದ್ದನ್ನು ಅದರ ಪರಿಣಾಮದಿಂದಾಗುವ ಕಾಯಿದೆಯ ಉದ್ದೇಶವನ್ನು ನೆರವೇರಿಸುವುದಿಲ್ಲವೆಂಬ ತೀರ್ಮಾನಕ್ಕೆ ಬರಬೇಕೆ?

ಪರಿಕಲ್ಪನೆಯಲ್ಲಿ ಪೂರ್ವಗ್ರಹ ಪೀಡಿತ ಪಕ್ಷಪಾತ ಹಾಗೂ ನೇತ್ಯಾತ್ಮಕತೆಗಳ ತುಂಬಿಕೊಂಡಿದ್ದಾಗ್ಯೂ, ಅನೌಪಚಾರಿಕತೆ ಎಂಬ ಕಲ್ಪನೆಯನ್ನು ಶೈಕ್ಷಣಿಕ ಹಾಗೂ ಕಾಯಿದೆಯ ವಲಯಗಳಿಂದ ಕಿತ್ತು ಹಾಕುವುದು ದಡ್ಡತನವಾಗುತ್ತದೆ. ಅನೌಪಚಾರಿಕತೆಯೆಂಬ ಕಲ್ಪನೆಯು ಪ್ರಯೋಜನಕಾರಿಯಾದ ಉದ್ದೇಶಗಳನ್ನು ಈಡೇರಿಸುತ್ತದೆ. ಬಹುಮುಖ್ಯವೆನ್ನುವ ಉಪಯುಕ್ತ ಉದ್ದೇಶಗಳಲ್ಲಿ ಒಂದು ಅದರ ಕಲ್ಪನೆಯೇ ನೇತ್ಯಾತ್ಮಕತೆಗೆ ಸಂಬಂಧಿಸಿದ್ದಾಗಿದೆ. ಭಾಷಿಕವಾಗಿ ಯಾವುದೇ ಒಂದನ್ನು ಅನೌಪಚಾರಿಕ ಅಥವಾ ರೂಢಿಯಲ್ಲಿದ್ದು ಎಂದು ನಿರ್ಧರಿಸಿದಾಗಲೇ ಅದಕ್ಕೆ ಚಲನಶಕ್ತಿಯ ಅಸಾಧರಣ ಶಕ್ತಿ ಬಂದುಬಿಡುತ್ತದೆ. ಭಾರತದಲ್ಲಿರುವ ಕಾರ್ಮಿಕ ಜನಸಂಖ್ಯೆಯ ಶೇಕಡಾ 90 ರಷ್ಟು ಅನೌಪಚಾರಿಕವಾದದ್ದೆಂಬ ಹೇಳಿಕೆಯೇ ಒಂದು ಎಚ್ಚರದ ಗಂಟೆಯನ್ನು ಧ್ವನಿಸುತ್ತದೆ. ಅಂತಹ ಹೇಳಿಕೆಯೇ ತಕ್ಷಣದ ಸ್ಪಂದನಕ್ಕೆ ಕರೆನೀಡುತ್ತದೆ. ಅನೌಪಚಾರಿಕತೆಯೆಂಬ ಪರಿಕಲ್ಪನೆಯು ಈ ವಿಷಯಕ್ಕೆ ಸಂಬಂಧಿಸಿದಂತೆ ಅತ್ಯಂತ ಪ್ರಯೋಜನಕಾರಿ. ಎರಡನೆಯದಾಗಿ, ಅನೌಪಚಾರಿಕವೆಂಬ ಕಲ್ಪನೆಯೇ ವಿಶೇಷ ಸವಲತ್ತುಳ್ಳವರ ಹಾಗೂ ಅವಲಂಬನೆ ಮತ್ತು ಅಪಾಯಕರ ಸ್ಥಿತಿಯಲ್ಲಿರುವ ಕೆಲಸಗಾರರ ಮಧ್ಯೆ ಇರುವ ಬಿರುಕನ್ನು ಸೂಚಿಸುವಂಥಾದ್ದಾಗಿದೆ. ಮೂರನೆಯದಾಗಿ ಈ ಪರಿಕಲ್ಪನೆಯೇ ಒಂದು ಆದರ್ಶಪ್ರಾಯವಾಗಿರುವುದನ್ನು ತೋರುವಂಥದ್ದಾಗಿದ್ದು – ಅದು ಒಂದು ಸ್ವರೂಪ, ಚೌಕಟ್ಟು ಒಂದು ಧ್ಯೇಯವುಳ್ಳದ್ದಾಗಿದೆ. ನಾಲ್ಕನೆಯದು, ಅದು ಶೈಕ್ಷಣಿಕವಾಗಿ ಮತ್ತು ಅದರ ಕ್ರಿಯಾಶೀಲ ಮನಸ್ಸುಗಳೆರಡನ್ನೊಳಗೊಂಡ ಚಳವಳಿಗೆ ಒಂದು ಅಭಿವ್ಯಕ್ತಿಯನ್ನು ನೀಡುತ್ತದೆ. ಕಡೆಯದಾಗಿ ಅನೌಪಚಾರಿಕತೆಯೆಂಬ ಪರಿಕಲ್ಪನೆಯು ವಿಶಾಲವಾದ ಕಾಯಿದೆಯ ನಡಾವಳಿಗಳನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆ. ಆದಾಗ್ಯೂ, ಕಾಯಿದೆ ರೂಪಿಸುವ ನಿರ್ಣಾಯಕ ಅಂಶಗಳಿರುವ ಅನೌಪಚಾರಿಕತೆಯೆನ್ನುವ ಕಲ್ಪನೆಯನ್ನು ಸ್ವೀಕರಿಸುವಲ್ಲಿರುವ ಸಮಸ್ಯೆಯೆಂದರೆ ಅದು ಎಷ್ಟನ್ನು ತೋರ್ಪಡಿಸಿಕೊಂಡಿದೆಯೋ ಅಷ್ಟನ್ನೇ ಗುಟ್ಟಾಗಿ ಇಟ್ಟುಕೊಂಡಿರುವಂಥದ್ದು. ಅನೌಪಚಾರಿಕ ಚಟುವಟಿಕೆಗಳು ಯೋಚನೆ ಮಾಡಿದಷ್ಟೂ ವೈವಿಧ್ಯವಾಗಿರುವಂಥವು. ವಿಶೇಷವಾಗಿ ಭಾರತದಂಥ ವಿಸ್ತಾರವುಳ್ಳ ದೇಶದಲ್ಲಿ, ಅನೌಪಚಾರಿಕ ಚಟುವಟಿಕೆಗಳು ವಿಭಿನ್ನತೆ ಕೊನೆಯಿಲ್ಲದ್ದಾಗಿದೆ. ಅನೌಪಚಾರಿಕತೆಯ ಪರಿಕಲ್ಪನೆಯ



ಮೂಲಕ ಅನೌಪಚಾರಿಕ ಚಟುವಟಿಕೆಗಳ ವಿಭಿನ್ನತೆಯನ್ನು ಹಿಡಿಯಲು ಹೋದಾಗ ಉಂಟಾಗುವ ಸಮಸ್ಯೆಯೆಂದರೆ, ಔಪಚಾರಿಕತೆಗೆ ಸಂಬಂಧಿಸಿದಂತೆ ತೊಡಗಿಕೊಂಡಿರುವ ವಹಿವಾಟು ಸಂಬಂಧಗಳು ಕೂಡ ನಿಜಕ್ಕೂ ಕ್ಲಿಷ್ಟವಾಗಿರುವುದೇ ಆಗಿದೆ. ಕಾಯಿದೆಯ ಉದ್ದೇಶಕ್ಕೋಸ್ಕರ ಅನೌಪಚಾರಿಕತೆಯ ಮುಸುಕನ್ನು ತೆರೆಯುವುದು ಹಾಗೆಯೇ ಚಟುವಟಿಕೆಗಳ ಬಾಹುಳ್ಯದಲ್ಲಿರುವ ವಿಭಿನ್ನತೆಯನ್ನು ಗುರುತಿಸುವುದು ಅವಶ್ಯವಾಗಿದೆ. ವಿಭಿನ್ನತೆಯನ್ನು ಗುರುತಿಸು ವುದರಿಂದಾಗಿಯೇ ಅನೌಪಚಾರಿಕತೆಯ ಕಲ್ಪನೆಯು ಸೂಕ್ತವಾಗಿ ಹೊಂದಿಕೊಳ್ಳುತ್ತಿಲ್ಲ.

ಅನೌಪಚಾರಿಕತೆಯ ಕಲ್ಪನೆಗೆ ಸಂಬಂಧಿಸಿದ ಎರಡನೆಯ ಸಮಸ್ಯೆಯೆಂದರೆ, ಪರಿಭಾಷೆಯ ಸ್ವರೂಪವನ್ನು ಅರ್ಥೈಸುವುದಾಗಿದೆ. ಅನೌಪಚಾರಿಕತೆ ಎಂಬ ಪರಿಭಾಷೆಯನ್ನು ಉಪಯೋಗಿಸಿದಾಗ ಉಂಟಾಗುವ ಅರ್ಥವೇನು? ಅದೊಂದು ಘಟಕವೇ, ಆರ್ಥಿಕತೆಯೇ ಅಥವಾ ಉದ್ಯೋಗವೇ? ಬಹು ದೀರ್ಘಕಾಲದವರೆಗೂ ಅನೌಪಚಾರಿಕತೆಯ ಬಗ್ಗೆ ಐಎಲ್‌ಒ ಹೊಂದಿದ್ದ ತಿಳಿವಳಿಕೆಯೆಂದರೆ ಅನೌಪಚಾರಿಕ ಉದ್ದಿಮೆಗಳೆಂಬ ಅರ್ಥಹೊಮ್ಮುವ ಘಟಕವೆಂಬ ಪರಿಕಲ್ಪನೆಯಿಂದ ರೂಪಿಸುವುದಾಗಿತ್ತು. ನಂತರದ ವರ್ಷಗಳಲ್ಲಿ, ಐಎಲ್‌ಒ ಅನೌಪಚಾರಿಕತೆ ಆರ್ಥಿಕತೆ ಹಾಗೂ ಅನೌಪಚಾರಿಕ ಉದ್ಯೋಗವೆಂಬ ಅಳತೆಗೋಲನ್ನು ಅಭಿವೃದ್ಧಿಗೊಳಿಸಿತು. ಅನೌಪಚಾರಿಕ ಆರ್ಥಿಕತೆಯ ಕಲ್ಪನೆಯನ್ನು ಔಪಚಾರಿಕ ಆರ್ಥಿಕತೆಯ ಜೊತೆ ಪಕ್ಕದಲ್ಲಿಡುವುದರ ಮೂಲಕ ಆರ್ಥಿಕತೆಯ ಅನೌಪಚಾರಿಕ ಅಂಶಕ್ಕೆ ಸಂಬಂಧಿಸಿದ ಉತ್ಪಾದನೆಯನ್ನು ನಿರ್ಧರಿಸುವ ದೃಷ್ಟಿಯತ್ತ ಹಾಗೆಯೇ ದೇಶವೊಂದರ ಆರ್ಥಿಕ ಅಭಿವೃದ್ಧಿಗೆ ಅದರ ಕೊಡುಗೆಯೇನೆಂಬುದನ್ನು

ಲೆಕ್ಕಾಚಾರ ಹಾಕುವ ದೃಷ್ಟಿಕೋನವೂ ಇತ್ತು. ಅನೌಪಚಾರಿಕ ಉದ್ಯೋಗವೆಂಬುದು ಔಪಚಾರಿಕ ಹಾಗೂ ಅನೌಪಚಾರಿಕ ಘಟಕ ಹಾಗೂ ಆರ್ಥಿಕತೆಯೆರಡರಲ್ಲೂ ಹಾಸುಹೊಕ್ಕಾಗಿ ಸೇರಿಹೋಗಿತ್ತು ಔಪಚಾರಿಕ ಅಥವಾ ಅನೌಪಚಾರಿಕ ಆರ್ಥಿಕತೆಯಲ್ಲಿ ಕಾರ್ಮಿಕರು ಯಾವುದರಲ್ಲೇ ತೊಡಗಿಕೊಳ್ಳಲಿ ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳ ವಿಭಿನ್ನತೆಯ ಬಾಹುಳ್ಯವನ್ನು ಪರಿಕಲ್ಪಿಸಿಕೊಳ್ಳುವ ಉದ್ದೇಶವಿಟ್ಟುಕೊಂಡೇ ಅನೌಪಚಾರಿಕ ಉದ್ಯೋಗವೆಂಬ ವಿಚಾರ ಹುಟ್ಟಿಕೊಂಡಿತು. ಭಾರತದಲ್ಲಿ, ಕಾಯಿದೆಯ ದೃಷ್ಟಿಯಿಂದ ಮಾತನಾಡುವುದಾದಲ್ಲಿ, ನಮ್ಮ ಸಂವಿಧಾನದ ಮೂಲಭೂತ ತತ್ವಗಳಿಗೆ ನಾವು ನಿಜಕ್ಕೂ ಬದ್ಧರಾಗಿರುವುದಾದಲ್ಲಿ ನಾವು ಅನೌಪಚಾರಿಕ ಕಾರ್ಮಿಕರಿಗೆ ಹಾಗೂ ಅವರ ಕೆಲಸ ಮಾಡುವ ಸನ್ನಿವೇಶಗಳಿಗೆ ವಿಶ್ಲೇಷಣಾತ್ಮಕ ಗಮನವೀಯ ಬೇಕಾಗಿದೆ. ಆವರ ಒಟ್ಟಾರೆ ಅಭಿವೃದ್ಧಿಯೆಂದಲ್ಲಿ – ಅದು – ಅವರು ಕೆಲಸ ನಿರ್ವಹಿಸುವ ಸಂದರ್ಭ ಸನ್ನಿವೇಶಗಳು, ಆರೋಗ್ಯ, ಸುರಕ್ಷತೆ, ಶಿಕ್ಷಣ, ಪೌಷ್ಟಿಕತೆ ಹಾಗೂ ಆದಾಯ (ಬೇರೆಯವುಗಳ ಜೊತೆಯಲ್ಲಿ)ಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅನುಕೂಲ ಒದಗಿಸುವಂಥದ್ದನ್ನೇ ಕಾಯಿದೆಯೊಂದು ಪ್ರವೇಶ ಮಾಡಬೇಕಾಗಿದೆ. ಆ ದೃಷ್ಟಿಯಿಂದಲೇ, ಅನೌಪಚಾರಿಕ ಉದ್ಯೋಗದ ಪರಿಕಲ್ಪನೆಯು ಮುಖ್ಯವಾದುದಾಗಿದೆ. ಆದಾಗ್ಯೂ ಆದೇ ಸಂದರ್ಭದಲ್ಲಿಯೇ ಅನೌಪಚಾರಿಕ ಉದ್ಯೋಗವೆಂಬ ವಿಚಾರವು ಕಟ್ಟುಪಾಡಿಗೊಳಪಟ್ಟಿದ್ದಾಗಿದೆ. ಅನೌಪಚಾರಿಕವೆಂಬ ವಿಚಾರವು ಔಪಚಾರಿಕವಲ್ಲವೆನ್ನುವ ವಿಭಿನ್ನ ಆರ್ಥಿಕ ಚಟುವಟಿಕೆಗಳನ್ನು ಸ್ಪಷ್ಟಪಡಿಸುವಂಥದ್ದಾಗಿದ್ದು, ಒತ್ತು ಬೀಳುವುದು ಆರ್ಥಿಕತೆಯೇ ಆಗಿದೆ. ಅಂಥ ತಿಳಿವಳಿಕೆಯು ಅನೌಪಚಾರಿಕವೆಂಬುದು ಕೇವಲ ಆರ್ಥಿಕತೆಯ ಸಮಸ್ಯೆ ಮಾತ್ರವಲ್ಲ ಎಂಬ ಸತ್ವವನ್ನು ಅಸ್ಪಷ್ಟಗೊಳಿಸುತ್ತದೆ. ಅದಕ್ಕಿಂತ ದೊಡ್ಡದಾದ ಸಾಮಾಜಿಕ ಸಮಸ್ಯೆಯಾಗಿದೆ.

### ಅನೌಪಚಾರಿಕತೆ : ಆರ್ಥಿಕತೆಯನ್ನು ಮೀರಿದ ಸಾಮಾಜಿಕ ಸಮಸ್ಯೆ

ಒಂದು ನಿರ್ದಿಷ್ಟ ಸ್ವರೂಪದ ವೈದೃಶ್ಯವೇ ಕಾರಣವಾಗಿ ಅದರ ಆಧಾರದಿಂದ ರೂಪಿತವಾದದ್ದು ಅನೌಪಚಾರಿಕತೆಯೆಂಬ



ವಿಚಾರವಾಗಿದೆ; ಆ ಸ್ವರೂಪವು ಔದ್ಯೋಗಿಕ ಕ್ರಾಂತಿಯ ಪರಿಣಾಮದಿಂದ ಮತ್ತು ಕೈಗಾರಿಕೆಗಳ ಮೇಲಿನ ಅಧಿಕಾರಶಾಹಿ ನಿಯಂತ್ರಣದಿಂದ ಆದದ್ದಾಗಿದೆ. ಹಾಗಾಗಿ ಅದು ಲಾಭದಾಯಕ ಆರ್ಥಿಕ ಚಟುವಟಿಕೆಗೇ ಸೀಮಿತವಾದುದಾಗಿದೆ. ಆದ್ದರಿಂದಲೇ ಆಶ್ಚರ್ಯವಲ್ಲವೆನ್ನುವ ಹಾಗೆ ಅನೌಪಚಾರಿಕತೆ ಎಂಬುದು ಉತ್ಪಾದನೆ ಅಥವಾ ಲಾಭದಾಯಕವೆನ್ನುವ ಆರ್ಥಿಕ ಚಟುವಟಿಕೆಗಳೊಂದಿಗೆ ಸೇರಿಕೊಂಡುಬಿಟ್ಟಿದೆ. ಆದಾಗ್ಯೂ, ನಮ್ಮ ಕೇಂದ್ರೀಕೃತ ಗಮನವು (ಅನೌಪಚಾರಿಕ) ಕಾರ್ಮಿಕರ ಕಡೆಗೇ ಇರುವುದರಿಂದಾಗಿ, ಅವರ ಚಟುವಟಿಕೆಗಳು ಆರ್ಥಿಕವಾದುದಾಗಿರುತ್ತದೆಂಬುದು ಯಾವಾಗಲೂ ಅರ್ಥೈಸುವುದಿಲ್ಲ. ಬಹುಮುಖ್ಯವಾದ ಆರ್ಥಿಕವಲ್ಲದ ಚಟುವಟಿಕೆಗಳೆಂದರೆ ಪಾಲನೆ–ಪೋಷಣೆ, ಪ್ರಾಣ ಪೋಷಣೆಯ ವ್ಯವಸಾಯ, (ಕೆಲವು) ಗೃಹಕೃತಗಳು ಹಾಗೂ ವರಮಾನ ನೀಡದ ಕೌಟುಂಬಿಕ ಶ್ರಮವಾಗಿದೆ. ಮೇಲೆ ತಿಳಿಸಿದ ಚಟುವಟಿಕೆಗಳು ಅನೌಪಚಾರಿಕ ಕೆಲಸ ಅಥವಾ ಅಲ್ಲವೇ ಎಂಬ ಅರ್ಹತೆಗೆ ಒಳಪಡುವುದರ ಬಗ್ಗೆ ಚರ್ಚೆಗಳಿದ್ದಾಗ್ಯೂ, ಈಗಾಗಲೇ ಮೇಲುಗೈ ಪಡೆದಿರುವ ಕಾಯಿದೆಯ ಮುನ್ಸೂಚನೆಗಳು ಸಾಮಾನ್ಯವಾಗಿ ಇವುಗಳನ್ನು ಅನೌಪಚಾರಿಕ ಉದ್ಯೋಗಗಳೆಂದೇ ಪರಿಗಣಿಸಿ ಹೊರಗಿಟ್ಟುಬಿಡುತ್ತವೆ.

ಉತ್ತಮ ನುಡಿಗಟ್ಟಿನ ಅಭಾವದಿಂದಾಗಿ ಹಾಗೂ ಸುಲಭವಾಗಿ ಅರ್ಥೈಸಿಕೊಳ್ಳಬೇಕೆನ್ನುವ ಕಾರಣದಿಂದಾಗಿ, ನಾನು ಅನೌಪಚಾರಿಕ ಆರ್ಥಿಕ ಚಟುವಟಿಕೆಗಳೆಂಬ ನುಡಿಗಟ್ಟನ್ನು ಅನೌಪಚಾರಿಕ ಕಾರ್ಮಿಕರು ತೊಡಗಿಕೊಳ್ಳುವ ವಿಭಿನ್ನ ಚಟುವಟಿಕೆಗಳನ್ನು ಧ್ವನಿಸಲೆಂಬ ಕಾರಣಕ್ಕೆ ಬಳಸಿಕೊಂಡಿದ್ದರೂ ಕೂಡ, ಅನೌಪಚಾರಿಕವೆಂಬ ಮಾತು ಆರ್ಥಿಕತೆಗೆ ಸೀಮಿತವಾದುದಲ್ಲ; ಅದು ಸಮಾಜದ ಬೃಹತ್ತಾದ ಅನುಭವ ವೇದ್ಯ ವಿಷಯವಾಗಿದೆ ಹಾಗೂ ಅದು ಆರ್ಥಿಕತೆಯನ್ನೂ ಒಳಗೊಂಡಿದ್ದಾಗಿದೆ. ಆರ್ಥಿಕತೆಯ ಪರಿಕಲ್ಪನೆಯನ್ನೂ ಸಮಾಜವೆಂಬ ವಿಚಾರಗಳೆರಡನ್ನೂ ಸಮಾವೇಶಗೊಳಿಸಬಾರದೆಂಬ ಎಚ್ಚರ ನಮ್ಮಲ್ಲಿರಬೇಕು; ಸಮಾಜವು ಬಹು ದೊಡ್ಡ ಕ್ಷೇತ್ರವಾಗಿದ್ದು (ಮಾರುಕಟ್ಟೆಯನ್ನು ಒಳಗೊಂಡಂತೆ) ಆರ್ಥಿಕತೆಯು ಅದರ ಒಂದು ಭಾಗವಾಗಿದೆ (ಪೊಲಾನ್ಯಿ, 2001: 60, 71–79 ಹಾರ್ಟ್ ಮತ್ತು ಹಾನ್ 2009). ನಮ್ಮೆಲ್ಲಾ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಪರಿಸರವನ್ನು ಕುರಿತ ಕಾಳಜಿಗಳಿಗೆ ಕೇವಲ ಆರ್ಥಿಕತೆ ಅಥವಾ ಮಾರುಕಟ್ಟೆಯೇ ಮುಖ್ಯ ಪ್ರಸ್ತಾಪವಾಗಿಬಿಟ್ಟರೆ ನಮ್ಮ ಕಾಯಿದೆಯ ದೃಷ್ಟಿ ಮಸೂಕವು ಗಣನೀಯವಾಗಿ ಸಂಕುಚಿತವಾದುದಾಗುತ್ತದೆ (ಸ್ಟಿಗ್ಲಿಟ್ಜ್, 2001). ಮಾನವೀಯ ಪರಸ್ಪರ ಕ್ರಿಯೆಗಳಿಗೆ ಒಂದನ್ನೇ ಪರಾಮರ್ಶೆಯ ಅಂಶವನ್ನಾಗಿ ಮಾಡಿಕೊಳ್ಳದೆ, ಸಮಾಜದ ಒಂದು ಘಟಕವನ್ನಾಗಿ ಆರ್ಥಿಕತೆಯನ್ನು ಗ್ರಹಿಸುವುದಾದಲ್ಲಿ ಮಾತ್ರ ವಿಶ್ಲೇಷಣಾತ್ಮಕವಾಗಿ ಬಹಳಷ್ಟು ಲಾಭದಾಯಕವೂ, ಕಾಯಿದೆಗೆ ಸಂಬಂಧಿಸಿದಂತೆ ವಿಶಾಲ ಅವಕಾಶವೂ ದೊರತಂತೆ ಆಗುವುದು (ಪೊಲಾನ್ಯಿ, 2001: 74, 116; ಪ್ಯಾರಿ, 2009) ಆ ರೀತಿಯ ವಿಶ್ಲೇಷಣಾತ್ಮಕ ದೃಷ್ಟಿಯನ್ನು

ನಾವು ಅಳವಡಿಸಿಕೊಂಡಲ್ಲಿ, ಪೋಷಣೆ ಹಾಗೂ ವೇತನರಹಿತ ಕೌಟುಂಬಿಕ ಕೆಲಸಗಳಂತಹ ಚಟುವಟಿಕೆಗಳನ್ನೇಕೆ ಪ್ರಧಾನವಾದ ಅನೌಪಚಾರಿಕ ಚಟುವಟಿಕೆಗಳಾಗಿ ನೋಡಬಹುದೆನ್ನುವುದು ಸುಲಭವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎರಡು ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಮೊದಲನೆಯದು, ವೇತನರಹಿತ ಚಟುವಟಿಕೆಗಳನ್ನೇಕೆ ಅನೌಪಚಾರಿಕವೆಂದು ಕರೆಯಬೇಕು? ಎರಡನೆಯದು ಈ ಚಟುವಟಿಕೆಗಳನ್ನು ಕೆಲಸವೆಂದೇಕೆ ಗುರುತಿಸಬೇಕು? ಹಾರ್ಟ್ ಈ ರೀತಿಯ ಕೆಲಸಗಾರರನ್ನು ಗಮನದಲ್ಲಿಟ್ಟುಕೊಂಡೇ ಅನೌಪಚಾರಿಕ ಘಟಕವೆಂಬ ಪಾರಿಭಾಷಿಕವನ್ನು ಬಳಸಿಕೊಂಡಿದ್ದನ್ನು ನೋಡಿದರೆ ಕಲ್ಪಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಆದಾಗ್ಯೂ ಅನೌಪಚಾರಿಕವೆಂಬ ಆತನ ಆಲೋಚನೆಯು ವಿಶಿಷ್ಟ ಸ್ವರೂಪಕ್ಕೆ ವಿರುದ್ಧವಾದುದಾಗಿದೆ. ಆ ವಿಶಿಷ್ಟ ಕ್ರಿಯೆ ಇಲ್ಲವಾದಲ್ಲಿ ಚಟುವಟಿಕೆಯೊಂದನ್ನು ಬಹುಶಃ ಅನೌಪಚಾರಿಕವೆಂದು ಕರೆಯಬಹುದಾಗಿದೆ. ಈ ರೀತಿಯಲ್ಲಿ, ವೇತನರಹಿತ ಕೆಲಸಗಳನ್ನು ಪ್ರಸ್ತುತದಲ್ಲಿ ಯಾವುದನ್ನು ಅಧಿಕೃತವೆಂದು ಹೇಳಿಲ್ಲವೋ ಅವೇ ಅನೌಪಚಾರಿಕ ಕೆಲಸಗಳ ಇತರೆ ವಿಧಗಳೆಂದು ವಾದಿಸುವುದಕ್ಕೆ ಸಾಧ್ಯವಿದೆ.

ಅನೌಪಚಾರಿಕ ವಿಚಾರದಿಂದ ವೇತನರಹಿತ ಕೆಲಸವನ್ನು ರಕ್ಷಿಸುವ ಅಗತ್ಯವಿಲ್ಲವಾದರೂ, ಔಪಚಾರಿಕ ಕೆಲಸಗಳ ಅಗತ್ಯವಿದ್ದು ಅದಕ್ಕೆ ಸಂಬಂಧಿಸಿಲ್ಲದ ವಿಶಿಷ್ಟ ಕಾಯಿದೆಯೊಂದನ್ನು ಗಮನಿಸುವುದಕ್ಕ ಅಗತ್ಯವಿರುವುದನ್ನು ಕಂಡುಕೊಳ್ಳಲು ಅದು ಸಹಕಾರಿಯಾಗಬಹುದಾಗಿದೆ. ವೇತನರಹಿತ ಕೆಲಸವೊಂದನ್ನು ಅನೌಪಚಾರಿಕ ಎಂದು ವರ್ಗೀಕರಣ ಮಾಡಿದಾಗಲೂ, ಆ ಕೆಲಸಕ್ಕಿರುವ ಅದರದ್ದೇ ಆದ ಸ್ವರೂಪವನ್ನು ಕಳೆದುಕೊಳ್ಳಬಾರದು ಮಾತ್ರವಲ್ಲ ಅದಕ್ಕೆ ಸರಿಯಾದ ಕಾಯಿದೆಯ ಪ್ರತಿಕ್ರಿಯೆಯನ್ನು ರೂಪಿಸಬಹುದಾಗಿದೆ. ಅನೌಪಚಾರಿಕ ವರ್ಗೀಕರಣವೆನ್ನುವುದು ಕೇವಲ ಬಾಗುವಿಕೆಯಿಂದಾದ ಪರಿಕಲ್ಪನೆಯಾಗಿದ್ದು, ಔಪಚಾರಿಕ ನಿರ್ವಹಣೆ ಹಾಗೂ ನಿರ್ಬಂಧಿತ ಚೌಕಟ್ಟಿನ ಹೊರಗಿದ್ದು ಸಾಮಾಜಿಕವಾಗಿ ಮೌಲಿಕವಾದ ಕೆಲಸದೊಂದಿಗೆ ಗುಂಪೊಂದಕ್ಕೆ ಸೇರಿಕೊಳ್ಳುವಂಥದ್ದಾಗಿದೆ.

ಅದು ನಮ್ಮನ್ನು ಮುಂದಣ ಪ್ರಶ್ನೆಗೆ ತಂದು ನಿಲ್ಲಿಸುತ್ತದೆ. ವೇತನರಹಿತ ಕೆಲಸವೊಂದನ್ನು ಕೆಲಸವೆಂದು ಏಕೆ ಗುರುತಿಸಬೇಕು? ವೇತನರಹಿತ ಕೆಲಸಗಳಿಗಿರುವ ಪೋಷಣೆ ಹಾಗೂ ಗೃಹಕೃತದಂತಹ ಕೆಲಸಗಳು ಇತ್ಯಾತ್ಮಕವಾಗಿ ಸಮಾಜಕ್ಕೆ ಕೊಡುಗೆ ನೀಡುತ್ತವೆ ಆದ್ದರಿಂದ ಅವುಗಳನ್ನು ನೇರ ಆರ್ಥಿಕ ಕೊಡುಗೆಗಳಾಗಿ ಅಳೆಯುವಂತಿಲ್ಲ ಹಾಗೂ ಅಳೆಯಬಾರದು. ವೇತನರಹಿತ ಕೆಲಸವು ಸಮಾಜದ ಸುಸ್ಥಿರತೆಗೆ ಹಾಗೂ ವಿಕಾಸಕ್ಕೆ ಕೊಡುಗೆ ನೀಡುತ್ತದೆ. ಸಮಾಜದ ನಿಜವಾದ ಅರ್ಥವೇ ಸಹಕಾರ ಹಾಗೂ ಒಗ್ಗಟ್ಟು ಎಂದಾದಲ್ಲಿ, ವೇತನರಹಿತ ಕೊಡುಗೆಗಳನ್ನು ಗುರುತಿಸುವಿಕೆಯಿಂದ ತಪ್ಪಿಸಿಕೊಳ್ಳದಂತೆ ಮಾಡುವುದು ಸಮಾಜದ ಜವಾಬ್ದಾರಿಯಾಗಿರುತ್ತದೆ. ವೇತನರಹಿತ ಕೆಲಸವನ್ನು ಮಾನ್ಯ ಮಾಡುವುದು ಸಾಮಾಜಿಕ ಕೊಡುಗೆ ಹಾಗೂ ಸಮಾಜದ ಮಧ್ಯೆ ಇರುವ ಪರಸ್ಪರ ವಿನಿಮಯವನ್ನು ಆಧರಿಸುವಂಥದ್ದಾಗಿರುತ್ತದೆ. ನಮ್ಮ ರಾಜಕೀಯ ವ್ಯವಸ್ಥೆಯು ವೇತನರಹಿತ ಕೆಲಸಗಾರರಿಂದ ಸಮಾಜಕ್ಕೆ ನೀಡಲ್ಪಟ್ಟ ಮೌಲಿಕ ಕೊಡುಗೆಯನ್ನು ಗುರುತಿಸುವಂಥ ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಅದು ಅಲೈನ್ ಸುಪಿಯಟ್ ಮತ್ತು ಆತನ ಸಹೋದ್ಯೋಗಿಗಳು ಉದ್ದೇಶಿಸಿರುವ ಹಾಗೆ, ಅಂತಹ ಮಾನ್ಯತೆಯೊಂದರ ಒಂದು ತಳಹದಿಯು ಕೆಲಸಗಾರರು ನಿರ್ವಹಿಸಿದ ವೇತನರಹಿತ ಕೆಲಸಕ್ಕೆ ಸಂಬಂಧಿಸಿದ ಋಣರೂಪದ ಹಂಗಿನ ಸ್ವರೂಪವೇ ಆಗಿರುತ್ತದೆ (ಸುಪಿಯಟ್ 2001) ಸುಪಿಯಟ್ ಹೇಳುವಂತೆ ಯಾವುದೇ ಚಟುವಟಿಕೆಯು ಋಣರೂಪಕ್ಕೊಳಪಟ್ಟಲ್ಲಿ ಅದನ್ನು ಕೆಲಸವೆಂದೇ ಮಾನ್ಯ ಮಾಡಬೇಕಾಗುತ್ತದೆ. ಅಂತಹ ಪರಿಕಲ್ಪನಾತ್ಮಕ ದೃಷ್ಟಿಯು ಅಷ್ಟೇ ಸಮನಾಗಿ ಭಾರತೀಯ ಪರಿಸ್ಥಿತಿಗೆ ಫಲಕಾರಿಯಾಗುತ್ತದೆ. ಆದಾಗ್ಯೂ ಅಂತಹ ಕೆಲಸವನ್ನು ಹೇಗೆ ಮಾನ್ಯ ಮಾಡುವುದು ಅಂತಹ ಕೆಲಸಗಾರರನ್ನು ಹೇಗೆ ಉತ್ತೇಜಿಸುವುದು ಎಂಬ ಕಾಯಿದೆಗಿರುವ ಸವಾಲು ಉಳಿದುಕೊಂಡುಬಿಡುತ್ತದೆ.

### ಅನೌಪಚಾರಿಕ ಕೆಲಸ ಹಾಗೂ ವೇತನದ ಪ್ರಶ್ನೆ

ಅನೌಪಚಾರಿಕ ಆರ್ಥಿಕ ಚಟುವಟಿಕೆಗಳು ಹಾಗೂ ಅನೌಪಚಾರಿಕ ಆರ್ಥಿಕವಲ್ಲದ ಚಟುವಟಿಕೆಗಳೆಂದು



ಕೆಲಸವೊಂದನ್ನು ನಾವು ಮಾನ್ಯ ಮಾಡಲಿ, ಬಿಡಲಿ – ಕೆಲಸವಾಗಿ ಅದೊಂದು ಸಿದ್ಧಾಂತ, ತತ್ತ್ವ ಎನ್ನುವುದರಿಂದಾಗಿ ರಾಜಕೀಯ ಸವಾಲಾಗಿದೆ. ಪಾರಿಭಾಷಿಕವಾಗಿ ಇವೆರಡೂ ವಿಂಗಡಣೆಗಳು ಸಾಮಾಜಿಕವಾಗಿ ಮೌಲಿಕವಾದವು. ಆದಾಗ್ಯೂ ನಾವು ಸಾಮಾಜಿಕವಾಗಿ ಮೌಲಿಕವಾದ ಕೆಲಸ ಹಾಗೂ ಸಾಮಾಜಿಕವಾಗಿ ಉತ್ಪಾದಿತ ಅಥವಾ ಆರ್ಥಿಕ ಕೊಡುಗೆಯುಳ್ಳ ಕೆಲಸ ಇವೆರಡನ್ನೂ ಬೆರೆಸುವಲ್ಲಿ ಎಚ್ಚರದಿಂದಿರಬೇಕಾಗುತ್ತದೆ. ಅನೌಪಚಾರಿಕ ಕ್ಷೇತ್ರಕ್ಕೆ ಸಂಬಂಧಿಸಿದ ವೇತನರಹಿತ ವಿಂಗಡಣೆಯನ್ನು ಮಾನ್ಯಮಾಡುವಲ್ಲಿರುವ ಸೈದ್ಧಾಂತಿಕ ಸವಾಲನ್ನು ನಿವಾರಿಸಿಕೊಂಡ ನಂತರ, ಪ್ರಾಯೋಗಿಕವಾಗಿ ಈ ಕೆಲಸಗಳನ್ನು ಮಾನ್ಯ ಮಾಡುವುದಕ್ಕೆ ಸಂಬಂಧಿಸಿದ ಸ್ಪಷ್ಟದಾರಿಯುಳ್ಳ ಹಲವಾರು ಸಲಹೆ–ಸೂಚನೆಗಳನ್ನು ನಾವು ಎದುರಿಸಬೇಕಾಗುತ್ತದೆ. ಆ ಸಲಹೆ–ಸೂಚನೆಗಳು, ಪಾಲನೆ–ಪೋಷಣೆ ಹಾಗೂ ಗೃಹಕೃತಗಳಿಗಾಗಿ ವೇತನದ ಬೇಡಿಕೆ ಮಾಡುವುದರಿಂದ ಪ್ರಾರಂಭಗೊಂಡು ಇತರೆ ಆರ್ಥಿಕತೆ ಅಥವಾ ಉದ್ಯೋಗಗಳನ್ನು ಪರಿಗಣಿಸುವುದರ ಹೊರತಾಗಿ ಕುಟುಂಬಗಳಿಗೆ ಒಟ್ಟೊಟ್ಟಿಗೆ ಮೂಲ ಆದಾಯವನ್ನು ಒದಗಿಸುವವರೆಗೆ ಅವು ಇರಬಹುದಾಗಿದೆ.

ಆದಾಗ್ಯೂ, ವೇತನ ರಹಿತ ಅನೌಪಚಾರಿಕ ಕೆಲಸವೊಂದನ್ನು ಮಾನ್ಯ ಮಾಡುವುದು ಎಂದರೇನೇ ಅದು ಹಣವನ್ನು ನೀಡುವುದು ಇಲ್ಲವೇ ಆರ್ಥಿಕ ವರಮಾನ ಒದಗಿಸುವುದಷ್ಟೇ ಆಧಾರವಾಗಬೇಕಿಲ್ಲ ಎಂದು ವಾದಿಸುವುದಕ್ಕೆ ಕಾರಣವಿದೆ. ವೇತನರಹಿತ ಅನೌಪಚಾರಿಕ ಕೆಲಸವೊಂದನ್ನು ಮಾನ್ಯ ಮಾಡಲು ಪ್ರಾಯೋಗಿಕವಾಗಿ ಆರ್ಥಿಕವಲ್ಲದ ಇತರೆ ಹಾದಿಗಳನ್ನು ಚಿಂತಿಸಬಹುದಾಗಿದೆ. ಅನೌಪಚಾರಿಕ ಕೆಲಸಕ್ಕೆ ಸಂಬಂಧಿಸಿದ ವಿಭಿನ್ನ ವಿಂಗಡಣೆಗಳನ್ನು ಮಾನ್ಯ ಮಾಡುವುದಕ್ಕೆ

ಆ ವಿಷಯದಲ್ಲಿ ಮುಂದುರಿಯುವುದಕ್ಕೆ ಅಗತ್ಯವಿರುವ ಹಲವಾರು ಕಾಯಿದೆಯನ್ನಾಧರಿಸಿದ ಸೂಕ್ಷ್ಮಕೌಶಲಗಳ ಮೂಲಕ ಪಾರಿಭಾಷಿಕವಾಗಿಸುವ ಸಲುವಾಗಿ ನಾವು ಕೆಲಸಗಾರರ ಅನುಭವಗಳನ್ನು ಹಾಗೂ ಹಂಬಲಿಕೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೆಲಸಗಾರರು ತೆಗೆದುಕೊಳ್ಳುವ ಕೆಲಸಕ್ಕೆ ಸಂಬಂಧಿಸಿದಂತೆ ಅದರ ಸ್ವರೂಪ ಹಾಗೂ ಸವಾಲುಗಳನ್ನು ಗುರುತಿಸಲು ಸಹಕಾರಿಯಾಗುವ ಅವರದೇ ಅನುಭವಗಳು ಮೌಲಿಕ ಕಾಯಿದೆಯ ಸಂಪನ್ಮೂಲಗಳಿಗೆ ದಾರಿಯಾಗುತ್ತವೆ. ಅವರ ಆಶೋತ್ತರಗಳು ಮತ್ತೊಂದು ಕಡೆ ಕಾಯಿದೆಯನ್ನು ರೂಪಿಸುವಲ್ಲಿ ಮುಖ್ಯವಾದ ದಿಕ್ಸೂಚಿಗಳಾಗುತ್ತವೆ. ಸರಿಯಾದ ರೀತಿಯಲ್ಲಿ ಅನೌಪಚಾರಿಕ ಕೆಲಸಗಾರರ ಆಶೋತ್ತರಗಳನ್ನು ಅರಿತುಕೊಳ್ಳುವುದರಿಂದ – ಆರ್ಥಿಕವಲ್ಲದ ದಾರಿಗಳನ್ನು ಒಳಗೊಂಡಂತೆ – ಹಲವಾರು ರೀತಿಯ ಅನೌಪಚಾರಿಕ ಕೆಲಸಗಾರರನ್ನೂ ಮಾನ್ಯ ಮಾಡಬಹುದು. ಹಾಗೆಯೇ ಅವರ ಏಳಿಗೆಯನ್ನೂ ಉತ್ತೇಜಿಸಬಹುದು. ಈ ಕೆಳಕಂಡ ದೃಷ್ಟಿಕೋನವು ವಿಭಿನ್ನ ರೀತಿಯಲ್ಲಿರುವ ಸಮಾಜಿಕವಾಗಿ ಮೌಲಿಕವೆನ್ನುವ (ಅನೌಪಚಾರಿಕ) ಕೆಲಸವನ್ನು ಮಾನ್ಯ ಮಾಡುವುದಕ್ಕೆ ಸಂಬಂಧಿಸಿ ಕಾಯಿದೆ ರೂಪಿಸುವಲ್ಲಿ ಉತ್ತಮ ಪ್ರಾರಂಭವೆಂದು ಹೇಳಬಹುದಾಗಿದೆ.

### ಅನೌಪಚಾರಿಕ ಹಾಗೂ ಸಾರ್ವಜನಿಕ ಕಾಯಿದೆ

ತಾತ್ವಿಕ ಸವಾಲುಗಳು ಹಾಗೂ ರಾಜಕೀಯ ಸಂಪ್ರದಾಯ ಬದ್ಧತೆಗಳನ್ನು ನಿವಾರಿಸಿಕೊಂಡದ್ದಾದಲ್ಲಿ, ನಮ್ಮ ಕಾಯಿದೆ ರೂಪಿಸುವವರಿಗೆ ಇರುವ ಪ್ರಧಾನ ಸಮಸ್ಯೆಯೆಂದರೆ ಅದು ಕಾಯಿದೆ ರೂಪಿಸುವ ಪ್ರಕ್ರಿಯೇನು ಕೇಂದ್ರಸ್ಥಾನದಲ್ಲಿ ಅನೌಪಚಾರಿಕ ಕೆಲಸಗಾರರನ್ನು ತರುವುದು. ಅನೌಪಚಾರಿಕ ಕೆಲಸಗಾರರೇ ಅವರಿಗೇ ಸಂಬಂಧಿಸಿದ ಕಾಯಿದೆ–ಸರ್ಕಾರವನ್ನು ನಿರ್ಧರಿಸುವ ಕ್ರಿಯಾಪಟುಗಳಾಗಬೇಕು. ಕೆಲಸಗಾರರು ಸಾಮಾಜಿಕ ಚರ್ಚೆಯನ್ನೊಳಗೊಂಡ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಆಯಾಯ ಕೆಲಸದ ರೀತಿಗೆ ತಕ್ಕಂತೆ, ಆಯಾಯ ಕೆಲಸಕ್ಕೆ ಸಂಬಂಧಿಸಿದಂತೆ ಕೆಲಸಗಾರರ ಸ್ವಭಾವಕ್ಕೆ ಅನುಗುಣವಾಗಿ ಅದರಲ್ಲಿ ಭಾಗಿಯಾಗುವ ಕೆಲಸಗಾರರಿಗೆ ಗರಿಷ್ಠ ರೀತಿಯ ಅರ್ಥಪೂರ್ಣ ಭಾಗವಹಿಸುವಿಕೆಗೆ ಸಾಧ್ಯವಾಗುವಂತಹ ಸಾಮಾಜಿಕ ಚರ್ಚಾಪ್ರಕ್ರಿಯೆ ಸಿದ್ಧವಾಗಬಹುದಾಗಿದೆ.

ಸಾಮಾಜಿಕ ಸಂವಾದ ಪ್ರಕ್ರಿಯೆಯಲ್ಲಿ ಅನೌಪಚಾರಿಕ ಕೆಲಸಗಾರರನ್ನು ಸಂಘಟಿಸುವುದಕ್ಕೆ ಸಂಬಂಧಿಸಿದಂತೆ ಮತ್ತೊಂದು ಮುಂದುವರಿದ ಸವಾಲನ್ನು ಎದುರಿಸಬೇಕಾಗಿದೆ. ನಾನು ಚರ್ಚಿಸಿದಂತೆ ಅನೌಪಚಾರಿಕ ಕೆಲಸದ ಕಲ್ಪನೆ ಕೇವಲ ಒಂದು ಅಶ್ರಯಪೋಷಿತ ಪಾರಿಭಾಷಿಕವಾಗಿದೆ; ವಾಸ್ತವವಾಗಿ, ಯಾವ ಆಲೋಚನೆಯಿಂದಾಗಿ ಅನೌಪಚಾರಿಕತೆಯು ಅಭಿವೃದ್ಧಿಗೊಂಡಿತೋ ಅದಕ್ಕೆ ಪ್ರತಿಯಾಗಿ ಕೆಲಸಗಾರರು ತೊಡಗಿಸಿಕೊಳ್ಳುವ ಚಟುವಟಿಕೆಗಳು ಹಲವಾರು ವಿಧವಾಗಿದ್ದು ಅವು ಯಾವ ಚೌಕಟ್ಟಿಗೂ ಒಳಪಡುವುದಿಲ್ಲ. ಕೆಲಸ ಹಾಗೂ ಕೆಲಸಗಾರರ ವಿಶಿಷ್ಟ ವಿಂಗಡನೆಗಳಿಗೆ ಸಂಬಂಧಿಸಿ ಸೂಕ್ಷ್ಮ ಪ್ರಭೇದಗಳನ್ನು ಅರಿಯುವ ಸಲುವಾಗಿ, ಪ್ರತಿಯೊಂದು ವಿಶಿಷ್ಟ ವಿಂಗಡಣೆಯನ್ನು Sue Generis ಸಿದ್ಧಾಂತವೆಂದು ಸ್ವೀಕರಿಸಬೇಕಾಗುತ್ತದೆ. ಅನೌಪಚಾರಿಕ ಕೆಲಸದಲ್ಲಿರುವ ವೈದೃಶ್ಯ ಸ್ವರೂಪವೇ ಕಾರಣವಾಗಿ ಇದಕ್ಕೆ ಸಂಬಂಧಿಸಿದ ಕಾಯಿದೆ–ರೂಪಿಸುವ ಕೆಲಸ ವಿಕೇಂದ್ರೀಕರಣ



ಕ್ಕೊಳಗಾಗಬೇಕೆಂದು ಮತವೀಯುತ್ತದೆ. ನಮ್ಮ ಸಂವಿಧಾನದಲ್ಲಿ ರೂಪಿತವಾಗಿರುವ ವಿಧಾಯಕ ಸಾಮರ್ಥ್ಯದ ಸಮತೋಲನವನ್ನು ಪರಿಗಣಿಸುವುದಾದಲ್ಲಿ, ವಿಕೇಂದ್ರೀಕರಣದ ಆಲೋಚನೆಯನ್ನೊಳಗೊಂಡ ಕಾಯಿದೆ ರೂಪಿಸುವಿಕೆಯು ನಮ್ಮಲ್ಲಿನ ಆಡಳಿತ ವ್ಯವಸ್ಥೆಗೆ ದೂರವಾದುದೇನಲ್ಲ.

ಈ ಪ್ರಬಂಧದಲ್ಲಿ, ಅನೌಪಚಾರಿಕತೆಯನ್ನು ವಿಶ್ಲೇಷಿಸುತ್ತಾ, ಬಾಗಿಸುವ ದೃಷ್ಟಿಯಿಂದಾಗಿ ಪರಿಕಲ್ಪನೆಯ ಉಪಯುಕ್ತವಾಗಿದೆಯೆಂದು ಚರ್ಚಿಸಿದ್ದೇವೆ. ಅನೌಪಚಾರಿಕ ಕೆಲಸಗಾರರ ವಿವಿಧ ರೀತಿಯಲ್ಲಿನ ಸ್ಥಿತಿ–ಗತಿಗಳನ್ನು ಉತ್ತಮಗೊಳಿಸುವ ಸಲುವಾಗಿ ಬಾಗಿರುವ ಪಾರಿಭಾಷಿಕ ಪದವಾದ ಅನೌಪಚಾರಿಕತೆಯ ಮುಸುಕನ್ನು ತೆಗೆಯಬೇಕಾಗಿದೆ. ಹಾಗೂ ಪ್ರತಿಯೊಂದು ಕೆಲಸಕ್ಕೆ ಸಂಬಂಧಿಸಿದ ವಿಂಗಡಣೆಯೂ ತನ್ನದೇ ಆದ ಕಾಯಿದೆಯ ಸವಾಲು ಎಸೆಯುವಂತಿದೆ. ಹೀಗೆ ಮಾಡುವಲ್ಲಿ, ಸಾಮಾಜಿಕ ಸಂವಾದ ಪ್ರಕ್ರಿಯೆಯಲ್ಲಿ ವಿಶಿಷ್ಟ ಅನೌಪಚಾರಿಕ ಕೆಲಸಗಾರರನ್ನು ತೊಡಗಿಸಿಕೊಳ್ಳಬೇಕಾಗಿದ್ದು, ಈ ಕೆಲಸಗಾರರೇ ತಮ್ಮ ಆಶೋತ್ತರಗಳನ್ನು ಮೇಲ್ದರ್ಜೆಗೊಯ್ಯುವ ಆಡಳಿತಾತ್ಮಕ ಪ್ರಕ್ರಿಯೆಯ ಭಾಗವಾಗಬಹುದಾಗಿದೆ. ನಮ್ಮ ಸಂವಿಧಾನದ ಉನ್ನತ ಆದರ್ಶಗಳು ಆ ರೀತಿಯ ಆಡಳಿತವನ್ನು ಚಿಂತಿಸುವಂತಾಗಲಿ. ❑



**ಶಿಕ್ಷಣದ ಮೊದಲ ಹಂತದ ಕಲಿಕೆಯೆ ತನು-ಮನಗಳ ಶುದ್ಧೀಕರಣ.**
**ಬಕೇಟ್ (ನೀರು) ಮತ್ತು ಕಸಬರಿಗೆಗಳು, ಭೌತಿಕವಾಗಿ ನಮ್ಮ ಸುತ್ತಮುತ್ತಲಿನ ಮಲಿನ ನಿವಾರಿಸುವಂತೆ,**
**ಪ್ರಾರ್ಥನೆ ನಮ್ಮ ಮನಸ್ಸನ್ನು ಪರಿಶುದ್ಧಗೊಳಿಸುತ್ತದೆ.**
**ಅದಕ್ಕಾಗಿಯೇ ನಮ್ಮೆಲ್ಲ ಕಾರ್ಯ ಕಲಾಪ ಪ್ರಾರಂಭವಾಗುವುದು ಪ್ರಾರ್ಥನೆಯಿಂದಲೇ,**
**ನಾವು ಹಿಂದೂ, ಮುಸ್ಲಿಂ ಪಾರ್ಸಿ ಹೀಗೆ ಯಾವುದೇ ಪಾರ್ಥನೆ ಮಾಡಿದರೂ**
**ಅವುಗಳ ಸದುದ್ದೇಶ ಒಂದೇ,**
**ಅಂತರಂಗ ಶುದ್ಧೀಕರಣ.**

# ಅನೌಪಚಾರಿಕ ವಲಯ : ನಾಗರಿಕರ ಪಾತ್ರ

ರಾಜೇಶ್ ಭಟ್ಟಾಚಾರ್ಯ

ಕನ್ನಡಕ್ಕೆ : ಅಮೂಲ್ಯ ಭಾರದ್ವಾಜ್



**ಅನೌಪಚಾರಿಕ ಉತ್ಪಾದನೆಯನ್ನು ಉಳಿಸಿಕೊಳ್ಳುವಲ್ಲಿ ಕೊಳಗೇರಿಗಳ ಪಾತ್ರ ನಿದರ್ಶನವಾಗಿರುವಂತದ್ದು. ಅನೌಪಚಾರಿಕ ಆರ್ಥಿಕತೆಯಲ್ಲಿ, ಗೃಹದ ಮೂಲ ಹೊಟ್ಟೆಪಾಡಿಗಾಗಿ, ಒದಗುವ ವಸ್ತುಗಳ ಮೇಲೆ ಅವಲಂಬಿತವಾಗಿದ್ದು, ಸರಕು ಉತ್ಪಾದನೆಯ ಮೆಟ್ಟಿಲೇರಲು ಸಹಾಯಕವಾಗಿದೆ.**

ಅನೌಪಚಾರಿಕ ವಲಯಗಳು ಭಾರತದ ಕಾರ್ಮಿಕರ ಕೇಂದ್ರೀಕೃತ ಜೀವನಗಾಥೆಯಾಗಿವೆ. ಹನ್ನೆರಡನೆಯ ಪಂಚ–ವಾರ್ಷಿಕ ಯೋಜನೆಯ ಪ್ರಕಾರ, ನಮ್ಮ ದೇಶದ ಒಟ್ಟು ಕಾರ್ಮಿಕರು, ಅನೌಪಚಾರಿಕ ವಲಯಗಳಲ್ಲಿ ಶೇಕಡ 84% ರಷ್ಟು ಇದ್ದಾರೆಂದು ಕಂಡುಬರುತ್ತದೆ. ಸ್ವಾತಂತ್ರ್ಯಾನಂತರ, ಭಾರತವು 1980ರ ಮಧ್ಯಂತರದವರೆಗೂ ಅನೇಕ ಆರ್ಥಿಕ ಪ್ರಯೋಗಗಳನ್ನು , ಹಾಗೆಯೇ ನಂತರದಲ್ಲಿ ಆರ್ಥಿಕ ಉದಾರೀಕರಣ ಕಂಡಿದೆ. ಔಪಚಾರಿಕ ವಲಯಗಳಲ್ಲಿ ಕಂಡುಬರುವಂತೆ ಮೇಲುಗೈ ಸಾಧಿಸಿದ ವಿವಿಧ ಶೈಕ್ಷಣಿಕ ಮತ್ತು ಇತರೆ ನಿಯಮಗಳ ಚರ್ಚೆಗಳು, ಅನೌಪಚಾರಿಕ ವಲಯಗಳಲ್ಲಿ ಈ ಎರಡೂ ವಿಧವಾದ ಆಡಳಿತ ಪದ್ಧತಿಗಳಲ್ಲಿಯೂ ಕಠಿಣವಾದ ನಿಯಮಾವಳಿಗಳನ್ನು ಒಳಗೊಂಡಿದೆ. ಸಣ್ಣ ಹಾಗೂ ಗೃಹ ಕೈಗಾರಿಕೆಗಳಲ್ಲಿ ವಹಿಸಿರುವ ಪಾತ್ರಗಳನ್ನು ಅವಲೋಕಿಸಬೇಕಾಗುತ್ತದೆ. ಮಹಾಲನೋಬಿಸ್ ಅವರ ಎರಡನೆ ಪಂಚ–ವಾರ್ಷಿಕ ಯೋಜನೆ ಹಾಗೂ ಸಣ್ಣ ಉತ್ಪಾದನೆಗಳ ಕಾಯ್ದಿರಿಸಿದ, 1960–70 ರ ನಿಯಮಾವಳಿಗಳಲ್ಲಿ, ಉದಾರೀಕರಣದ ಪೂರ್ವದಲ್ಲಿ ಲಭಿಸುತ್ತಿದ್ದ ಉದ್ಯೋಗಾವಕಾಶ ಅನನ್ಯ, ಎನ್ನುತ್ತಾರೆ. ಹಾಗೆಯೇ, 1980ರಲ್ಲಿ ದೇಶ ಅಭಿವೃದ್ಧಿಯ ಕಂಡಿದ್ದರೂ, ಕಳೆದ ದಶಕದ 'ಅಂತರ್ಗತ ಅಭಿವೃದ್ಧಿಯ' ಹುಟ್ಟು ಹಾಗೂ ಕ್ರೋಢೀಕರಣ, ಅನೌಪಚಾರಿಕ ಉತ್ಪಾದನೆಗೆ ನಾಂದಿಯಾಗಿದೆ. ಆದ್ದರಿಂದ ಹೊರ–ನಡೆಯನ್ನು ನಾವು ಉದಾರೀಕರಣದ ನಂತರದ ದಿನಗಳಲ್ಲಿ ಕಾಣುತ್ತಿದ್ದೇವೆ.

ಎರಡು ವಿಧದ ಅಭಿವೃದ್ಧಿಗಳು ಮಾತ್ರ ಭಾರತದ ಅನೌಪಚಾರಿಕ ವಲಯಗಳ ಮೇಲೆ ಬಹುತೇಕ ಪರಿಣಾಮವನ್ನು ಬೀರುವ ನಿರೀಕ್ಷೆಯಿದೆ. ಅವು ಕ್ಷಿಪ್ರ ನಗರೀಕರಣ ಮತ್ತು ವಿಸ್ತರಿಸಿಕೊಳ್ಳುತ್ತಿರುವ ಯುವ ಕಾರ್ಮಿಕ ಸಮೂಹ. ಮುಂದಿನ ದಶಕಗಳಲ್ಲಿ, ನಗರಗಳ ಜನಸಂಖ್ಯೆ ಹಿಗ್ಗಲಿದ್ದು; ವಿಶ್ವದ ನಗರೀಕರಣದ ಪಥದಲ್ಲಿ ಸ್ಥಾನಪಡೆಯುವಂತಾಗುತ್ತದೆ (ಸ್ವರ್ಟ್ಸ್ ಎಟ್ ಆಲ್ 2014). ಅದೇ ಮೂರು ದಶಕಗಳಲ್ಲಿ ಭಾರತವು ವಿಶ್ವದಲ್ಲೇ ಅತ್ಯಂತ ವಿಸ್ತಾರವಾದ ಯುವ ಕಾರ್ಮಿಕ ಸಮೂಹವನ್ನು ಕಾಣಲಿದ್ದು; ಅದರ ಕಾರ್ಯಪ್ರವೃತ್ತ ವಯೋಮಿತಿ (15 ರಿಂದ 64 ವರ್ಷಗಳು) 64% ರಷ್ಟು ಜನಸಂಖ್ಯೆಯನ್ನು ತಲುಪಲಿದೆ ಎನ್ನಲಾಗಿದೆ (ಜೇಮ್ಸ್ 2011). ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದಾಗ, ಭಾರತವು ಕೆಲವೇ ದಿನಗಳಲ್ಲಿ ಸ್ಫೋಟಕ ಅಭಿವೃದ್ಧಿಯನ್ನು ಕಾಣುವಂತಾಗುತ್ತದೆ. ಈ ರೀತಿಯ ಅನೌಪಚಾರಿಕತೆ ಮುಂದುವರೆದರೆ, ಬಡತನ ಗಣತಿಗಳಲ್ಲಿ ಕುಗ್ಗುತ್ತಿದ್ದರೂ ನಾವು ಒಂದು ವಿಶಿಷ್ಟ ಬಡ ಹಾಗೂ ಅಂಚಿನಲ್ಲಿರುವವರನ್ನು ಕಾಣುತ್ತೇವೆ. ಈ ಔಪಚಾರಿಕ ಹಾಗೂ ಅನೌಪಚಾರಿಕ ವಲಯಗಳ ಜಿದ್ದಿನಲ್ಲಿ, ನಗರ ಪ್ರದೇಶಗಳು ತೀವ್ರ ಸ್ಪರ್ಧೆಗಳಿಗೆ ಸಜ್ಜಾಗುತ್ತಿದ್ದು, ರಾಜಕಾರಣದ ಅಸ್ತ್ರವಾಗಿ ಬಳಕೆಯಾಗುತ್ತಿದೆ. ಈ ಲೇಖನದಲ್ಲಿ ಅನೌಪಚಾರಿಕ ವಲಯಗಳ ತಳಪಾಯವನ್ನು ವಿಮರ್ಶಿಸುವ ಹಾಗೆಯೇ ಕಡಿಮೆ–ಗುರುತಿಸಿರುವ, ಆದರೂ ನಗರೀಕರಣದ ಮುಖ್ಯ ವಿಷಯವಾದ 'ನಗರದ–ಸಾಮಾನ್ಯರ' ಅನೌಪಚಾರಿಕ ಉತ್ಪಾದನೆ

ಸಹಾಯಕ ಪ್ರಾಧ್ಯಾಪಕರು, ಐ.ಐ.ಎಂ., ಕೊಲ್ಕತ್ತ. Email : rb@iimcal.ac.in

ಹಾಗೂ ಜೀವನವನ್ನು ಪರಿಶೀಲಿಸಲಾಗಿದೆ. ಇಲ್ಲಿ ನಮ್ಮ ನಗರಗಳ ಬಡಜನರಿಗೆ ತಲುಪಬೇಕಾದ ಅನೌಪಚಾರಿಕ ಉತ್ಪಾದನೆಯ ಹಕ್ಕುಗಳನ್ನು ತಿಳಿಸಲು ಯತ್ನಿಸಲಾಗಿದೆ. ಇಪ್ಪತ್ತೊಂದನೇ ಶತಮಾನದ ನಗರದ ನಿಯಮಾವಳಿಗಳು, ಬಡಜನರ ಅನೌಪಚಾರಿಕ ಆಸ್ತಿ ಹಕ್ಕುಗಳನ್ನು ಅನೌಪಚಾರಿಕತೆಯ ನೆಲೆಯಲ್ಲಿ ಅವರ ಜೀವನಕ್ಕೆ ಸಹಾಯವಾಗುವಂತೆ ಬಳಸಬೇಕು.

### ಮನೆ ಮತ್ತು ಕಾರ್ಯಾಗಾರ : ಮಂದ ಗತಿ

ಕೊಳಗೇರಿಗಳು ಈಗಾಗಲೇ ಅನೌಪಚಾರಿಕ ಕಾರ್ಮಿಕರ ನೆಲೆ ಹಾಗೂ ಉತ್ಪಾದನೆಯ ಹಂದರವಾಗಿದ್ದು, ಇದು ಮುಂದುವರೆದರೆ, ಕೊಳಗೇರಿಗಳೇ ಅನೌಪಚಾರಿಕ ಉದ್ದಿಮೆಗಳ ಕೇಂದ್ರವಾಗುವಲ್ಲಿ ಆಶ್ಚರ್ಯವಿಲ್ಲ. ವಿಸ್ತಾರವಾಗಿ ಉತ್ಪಾದನೆಯಾಗುವ ಅನೇಕ ಅನೌಪಚಾರಿಕ ಉತ್ಪನ್ನಗಳು, ಘಟಕಗಳು ನಮ್ಮ ದೇಶದ ಕಾನೂನನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿವೆ. ಕೊಳಗೇರಿಗಳು ಕೇವಲ ವಾಸಸ್ಥಾನಗಳಾಗಿ ಉಳಿದಿಲ್ಲದೆ, ಬಡಜನರ ಸಣ್ಣ ಕೈಗಾರಿಕೆಯ ಆಗರವಾಗಿದೆ. ಹೀಗೆ ಜನಸಂಖ್ಯೆ ಏರಿದರೆ, ಅನೇಕ ಅನೌಪಚಾರಿಕ ಕಾರ್ಮಿಕರು, ಕೊಳಗೇರಿಗಳಲ್ಲಿ ಜಾಗಗಳನ್ನು ಹುಡುಕಿ, ಅಲ್ಲೆ ಮನೆಗಳಲ್ಲಿ ಉತ್ಪಾದೆಯನ್ನು ನಿರ್ವಹಿಸಬೇಕಾಗುತ್ತದೆ. ಎನ್.ಸಿ.ಇ.ಯು.ಎಸ್(2007) ಪ್ರಕಾರ ಬಹುತೇಕ ಅನೌಪಚಾರಿಕ ವಲಯಗಳು "ಓನ್ ಅಕೌಂಟ್ ಎಂಟರ್‌ಪ್ರೈಸಸ್" (ಓ.ಎ.ಇ) – ಅಂದರೆ ಅಂಗಡಿಗಳು ಮನೆಯವರ ಸಹಾಯದಿಂದ ನಡೆಸಲ್ಪಡುತ್ತದೆ. ಅಂದರೆ, ಅವುಗಳು ಬೇರೆಡೆಯಿಂದ ಕೆಲಸಗಾರರನ್ನು ವರ್ತನೆಮಾಡಿಕೊಳ್ಳದೆ ಸ್ವಂತ ಮನೆಯವರೆ ಒಗ್ಗೂಡಿ ಕಾರ್ಯಪ್ರವೃತ್ತರಾಗುತ್ತಾರೆ. ಆದರೆ, ಉತ್ಪಾದನಾ ಖರ್ಚು ಮತ್ತು ಇತರೆ ಖರ್ಚುಗಳೆಂದು ವಿಂಗಡಣೆ ಮಾಡುವುದು ಇಲ್ಲಿ ಕಷ್ಟಕರ. ಮನೆಯೊಳಗೇ ಉತ್ಪಾದನಾ ಚಟುವಟಿಕೆಗಳನ್ನು ನಿರ್ವಹಿಸುವುದರಿಂದ, ಅನೌಪಚಾರಿಕ ಕಾರ್ಮಿಕರು ವಸ್ತುಗಳ ಕೊರತೆ ಕಂಡುಬಂದಾಗ ಮನೆಯ ಸಾಮಗ್ರಿಗಳನ್ನು ಬಳಸಿಕೊಳ್ಳುವ ಸಾಧ್ಯತೆಗಳಿರುತ್ತದೆ (ಸಾನ್ಯಲ್ ಮತ್ತು ಭಟ್ಟಾಚಾರ್ಯ, 2009). ಈ ರೀತಿಯ ಗೃಹ ಉತ್ಪಾದನಾ ಪ್ರದೇಶಗಳು, ಕಡಿಮೆ ಬಂಡವಾಳದೊಂದಿಗೆಯೂ ನಡೆಸಲು



ಸಕಾರಾತ್ಮಕವಾಗಿ ಸಹಕಾರಿಯಾಗಿದೆ. ಮುಖ್ಯವಾಗಿ ಉತ್ಪಾದನಾ ಉದ್ಯಮಗಳಿಗೆ ಇದು ಸತ್ಯವೇ ಸರಿ. 1999–2000 ರ ಉತ್ಪಾದನಾ ಉದ್ಯಮಗಳಲ್ಲಿ, 76% ರಷ್ಟು ಹಳ್ಳಿಗಳಲ್ಲಿ ಮತ್ತು 63%ರಷ್ಟು ನಗರಗಳಲ್ಲಿ, ಉತ್ಪಾದನಾ ಘಟಕಗಳು ಮನೆಯಲ್ಲಿಯೇ ನಿರ್ಮಿತವಾಗಿರುತ್ತವೆ (ಎನ್.ಸಿ.ಇ.ಯು.ಎಸ್ 2007). ಗೃಹ ಉತ್ಪಾದನೆಗಳು, ಬಡ ಜನರ ಬೇಕುಗಳನ್ನು ನೋಡುತ್ತದೆಯೇ ವಿನಃ, ಅವರ ವಾಣಿಜ್ಯೋದ್ಯಮದೆಡೆಗೆ ನೋಡಲಾರದು. ಅಂತೆಯೇ ಪ್ರಸ್ತುತ ಇರುವ ಪರಿಸರದ ಕಾನೂನುಗಳು, ವಲಯ ನೀತಿಗಳು, ಕೊಳಗೇರಿಯ ಕೈಗಾರಿಕೆಗಳ ಮೇಲೆ ವಿರೋಧಾಭಾಸವನ್ನು ತೋರುತ್ತಿದೆ ಎಂದರೆ ತಪ್ಪಾಗಲಾರದು.

### ಸಾಮಾನ್ಯ ನಾಗರಿಕರು

ಅನೌಪಚಾರಿಕ ಉತ್ಪಾದನೆಯನ್ನು ಉಳಿಸಿಕೊಳ್ಳುವಲ್ಲಿ ಕೊಳಗೇರಿಗಳ ಪಾತ್ರ ನಿರ್ದರ್ಶನವಾಗಿರುವಂತದ್ದು. ಅನೌಪಚಾರಿಕ ಆರ್ಥಿಕತೆಯಲ್ಲಿ, ಗೃಹದ ಮೂಲ ಹೊಟ್ಟೆಪಾಡಿಗಾಗಿ, ಒದಗುವ ವಸ್ತುಗಳ ಮೇಲೆ ಅವಲಂಬಿತವಾಗಿದ್ದು, ಸರಕು ಉತ್ಪಾದನೆಯ ಮೆಟ್ಟಿಲೇರಲು ಸಹಾಯಕವಾಗಿದೆ. ಕಾನೂನಿನ ಮುಖೇನ ಸಾಲ ಸೌಲಭ್ಯಗಳು ಹಾಗೂ ಕಡಿಮೆ ದರದಲ್ಲಿ ದತ್ತಿಗಳನ್ನು ನೀಡಲು ಕೊರತೆ ಇದ್ದುದಾದ್ದರಿಂದ, ಅವರಿಗೆ ಈ ಎಲ್ಲಾ ಸೌಲಭ್ಯಗಳನ್ನು ಹೊರ ಮರುಕಟ್ಟೆಯಲ್ಲಿ ಹುಡುಕಬೇಕಾದ ಅನಿವಾರ್ಯತೆ ಕಂಡುಬಂದಿದೆ. ಅಧಿಕೃತ ಮಾಹಿತಿಯ ಪ್ರಕಾರ, ಸರಾಸರಿ ಅನೌಪಚಾರಿಕ ಕೈಗಾರಿಕೆಗಳು, ನಗಣ್ಯ ಖರ್ಚುಗಳನ್ನು ಭರಿಸುತ್ತವೆ. ಈ ರೀತಿಯ ಕಡಿಮೆ ಖರ್ಚುಗಳಿಂದ ಮನೆ ನಡೆಸಲು ಹಲವರಿಗೆ ಅನುಕೂಲಕರವಾಗಿದೆ. ಕಾನೂನು ಬಾಹಿರ ಒತ್ತುವರಿ, ವಿದ್ಯುಚ್ಛಕ್ತಿಯ ಬಳಕೆ, ಮಾರುಕಟ್ಟೆಯ ವಿವರಗಳನ್ನು ಅನಧಿಕೃತವಾಗಿ ಬಳಸುವುದು ಈ ಉದ್ದಿಮೆಗಳ ಭಾಗವಾಹಿವೆ.

### ಬಡವರ ಆಸ್ತಿ ಹಕ್ಕು

ಸಾರ್ವಜನಿಕ ಆಸ್ತಿಯನ್ನು ಸಾಮುದಾಯಿಕ ಲಾಭಕ್ಕಾಗಿ ಬಳಸುತ್ತಿದ್ದರೆ, ಅಂತಹ ಆಸ್ತಿ ಹಕ್ಕಿನಲ್ಲಿರುವ ತೊಡಕನ್ನು ನಿವಾರಿಸಬೇಕು. ಸ್ಥಳೀಯ ಹಾಗೂ ಅನೌಪಚಾರಿಕ ಆಡಳಿತದ ಒಂದು ಸಂಶೋಧನೆಯ ಪ್ರಕಾರ, ಔಪಚಾರಿಕ ಮಾಲೀಕತ್ವದ ಹಕ್ಕಿನ ಕೊರತೆಯಿದ್ದಾಗ, ಸವಿಸ್ತಾರವಾದ ಆಡಳಿತ ಪದ್ಧತಿಯು ಅನಾವರಣಗೊಳ್ಳಬಹುದು. ನಗರಗಳ ಆಸ್ತಿಗಳಿಗೂ ಇವು ಅನ್ವಯವಾಗುತ್ತದೆ. ಒಂದು ಸಣ್ಣ ಆಸ್ತಿಯ ಹಕ್ಕು ಗುರುತಿಸುವಿಕೆ ಅನೇಕ ಕೊರತೆಗಳನ್ನು ಮರೆಮಾಚುತ್ತದೆ– "ಪ್ರವೇಶ", "ವಾಪಸಾತಿ", "ನಿರ್ವಹಣೆ", "ಹೊರಗಿಡುವಿಕೆ", ಹೀಗೆ ಅನೇಕ ವಿವರಗಳು. ಉದಾಹರಣೆಗೆ, ಆಟೊ ರಿಕ್ಷಾಗಳಿಗೆ ನಿರ್ದಿಷ್ಟವಾದ ಷರತ್ತುಗಳನ್ನು ವಿಧಿಸಬಹುದಾಗಿದೆ. ತಮ್ಮ ಪ್ರಯಾಣಿಕರನ್ನು





ನಿರ್ದಿಷ್ಟ ಪ್ರದೇಶಗಳಿಗೆ ಬಿಡುವ ಕಾರ್ಯಗಳು, ತಮ್ಮ ಕ್ರಮಸಂಖ್ಯೆಯಂತೆ. "ಪ್ರವೇಶ" ಮತ್ತು "ವಾಪಸಾತಿ"ಯ ಹಕ್ಕುಗಳು ಅನಧಿಕೃತವಾಗಿ ಸಾಧಿಸಿದರೂ ಎಕ್ಸ್‌ಕ್ಲೂಷನ್ ಹಕ್ಕಿನಿಂದ ಸಾಧ್ಯವಿಲ್ಲ. ಕೊಳಗೇರಿಗಳಲ್ಲಿ "ನಿರ್ವಹಣೆ", ಮತ್ತು "ಹೊರಗಿಡುವಿಕೆ"ಯ ಹಕ್ಕುಗಳನ್ನು ವಿವಿಧ ತೆರನಾದ ಬಂಡವಾಳ ಹೂಡಿಕೆಯ ರೀತಿಯಲ್ಲಿ ಚಲಾಯಿಸಲಾಗುತ್ತದೆ – ಈ ವ್ಯವಸ್ಥೆ ಧಾರಾವಿ ಕೊಳಗೇರಿಯಲ್ಲೂ ನೋಡಲು ಲಭ್ಯ. ಆದ್ದರಿಂದಲೇ ಅನೌಪಚಾರಿಕ ನಾಗರಿಕರು, ಸಮುದಾಯದಿಂದ ಪ್ರೇರೇಪಿತರು ಎನ್ನಿಸುವುದು– "ಸಾಮಾನ್ಯ–ಹಿತಾಸಕ್ತಿಗಳು". ಅನೌಪಚಾರಿಕ ಕಾರ್ಮಿಕರ ಕಾನೂನಾತ್ಮಕ ಕೊರತೆಯು, ಖಾಸಗಿ ಮತ್ತು ಸರ್ಕಾರಿ ಆಸ್ತಿಗಳ ಸಾಮಾನ್ಯ ವರ್ಗಕ್ಕೆ ತಲುಪಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಈ ಮಾರ್ಗಗಳು ಅವರನ್ನು ಮಾಲಿಕರನ್ನಾಗಿ ಮಾಡದೆ, ಅನೌಪಚಾರಿಕ ದಣಿಗಳಾಗಿ ರೂಪಿಸಿ "ಪ್ರವೇಶ", "ವಾಪಸಾತಿ", "ನಿರ್ವಹಣೆ", "ಹೊರಗಿಡುವಿಕೆ" ಗಳನ್ನು ಶುದ್ಧವಾಗಿ ಪರಿಪಾಲಿಸಿ ಬೆಳೆಸುವವರನ್ನಾಗಿ ಮಾಡಬೇಕಿದೆ. ಎರಡು ವಿಧವಾದ ಪರಿಹಾರಗಳು, ನಗರಗಳ ಅನೌಪಚಾರಿಕ ಪದ್ಧತಿಗಳಿಗೆ ನೆರವಾಗಬಹುದಾಗಿದೆ. ಭಾರತದ ಸಾಂಪ್ರದಾಯಿಕ ನವೀಕರಣದ ನಿಯಮಾವಳಿಗಳಲ್ಲಿ, ಉದಾಹರಣೆಗೆ, ಕೊಳಗೇರಿಗಳಲ್ಲಿನ ಬಡಜನರ ಪುನಃಶ್ಚೇತನವನ್ನು ಗುರುತಿಸುವುದು, ಅಂತೆಯೇ ವ್ಯಾಪಾರದ ದೃಷ್ಟಿಯಲ್ಲಲ್ಲ. ಅವರ ಜೀವನಕ್ರಮ ಕೇವಲ ತಮ್ಮ ತಮ್ಮ ನಿವಾಸಗಳಲ್ಲಿಯಲ್ಲದೆ, ಇಡೀ ಕೊಳಗೇರಿಯಲ್ಲಿ ನೆಲೆಸಿರುತ್ತದೆ. ಈ ಕೊಳಗೇರಿಗಳು, ಒಬ್ಬಗೆಯ ವೆಚ್ಚದ ತಾಣವನ್ನು ಬೇಡುತ್ತದೆ– ಕೇವಲ ಜೀವನಕ್ಕಾಗಿಯಲ್ಲದೆ, ವ್ಯಾಪಾರದ ದೃಷ್ಟಿಯಿಂದಲೂ (ಸಾನ್ಯಲ್ ಮತ್ತು ಭಟ್ಟಾಚಾರ್ಯ, 2009). ಈ ನಿವಾಸಿಗಳು, ವ್ಯಾಪಾರಕ್ಕಾಗಿ ತಮ್ಮತಮ್ಮ ಬವಣೆ, ಕಟ್ಟಳೆಗಳನ್ನು ಹಂಚಿಕೊಳ್ಳುತ್ತಾರೆ.

ನಗರಗಳಲ್ಲಿ ಭೂಮಿಯ ಬೆಲೆ ದಿನದಿಂದ ದಿನಕ್ಕೆ ಏರುತ್ತಲೇ ಇರುವ ಕಾರಣ, ಕೊಳಗೇರಿಗಳ ಪ್ರದೇಶಗಳಿಗೂ ಬೆಲೆ ಬಂದಿರುವುದು, ಸತ್ಯವಷ್ಟೆ. ಮತ್ತು ಈ ಕಾರಣದಿಂದಾಗಿ, ಕೊಳಗೇರಿಗಳಿಗೆ ನಗರೀಕರಣದ ಬಿಂಬ ಬೀರಿದ್ದು, ನವ–ನಿವಾಸಗಳನ್ನು ಉಚಿತವಾಗಿ, ಇಲ್ಲವೆ ಕಡಿಮೆ ದರದಲ್ಲಿ ಕಟ್ಟಿಕೊಡಲಾಗುತ್ತಿದೆ. ಇದಕ್ಕೆ ಉದಾಹರಣೆಯೆಂದರೆ ಧಾರಾವಿ ಪ್ರದೇಶ. ಆದರೆ, ಚಿಕ್ಕ ಜಾಗಗಳಲ್ಲಿ ಉತ್ಪಾದನೆಯು ದುಸ್ತರವೇ ಸರಿ. ಗುರುತ್ವಾಕರ್ಷಣೆಯ ನೀತಿ ಇದನ್ನು ಒಪ್ಪುವುದಿಲ್ಲ. ವೆಚ್ಚಗಳು ದುಬಾರಿಯಾಗುತ್ತಿರುವಾಗ, ಪ್ರದೇಶ ಹಿರಿದಾದರೆ, ಭರಿಸಲು ಸಾಧ್ಯವಿಲ್ಲ.

### ಉಪಸಂಹಾರ

ಅನೌಪಚಾರಿಕ ವಲಯಗಳು ವಿವಿಧ ವಲಯಗಳನ್ನು ಒಳಗೊಂಡಿದ್ದು, ಬೆಳವಣಿಗೆ–ಆಧಾರಿತ ಹಾಗೂ ಬದುಕು–ಆಧಾರಿತ ಉದ್ಯಮಗಳಾಗಿವೆ. ಈ ವಿವಿಧತೆ, ಭಾರತದ ಅನೌಪಚಾರಿಕ ವಲಯಗಳ ಗಾತ್ರವನ್ನು, ನಮ್ಮ ಕಾರ್ಮಿಕರು ಒಪ್ಪಿಕೊಂಡಾಗ. ಪ್ರಸ್ತುತ ಲಭ್ಯವಿರುವ ಕೃಷಿ–ಕಾರ್ಮಿಕರು ಚೆನ್ನಾಗಿಯೆ ಗುರುತಿಸಿಕೊಂಡಿದ್ದರೆ. ಕೃಷಿಯಲ್ಲಿ ಕಾರ್ಮಿಕರ ಸಂಖ್ಯೆ ಸಾಕಾಗುವಲ್ಲಿ, ಕಾರ್ಮಿಕರು ಕೆಲಸದ ನಿರೀಕ್ಷೆಯಲ್ಲಿ ನಗರಗಳಿಗೆ, ಗುಳೆ ಹೋಗುತ್ತಾರೆ. ಅನೌಪಚಾರಿಕ ವಲಯಗಳು ನಗರಗಳಲ್ಲಿ ಕಂಡುಬರುವವರೆಗೂ, ಕಾರ್ಮಿಕರು ಈ ಕೆಲಸಗಳಲ್ಲಿ ಇದ್ದೇ ಇರುತ್ತಾರೆ. ಹಾಗೆಯೇ ನಮ್ಮ ದೇಶದ ರಾಜಕೀಯ ಆರ್ಥಿಕತೆ ಇವರ ಮೇಲೆಯೇ ಅವಲಂಬಿತವಾಗಿರುತ್ತಾರೆ. ಜೀವನಕ್ರಮಕ್ಕೆ ನಿಗದಿತವಾದ ನಿಯಮಗಳು, ಬೆಳವಣಿಗೆ ಮತ್ತು ನಗರೀಕರಣ, ನಾವೆಲ್ಲರೂ ಒಂದೇ ಎಂಬ ತತ್ವವನ್ನು ಸಾರಬೇಕು. ಮಾತ್ರವಲ್ಲದೆ ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳನ್ನು ಒಂದೇ ಕ್ರಮದಲ್ಲಿ ಬೆಳೆಸಿದಲ್ಲಿ, ಆಡಳಿತಾರೂಢ ನಮ್ಮ ದೇಶ ಐಕ್ಯತೆಯನ್ನು ಸಾರುವಲ್ಲಿ ಹೆಚ್ಚು ಪ್ರಸ್ತುತವಾಗುತ್ತದೆ ಮತ್ತು ಆಸ್ತಿ ಹಕ್ಕುಗಳು ನಗರಗಳನ್ನು ಸಕಾರಾತ್ಮಕವಾಗಿ ಬೆಳೆಸುವಲ್ಲಿ ನಾಂದಿಯಾಗುತ್ತದೆ.

❑

**ನಮ್ಮ ಸ್ವಚ್ಛತೆ, ಅಂತರಂಗ ಹಾಗೂ ಬಹಿರಂಗ ಎರಡರಲ್ಲೂ ಇರಬೇಕು.**
**ಅಂತರಂಗ ಸ್ವಚ್ಛತೆ ಎಂದರೆ,**
**ಸತ್ಯಸಂಧತೆ.**
**ಪರಿಶುದ್ಧತೆಯ ಪ್ರತೀಕವೇ ಸತ್ಯಸಂಧತೆ;**
**ಅದು ಶಿಸ್ತಿನ ಮತ್ತೊಂದು ಹೆಸರು ಕೂಡಾ.**



# ಅನೌಪಚಾರಿಕ ವಲಯದ ಸ್ವರೂಪ ಮತ್ತು ಪರಿಕಲ್ಪನೆ

**ಅಶಿಮಾ ಮುಜುಂದಾರ್**

ಕನ್ನಡಕ್ಕೆ : ಸಾನ್ವಿ



**ದೇಶದ ಅರ್ಥವ್ಯವಸ್ಥೆಯ ಪ್ರಮುಖ ಭಾಗವೇ ಆಗಿರುವ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ನ್ಯೂನತೆಗಳನ್ನು ತುರ್ತಾಗಿ ಸರಿಪಡಿಸುವ ಅಗತ್ಯವಿದೆ. ಇಂತಹ ದಿಟ್ಟ ಕ್ರಮಗಳಿಂದ ಅನೌಪಚಾರಿಕ ವಲಯಕ್ಕೆ ಸಂಬಂಧಪಟ್ಟ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗಲಿದೆ.**

ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಯಲ್ಲಿ ಕಂಡು ಬರುವ ಎರಡು ಬಗೆಯ ಅರ್ಥ ವ್ಯವಸ್ಥೆಯನ್ನು ಕೂಲಂಕಂಷವಾಗಿ ಅಧ್ಯಯನ ನಡೆಸಿದ ಫಲವಾಗಿ "ಅನೌಪಚಾರಿಕ ವಲಯ' ಎಂಬ ಹೊಸ ಪರಿಕಲ್ಪನೆ ಮೊಳಕೆಯೊಡೆಯಿತು. ಇದು ಸಾಧ್ಯವಾಗಿದ್ದು ಕಳೆದ ಶತಮಾನದ 50–60ರ ದಶಕದ ಅವಧಿಯಲ್ಲಿ. ಇಂತಹ ಅರ್ಥ ವ್ಯವಸ್ಥೆಯನ್ನು ಅಧ್ಯಯನ ಮಾಡುವ ಮೂಲಕ "ಅನೌಪಚಾರಿಕ ವಲಯ' ಕುರಿತಂತೆ ತಮ್ಮದೇ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಅರ್ಥಶಾಸ್ತ್ರಜ್ಞರ ಪೈಕಿ ಲೆವಿಸ್– ಫೆ ರ್‍ಯಾನಿಸ್ ಹಾಗೂ ಹ್ಯಾರಿಸ್–ಟೊಡ್ಯಾರೊ ಪ್ರಮುಖರು.

ಲೆವಿಸ್–ಫೈರ್‍ಯಾನಿಸ್ ಅವರು ಅಭಿವೃದ್ಧಿಶೀಲ ಅರ್ಥವ್ಯವಸ್ಥೆಯನ್ನು "ಗ್ರಾಮೀಣ' ಮತ್ತು "ನಗರ' ವಲಯಗಳನ್ನಾಗಿ ವಿಂಗಡಿಸಿದರು. ಇದನ್ನು ಒಪ್ಪದ ಹ್ಯಾರಿಸ್–ಟೊಡ್ಯಾರೊ ಜೋಡಿ, ನಗರ ವಲಯದ ಆರ್ಥಿಕತೆ ಟಿಸಿಲೊಡೆದಾಗ ಅನೌಪಚಾರಿಕ ವಲಯಗಳು ಸೃಷ್ಟಿಯಾಗುತ್ತವೆ ಎಂದೇ ಪ್ರತಿಪಾದಿಸಿದರು.

ಒಂದು ದೇಶದ ಅರ್ಥವ್ಯವಸ್ಥೆಯಲ್ಲಿನ ಇಂತಹ ಇಬ್ಬಗೆಯ ಸಿದ್ಧಾಂತ ಹೆಚ್ಚು ಪ್ರಚಾರಕ್ಕೆ ಬಂದದ್ದು ಕಳೆದ ಶತಮಾನದ 70ರ ದಶಕದಲ್ಲಿ ಎನ್ನಬಹುದು. ಇಂತಹ ಇಬ್ಬಗೆಯ ಆರ್ಥಿಕ ಸಿದ್ಧಾಂತವನ್ನು ಆಧುನಿಕ ನಗರಗಳ ಅರ್ಥ ವ್ಯವಸ್ಥೆಗೆ ಮಾತ್ರ ಅನ್ವಯಿಸಬಹುದು ಎಂಬ ನಂಬಿಕೆ ಮನೆ ಮಾಡಿದ್ದ ಕಾಲವದು. ಇದಕ್ಕೆ ಅರ್ಥಶಾಸ್ತ್ರಜ್ಞರು ನೀಡುತ್ತಿದ್ದ ಕಾರಣ ಹೀಗಿತ್ತು.

"ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗ್ರಾಮೀಣ ಪ್ರದೇಶದಿಂದ ನಗರದತ್ತ ಕಂಡು ಬರುವ ನಿರಂತರ ವಲಸೆ, ಜನಸಂಖ್ಯೆಯಲ್ಲಿ ಹೆಚ್ಚಳದಂತಹ ವಿದ್ಯಮಾನಗಳನ್ನು ಸಂಬಂಧಪಟ್ಟ ಅರ್ಥವ್ಯವಸ್ಥೆ ಅರಗಿಸಿಕೊಳ್ಳಲು ವಿಫಲಗೊಂಡಾಗ ಗ್ರಾಮೀಣ ಮತ್ತು ನಗರ ವಲಯಗಳು ಕಂಡು ಬರುತ್ತವೆ" ಎಂಬುದಾಗಿ ಹೇಳಿದರು.

ಕೀನ್ಯಾ, ಕೊಲಂಬಿಯಾ, ಶ್ರೀಲಂಕಾ ಮತ್ತು ಫಿಲಿಪ್ಪೈನ್ಸ್ ನಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಅನುಷ್ಠಾನಕ್ಕೆ ತಂದಿರುವ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳು ಈ ಮೇಲಿನ ಅಂಶವನ್ನು ವಿಶದೀಕರಿಸುತ್ತವೆ. ಇದಕ್ಕೆ ಕಾರಣವೂ ಸ್ಪಷ್ಟ. ಮೇಲೆ ತಿಳಿಸಿದ ದೇಶಗಳಲ್ಲಿ ನಡೆಯುವ ಬಹುತೇಕ ಉತ್ಪಾದನಾ ಚಟುವಟಿಕೆಗಳು ಔಪಚಾರಿಕ (ಸಾಂಪ್ರದಾಯಿಕ ಎಂದೂ ಕರೆಬಹುದು) ವ್ಯವಸ್ಥೆಯಡಿ ನಡೆಯುತ್ತಿಲ್ಲ.

ಔಪಚಾರಿಕ ವಲಯದ ಅಸ್ತಿತ್ವದ ಜೊತೆಗೆ ಇಂತಹ ವಲಯಗಳನ್ನು ವಿಸ್ತರಿಸುವಂತಹ ವ್ಯವಸ್ಥೆ ಇರುವುದನ್ನು ಕೀನ್ಯಾದಲ್ಲಿ ಅನುಷ್ಠಾನಗೊಂಡ ಕಾರ್ಯಕ್ರಮದ ಮೂಲಕ ಗುರುತಿಸಲು ಸಾಧ್ಯವಾಯಿತು. ಕೀನ್ಯಾದೇಶದಲ್ಲಿ ಅನುಷ್ಠಾನಗೊಳಿಸಿದ ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳಿಂದ ಆ ದೇಶದಲ್ಲಿ ಅಸ್ತಿತ್ವದಲ್ಲಿದ್ದ ಪರಂಪರಾಗತ ಅರ್ಥವ್ಯವಸ್ಥೆಯನ್ನು(ವಲಯ ಎನ್ನಬಹುದು) ಗುರುತಿಸಲು ಸಾಧ್ಯವಾಯಿತು. ಸಣ್ಣ ಪುಟ್ಟ ಉದ್ದಿಮೆಗಳು, ನೊಂದಾಯಿಸುವ ಗೊಡವೆಗೆ ಹೋಗದೇ ತಮ್ಮ ಪಾಡಿಗೆ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿದ್ದವು. ಇದನ್ನು ಗಮನಿಸಿಯೇ ಕೀನ್ಯಾದಲ್ಲಿದ್ದ "ಪರಂಪರಾಗತ ವಲಯ"ವನ್ನೂ ಅನೌಪಚಾರಿಕ ವಲಯ ಎಂದು ಕರೆಯಲಾಯಿತು.

ಸಹಾಯಕ ಪ್ರಾಧ್ಯಾಪಕಿ, ನಾರ್ತ್ ಗೌಹಾತಿ ಕಾಲೇಜ್, ಅಸ್ಸಾಂ. Email : ashimamajumdaro11@gmail.com

ಅನೌಪಚಾರಿಕ ವಲಯ ಅಸ್ತಿತ್ವದಲ್ಲಿರುವ ಕಾರಣಗಳನ್ನೂ ಹೀಗೆ ವಿಶ್ಲೇಷಿಸಲಾಯಿತು. ಆ ದೇಶದಲ್ಲಿ ಹೆಚ್ಚುತ್ತಿದ್ದ ಕಾರ್ಮಿಕ ವರ್ಗಕ್ಕೆ ಒಂದೆಡೆ ಉದ್ಯೋಗಾವಕಾಶ ಹಾಗೂ ಆ ಮೂಲಕ ನಿರ್ದಿಷ್ಟ ಆದಾಯವನ್ನು ನೀಡಲು ಕೃಷಿ ಕ್ಷೇತ್ರ ಹಾಗೂ ಇತರ ಗ್ರಾಮೀಣ ಭಾಗದ ಚಟುವಟಿಕೆಗಳು ವಿಫಲವಾಗಿದ್ದರೆ, ಇನ್ನೊಂದೆಡೆ ಆಧುನಿಕ ಕೈಗಾರಿಕೆಗಳು, ಸೇವಾ ಕ್ಷೇತ್ರ ಸಹ ಈ ಸಮಸ್ಯೆಗೆ ಉತ್ತರ ನೀಡಲಿಲ್ಲ. ಇದು ಅನೌಪಚಾರಿಕ ವಲಯದ ಅಸ್ತಿತ್ವಕ್ಕೆ ಪ್ರಮುಖ ಕಾರಣವಾಯಿತು.

ಅಕ್ರಾ, ಘಾನಾ ಮತ್ತಿತರೆಡೆ ಕಂಡು ಬಂದ ಇಂತಹ ಆರ್ಥಿಕ ಚಟುವಟಿಕೆಗಳ ಅಧ್ಯಯನ ಕೈಗೊಂಡಿದ್ದ ಹಾರ್ಟ್ ಎಂಬ ಅರ್ಥಶಾಸ್ತ್ರಜ್ಞ ಮೊಟ್ಟ ಮೊದಲಬಾರಿಗೆ "ಅನೌಪಚಾರಿಕ ವಲಯ" ಎಂಬ ಪದ ಬಳಸುವ ಮೂಲಕ ಇಂತಹ ಇಬ್ಬಗೆಯ ಅರ್ಥವ್ಯವಸ್ಥೆಗೆ ಹೊಸ ವ್ಯಾಖ್ಯಾನ ನೀಡಿದ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಕಂಡು ಬಂದ ತೀವ್ರ ಸ್ವರೂಪದ ನಗರೀಕರಣ ಪ್ರಕ್ರಿಯೆ ಗ್ರಾಮೀಣ ಪ್ರದೇಶದ ಆರ್ಥಿಕತೆಯಲ್ಲಿ ಸ್ಥಿತ್ಯಂತರಕ್ಕೆ ಕಾರಣವಾಯಿತು. ಈ ಬದಲಾವಣೆಯನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದಾಗ ನಗರ ಪ್ರದೇಶದ ಅನೌಪಚಾರಿಕ ವಲಯ ಒಂದು ಸಾಂಸ್ಥಿಕ ರೂಪ ಪಡೆದ ಬಗೆಯನ್ನು ನಾಲ್ಕು ಹಂತಗಳಾಗಿ ವಿಂಗಡಿಸಬಹುದಾಗಿದೆ.

1970ರ ದಶಕ– ಅನೌಪಚಾರಿಕ ವಲಯ ಎಂಬ ಪರಿಕಲ್ಪನೆ ಒಡಮೂಡಿ ತನ್ನ ಬೇರುಗಳನ್ನು ಗಟ್ಟಿಗೊಳಿಸಿದ್ದು. 1980ರ ದಶಕ– ಈ ಪರಿಕಲ್ಪನೆ ವ್ಯಾಪಕವಾಗಿ ಸ್ವೀಕಾರಗೊಂಡಿದ್ದಲ್ಲದೇ ಇದರ ಆಧಾರದ ಮೇಲೆ ಅನೇಕ ದೇಶಗಳು ನೂತನ ಯೋಜನೆಗಳನ್ನು ಜಾರಿಗೆ ತಂದವು.

1990ರ ದಶಕ– ವಿವಿಧ ದೇಶಗಳಲ್ಲಿ ಲಭಿಸಿದ ಯಶಸ್ಸಿನಿಂದಾಗಿ ಅನೌಪಚಾರಿಕ ವಲಯ ಎಂಬ ಪರಿಕಲ್ಪನೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಸಿಕ್ಕಿತು. ಅಲ್ಲದೇ, ಅಧಿಕೃತವಾಗಿ ಅಂತಾರಾಷ್ಟ್ರೀಯ ಕಾರ್ಯಕ್ರಮವಾಗಿಯೂ ಜಾರಿಗೊಂಡಿತು.

2000ನೇ ಇಸ್ವಿ– ಹೊಸ ದೃಷ್ಟಿಕೋನ ಹಾಗೂ ವಿಸ್ತೃತ ಅಧ್ಯಯನದ ಫಲವಾಗಿ ಈ ಪರಿಕಲ್ಪನೆ ಹೊಸ ಸಾಧ್ಯತೆಗಳನ್ನು ಹುಡುಕುವಂತೆ ಮಾಡಿತು. ಇನ್ನೊಂದೆಡೆ ಅಭಿವೃದ್ಧಿಶೀಲದೇಶಗಳಲ್ಲಿರುವ ಬಡವರಿಗೆ ಉದ್ಯೋಗ ಒದಗಿಸುವಲ್ಲಿ ಆದಾಯ ತರುವಲ್ಲಿ ಈ ವಲಯದ ಪಾತ್ರ ಮತ್ತು ಮಹತ್ವದ ಬಗ್ಗೆ ಚರ್ಚೆ ಇನ್ನೂ ನಡೆಯುತ್ತಿದೆ.

ಆದರೆ, ಅನೌಪಚಾರಿಕ ವಲಯ ಕುರಿತಂತೆ ಅಧ್ಯಯನ ಅತ್ಯಗತ್ಯ. ಈ ವಲಯವನ್ನು ಕಡೆಗಣಿಸಲು ಸಾಧ್ಯವಿಲ್ಲ ಎನ್ನುವ ಐಎಲ್ಓ, ಅಂತಾರಾಷ್ಟ್ರೀಯ ಕಾರ್ಮಿಕ ಸಮಾವೇಶದ ವರದಿಯಲ್ಲಿ ಇದರ ಮಹತ್ವವನ್ನು ಈ ರೀತಿ ಹೇಳಿದೆ.

ಅಭಿವೃದ್ಧಿಶೀಲ ಹಾಗೂ ಸ್ಥಿತ್ಯಂತರಗೊಳ್ಳುತ್ತಿರುವ ದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅನೌಪಚಾರಿಕ ವಲಯದಲ್ಲಿಯೇ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತಿದೆ. ಔಪಚಾರಿಕ ಅರ್ಥವ್ಯವಸ್ಥೆಯಲ್ಲಿ ಬಹುತೇಕ ಜನರಿಗೆ ಉದ್ಯೋಗಸಿಗುವುದು ಇಲ್ಲವೇ ಹೊಸದಾಗಿ ವ್ಯಾಪಾರ–ಉದ್ದಿಮೆ ಆರಂಭಿಸುವುದು ಕಷ್ಟವಾಗಿದೆ. (ಐಎಲ್ಓ 2002ಎ) ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿದ್ದ ಅನೌಪಚಾರಿಕ ವಲಯ ಆ ದೇಶಗಳ ಪ್ರಗತಿಯ ಸ್ಥಿತ್ಯಂತರ ಘಟ್ಟ ಎಂದೇ ಪರಿಗಣಿಸಲಾಗುತ್ತಿತ್ತು. ಇಂತಹ ವಲಯಗಳ ಫಲವಾಗಿಯೇ ಅಭಿವೃದ್ಧಿ ಪ್ರಕ್ರಿಯೆಗೆ ಹೆಚ್ಚು ವೇಗ ದೊರೆಯಿತು ಎಂಬುದು ಅಷ್ಟೇ ಸತ್ಯ. ಅಲ್ಲದೇ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಂಡು ಬಂದ ಕಾರ್ಮಿಕರ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಇದರಿಂದಾಗಿ ಉದ್ಭವಿಸುತ್ತಿದ್ದ ಸಮಸ್ಯೆಗಳಿಗೆ ಅನೌಪಚಾರಿಕ ವಲಯವೇ ಪರಿಹಾರ ಎಂದು ನಂಬಲಾಯಿತು. ಕಾಲಾನುಕ್ರಮದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯಗಳು ಸ್ಪರ್ಧಾತ್ಮಕತೆ ಮತ್ತು ವೆಚ್ಚ ಸರಿದೂಗಿಸುವ ಪ್ರಯತ್ನಕ್ಕಿಳಿದ ಹಿನ್ನಲೆಯಲ್ಲಿ 'ರಾಚನಿಕ ಹೊಂದಾಣಿಕೆ ಕಾರ್ಯಕ್ರಮ' ಜಾರಿಗೆ ತಂದವು. ಇದರ ಪರಿಣಾಮವಾಗಿ ಅಭಿವೃದ್ಧಿ ದರದಲ್ಲಿ ಏರಿಕೆ ಕಂಡು ಬಂದರೂ ಉದ್ಯೋಗಾವಕಾಶಗಳ ಪ್ರಮಾಣ ಗಣನೀಯವಾಗಿ ಕಡಿಮೆಯಾಯಿತು. ಈ ಬೆಳವಣಿಗೆ ಪರೋಕ್ಷವಾಗಿ "ಅನೌಪಚಾರಿಕ ವಲಯ"ದ ವಿಸ್ತರಣೆ ನೆಲೆಯೂರಲು ಕಾರಣವಾಯಿತು.

ಇದೇ ಕಾರಣಕ್ಕಾಗಿ "ಅನೌಪಚಾರಿಕ ವಲಯ" ಎಂಬ ಪರಿಕಲ್ಪನೆಯ ಹುಟ್ಟು



ಬೆಳವಣಿಗೆ ಮತ್ತು ಇತರ ಆಯಾಮಗಳ ವಿದ್ಯಮಾನಗಳ ಅಧ್ಯಯನಕ್ಕೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನೇ ಆಯ್ಕೆಮಾಡಿಕೊಳ್ಳಲಾಯಿತು.

ಅನೌಪಚಾರಿಕ ವಲಯ ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಅಸ್ತಿತ್ವದಲ್ಲಿದೆ. ಆದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಬಡವರ ಪಾಲಿಗೆ ಈ ವಲಯವು ಉಳಿವಿಗಾಗಿನ ಪ್ರಕ್ರಿಯೆ ಎನ್ನಬಹುದು. ಆದರೆ, ಅದೇ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಈ ವಲಯ ಉದ್ದಿಮೆಗಳಿಗೆ ಹೆಚ್ಚು ಸ್ವಾಯತ್ತತೆ, ಸ್ವಾತಂತ್ರ್ಯ ಒದಗಿಸುತ್ತದೆ. ಹೆಸರೇ ಸೂಚಿಸುವಂತೆ, ಉಳಿವಿಗಾಗಿ ನಡೆಯುವ ಪ್ರಕ್ರಿಯೆಯಾದ್ದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅನೌಪಚಾರಿಕ ವಲಯ ಕಾರ್ಮಿಕರಿಗೆ ಕಡಿಮೆ ಆದಾಯ ತರುವ ಜೊತೆಗೆ ಒಟ್ಟಾರೆ ವ್ಯವಸ್ಥೆಯಲ್ಲಿ ಕಡಿಮೆ ಬಂಡವಾಳ ಸಂಗ್ರಹಕ್ಕೆ ಕಾರಣವಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾದ ಅಂಶವೆಂದರೆ, (ಯುಎನ್‌ಸಿಎಚ್‌ಎಸ್ 2006) ವರದಿ ಪ್ರಕಾರ ಅನೌಪಚಾರಿಕ ವಲಯದ ಉದ್ದಿಮೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಲಾಭದಲ್ಲಿ ನಡೆಯುತ್ತಿವೆ ಎಂದು ಈ ವಲಯ ಕುರಿತು ನಡೆದ ಅಧ್ಯಯನ ಹೇಳುತ್ತಿದೆ. ಆದರೆ, ಇದು ಎಷ್ಟರ ಮಟ್ಟಿಗೆ ಸತ್ಯ ಎಂಬುದು ಚರ್ಚಾಸ್ಪದ.

ಅನೌಪಚಾರಿಕ ವಲಯಗಳಿರುವ ದೇಶಗಳಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಈ ವಲಯದ ಪಾಲು ಹೆಚ್ಚು, ಅಷ್ಟು ಮಾತ್ರವಲ್ಲ ದೇಶದ ಒಟ್ಟು ಆಂತರಿಕ ಉತ್ಪಾದನೆಯಲ್ಲಿ ಸಹ ಈ ವಲಯದ ಪಾಲು ಹೆಚ್ಚುತ್ತಿರುವುದು ಈ ಅಧ್ಯಯನದಿಂದ ಕಂಡು ಬಂದಿದೆ.

ಉತ್ತರ ಆಫ್ರಿಕಾದ ಕೃಷಿಯೇತರ ಕ್ಷೇತ್ರದ ಜಿಡಿಪಿಯಲ್ಲಿನ ಅನೌಪಚಾರಿಕ ವಲಯದ ಪಾಲು ಶೇ.27 ಕ್ಕಿಂತ ಕಡಿಮೆ ಇದ್ದರೆ, ಸಹಾರಾ ಆಫ್ರಿಕಾದಲ್ಲಿ ಈ ಪ್ರಮಾಣ ಶೇ.41ರಷ್ಟು. ಲ್ಯಾಟಿನ್ ಅಮೆರಿಕದ ಜಿಡಿಪಿಗೆ ಅನೌಪಚಾರಿಕ ವಲಯದ ಕೊಡುಗೆ ಶೇ. 29ರಷ್ಟಿದ್ದರೆ, ಏಷ್ಯಾದ ಜಿಡಿಪಿಯಲ್ಲಿ

ಶೇ 41ಷ್ಟು. ಇನ್ನು ಕಾಂಬೋಡಿಯಾದ ಕೃಷಿಯೇತರ ಜಿಡಿಪಿಯಲ್ಲಿ ಅನೌಪಚಾರಿಕ ವಲಯದ ಪಾಲು ಶೇ. 80. ಒಟ್ಟಾರೆ ಹೇಳಬೇಕು ಎಂದರೆ, ಕೃಷಿಯೇತರ ಜಿಡಿಪಿಯಲ್ಲಿ ಅನೌಪಚಾರಿಕ ವಲಯದ ಕೊಡುಗೆಯ ಮಹತ್ವವನ್ನು ಈ ಅಂಶಗಳು ಸಾರುತ್ತವೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಗತಿಗೆ ಅನೌಪಚಾರಿಕ ವಲಯದ ಪಾತ್ರ, ಕೊಡುಗೆ ಆಧಾರದಲ್ಲಿ ನೀತಿ ನಿರೂಪಣೆ ಮಾಡಲು ಈ ಎಲ್ಲ ಅಂಶಗಳು ಸಹಕಾರಿಯಾಗುತ್ತಿವೆ. ಅದರಲ್ಲೂ ಈ ವಲಯ ಕೌಶಲರಹಿತ ಕಾರ್ಮಿಕರು ಹಾಗೂ ಸ್ಥಳೀಯವಾಗಿ ದೊರೆಯುವ ಸಂಪನ್ಮೂಲ ಬಳಸುವುದರಿಂದ ಸಂಶೋಧಕರು, ನೀತಿ ನಿರೂಪಕರು ಈ ವಲಯದ ಸಾಧ್ಯತೆಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದಾರೆ, ಉದ್ಯೋಗ ಸೃಷ್ಟಿ, ಉತ್ಪಾದನೆ, ಆದಾಯ ಹೆಚ್ಚಿಸುವಲ್ಲಿ ಈ ವಲಯ ಮಹತ್ವದ ಪಾತ್ರ ವಹಿಸುವ ದೃಷ್ಟಿಯಿಂದ ಈ ವಲಯವು ಅಭಿವೃದ್ಧಿಶೀಲ ರಾಷ್ಟ್ರಗಳ ಅರ್ಥವ್ಯವಸ್ಥೆಯ ಮಹತ್ವದ ಅಂಗವಾಗಿದೆ.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿ (ಯುಎನ್ಇಸಿಓಎಸ್‌ಡಿಸಿ) ಸ್ವೀಕರಿಸುವ ಅರ್ಥದಂತೆ ಅಸಾಂಪ್ರದಾಯಿಕ ವಲಯದ ಅರ್ಥವನ್ನು ಹೀಗೆ ವಿವರಿಸಬಹುದು.

– ಈ ವಲಯವು

ಅ) ಉತ್ಪಾದನೆ, ಉತ್ಪನ್ನ ಮತ್ತು ಸೇವೆಗಳ ಮಾರಾಟದಲ್ಲಿ ತೊಡಗಿರುವ ಅಸಾಂಸ್ಥಿಕ ಉದ್ದಿಮೆ (ಅಸಾಂಪ್ರದಾಯಿಕ ಉದ್ದಿಮೆ) ಅಥವಾ ಗೃಹಕೈಗಾರಿಕೆಗಳನ್ನು ಪ್ರತಿನಿಧಿಸುತ್ತದೆ.

ಆ) ಪೂರ್ವ ನಿರ್ಧರಿತ ಪ್ರಮಾಣಕ್ಕಿಂತ ಕಡಿಮೆ ಉದ್ಯೋಗ ಸೃಷ್ಟಿ ಸಾಮರ್ಥ್ಯ ಹೊಂದಿರುವ ಉದ್ದಿಮೆ.

ಇನ್ನೂ ವಿಸ್ತಾರವಾಗಿ ಹೇಳಬಹುದಾದರೆ, ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಅಸಂಘಟಿತ ವಲಯವು ಮುಖ್ಯವಾಗಿ ಭೂರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿಸಣ್ಣ ರೈತರು, ಹೈನುಗಾರಿಕೆ, ಪಶುಸಂಗೋಪನೆ, ಕೋಳಿಸಾಗಣಿಕೆ, ಮೀನುಗಾರಿಕೆಯಲ್ಲಿ ತೊಡಗಿರುವವರು, ಕುಶಲಕರ್ಮಿಗಳು, ಅರಣ್ಯ ಕಾರ್ಮಿಕರು, ಸೇಂದಿ ಇಳಿಸುವವರನ್ನು ಒಳಗೊಂಡಿರುತ್ತದೆ. ಅದೇ ನಗರ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ, ಬಡಗಿತನ, ವ್ಯಾಪಾರ, ಸಾರಿಗೆ, ಸಂಪರ್ಕ ಕ್ಷೇತ್ರಗಳಲ್ಲಿ ತೊಡಗಿರುವವರನ್ನೂ ಕಾಣಬಹುದು. ಓಣಿ ಬಡಾವಣೆಗಳಲ್ಲಿ ತಿರುಗಾಡಿ ಮಾರಾಟ ಮಾಡುವವರು, ಬೀದಿ ಬದಿ ವ್ಯಾಪಾರ, ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಸಹ ದುಡಿಯುವವರನ್ನೂ ಕಾಣಬಹುದು.

ಐಎಲ್ಓ ಅಸಾಂಪ್ರದಾಯಿಕ ವಲಯದ ಚಟುವಟಿಕೆಯನ್ನು ಹೀಗೆ ಅರ್ಥೈಸಿದೆ. "ಕಠಿಣ ಪರಿಶ್ರಮದಿಂದ ಕೆಲಸ ಮಾಡುವ ಬಡವರು, ಸರ್ಕಾರದಿಂದ ಗುರುತಿಸಲ್ಪಡದ, ದಾಖಲು ಮಾಡದ, ಸಂರಕ್ಷಣೆಯಾಗದ ಅಥವಾ ನಿಯಂತ್ರಣಕ್ಕೆ ಒಳಪಡದವರ ಚಟುವಟಿಕೆಯೇ ಅನೌಪಚಾರಿಕ ವಲಯ ಸುಲಭವಾಗಿ ಕಾರ್ಯಾರಂಭ ಅಥವಾ ಉದ್ಯೋಗ ಆರಂಭ ಸ್ಥಳೀಯ ಸಂಪನ್ಮೂಲದ ಮೇಲೆ ವಿಶ್ವಾಸ, ಕುಟುಂಬಗಳ ಒಡೆತನದ ಉದ್ದಿಮೆಗಳು, ಕಾರ್ಮಿಕರ ಶ್ರಮ ಹಾಗೂ ತಂತ್ರಜ್ಞಾನದ ಅಳವಡಿಕೆ ಹಾಗೂ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಹೊರಗಡೆಯೇ ಕೌಶಲ ಕರಗತ ಮಾಡಿಕೊಳ್ಳದ, ನಿಯಂತ್ರಣಕ್ಕೆ ಒಳಪಡದ ಹಾಗೂ ನಿಯಂತ್ರಣಕ್ಕೆ ಒಳಪಡದ ಹಾಗೂ ಸ್ಪರ್ಧಾತ್ಮಕ ಮಾರುಕಟ್ಟೆ (ಐಎಲ್ಓ1972)" ಎಂದೂ ಹೇಳಲಾಗಿದೆ.

ಇಂತಹ ವಲಯದಲ್ಲಿ ಕಾರ್ಯ ನಿರ್ವಹಿಸುವ ಅನೌಪಚಾರಿಕ ಕೆಲಸಗಾರರನ್ನೂ ಸಹ ಹೀಗೆ ವಿವರಿಸಲಾಗಿದೆ. ಯಾರ ಉದ್ಯೋಗವು ಕಾರ್ಮಿಕ ಕಾಯ್ದೆ, ಸಾಮಾಜಿಕ ಸಂರಕ್ಷಣೆ ಹಾಗೂ ಕೆಲ ಸೌಲಭ್ಯಗಳಿಗೆ ಒಳಪಟ್ಟಿರುವುದಿಲ್ಲವೋ ಅಂತಹ ನೌಕರರನ್ನು "ಅನೌಪಚಾರಿಕ ಕಾರ್ಮಿಕರು" (ಉದ್ಯೋಗಿಗಳು) ಎಂದು ಹೇಳಲಾಗುತ್ತದೆ. ಅದೇ ರೀತಿ ಅನೌಪಚಾರಿಕ ಆರ್ಥಿಕತೆ ಎಂಬುದು ಅಸಾಂಪ್ರದಾಯಿಕವಲಯ ಮತ್ತು ಅಸಾಂಪ್ರದಾಯಿಕ ಉದ್ಯೋಗಿಗಳನ್ನೂ ಒಳಗೊಂಡಿರುತ್ತದೆ.(ಐಎಲ್ಓ2002).

ಅರ್ಥಶಾಸ್ತ್ರಜ್ಞ ಶಿನಿ ಅನೌಪಚಾರಿಕ ವಲಯ ಕುರಿತು ನೀಡಿದ ವ್ಯಾಖ್ಯಾನ ಹೆಚ್ಚು ವಾಸ್ತವ ಎನಿಸುತ್ತದೆ. "ಆದಾಯ, ಮೌಲ್ಯವರ್ಧಿತ ಮತ್ತು ಇತರ ತೆರಿಗೆಗಳನ್ನು ಪಾವತಿಸುವುದನ್ನು ಬಿಡುವುದು, ಸಾಮಾಜಿಕ



ಭದ್ರತೆಗೆ ಸಂಬಂಧಿಸಿದಂತೆ ದೇಣಿಗೆ ವಂತಿಗೆ ನೀಡದೇ ಇರುವುದು, ನಿರ್ದಿಷ್ಟ ಕಾನೂನಾತ್ಮಕ ಪ್ರಮಾಣಗಳನ್ನು ತಲುಪದೇ ಇರುವುದು, (ಉದಾಹರಣೆ: ಕಾರ್ಮಿಕರಿಗೆ ಕನಿಷ್ಠ ವೇತನ, ಗರಿಷ್ಠ ಕೆಲಸದ ಅವಧಿ, ಸುರಕ್ಷತಾ ಕ್ರಮಗಳು ಸೇರಿದಂತೆ ಕಾರ್ಮಿಕರಿಗೆ ಸಂಬಂಧಿಸಿದ ವಿಷಯಗಳು), ಕೆಲ ಆಡಳಿತಾತ್ಮಕ ಪ್ರಕ್ರಿಯೆಗಳಂತೆ ನಡೆಯದಿರುವುದು ಇವೇ ಮುಂತಾದ ವಿಷಯಗಳನ್ನು ಬಹಿರಂಗಗೊಳಿಸದ ಸಾರ್ವಜನಿಕ ವಲಯ ಸಂಸ್ಥೆಗಳು (ಸರ್ಕಾರ) ಕೈಗೊಳ್ಳುವ ಮಾರುಕಟ್ಟೆ ಆಧಾರಿತ ಕಾನೂನುಬದ್ಧವಾದ ಉತ್ಪಾದನೆ ಮತ್ತು ಸೇವೆ ಒದಗಿಸುವುದನ್ನು ಅನೌಪಚಾರಿಕ ವಲಯ' ಎಂದು ವಿವರಿಸಿದ್ದಾರೆ. ಈ ವ್ಯಾಖ್ಯಾನದ ತಳಹದಿಯಲ್ಲಿ ವಿಶ್ಲೇಷಿಸಿದಾಗ ಅನೌಪಚಾರಿಕ ವಲಯದಲ್ಲಿ ನಡೆಯುವ ವಿವಿಧ ಚಟುವಟಿಕೆಗಳಿಗೆ ಕಾನೂನಾತ್ಮಕ ಸ್ಥಾನಮಾನ ಸಿಗುತ್ತದೆ. ಇನ್ನೊಂದೆಡೆ ಕಾರ್ಮಿಕರ ಕಲ್ಯಾಣ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಮಾಣಗಳ ಕೊರತೆಯೂ ಕಂಡುಬರುತ್ತದೆ.

ಅನೌಪಚಾರಿಕ ಅರ್ಥವ್ಯವಸ್ಥೆಯನ್ನು ಗುರುತಿಸಿದ ಆರ್ಥಿಕತೆಯ ಒಂದು ಭಾಗವಾಗಿಯೂ ಪರಿಗಣಿಸಬಹುದು. ರಾಷ್ಟ್ರೀಯ ಲೆಕ್ಕಪತ್ರ ವ್ಯವಸ್ಥೆ 1993ರಲ್ಲಿ ಎನ್ಓಇಯನ್ನು ಭೂಗತ, ಕಾನೂನುಬಾಹಿರ, ಅಸಾಂಪ್ರದಾಯಿಕವಲಯ, ಅಂತಿಮವಾಗಿ ಸ್ವಯಂ ಉಪಭೋಗಕ್ಕಾಗಿ ಮನೆಗಳಲ್ಲಿ ನಡೆಯುವ ಉತ್ಪಾದನೆ ಹಾಗೂ ಅಂಕಿ–ಅಂಶ ಸಂಗ್ರಹ ಕಾರ್ಯ ದಾಖಲಾಗದೇ ಕೈತಪ್ಪಿ ಹೋಗಿರುವ ಚಟುವಟಿಕೆಗಳು ಎಂದು ವಿಂಗಡಿಸಿದೆ. ಅದೇ ರೀತಿ 15ನೇ ಅಂತಾರಾಷ್ಟ್ರೀಯ ಕಾರ್ಮಿಕರ ಅಂಕಿ–ಅಂಶಗಳ ಸಮಾವೇಶ ಕೈಗೊಂಡ ಗೊತ್ತುವಳಿ ಸಹ ಅನೌಪಚಾರಿಕ ವಲಯವನ್ನು "ಸಂಬಂಧಪಟ್ಟ ಜನರಿಗೆ ಉದ್ಯೋಗ ಒದಗಿಸಿವೆ. ಆದಾಯ ಬರುವಂತೆ ಮಾಡುವ

ನಿಟ್ಟಿನಲ್ಲಿ ಉತ್ಪಾದನಾ ಕಾರ್ಯದಲ್ಲಿ ಮತ್ತು ಸೇವಾ ಕ್ಷೇತ್ರದಲ್ಲಿ ನಿರತ ಘಟಕಗಳನ್ನು ಒಳಗೊಂಡ ವ್ಯವಸ್ಥೆಯೇ ಅನೌಪಚಾರಿಕ ವಲಯ" ಎಂದು ಅರ್ಥೈಸಿದೆ.

ಸಾಮಾನ್ಯವಾಗಿ ಇಂತಹ ಘಟಕಗಳು ಸಂಘಟನಾತ್ಮಕವಾಗಿ ಉನ್ನತ ಮಟ್ಟದಲ್ಲಿ ಇರುವುದಿಲ್ಲ. ಹೂಡಿಕೆಯಾದ ಬಂಡವಾಳ ಮತ್ತು ಕಾರ್ಮಿಕರ ಸಂಖ್ಯೆಯೂ ಗಣನೀಯವಾಗಿ ಇರುವುದಿಲ್ಲ. ಇನ್ನು, ಕಾರ್ಮಿಕರ ನೇಮಕಾತಿ ವಿಷಯದಲ್ಲಿಯೂ ಬೇರೆ ಮಾನದಂಡ ಕಾಣಬಹುದು. ಇಂತಹ ಘಟಕಗಳಲ್ಲಿ ದುಡಿಯುವ ಬಹುತೇಕ ಕಾರ್ಮಿಕರು ಮಾಲಿಕರ ಬಂಧುಗಳು, ಪರಿಚಯಸ್ಥರು, ಇಲ್ಲವೇ ಸಾಂದರ್ಭಿಕ ಹೊಂದಾಣಿಕೆ ಮೇಲೆಯೇ ಕೆಲಸ ಮಾಡುತ್ತಿರುತ್ತಾರೆ. ಇಂತಹ ವೈವಿಧ್ಯಗಳ ಮೇಲೆ ಬೆಳಕು ಚೆಲ್ಲಿದ ಈ ಸಮಾವೇಶ ಅನೌಪಚಾರಿಕವಲಯದಲ್ಲಿ ಏಕರೂಪತೆ ತರುವ ಅಗತ್ಯತೆಯನ್ನು ಪ್ರತಿಪಾದಿಸಿತು. ಆ ಗುರಿಯನ್ನು ತಲುಪುವ ನಿಟ್ಟಿನಲ್ಲಿ ವಿಸ್ತೃತ ಚರ್ಚೆ ನಡೆಸಿತು. ಇದನ್ನು ಸಾಧಿಸುವ ಸಲುವಾಗಿ ಹೊಸದಾಗಿ ಕೆಲ ಮಾನದಂಡಗಳನ್ನೂ ಸಹ ರೂಪಿಸಲಾಯಿತು. ಅವುಗಳ ಪೈಕಿ ಕೆಲವನ್ನು ಹೀಗೆ ಉಲ್ಲೇಖಿಸಬಹುದು.

1) ಯಾವುದೇ ಉದ್ದಿಮೆಯಾದರೂ ಮಾರುಕಟ್ಟೆಯಲ್ಲಿ ಅದರ ಉತ್ಪನ್ನವನ್ನು ಬಿಡುಗಡೆ ಮಾಡಲೇಬೇಕು. ಇದರಿಂದ ತಮ್ಮ ಅನುಭೋಗಕ್ಕಾಗಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಮತ್ತು ಸೇವೆ ಒದಗಿಸುವ ಅನೌಪಚಾರಿಕ ವಲಯಗಳನ್ನು ಪ್ರತ್ಯೇಕಿಸಲು ಸಾಧ್ಯವಾಗುತ್ತದೆ.

2) ಒಂದು ಇಲ್ಲವೇ ಕೆಲವು ಮಾನದಂಡಗಳನ್ನು ಈ ಉದ್ದಿಮೆಗಳು ಪೂರೈಸಬೇಕು. ಅಂದರೆ, ಆಯಾ ಉದ್ದಿಮೆಗಳಲ್ಲಿ ದುಡಿಯುವ ಕೆಲಸಗಾರರ ಸಂಖ್ಯೆ ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಇರಬೇಕು. ಶಾಸನ ವಿಧಿಸಿದ ನಿಯಮಗಳಂತೆ ನೋಂದಣಿಯಾಗಿರಬಾರದು ಅಂದರೆ, ಕಾರ್ಖಾನೆ ಅಥವಾ ವಾಣಿಜ್ಯ ಕಾಯ್ದೆಗಳು, ತೆರಿಗೆ ಅಥವಾ ಸಾಮಾಜಿಕ ಭದ್ರತಾ ಕಾಯ್ದೆಗಳು ವೃತ್ತಿಪರ ಗುಂಪುಗಳ ನಿಯಂತ್ರಣಕ್ಕಾಗಿನ ಕಾಯ್ದೆಗಳು ಅಥವಾ ಇದೇ ಮಾದರಿಯಲ್ಲಿ ರೂಪಿಸಲಾಗಿರುವ ಕಾಯ್ದೆಗಳು, ನಿಯಮಗಳ ಪಾಲನೆ ಮಾಡದಿರುವುದು.

3) ಸಾಮಾಜಿಕ ಭದ್ರತಾ ಕಾಯ್ದೆ ಅಥವಾ ಸಂಬಂಧಿಸಿದ ತೆರಿಗೆಗಳನ್ನು ಉಳಿಸಿಕೊಳ್ಳುವ ಸಲುವಾಗಿ ನೌಕರರ ನೋಂದಣಿ ಮಾಡಿಸಿರಬಾರದು.

ಇನ್ನು, ಅನೌಪಚಾರಿಕ ವಲಯದಡಿಬರುವ ಉತ್ಪಾದನಾ ಘಟಕಗಳು ತಮ್ಮದೇ ಆದ ಗುಣಲಕ್ಷಣಗಳನ್ನು ಹೊಂದಿವೆ. ಉತ್ಪಾದನಾ ಘಟಕಗಳಲ್ಲಿರುವ ಸ್ಥಿರ ಹಾಗೂ ಇತರ ಆಸ್ತಿಗಳು ಆಯಾ ಘಟಕಗಳಿಗೆ ಸಂಬಂಧಿಸಿದ್ದಾಗಿರದೇ, ಆಯಾ ಘಟಕಗಳ ಮಾಲಿಕರಿಗೆ ಸೇರಿದ್ದಾಗಿರುತ್ತವೆ. ಇಂತಹ ಘಟಕಗಳು ಬೇರೆ ಘಟಕಗಳ ಜೊತೆ ಯಾವುದೇ ರೀತಿಯ ವ್ಯವಹಾರದಲ್ಲಿ ಅಥವಾ ಒಪ್ಪಂದ ಮಾಡಿಕೊಳ್ಳಲು ಸಮರ್ಥವಾಗಿರುವುದಿಲ್ಲ. ಆದರೆ ಮಾಲಿಕರೇ ಈ ಸಂಬಂಧ ಹಣಕಾಸು ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ಉತ್ಪಾದನಾ ಚಟುವಟಿಕೆ ಸಂಬಂಧ ತಗಲುವ ವೆಚ್ಚವನ್ನು ಪ್ರತ್ಯೇಕಿಸಿ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ ಉತ್ಪಾದನಾ ಕಾರ್ಯಕ್ಕಾಗಿ ಕಟ್ಟಡ ಅಥವಾ ವಾಹನಗಳನ್ನು ಬಳಸಿದಾಗ, ಅವುಗಳ ಬಳಕೆಗೆ ತಗಲುವ ವೆಚ್ಚವನ್ನು ಪ್ರತ್ಯೇಕವಾಗಿಯೇ ಪರಿಗಣಿಸಬೇಕು. ಇನ್ನು ಕೆಲವರು ತಮ್ಮ ಹೊಟ್ಟೆಪಾಡಿಗಾಗಿಯೇ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಅನೌಪಚಾರಿಕ ವಲಯದ ಪ್ರಮುಖ ಭಾಗವೇ ಆಗಿದ್ದರೂ ಕೃಷಿಯನ್ನು ಈ ವಲಯದಿಂದ ಪ್ರತ್ಯೇಕವಾಗಿಯೇ ಪರಿಗಣಿಸಬೇಕು ಎಂದು ಐಸಿಎಲ್ಎಸ್ ಶಿಫಾರಸು ಮಾಡಿತ್ತು. (ಯುಎನ್–ಇಎಸ್‌ಸಿಡಬ್ಲೂಎ 2008). ಐಸಿಎಲ್ಎಸ್‌ನ ಈ ಮಾನದಂಡ ಅನೌಪಚಾರಿಕ ವಲಯದ ವ್ಯಾಖ್ಯಾನಕ್ಕೆ ಹೊಸ ಚೌಕಟ್ಟನ್ನು ಒದಗಿಸುತ್ತದೆ. ಅದೂ ಆಯಾ ದೇಶಕ್ಕೆ ಸಂಬಂಧಿಸಿದಂತೆಯೂ ಅನ್ವಯವಾಗಲಿದೆ.


ಹಾಗಂತ ಎಲ್ಲ ದೇಶಗಳಿಗೂ ಒಂದೇ ರೀತಿಯ ವ್ಯಾಖ್ಯಾನ ಬಳಸಿ ಕಾರ್ಯಕ್ರಮ ರೂಪಿಸಲು ಸಾಧ್ಯವಿಲ್ಲ. ಬೇರೆ ಬೇರೆ ಸಂಯೋಜನೆಗಳೊಂದಿಗೆ ಈ ಮಾನದಂಡ ಬಳಸಬೇಕಾಗುತ್ತದೆ. ಅಂದರೆ ಆಯಾ ದೇಶಗಳ ಶಾಸನಗಳು, ಉದ್ಯೋಗ ಸೃಷ್ಟಿಯ ಪ್ರಮಾಣ ಬೇರೆಯಾದಂತೆ ಅನೌಪಚಾರಿಕ ವಲಯದ ಅರ್ಥ, ವ್ಯಾಪ್ತಿಯೂ ಬೇರೆಯಾಗುತ್ತದೆ.



ಹೀಗಾಗಿಯೇ, 15ನೇ ಕಾರ್ಮಿಕ ಸಮಾವೇಶವು ಅನೌಪಚಾರಿಕ ವಲಯ ವ್ಯಾಖ್ಯಾನ ಮತ್ತು ಅಳತೆಗೋಲನ್ನು ನಿರ್ಧರಿಸಲು ಗಮನಾರ್ಹ ಮೃದುಧೋರಣೆ ತಳೆಯಿತು. ಇಂತಹ ಮೃದುಧೋರಣೆ ಫಲವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ವಲಯಕ್ಕೆ ಸಂಬಂಧಿಸಿದಂತೆ ತುಲನೆ ಮಾಡುವಾಗಲೂ ಕಠಿಣ ನಿಲುವು ತಳೆಯುವುದನ್ನು ತಪ್ಪಿಸುತ್ತದೆ. ಏಕೆಂದರೆ, ವಿವಿಧ ದೇಶಗಳಲ್ಲಿನ ಈ ವಲಯದಲ್ಲಿ ಕಂಡು ಬರುವ ವಿದ್ಯಮಾನಗಳ ನಡುವಿನ ಅಂತರ ಗಮನಾರ್ಹವಾಗಿ ಕಡಿಮೆ ಇದ್ದರೆ ಮಾತ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ತುಲನೆ ಮಾಡಲು ಸಾಧ್ಯವಾಗಲಿದೆ. (ಯುಎನ್‌ಇಎಸ್‌ಸಿಎಪಿ 2007) ಇಂತಹ ಸಮಸ್ಯೆ ಕುರಿತು ಚರ್ಚಿಸಿ, ಸರಳ ಪರಿಹಾರ ಕಂಡುಕೊಳ್ಳುವ ಸಲುವಾಗಿ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದ ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲು ಅಂತಾರಾಷ್ಟ್ರೀಯ ಮಟ್ಟದ ತಜ್ಞರ ತಂಡವೊಂದನ್ನು 1997ರಲ್ಲಿ ರಚಿಸಲಾಯಿತು. "ದೆಹಲಿ ತಂಡ" (ಡೆಲ್ಲಿ ಗ್ರೂಪ್) ಎಂದು ಕರೆಯಲಾಗುವ ಈ ತಂಡವನ್ನು ಅಂಕಿ–ಸಂಖ್ಯೆ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ರಚಿಸಿತಲ್ಲದೇ, ಈ ತಂಡವು ವಿಶ್ವಸಂಸ್ಥೆಯ ಸಂಖ್ಯಾ ವಿಭಾಗಕ್ಕೆ (ಯುಎನ್‌ಎಸ್‌ಡಿ) ವರದಿ ಸಲ್ಲಿಸಬೇಕಿತ್ತು. ಅಸ್ತಿತ್ವಕ್ಕೆ ಬಂದಂದಿನಿಂದ ತಂಡವು ಅನೇಕ ಸಭೆಗಳನ್ನು ನಡೆಸಿದೆ. ಅಂಕಿ–ಅಂಶಗಳ ಸಂಗ್ರಹ, ವ್ಯಾಖ್ಯಾನ, ಸಮೀಕ್ಷಾ ಪದ್ಧತಿ ಸೇರಿದಂತೆ ಹಲವಾರು ವಿಷಯಗಳನ್ನು ಇತರ ದೇಶಗಳೊಂದಿಗೆ ವಿನಿಮಯ ಮಾಡಿಕೊಂಡಿದೆ. ಜೊತೆಗೆ ಅಂಕಿ–ಸಂಖ್ಯೆಗಳ ಸಂಗ್ರಹಣೆ, ವಿಶ್ಲೇಷಣೆಗಾಗಿ ಗುಣಮಟ್ಟವನ್ನು ಸುಧಾರಿಸುವ ಪ್ರಯತ್ನವನ್ನು ಮಾಡಿದೆ. ಅಲ್ಲದೇ, ಅಂತಾರಾಷ್ಟ್ರೀಯ ಸಂದರ್ಭದಲ್ಲಿ ಬಳಸಲಾದ ವ್ಯಾಖ್ಯಾನದ ಅನುಸಾರವಾಗಿಯೇ

ದೇಶದಲ್ಲಿನ ಅನೌಪಚಾರಿಕ ವಲಯದ ವಿವರಣೆಯನ್ನು ಸುವ್ಯವಸ್ಥೆಗೊಳಿಸಲು ಪ್ರಯತ್ನಿಸಿದೆ. ತಂಡದ 3ನೇ ಸಭೆಯಲ್ಲಿ ಈ ಎಲ್ಲ ವಿಷಯಗಳನ್ನು ಚರ್ಚಿಸಲಾಯಿತಲ್ಲದೇ ಈ ಕೆಳಗಿನ ಮುಂದಿನ ಶಿಫಾರಸುಗಳನ್ನು ಮಾಡಿದೆ.

"ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕಂಡುಬರುವ ಹಿನ್ನೆಲೆಯಲ್ಲಿ ನಮ್ಮ ದೇಶದ ಸಂದರ್ಭದಲ್ಲಿ ಅನೌಪಚಾರಿಕ ಅರ್ಥವ್ಯವಸ್ಥೆಯಲ್ಲಿ ಏಕರೂಪತೆ ಅಥವಾ ಸಾಮರಸ್ಯ ಕಂಡುಕೊಳ್ಳಲು ಸದ್ಯದ ಸ್ಥಿತಿಯಲ್ಲಿ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ದೇಶಗಳಲ್ಲಿನ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಂತಾರಾಷ್ಟ್ರೀಯ ಏಜೆನ್ಸಿಗಳು ಎಲ್ಲ ದೇಶಗಳಿಗೂ ನೀಡಬೇಕು. ಇದರಿಂದ ಸಮಗ್ರ ತುಲನಾತ್ಮಕ ಪ್ರಕ್ರಿಯೆ ಸಾಧ್ಯವಾಗಲಿದೆ. ಅಲ್ಲದೇ ಅನೌಪಚಾರಿಕ ವಲಯ ಕುರಿತಂತೆ ಏಕರೂಪ ವಿವರಣೆ ನೀಡಲು ಸಾಧ್ಯವಾಗಲಿದೆ. ಆದರೆ, ಇಂತಹ ಶಿಫಾರಸು ಮಾಡುವ ಸಂದರ್ಭದಲ್ಲಿ ತಂಡವು ದೇಶದಲ್ಲಿನ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ಅಲ್ಪಭಾಗದ ವಿದ್ಯಮಾನಗಳನ್ನು ಮಾತ್ರ ಪರಿಗಣಿಸಿದೆ. ಭವಿಷ್ಯದಲ್ಲಿ ಇದರ ವಿಸ್ತರಣೆಯ ಅಗತ್ಯವಿದೆ ಎಂಬುದನ್ನು



ಮನಗಂಡಿದೆ" ಈ ಗುರಿ ಸಾಧನೆಗೆ ತಂಡವು 3 ಅಗತ್ಯ ಮಾನದಂಡಗಳನ್ನು ವಿವರಿಸಿದೆ. ಅವುಗಳೆಂದರೆ.

1) 5ಕ್ಕಿಂತ ಕಡಿಮೆ ನೌಕರರನ್ನು ಹೊಂದಿರುವ ಉತ್ಪಾದನಾ ಘಟಕಗಳು
2) ನೋಂದಣಿಯಾಗದ ಉತ್ಪಾದನಾ ಘಟಕಗಳು
3) ವೇತನ ನೀಡಿ ನೌಕರರನ್ನು ನೇಮಕ ಮಾಡಿಕೊಳ್ಳುವ ಗೃಹ ಉದ್ದಮೆ (ಗುಡಿ ಕೈಗಾರಿಕೆ)ಗಳನ್ನು ಹೊರತುಪಡಿಸುವ ಮೂಲಕ

ಅನೌಪಚಾರಿಕ ವಲಯ ಕುರಿತು ಸಮಗ್ರ ವಿವರಣೆ ರೂಪಿಸುವುದು ಅಗತ್ಯ ಎಂದೂ ಅಭಿಪ್ರಾಯಪಟ್ಟಿತು.

ಅನೌಪಚಾರಿಕ ವಲಯ ಕುರಿತಂತೆ ಸಂಖ್ಯಾಸಂಗ್ರಹಕ್ಕಾಗಿ ದೇಶಗಳು ಅನುಸರಿಸಬೇಕಾದ ಕ್ರಮಗಳ ಕುರಿತು ತಂಡವು ತಾಂತ್ರಿಕ ಅಂಶಗಳನ್ನು ಒಳಗೊಂಡ ಕೈಪಿಡಿಯನ್ನು ಸಿದ್ದ ಪಡಿಸಿದೆ. ಮೊದಮೊದಲು ಅನೌಪಚಾರಿಕ ವಲಯ ಕುರಿತ ಅಂಕಿ-ಸಂಖ್ಯೆ ಸಂಗ್ರಹಕ್ಕೆ ಅಷ್ಟೊಂದು ಮಹತ್ವ ನೀಡುತ್ತಿರಲಿಲ್ಲ. ಆದರೆ, ಈ ವಲಯದ ಮಹತ್ವ ಅರಿತ ನಂತರ ಕಳೆದ 4 ದಶಕಗಳಿಂದ ಈ ವಲಯ ಕುರಿತು ಹೆಚ್ಚು ಸಂಶೋಧನೆ ಮತ್ತು ಮಾಹಿತಿ ಸಂಗ್ರಹ ಚುರುಕು ಗೊಂಡಿದೆ. ಜೊತೆಗೆ ಪರಿಕಲ್ಪನೆಗೆ ಹೊಸ ವಿವರಣೆ ನೀಡಲಾಗಿದೆ.

ಅನೌಪಚಾರಿಕ ವಲಯದ ಅಂಕಿ-ಸಂಖ್ಯೆ, ಈ ವಲಯ ಹೊರತಾಗಿ ಇರುವ ಅನೌಪಚಾರಿಕ ಉದ್ಯೋಗಾವಕಾಶಗಳನ್ನು ಒಳಗೊಂಡ ಕೈಪಿಡಿ ಸಿದ್ಧಪಡಿಸುವ ಸಲುವಾಗಿ ಪರಸ್ಪರ ಸಹಕಾರ ನೀಡಲು ದೆಹಲಿ ಗ್ರೂಪ್ ಮತ್ತು ಐಎಲ್‌ಓ 2005ರಲ್ಲಿ ಒಮ್ಮತಕ್ಕೆ ಬಂದವು. ಇಷ್ಟಾದರೂ ಈ ವಲಯಕ್ಕೆ ಸಂಬಂಧಿಸಿದಂತೆ ಇನ್ನೂ ಮಾಹಿತಿ, ಅಂಕಿ-ಸಂಖ್ಯೆ ಸಾಕಾಗದು.

ಇದಕ್ಕೆ ಕಾರಣವೂ ಸ್ಪಷ್ಟ ಅನೌಪಚಾರಿಕ ವಲಯ ಕುರಿತು ಸಾರ್ವತ್ರಿಕ ವಿವರಣೆ ಕೊರತೆ ಹಾಗೂ ಏಕರೂಪತೆ ಇಲ್ಲದಿರುವುದೇ ಇದಕ್ಕೆ ಕಾರಣ. ವಿವಿಧ ರೀತಿಯ ಚಟುವಟಿಕೆಗಳು, ಉದ್ದಿಮೆಗಳು ಹಾಗೂ ಪಾಲ್ಗೊಳ್ಳುವಿಕೆ ಪ್ರಕ್ರಿಯೆಯಲ್ಲಿ ಬೇರೆ ಬೇರೆ ಉದ್ದೇಶಗಳು ಇರುವ ಹಿನ್ನೆಲೆಯಲ್ಲಿ



ಅನೌಪಚಾರಿಕ ವಲಯ ಕುರಿತ ಅಂಕಿ-ಸಂಖ್ಯೆ ಸಂಗ್ರಹ ಮತ್ತಷ್ಟು ಜಟಿಲ ಎನಿಸಲಿದೆ. ಆದರೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಉದ್ಯೋಗ ಸೃಷ್ಟಿ ಮತ್ತು ಆದಾಯದ ಮೂಲವೇ ಅನೌಪಚಾರಿಕ ವಲಯ ಆಗಿರುವ ಕಾರಣ ಈ ವಲಯಕ್ಕೆ ಸಂಬಂಧಿಸಿದ ಅಂಕಿ-ಸಂಖ್ಯೆ ಸಂಗ್ರಹ ಹೆಚ್ಚು ಪ್ರಸ್ತುತ ಹಾಗೂ ಮಹತ್ವ ಎನಿಸಲಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ರಾಷ್ಟ್ರೀಯ ಸಂಖ್ಯಾ ಆಯೋಗವು (ಎನ್‌ಎಸ್‌ಸಿ) ಅಸಂಘಟಿತ ವಲಯಕ್ಕೆ ಸಂಬಂಧಿಸಿದ ಅಂಕಿ-ಸಂಖ್ಯೆ ಸಂಗ್ರಹಿಸಲು 2010ರಲ್ಲಿ ಸಮಿತಿಯೊಂದನ್ನು ರಚಿಸಿದೆ.

ಅಸಂಘಟಿತ ಉದ್ದಿಮೆಗಳು ಹಾಗೂ ಅಸಂಘಟಿತ ಉದ್ಯೋಗಿಗಳ ಕುರಿತ ಮಾಹಿತಿಯಲ್ಲಿನ ವ್ಯತ್ಯಾಸ ಗುರುತಿಸುವುದು ಹಾಗೂ ಸಮರ್ಪಕ ಪರಿಹಾರ ಕ್ರಮಗಳನ್ನು ಸೂಚಿಸುವುದು ಈ ಸಮಿತಿಯ ಜವಾಬ್ದಾರಿಯಾಗಿತ್ತು (ಎನ್‌ಎಸ್‌ಸಿ 2010).

ಕೂಲಂಕಷ ಅಧ್ಯಯನ ನಡೆಸಿದ ಸಮಿತಿಯು ದೇಶದ ಅನೌಪಚಾರಿಕ ವಲಯದ ಉದ್ದಿಮೆಗಳು ಹಾಗೂ ಉದ್ಯೋಗಾವಕಾಶಗಳಿಗೆ ಸಂಬಂಧಿಸಿದ ಅಂಕಿ-ಸಂಖ್ಯೆಯಲ್ಲಿ ಹಲವಾರು ನ್ಯೂನತೆ ಇರುವುದನ್ನು ಗಮನಿಸಿತು. ಐಎಲ್‌ಓ ರೂಪಿಸಿದ ಚೌಕಟ್ಟಿನ ಪ್ರಕಾರ ದೇಶದ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದ ಪರಿಕಲ್ಪನೆ, ವಿವರಣೆ ಹಾಗೂ ಅಂಕಿ-ಸಂಖ್ಯೆ ಸಂಗ್ರಹಕ್ಕೆ ಅಗತ್ಯವಿರುವ ಕೌಶಲ್ಯದಲ್ಲಿನ ಭಿನ್ನತೆಯಿಂದಾಗಿ ಇಂತಹ ನ್ಯೂನತೆ ಇರುವುದನ್ನೂ ಸಮಿತಿ ಗುರುತಿಸಿತು.

ದೇಶದ ಅರ್ಥವ್ಯವಸ್ಥೆಯ ಪ್ರಮುಖ ಭಾಗವೇ ಆಗಿರುವ ಅನೌಪಚಾರಿಕ ವಲಯಕ್ಕೆ ಸಂಬಂಧಿಸಿದಂತೆ ಈ ನ್ಯೂನತೆಗಳನ್ನು ತುರ್ತಾಗಿ ಸರಿಪಡಿಸುವ ಅಗತ್ಯವಿದೆ. ಇಂತಹ ದಿಟ್ಟ ಕ್ರಮಗಳಿಂದ ಅನೌಪಚಾರಿಕ ವಲಯಕ್ಕೆ ಸಂಬಂಧಪಟ್ಟ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗಲಿದೆ. ❑

# ಕೆಲಸ ಮತ್ತು ಜೀವನೋಪಾಯದ ಸಮಸ್ಯೆ

ಡಾ. ಬಿ. ವಿ. ಭೋಸಲೆ

ಕನ್ನಡಕ್ಕೆ : ಪದ್ಮನಾಭ ಕೆ. ವಿ.



ಭಾರತದ ಸಮಗ್ರ ಆರ್ಥಿಕ ಅಭಿವೃದ್ಧಿಯ ಹೊಸ ನಕಾಶೆಯು ಅನೌಪಚಾರಿಕ ವಲಯದ ಶಕ್ತಿ ಸಾಮರ್ಥ್ಯಗಳ ಆಧಾರದಲ್ಲಿ ನಿರ್ಧರಿತವಾಗಬೇಕಿದೆ. ಪ್ರಸಕ್ತ ಸರ್ಕಾರವು ಇಂತಹ ನೀತಿಗಳನ್ನು ರೂಪಿಸಬೇಕಾಗಿದೆ.

ಜಾಗತಿಕ ಔದ್ಯೋಗಿಕ ಸಮುದಾಯಕ್ಕೆ ಹೋಲಿಸಿದರೆ ಗಾತ್ರ ಮತ್ತು ಆಯಾಮಗಳ ದೃಷ್ಟಿಯಿಂದ ಭಾರತದ ಆರ್ಥಿಕತೆ ವಿಭಿನ್ನವಾದ ಕಾರ್ಮಿಕ ಸಮೂಹವನ್ನು ಹೊಂದಿದೆ. ಭಾರತೀಯ ಆರ್ಥಿಕತೆಯ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಪೂರಕವಾದ ಔಪಚಾರಿಕ ಮತ್ತು ಅನೌಪಚಾರಿಕ ವಲಯ ಇಲ್ಲಿದೆ. ಅನೌಪಚಾರಿಕ ವಲಯಕ್ಕೆ ಹೋಲಿಸಿದರೆ ಹಿಂದಿನ ದಶಕಗಳಲ್ಲಿ ಔಪಚಾರಿಕ ವಲಯವೇ ಸರ್ಕಾರದಿಂದ ಹೆಚ್ಚಿನ ಗಮನ ಹಾಗೂ ಲಾಭಗಳನ್ನು ಪಡೆದಿದೆ. ಹಾಗೆಯೇ ಅನೌಪಚಾರಿಕ ವಲಯವು ಸರ್ಕಾರದಿಂದ ಸಾಕಷ್ಟು ಅವಗಣನೆಗೂ ಒಳಗಾಗಿದೆ. ಇತ್ತೀಚೆಗಷ್ಟೇ ಭಾರತ ಸರ್ಕಾರವು ಅನೌಪಚಾರಿಕ ವಲಯದಲ್ಲಿನ ಕಾರ್ಮಿಕರ ಕಲ್ಯಾಣಕ್ಕಾಗಿ ನೀತಿಯೊಂದನ್ನು ರೂಪಿಸುವ ಪ್ರಯತ್ನಗಳನ್ನು ಮಾಡುತ್ತಿದೆ.

"ವ್ಯಕ್ತಿ ಅಥವಾ ಕುಟುಂಬ ಒಡೆತನವನ್ನು ಹೊಂದಿರುವ, ವಸ್ತು ಇಲ್ಲವೇ ಸೇವೆಗಳ ಉತ್ಪಾದನೆ ಹಾಗೂ ಮಾರಾಟದಲ್ಲಿ ತೊಡಗಿರುವ, ವೈಯುಕ್ತಿಕ ಅಥವಾ ಪಾಲುದಾರಿಕೆಯ ಆಧಾರದಲ್ಲಿ ಕಾರ್ಯನಿರ್ವಹಿಸುವ, ಹತ್ತು ಜನ ಕಾರ್ಮಿಕರಿಗಿಂತ ಕಡಿಮೆ ಮಂದಿಯಿರುವ ಅಸಂಘಟಿತ ಖಾಸಗಿ ಉದ್ದಿಮೆಗಳನ್ನು" ಅನೌಪಚಾರಿಕ ವಲಯ ಒಳಗೊಂಡಿದೆ. "ಸಾಮಾಜಿಕ ಭದ್ರತೆಯ ಸೌಲಭ್ಯಗಳಿಂದ ಹೊರತಾದ ಖಾಯಂ ಕಾರ್ಮಿಕರನ್ನು ಹೊರತುಪಡಿಸಿ ಅಸಂಘಟಿತ ವಲಯದಲ್ಲಿ ಅಥವಾ ಕುಟುಂಬಗಳಲ್ಲಿ ಕೆಲಸ ಮಾಡುತ್ತಿರುವ ಮಂದಿ ಹಾಗೂ ಉದ್ಯೋಗದಾತರಿಂದ ಯಾವುದೇ ಉದ್ಯೋಗ ಸೌಲಭ್ಯಗಳನ್ನು ಪಡೆಯದೆ ಇರುವ ಔಪಚಾರಿಕ ವಲಯದ ಕಾರ್ಮಿಕರನ್ನೂ" ಅನೌಪಚಾರಿಕ ಕಾರ್ಮಿಕರು ಅಥವಾ ಅಸಂಘಟಿತ ಕಾರ್ಮಿಕರು ಎಂದು ಗುರುತಿಸಲಾಗುತ್ತದೆ (ಅಸಂಘಟಿತ ವಲಯದಲ್ಲಿನ ಉದ್ದಿಮೆಗಳ ರಾಷ್ಟ್ರೀಯ ಆಯೋಗ, ಭಾರತ ಸರ್ಕಾರ, 2007).

ಅಭಿವೃದ್ಧಿಶೀಲ ದೇಶಗಳಲ್ಲಿ ವಿವಿಧ ಉದ್ಯೋಗ ಯೋಜನೆಗಳನ್ನು ಕೈಗೊಂಡ ಅಂತಾರಾಷ್ಟ್ರೀಯ ಕಾರ್ಮಿಕ ಸಂಘದ ಪ್ರಯತ್ನ ಹಾಗೂ 1972ರಲ್ಲಿ ಕೀನ್ಯಾದಲ್ಲಿ ಹಮ್ಮಿಕೊಂಡ ಮೊತ್ತಮೊದಲ ಮಿಷನ್ ಸಾಂಪ್ರದಾಯಿಕ ವಲಯವು ಲಾಭದಾಯಕ ಹಾಗೂ ದಕ್ಷ ಉದ್ದಿಮೆಗಳನ್ನು ಅಲ್ಲದೆ ಸಾಧಾರಣ ಚಟುವಟಿಕೆಗಳನ್ನು ತನ್ನೊಳಗೆ ಸೇರಿಸಿಕೊಳ್ಳಲು ಅನುವುಮಾಡಿಕೊಟ್ಟಿತು. ಸಣ್ಣ ಮತ್ತು ನೊಂದಣಿಗೊಳ್ಳದ ಆರ್ಥಿಕ ಚಟುವಟಿಕೆಗಳಿಗೆ 'ಅನೌಪಚಾರಿಕ ವಲಯ' ಎಂಬ ಹೆಸರು ಕೊಟ್ಟದ್ದು ಕೀನ್ಯಾ ಮಿಷನ್. ಘಾನಾದ ನಗರ ಪ್ರದೇಶದ ಆರ್ಥಿಕ ಚಟುವಟಿಕೆಗಳನ್ನು ಅಧ್ಯಯನ ಮಾಡಿದ ಬ್ರಿಟಿಷ್ ಅರ್ಥಶಾಸ್ತ್ರಜ್ಞ ಹಾಗೂ ಸಮಾಜ ಮಾನವಶಾಸ್ತ್ರಜ್ಞ ಕೀತ್ ಹಾರ್ಟ್ 1971ರಲ್ಲಿ ಈ ಪದವನ್ನು ಹುಟ್ಟುಹಾಕಿದರು.

ಅರ್ಥವ್ಯವಸ್ಥೆಯ ಬೆಳವಣಿಗೆಯಲ್ಲಿ ಅನೌಪಚಾರಿಕ ವಲಯದ ಸಂಭವನೀಯ ಪಾತ್ರದ ಬಗ್ಗೆ ವಿದ್ವಾಂಸರ ನಡುವೆ ಭಿನ್ನಾಭಿಪ್ರಾಯಗಳಿದ್ದರೂ ಈ ವಲಯವನ್ನು ಅಧ್ಯಯನ ನಡೆಸುತ್ತಿರುವ ಸಮಾಜ ವಿಜ್ಞಾನಿಗಳಲ್ಲಿ ಹುಟ್ಟಿರುವ ಹೊಸ ಆಸಕ್ತಿಯಿಂದಾಗಿ ಈ ವಲಯದ ಕುರಿತ ಅಧ್ಯಯನಗಳು ವೇಗವನ್ನು ಪಡೆದುಕೊಳ್ಳುತ್ತಿವೆ. ಸುಮಾರು ಶೇ.

ಪ್ರಾಧ್ಯಾಪಕರು, ಸಮಾಜ ವಿಜ್ಞಾನ ವಿಭಾಗ, ಮುಂಬೈ ವಿಶ್ವವಿದ್ಯಾಲಯ. Email : bvbhosale@hotmail.com

92 ಕಾರ್ಮಿಕವರ್ಗ ಅನೌಪಚಾರಿಕ ವಲಯದಲ್ಲಿದ್ದರೆ, ಶೇ. 8ರಷ್ಟು ಮಾತ್ರ ಔಪಚಾರಿಕ ವಲಯದಲ್ಲಿದೆ. ಅನೌಪಚಾರಿಕ ವಲಯದ ಗಾತ್ರವನ್ನು ಕೆಲವು ಅಧ್ಯಯನಗಳು ಶೇ. 94 ಎಂದು ಗುರುತಿಸಿವೆಯಾದರೂ ಈ ಬಗ್ಗೆ ನಮಗಿನ್ನೂ ಸ್ಪಷ್ಟ ಅಂಕಿಅಂಶ ಲಭ್ಯವಿಲ್ಲ. ಅನೌಪಚಾರಿಕ ವಲಯದ ಕುರಿತು ನಿಯಮಿತವಾದ ಸಮೀಕ್ಷೆಗಳು ನಡೆಯುವ ಅಗತ್ಯವಿದೆ. ಸಂಘಟಿತ ವಲಯದಲ್ಲಿ ಕೂಡ ಶೇ. 58 ಕಾರ್ಮಿಕ ಸಮೂಹ ಅನೌಪಚಾರಿಕ ಉದ್ಯೋಗವನ್ನೇ ಹೊಂದಿದೆ (ಭಾರತದ ಕಾರ್ಮಿಕ ಮತ್ತು ಉದ್ಯೋಗ ವರದಿ 2014, ಮಾನವ ಅಭಿವೃದ್ಧಿ ಸಂಸ್ಥೆ, ಐಎಚ್‌ಡಿ ಆರ್, 2014). ನವದೆಹಲಿಯ ಇಂಡಿಯನ್ ಸ್ಟಾಫಿಂಗ್ ಫೆಡರೇಷನ್‌ನ ಇತ್ತೀಚಿನ ಅಧ್ಯಯನದ ಪ್ರಕಾರ, ಕೇಂದ್ರ ಸರ್ಕಾರದ 28.8 ಮಿಲಿಯನ್ ಔಪಚಾರಿಕ ಕಾರ್ಮಿಕರ ಪೈಕಿ ಶೇ. 43ರಷ್ಟು ಮಂದಿ ಗುತ್ತಿಗೆ ಕಾರ್ಮಿಕರಿದ್ದಾರೆ. ಸುಮಾರು 12.3 ಮಿಲಿಯನ್ ತಾತ್ಕಾಲಿಕ ಸರ್ಕಾರಿ ಕಾರ್ಮಿಕರಿದ್ದು ಇವರಲ್ಲಿ 10.5 ಮಿಲಿಯನ್ ಮಂದಿ ಯಾವುದೇ ಔಪಚಾರಿಕ ಉದ್ಯೋಗ ಒಪ್ಪಂದವೂ ಇಲ್ಲದ ಗಣಿಗಾರಿಕೆ ಹಾಗೂ ನಿರ್ಮಾಣ ಕಾಮಗಾರಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಾಗಿದ್ದಾರೆ. 1950 ಹಾಗೂ 1960ರ ದಶಕಗಳಲ್ಲಿ ಮಿಶ್ರ ಆರ್ಥಿಕ ನೀತಿಗಳಿಂದಾಗಿ ಸಾಂಪ್ರದಾಯಿಕ ಅರ್ಥವ್ಯವಸ್ಥೆಗಳು ಕ್ರಿಯಾತ್ಮಕ ಆಧುನಿಕ ಅರ್ಥವ್ಯವಸ್ಥೆಗಳಾಗಿ ಬದಲಾಗುತ್ತವೆ ಎಂದೂ, ಅತಿಸಣ್ಣ ಉದ್ಯೋಗ, ಗುತ್ತಿಗೆ ನೌಕರಿ, ಸಣ್ಣ ವ್ಯಾಪಾರಗಳೆಲ್ಲ ಔಪಚಾರಿಕ ಆರ್ಥಿಕತೆಯಲ್ಲಿ ವಿಲೀನವಾಗುತ್ತವೆ ಎಂದೂ ನಂಬಲಾಗಿತ್ತು. ಆದರೆ 1970ರ ದಶಕ ದೊಡ್ಡಮಟ್ಟದ ನಿರುದ್ಯೋಗ ಸಮಸ್ಯೆಗೆ ಸಾಕ್ಷಿಯಾಯಿತು.

1980ರ ದಶಕದಲ್ಲಿ ಉತ್ತರ ಅಮೇರಿಕ ಹಾಗೂ ಯುರೋಪಿನ ಮುಂದುವರಿದ ಬಂಡವಾಳಶಾಹಿ ಅರ್ಥವ್ಯವಸ್ಥೆಗಳಲ್ಲಿನ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವ ಚರ್ಚೆಗಳು ನಡೆದವು. ಉತ್ಪಾದನೆಯು ಮರುಸಂಘಟಿತವಾಗುತ್ತಿತ್ತು, ಅಂದರೆ ಸಾಮೂಹಿಕ ಉತ್ಪಾದನೆಯಿಂದ ನಮನೀಯ ಪ್ರಾವೀಣ್ಯತೆಯೆಡೆಗೆ ಹೊರಳಿತ್ತು. ಬಂಡವಾಳಶಾಹಿ ಉತ್ಪಾದನೆಯು ಅನೌಪಚಾರಿಕ ವಲಯದೊಂದಿಗೆ ಕಾರ್ಯನಿರ್ವಹಿಸುವುದು ಅನುಕೂಲಕರ ವೆಂದು ಭಾವಿಸುತ್ತದೆ, ಏಕೆಂದರೆ ಅಲ್ಲಿ ಅನೌಪಚಾರಿಕ ಉದ್ಯೋಗ ಸಂಬಂಧಗಳಿವೆ; ಪ್ರಮಾಣೀಕೃತ ಉದ್ಯೋಗಗಳು ಪ್ರಮಾಣೀಕೃತವಲ್ಲದ ಉದ್ಯೋಗಗಳಾಗಿ ಬದಲಾಗುತ್ತವೆ; ಉದ್ಯೋಗದಾತರು ತಮ್ಮ ಕಾರ್ಮಿಕರಿಗೆ ಕಡಿಮೆ ಸಂಬಳವನ್ನು ನೀಡಬಯಸುತ್ತಾರೆ; ಅಲ್ಲದೆ ಅಪಾಯಕಾರಿಯಾದ ಕೆಲಸಗಳಿಗೂ ಯಾವುದೇ ಸಾಮಾಜಿಕ ಭದ್ರತೆಯನ್ನು ನೀಡುವುದಿಲ್ಲ. ಆದುದರಿಂದ ಅನೌಪಚಾರಿಕ ವಲಯವು ಕಣ್ಮರೆಯಾಗುವುದಕ್ಕೆ ಅವಕಾಶವೇ ಇರಲಿಲ್ಲ; ಏಕೆಂದರೆ ಅದು ಬಂಡವಾಳಶಾಹಿ ಆರ್ಥಿಕತೆಯ ಪ್ರಮುಖ ಲಕ್ಷಣವಾಗಿತ್ತು (ಚೆನ್, 2004).

ಆಫ್ರಿಕಾದ 'ಸ್ವರೂಪಾತ್ಮಕ ಹೊಂದಾಣಿಕೆ ಕಾರ್ಯಕ್ರಮ' ಅಥವಾ 1970ರ ದಶಕದ ಮೆಕ್ಸಿಕನ್ ಪವಾಡದಿಂದಾಗಿ ಅಲ್ಲಿನ ಅರ್ಥವ್ಯವಸ್ಥೆಗಳು ವ್ಯಾಪಾರಾಭಿವೃದ್ಧಿ, ಉದಾರೀಕರಣ, ಖಾಸಗೀಕರಣ ಹಾಗೂ ವಿದೇಶಿ ಹೂಡಿಕೆಯ ಹೆಚ್ಚಳಕ್ಕೆ ತೆರೆದುಕೊಂಡವು. ಮೆಕ್ಸಿಕೊದಲ್ಲಿ ಔಪಚಾರಿಕ ವಲಯದ ಉದ್ಯೋಗವು ಕುಸಿತಗೊಂಡಿತು, ಶ್ರೀಮಂತ ಹಾಗೂ ಬಡವರ ನಡುವಿನ ಅಂತರ ಹೆಚ್ಚಾಯಿತು; ಅಂದಿನ ಸೋವಿಯತ್ ಒಕ್ಕೂಟ, ಮಧ್ಯ ಮತ್ತು ಪೂರ್ವ ಯುರೋಪ್‌ನಲ್ಲಿನ ಆರ್ಥಿಕ ಪರಿವರ್ತನೆ ಕೂಡ ಅನೌಪಚಾರಿಕ ಆರ್ಥಿಕತೆ ವಿಸ್ತಾರವಾಗಲು ಕಾರಣವಾಯಿತು. 1991ರ ಹೊಸ ಆರ್ಥಿಕ ಸುಧಾರಣೆಗಳ ಬಳಿಕ ಅದು ಭಾರತದ ಮಟ್ಟಿಗೂ ನಿಜವಾಯಿತು. ಸಾರ್ವಜನಿಕ ಹಾಗೂ ಖಾಸಗಿ ವಲಯದ ಉದ್ದಿಮೆಗಳೆರಡೂ ಕಾರ್ಮಿಕರನ್ನು ಕಡಿತಗೊಳಿಸತೊಡಗಿದವು. ಕೆಲಸದ ಉಪಗುತ್ತಿಗೆ ಹಾಗೂ ಹೊರಗುತ್ತಿಗೆ ವಿಧಾನಗಳಿಂದಾಗಿ ಅನೌಪಚಾರಿಕ ಉದ್ಯೋಗ ಇನ್ನಷ್ಟು ಬೆಳೆಯಿತು. ಹಿಂದಿನ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಅಡಿಯಲ್ಲಿ ಅನೌಪಚಾರಿಕ ರಂಗದ ಕಾರ್ಮಿಕರ ಕಲ್ಯಾಣಕ್ಕಾಗಿ ಕೆಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಅಸಂಘಟಿತ ವಲಯದಲ್ಲಿನ ಉದ್ದಿಮೆಗಳ ರಾಷ್ಟ್ರೀಯ ಆಯೋಗವನ್ನು ಭಾರತ ಸರ್ಕಾರವು ಸ್ಥಾಪಿಸಿತು. ಇದರ ಉದ್ದೇಶ ರೈತರು, ಕೃಷಿ ಕಾರ್ಮಿಕರು ಮತ್ತು ಇತರೆ ಕೆಲಸಗಾರರ ಕೆಲಸದ ಗುಣಮಟ್ಟದ ಹೆಚ್ಚಳ ಹಾಗೂ ಜೀವನೋಪಾಯ ಕಲ್ಯಾಣವೇ



ಆಗಿತ್ತು. ಅಲ್ಲದೆ, ಈ ವಲಯದ ಉದ್ದಿಮೆಗಳ ಉತ್ಪಾದಕತೆಯ ಸುಧಾರಣೆ, ಉದ್ಯೋಗ ಸೃಷ್ಟಿ, ಕಾರ್ಮಿಕರ ಕಾನೂನುಗಳು, ಹಕ್ಕುಗಳು ಮತ್ತು ಸಾಮಾಜಿಕ ಭದ್ರತೆಯನ್ನು ಜಾರಿಗೊಳಿಸುವುದು ಕೂಡ ಇದರ ಉದ್ದೇಶವಾಗಿತ್ತು (ಎನ್‌ಸಿಇಯುಎಸ್, ಭಾರತ ಸರ್ಕಾರ, 2007).

ಕಾರ್ಮಿಕ ಮಾರುಕಟ್ಟೆ ವಿಘಟನೆಯ ವಿಚಾರವೂ ಕುತೂಹಲಕಾರಿಯಾಗಿದೆ, ಏಕೆಂದರೆ ಜಾತಿ, ಸಮುದಾಯ, ಲಿಂಗ ಹಾಗೂ ಪ್ರದೇಶ ಹೀಗೆ ವಿವಿಧ ಹಿನ್ನೆಲೆಗಳಿಂದ ಬರುವ ಕಾರ್ಮಿಕವರ್ಗದ ನಡುವೆಯೂ ತಾರತಮ್ಯ ಮಾಡಲಾಗುತ್ತದೆ. ಅನೌಪಚಾರಿಕ ರಂಗವು ಪುರುಷರಿಗೆ ಮತ್ತು ಮಹಿಳೆಯರಿಗೆ ಕೆಲಸ ಮತ್ತು ಆದಾಯದ ನಡುವೆ ಬೇಧವನ್ನು ತಂದಿದೆ; ಕನಿಷ್ಠ ವೇತನ ಕಾಯ್ದೆಯನ್ನು ಒಪ್ಪದ ಉದ್ಯೋಗದಾತರನ್ನು ಶಿಕ್ಷಿಸುವ ಕಠಿಣ ಕಾನೂನು ನಮ್ಮಲ್ಲಿಲ್ಲದ್ದರಿಂದ ಅನೇಕ ಕಾರ್ಮಿಕರಿಗೆ ಕನಿಷ್ಠ ವೇತನವೆಂಬುದು ಬರಿಯ ಕನಸಾಗಿದೆ. ಮಾಲೀಕರುಗಳು ಕೆಳಮಟ್ಟದ ಕೆಲಸಗಳನ್ನು ಮಾಡಲು ಅವಕಾಶವಂಚಿತ ವರ್ಗಗಳಿಂದ ಕಾರ್ಮಿಕರನ್ನು ಆಯ್ದುಕೊಂಡರೆ, ಕುಶಲ ಹಾಗೂ ವ್ಯವಸ್ಥಾಪಕ ಹುದ್ದೆಗಳನ್ನು ಮೇಲ್ಜಾತಿಯವರಿಗೆ ನೀಡುತ್ತಾರೆ. ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳೆಯರಂತೂ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಅನುಭವಿಸುವವರಾಗಿರುತ್ತಾರೆ. ಅವರಿಗೆ ದೊರೆಯುವ ಕೆಲಸಗಳು ಉದ್ಯೋಗ ಮಾರುಕಟ್ಟೆಯ ಕೆಳಸ್ತರದಲ್ಲಿ ಇರುವ ಕಡಿಮೆ ಸಂಬಳದ ಹಾಗೂ ಕಡಿಮೆ ಚಲನಶೀಲತೆಯ ಕೆಲಸಗಳಾಗಿವೆ. ಜಾಗತೀಕರಣದಿಂದಾಗಿ ಹೊಸ ಉದ್ಯೋಗಾವಕಾಶಗಳು ಲಭ್ಯವಿದ್ದರೂ ಅವು ಮಾಹಿತಿ ತಂತ್ರಜ್ಞಾನ, ಉದ್ದಿಮೆ ಹೊರಗುತ್ತಿಗೆ, ವಸ್ತ್ರೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿವೆ ಮತ್ತು ಅವು ಪ್ರಮಾಣೀಕೃತ ಉದ್ಯೋಗಗಳಲ್ಲ. ಅನೌಪಚಾರಿಕ ವಲಯದ ಕಾರ್ಮಿಕರ ಕೆಲಸದ ಸ್ಥಿತಿಗತಿಗಳನ್ನು ನಿಯಂತ್ರಿಸುವುದಕ್ಕಾಗಿ ರಾಷ್ಟ್ರೀಯ

ಆಯೋಗವು ಎರಡು ಮಸೂದೆಗಳನ್ನು ಸಿದ್ಧಪಡಿಸಿತ್ತು. ಆದರೆ ಕೃಷಿ ಹಾಗೂ ಕೃಷಿಯೇತರ ವಲಯದ ಕಾರ್ಮಿಕವರ್ಗದ ಸ್ವರೂಪದಲ್ಲಿ ವ್ಯತ್ಯಾಸವಿದೆ ಮತ್ತು ಅವುಗಳ ಜಾರಿಯ ವಿಧಾನವೂ ವಿಭಿನ್ನವಾಗಿದೆ. ಪ್ರಪಂಚದಾದ್ಯಂತ ಹೆಚ್ಚಿನ ಸಂಖ್ಯೆಯ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ದೇಶಗಳು ಎಲ್ಲಾ ಕಾರ್ಮಿಕರಿಗೂ ಕೆಲಸದ ಕನಿಷ್ಠ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಅಂತಾರಾಷ್ಟ್ರೀಯ ಸಮುದಾಯದ ಬದ್ಧತೆಯನ್ನು ಮೆರೆದಿವೆ. ಜಾಗತೀಕರಣದ ಫಲವಾಗಿ ಅನೇಕ ಕಡೆ ಸ್ವಪ್ರೇರಿತ ನೀತಿಸಂಹಿತೆಗಳನ್ನು ಅಳವಡಿಸಲಾಗಿದ್ದು ವಸ್ತುನಿಷ್ಠ ಪರಿಶೀಲನೆಗೂ ಅವಕಾಶವಿದೆ. ಅಸಂಘಟಿತ ವಲಯದ ಕೆಲಸದ ಸ್ಥಿತಿಗತಿಗಳನ್ನು ನಿಯಂತ್ರಿಸಲು ಭಾರತದಲ್ಲಿ ಕಠಿಣ ಕಾನೂನುಗಳಿಲ್ಲ; ಅನೌಪಚಾರಿಕ ವಲಯದ ಕೆಲವು ಕೆಲಸಗಳಂತೂ ಅಗೋಚರವಾಗಿಯೇ ಉಳಿಯುವುದರಿಂದ ಅದು ಇನ್ನಷ್ಟು ಶೋಷಣೆಗೆ ದಾರಿ ಮಾಡಿಕೊಡುತ್ತದೆ. ಹತ್ತು ಅಥವಾ ಹೆಚ್ಚು ಮಂದಿ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆ ಅಥವಾ ಉದ್ದಿಮೆಗಳಿಗಾಗಿ ಸಾಕಷ್ಟು ಕಾನೂನುಗಳಿವೆ. ಅನೌಪಚಾರಿಕ ವಲಯದ ಕೆಲಸದ ಸ್ಥಿತಿಗತಿಗಳನ್ನು ನಿಯಂತ್ರಿಸುವ ಕೆಲವು ಪ್ರಯತ್ನಗಳು ರಾಜ್ಯ ಮಟ್ಟಗಳಲ್ಲಿ ನಡೆದಿವೆ. ಕೇರಳ ಕೃಷಿ ಕಾರ್ಮಿಕರ ಕಾಯ್ದೆ 1974, ಮಹಾರಾಷ್ಟ್ರ ಮಥಡಿ, ಹಮಾಲ್ ಮತ್ತು ಇತರ ಶಾರೀರಿಕ ಕೆಲಸಗಾರರ (ಉದ್ಯೋಗ ನಿಯಂತ್ರಣ ಮತ್ತು ಕಲ್ಯಾಣ) ಕಾಯ್ದೆ 1969 ಇದಕ್ಕೆ ಉದಾಹರಣೆಗಳು. ಅನೌಪಚಾರಿಕ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸುವ ಇನ್ನೂ ಕೆಲವು ಪ್ರಯತ್ನಗಳನ್ನು ತಮಿಳುನಾಡು, ಮಧ್ಯಪ್ರದೇಶ, ಗುಜರಾತ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಮಾಡಿವೆ. ಈ ವಲಯದ ಕೆಲಸ ಹಾಗೂ ಕೆಲಸಗಾರರ ವಿವಿಧ ವರ್ಗಗಳನ್ನು ಪರಿಶೀಲಿಸಿ ಗುರುತಿಸುವ ಹಾಗೂ ಅವರ ಕೆಲಸದ ಸ್ಥಿತಿಗತಿಗಳನ್ನು ಮತ್ತು ಜೀವನೋಪಾಯವನ್ನು ಸುಧಾರಿಸುವ ಪರಿಣಾಮಕಾರಿ ಕಾನೂನುಗಳನ್ನು ಜಾರಿಗೆ ತರಬೇಕಿದೆ.

ಅರ್ಧಗಂಟೆಯ ವಿರಾಮವನ್ನು ಒಳಗೊಂಡ ಎಂಟುಗಂಟೆಯ ಕೆಲಸದ ಅವಧಿ, ಒಂದು ದಿನದ ಸಂಬಳ ಸಹಿತ ರಜೆ, ರಾಷ್ಟ್ರೀಯ ಕನಿಷ್ಠ ವೇತನ, ಮಹಿಳೆಯರಿಗೆ ಸರಿಸಮಾನ ವೇತನ, ತಡವಾಗಿ ನೀಡುವ ವೇತನಕ್ಕೆ ದಂಡರೂಪದ ಬಡ್ಡಿ, ವೇತನದಿಂದ ದಂಡವನ್ನು ಕಡಿತಗೊಳಿಸದಿರುವಿಕೆ, ಸಂಘಟನೆಯ ಹಕ್ಕು, ಕೆಲಸದ ಸುರಕ್ಷತೆ, ಅವಘಡಗಳಿಗೆ ಪರಿಹಾರ, ಮಕ್ಕಳ ಲಾಲನೆ ಪಾಲನೆಗೆ ಅವಕಾಶ, ಲೈಂಗಿಕ ದೌರ್ಜನ್ಯದಿಂದ ರಕ್ಷಣೆ, ಲಿಂಗ, ಜಾತಿ ಹಾಗೂ ಧರ್ಮಗಳ ಆಧಾರದಲ್ಲಿ ತಾರತಮ್ಯ ಮಾಡದಿರುವಿಕೆ ಮುಂತಾದವುಗಳನ್ನು ಅಸಂಘಟಿತ ವಲಯದಲ್ಲಿನ ಉದ್ದಿಮೆಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್) ಶಿಫಾರಸು ಮಾಡಿತ್ತು (ಎನ್‌ಸಿಇಯುಎಸ್, ಭಾರತ ಸರ್ಕಾರ, 2007). ಆದರೆ ಅನೌಪಚಾರಿಕ ವಲಯದಲ್ಲಿನ ವೈವಿಧ್ಯಮಯ ಕೆಲಸಗಾರರಿಗೆ ಈ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವುದು ಸವಾಲಿನ ಹಾಗೂ ಅತ್ಯಂತ ಕಠಿಣತಮ ಕಾರ್ಯವಾಗಿದೆ. ಇದಕ್ಕೆ ವಿವಿಧ ರಾಜ್ಯ ಸರ್ಕಾರಗಳು, ಜಾರಿಗೊಳಿಸುವ ಸಂಸ್ಥೆಗಳು/ಕಲ್ಯಾಣ ಮಂಡಳಿಗಳು ಮುಂತಾದವುಗಳ ಉಪಕ್ರಮ ಹಾಗೂ ವಿಶೇಷ ಬದ್ಧತೆ ಮತ್ತು ನಿರಂತರವಾದ ಪರಿವೀಕ್ಷಣೆ ಅಗತ್ಯವಿದೆ.

ಕಾರ್ಮಿಕರು ಹಾಗೂ ಅವರ ಕುಟುಂಬವರ್ಗದ ಆಸ್ಪತ್ರೆ ಖರ್ಚುಗಳ ಭತ್ಯೆಯನ್ನು ವಾರ್ಷಿಕ ರೂ. 25,000ಕ್ಕೆ ಏರಿಸಬೇಕು. ಬಡತನ ರೇಖೆಗಿಂತ ಕೆಳಗಿರುವ 60 ವರ್ಷ ಮೀರಿದ ಎಲ್ಲ ಕೆಲಸಗಾರರಿಗೂ ಪ್ರತೀ ತಿಂಗಳೂ ಕನಿಷ್ಠ ರೂ. 2,500 ಪಿಂಚಣಿ ರೂಪದ ವೃದ್ಧಾಪ್ಯವೇತನವನ್ನು ನೀಡಬೇಕು. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಜಂಟಿಯಾಗಿ ಸಮಗ್ರ ಕುಟುಂಬದ ಆರೋಗ್ಯ ನೀತಿಯೊಂದನ್ನು ರೂಪಿಸಬಹುದಾಗಿದೆ. ಸಂವಿಧಾನದ 39 ಹಾಗೂ 42ನೇ ವಿಧಿಗಳು ನ್ಯಾಯಬದ್ಧ ಹಾಗೂ ಮಾನವೀಯ ಶ್ರಮದ ನಿಯಮಗಳಿಗೆ ಒತ್ತು ನೀಡುತ್ತವೆ ಹಾಗೂ ರಾಜ್ಯ ನಿರ್ದೇಶಕ ತತ್ವಗಳ 43ನೇ ವಿಧಿಯು ಸಭ್ಯ ಬದುಕಿಗೆ ಅವಕಾಶ ಮಾಡಿಕೊಡುತ್ತದೆಯಲ್ಲದೆ ವೈಯುಕ್ತಿಕ ಹಾಗೂ ಸಹಕಾರಿ ನೆಲೆಯಲ್ಲಿ ಗುಡಿಕೈಗಾರಿಕೆಗಳನ್ನು ಉತ್ತೇಜಿಸುತ್ತದೆ.



ಸಾಂಪ್ರದಾಯಿಕ ಕೈಗಾರಿಕೆಗಳನ್ನು ಉತ್ತೇಜಿಸುವುದು, ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಸಹಕಾರಿ ಸಂಘಗಳ ಮೂಲಕ ಸುಲಭ ಸಾಲಗಳನ್ನು ದೊರೆಯುವಂತೆ ಮಾಡುವುದು ಇತ್ಯಾದಿಗಳಿಂದ ಅತಿಸಣ್ಣ ಉದ್ದಿಮೆಗಳನ್ನು ಆರಂಭಿಸುವುದು ಅಥವಾ ಅಭಿವೃದ್ಧಿಪಡಿಸುವುದು ಸಾಧ್ಯ. ಕೇಂದ್ರ ಸರ್ಕಾರ, ಸಾರ್ವಜನಿಕ ವಲಯದ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಹಾಗೂ ಇತರೆ ಸರ್ಕಾರಿ ಸಂಸ್ಥೆಗಳಿಂದ ಪ್ರಾಯೋಜಿತವಾದ ರೂ. 1000 ಕೋಟಿ ಮೂಲಧನದೊಂದಿಗೆ 'ಅಸಂಘಟಿತ ವಲಯದ ರಾಷ್ಟ್ರೀಯ ನಿಧಿ' ಎಂಬ ಶಾಸನಬದ್ಧ ಸಂಸ್ಥೆಯೊಂದನ್ನು ಸ್ಥಾಪಿಸುವ ಬಗ್ಗೆ ಎನ್‌ಸಿಇಯುಎಸ್ ಶಿಫಾರಸು ಮಾಡಿತ್ತು. ಆದರೆ ಇದರ ಬದಲಾಗಿ ಅನೌಪಚಾರಿಕ ವಲಯದ ಉದ್ಯೋಗ, ಶಿಕ್ಷಣ, ಆರೋಗ್ಯ, ಗೃಹನಿರ್ಮಾಣ ಇತ್ಯಾದಿಗಳಿಗಾಗಿ ಕೇಂದ್ರ ಸರ್ಕಾರವು ಪ್ರತ್ಯೇಕ ಬಜೆಟ್ ಸೌಲಭ್ಯ ನೀಡುವ ಬಗ್ಗೆ ಯೋಚಿಸಬಹುದೆಂದು ನಾನು ಭಾವಿಸುತ್ತೇನೆ. ಕಾರ್ಪೋರೇಟ್ ವಲಯವು ಈ ರಾಷ್ಟ್ರೀಯ ನಿಧಿಗೆ ಒಂದು ನಿರ್ದಿಷ್ಟ ಪ್ರಮಾಣದ ಕೊಡುಗೆಯನ್ನು ನೀಡುವಂತೆ ಸೂಚಿಸಬಹುದು; ಇದು ಅನೌಪಚಾರಿಕ ರಂಗದ ಕಾರ್ಮಿಕರ ಸಮಾಜೋ ಆರ್ಥಿಕ ಬದಲಾವಣೆ ಹಾಗೂ ಕಲ್ಯಾಣವನ್ನು ಸಾಧಿಸಲು ಖಂಡಿತವಾಗಿಯೂ ನೆರವಾದೀತು.

ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಈ ದೊಡ್ಡ ವಲಯವನ್ನು ಬೆಂಬಲಿಸುವುದು ಈಗ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ; ಏಕೆಂದರೆ ಬೆಳವಣಿಗೆ ಸಾಧಿಸಲು ಇದಕ್ಕೆ ಶಕ್ತಿ ಸಾಮರ್ಥ್ಯಗಳಿವೆ; ಆದರೆ ಇಲ್ಲಿ ಶಿಕ್ಷಣ, ಕೌಶಲ ತರಬೇತಿ ಹಾಗೂ ಸಂಪನ್ಮೂಲಗಳ ಕೊರತೆಯಿದೆ. ಅನೌಪಚಾರಿಕ ವಲಯದ ಅಭಿವೃದ್ಧಿಗಾಗಿ ಕ್ರಮಗಳನ್ನು ಕೈಗೊಳ್ಳುವಾಗ ಸರ್ಕಾರವು ಆ ರಂಗದಲ್ಲಿ ದುಡಿಯುತ್ತಿರುವ ಕಾರ್ಮಿಕರ ಕೆಲಸ ಹಾಗೂ ಜೀವನೋಪಾಯಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು; ಒಂದು ವೇಳೆ ತೊಂದರೆಯಾದರೂ ಬಡ ಕಾರ್ಮಿಕರಿಗೆ ಸಾಕಷ್ಟು ಪರಿಹಾರ ಹಾಗೂ ಮರುವಸತಿ ಕಲ್ಪಿಸಬೇಕು. ವಿಶೇಷ ಆರ್ಥಿಕ ವಲಯ, ಎಕ್ಸ್‌ಪ್ರೆಸ್‌ವೇ, ಹೊಸ ನಗರಗಳು, ಕೈಗಾರಿಕೆಗಳು, ವಿಮಾನ ನಿಲ್ದಾಣ ಇತ್ಯಾದಿ

ದೊಡ್ಡ ಯೋಜನೆಗಳಿಗಾಗಿ ಭೂಸ್ವಾಧೀನ ಮಾಡಿಕೊಂಡಾಗ ಬಡವರಿಗೆ ಸೂಕ್ತ ಪರಿಹಾರ ಹಾಗೂ ಮರುವಸತಿ ಒದಗಿಸಿಲ್ಲ ಎಂಬ ಕಾರಣಕ್ಕೇ ಸರ್ಕಾರದ ವಿರುದ್ಧ ಜನ ಸಿಟ್ಟಾಗುತ್ತಾರೆ. ಸಣ್ಣಪುಟ್ಟ ವ್ಯಾಪಾರಿಗಳು, ರಿಕ್ಷಾ ಎಳೆಯುವವರು, ಬೀದಿಬದಿ ಮಾರಾಟಗಾರರು, ಮನೆಯಿಂದಲೋ ಬೀದಿಬದಿಯಿಂದಲೋ ಸಣ್ಣಪುಟ್ಟ ಆರ್ಥಿಕ ಚಟುವಟಿಕೆಗಳನ್ನು ನಡೆಸುವವರನ್ನು ಜೀವನೋಪಾಯದಿಂದ ವಂಚಿಸಲಾಗುತ್ತದೆ. ಅವರನ್ನು ಶೋಷಿಸಲಾಗುತ್ತದೆ ಅಲ್ಲದೆ ತಮ್ಮ ಜೀವನೋಪಾಯವನ್ನು ಮುಂದುವರಿಸುವುದಕ್ಕಾಗಿ ಅವರು ದಂಡ ಹಾಗೂ ಲಂಚ ನೀಡಬೇಕಾಗುತ್ತದೆ. ಇಂದು ನಗರಾಭಿವೃದ್ಧಿಗೆ ಅವರನ್ನು ಒಂದು ಅಡ್ಡಿಯೆಂದು ಭಾವಿಸಲಾಗುತ್ತದೆ. ಭಾರತದ ಸಮಗ್ರ ನಗರಾಭಿವೃದ್ಧಿಯಲ್ಲಿ ಇಂತಹವರೆಲ್ಲ ಒಂದು ಭಾಗವಾಗಿರುವುದು ಮುಖ್ಯ (ಎನ್‌ಸಿಇಯುಎಸ್, ಭಾರತ ಸರ್ಕಾರ, 2007).

1991ರ ನಂತರದ ಆರ್ಥಿಕ ಸುಧಾರಣೆಗಳು ವ್ಯಾಪಾರ ಮತ್ತು ಕೈಗಾರಿಕಾ ನೀತಿಗಳಲ್ಲಿ ಬದಲಾವಣೆಗಳನ್ನು ತಂದಿವೆ. ಇದು ಅಗ್ಗದ ಶ್ರಮ ಮತ್ತು ಆ ಮೂಲಕ ಉತ್ಪಾದನಾ ವೆಚ್ಚದಲ್ಲಿ ಕಡಿತಕ್ಕೆ ಅವಕಾಶ ನೀಡಿದ್ದಲ್ಲದೆ ಉತ್ಪಾದನೆಯಲ್ಲಿ ಸ್ಪರ್ಧೆಗೆ ಎಡೆಮಾಡಿಕೊಟ್ಟಿದೆ. ಜಗತ್ತಿನಾದ್ಯಂತ ಉತ್ಪಾದನಾ ಸ್ವರೂಪದಲ್ಲಿ ಆಗಿರುವ ಬದಲಾವಣೆ ಕೂಡ ಕಾರ್ಮಿಕ ವಲಯದ ಮೇಲೆ ಪರಿಣಾಮ ಬೀರಿದೆ. ತಾತ್ಕಾಲಿಕ, ಅರೆಕಾಲಿಕ ಹಾಗೂ ಗುತ್ತಿಗೆ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ ಬಂದಿದೆ, ಪರಿಣಾಮವಾಗಿ ಜಾಗತಿಕ ಉತ್ಪಾದನಾ ಸರಪಳಿಗೆ ಉತ್ತೇಜನ ಲಭಿಸಿದೆ. ತಂತ್ರಜ್ಞಾನದಲ್ಲಿ ಆಗಿರುವ ಅಭಿವೃದ್ಧಿ ಉತ್ಪಾದನೆಯ ವಿಘಟನೆ ಹಾಗೂ ವಿಕೇಂದ್ರೀಕರಣಕ್ಕೆ ದಾರಿ ಮಾಡಿಕೊಟ್ಟಿದೆ. ಇದರಿಂದಾಗಿ ಹೆಚ್ಚು ಅನೌಪಚಾರಿಕ ನೆಲೆಯ ಉದ್ಯೋಗಗಳಿಗೆ ಅವಕಾಶವಾಗುತ್ತಿದೆ. ಇದು ಮುಖ್ಯವಾಗಿ ಕೆಲಸದ ಹೊರಗುತ್ತಿಗೆ ಮೂಲಕ ನಡೆಯುತ್ತಿದೆ.

ಹೊಸ ಆರ್ಥಿಕ ಸುಧಾರಣೆಗಳ ಬಳಿಕ ದೇಶದ ಕಾರ್ಮಿಕ ಸಂಘಟನೆಗಳು ತಮ್ಮ ಶಕ್ತಿಯನ್ನು ಹಾಗೂ ಕಾರ್ಮಿಕರ ಹಕ್ಕುಗಳ ಬಗೆಗಿನ ಹೋರಾಟದ ಕೆಚ್ಚನ್ನು ಕಳೆದುಕೊಂಡಿವೆ. ಕಾರ್ಮಿಕ ಸಂಘಟನೆಗಳ ಗಾತ್ರ ಕುಸಿದಿದೆ ಮತ್ತು ಸರ್ಕಾರದ ಮೇಲೆ ಒತ್ತಡವನ್ನು ಮುಂದುವರಿಸಿಕೊಂಡು ಹೋಗುವುದು ಅವುಗಳಿಗೆ ಅಸಾಧ್ಯವಾಗಿದೆ. ಕೇಂದ್ರದ ಕಾರ್ಮಿಕ ಸಂಘಟನೆಗಳು ಅನೌಪಚಾರಿಕ ವಲಯದ ಕಾರ್ಮಿಕರಿಗಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಅಲ್ಲದೆ ಕಾರ್ಖಾನೆ ಅಥವಾ ಕೈಗಾರಿಕೆಗಳಲ್ಲಿ ದುಡಿಯದ ಮಂದಿಯನ್ನು ಅವರೆಂದೂ ಕಾರ್ಮಿಕರೆಂದೇ ಪರಿಗಣಿಸಲಿಲ್ಲ. ಇಂದು ಸಂಘಟಿತ ವಲಯದ ಕಾರ್ಮಿಕರೂ ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಕೆಲವು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅನೌಪಚಾರಿಕ ವಲಯದ ಕಾರ್ಮಿಕರ ಮಹತ್ವವನ್ನು ಮನಗಂಡು ಕಾರ್ಯಾರಂಭ ಮಾಡಿವೆಯಾದರೂ ಅನೇಕ ಕಾರ್ಮಿಕ ಸಂಘಟನೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿವೆ. ಪ್ರಸ್ತುತ ಸ್ಥಳೀಯ ಹಾಗೂ ಉದ್ದಿಮೆ ಸಂಘಟನೆಗಳ 'ಸ್ವಾಯತ್ತತೆ'ಯಲ್ಲಿ ಹೆಚ್ಚಳ ಕಂಡು ಬಂದಿದೆ. ಅಲ್ಲದೆ, ಇಂದು 'ಸ್ವತಂತ್ರ' ಕಾರ್ಮಿಕ ಸಂಘಟನೆಗಳು ತಲೆಯೆತ್ತಿವೆ. ಅವುಗಳಲ್ಲಿ ಬಹುಪಾಲು ಕಾರ್ಮಿಕೇತರ ಸಂಘಟನೆಗಳು ಹಾಗೂ ಮುಖ್ಯವಾಹಿನಿಯ ಕಾರ್ಮಿಕ ಸಂಘಟನೆಗಳು ಆಸಕ್ತಿ ತೋರದ ಅಸಂಘಟಿತ ವಲಯದ ಸ್ವಯಂಸೇವಾ ಸಂಸ್ಥೆಗಳಾಗಿವೆ (ಐಎಚ್‌ಡಿ, 2014). ಜಾಗತೀಕರಣವು ಉದ್ಯೋಗ ಹೆಚ್ಚಳಕ್ಕೆ ಕಾರಣವಾಗಿದೆ ಮತ್ತು ಅದು ಭಾರತದ ಅಭಿವೃದ್ಧಿ ಗಾಥೆಗೆ ಪೂರಕವಾಗಿದೆ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಎಚ್ಚರಿಕೆಯಿಂದ ಗಮನಿಸಿದರೆ ಉದ್ಯೋಗದ ಗುಣಮಟ್ಟ ಪ್ರಮಾಣೀಕೃತವಾಗಿಲ್ಲ ಎಂಬುದು ಅರ್ಥವಾಗುತ್ತದೆ. ಈ ಹೊಸ ಉದ್ಯೋಗ ಸೃಷ್ಟಿಯಲ್ಲಿ ಸಾಮಾಜಿಕ ಭದ್ರತೆಯಾಗಲೀ ಉದ್ಯೋಗ ಸುರಕ್ಷೆಯಾಗಲಿ ಇಲ್ಲ. ಇದನ್ನು 2004–05 ಹಾಗೂ ನಂತರದ ವರ್ಷಗಳಲ್ಲೂ ಗಮನಿಸಬಹುದಾಗಿದೆ. ಬಹುಪಾಲು ಉದ್ಯೋಗಗಳು ಅಸಂಘಟಿತ ವಲಯದಲ್ಲಿವೆ ಅಥವಾ ಸಂಘಟಿತ ವಲಯದ ಅನೌಪಚಾರಿಕ ಉದ್ಯೋಗಗಳಾಗಿವೆ.



ಭಾರತದ ಆರ್ಥಿಕತೆಯು ಸೇವಾ ಕ್ಷೇತ್ರದಲ್ಲಿ ಮುನ್ನಡೆಯನ್ನು ಕಂಡಿದೆ. ಹಣಕಾಸು ಸೇವೆಯಂತಹ ಸೇವೆಗಳು ಗರಿಷ್ಠ ಬೆಳವಣಿಗೆಯನ್ನು ಕಂಡಿವೆ ಮತ್ತು 2011–12ರಲ್ಲಿ ಉದ್ಯೋಗ ಬೆಳವಣಿಗೆಯ ದರವು ಶೇ. 8ರಷ್ಟಿದೆ. ಸೇವಾವಲಯದ ಭಾಗವಾಗಿರುವ ಹಣಕಾಸು ಸೇವೆಗಳು, ಶಿಕ್ಷಣ, ಆರೋಗ್ಯ, ಭೂವ್ಯವಹಾರ ಮೊದಲಾದೆಡೆ ಅನೌಪಚಾರಿಕ ಉದ್ಯೋಗಗಳೇನೂ ಹೆಚ್ಚಾಗಿವೆ ಆದರೆ ಅಲ್ಲಿ ಕಾರ್ಮಿಕ ಸಂಘಟನೆಗಳಿಲ್ಲ. ನಗರ ಪ್ರದೇಶಗಳಲ್ಲಿರುವ ಹೊಸ ವಲಸೆಗಾರರು ಅನೌಪಚಾರಿಕವಲಯದಲ್ಲಿರುವವರಾಗಿದ್ದಾರೆ ಮತ್ತು ಅವರು ಮುಖ್ಯವಾಗಿ ಬಡವರೂ ದುರ್ಬಲರಾಗಿದ್ದಾರೆ. ಮಹಿಳೆಯರು ಮನೆಗೆಲಸದವರಾಗಿ ದುಡಿಯುತ್ತಿದ್ದಾರೆ. ವಸತಿ ಹಾಗೂ ಶುಚಿತ್ವದ ಕೊರತೆಯೂ ಇದ್ದು ಇದು ಅನೌಪಚಾರಿಕ ಉದ್ದಿಮೆಗಳಲ್ಲಿ ಹಾಗೂ ಗೃಹ ಆಧಾರಿತ ಕೆಲಸಗಳಲ್ಲಿ ದುಡಿಯುತ್ತಿರುವವರ ಸ್ಥಿತಿಗತಿಗಳು ಇನ್ನಷ್ಟು ಕುಸಿಯುವುದಕ್ಕೆ ಕಾರಣವಾಗಿವೆ. ಸಣ್ಣಪುಟ್ಟ ಕೆಲಸ ಮಾಡಿಕೊಂಡಿರುವವರು, ಬೀದಿಬದಿ ವ್ಯಾಪಾರಿಗಳ ಸ್ಥಿತಿ ಇನ್ನೂ ಕೆಟ್ಟದಾಗಿದ್ದು ಅವರು ಪೊಲೀಸರು ಹಾಗೂ ಮುನಿಸಿಪಲ್ ಸಂಸ್ಥೆಗಳ ಸುಲಭದ ಗುರಿಗಳಾಗುತ್ತಿದ್ದಾರೆ. ಯಾವುದೇ ಕಾನೂನುಗಳ ಬೆಂಬಲ ಇಲ್ಲದ ಈ ಕ್ಷೇತ್ರ ಭಾರತದ ನಿಜವಾದ ಶ್ರಮಿಕ ವರ್ಗವಾಗಿದೆ. ಅಸಂಘಟಿತ ವಲಯದ ಕಾರ್ಮಿಕರ ಸಂಘಟನೆಯೂ ಒಂದು ಸವಾಲಾಗಿದೆ. ಕೆಲವು ಸ್ವಯಂಸೇವಾ ಸಂಸ್ಥೆಗಳು, ಸೇವಾ (ಎಸ್‌ಇಡಬ್ಲ್ಯೂಎ) ಹಾಗೂ ಕೆಲವು ಕಾರ್ಮಿಕ ಸಂಘಟನೆಗಳು ಒಂದಿಷ್ಟು ಪ್ರಯತ್ನಗಳನ್ನು ಮಾಡಿವೆಯಷ್ಟೇ. ಅನೌಪಚಾರಿಕ ಕಾರ್ಮಿಕರ ಸಂಘಟನೆ ಮತ್ತು ಕಲ್ಯಾಣದ ಬಗ್ಗೆ ಹಾಗೂ ಅನೌಪಚಾರಿಕ ವಲಯದ ಶ್ರೇಯಸ್ಸಿಗಾಗಿ ಶ್ರಮಿಸುವ ವಿವಿಧ ಗುಂಪು ಮತ್ತು ಸಮುದಾಯಗಳನ್ನು ಬಲಪಡಿಸುವ ಬಗ್ಗೆ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು ಯೋಚಿಸಬೇಕಾಗಿದೆ.

ಭಾರತದ ಸಮಗ್ರ ಆರ್ಥಿಕ ಅಭಿವೃದ್ಧಿಯ ಹೊಸ ನಕಾಶೆಯು ಅನೌಪಚಾರಿಕ ವಲಯದ ಶಕ್ತಿ ಸಾಮರ್ಥ್ಯಗಳ ಆಧಾರದಲ್ಲಿ ನಿರ್ಧಾರಿತವಾಗಬೇಕಿದೆ. ಪ್ರಸಕ್ತ ಸರ್ಕಾರವು ಇಂತಹ ನೀತಿಗಳನ್ನು ರೂಪಿಸಬೇಕಾಗಿದೆ. ❑

# ಪ್ರಧಾನಮಂತ್ರಿ ಜನ ಧನ ಯೋಜನೆ

**ಪ್ರವಾಕರ್ ಸಾಹೂ**

**ಕನ್ನಡಕ್ಕೆ : ಡಾ. ನಿರಂಜನ ವಾನಳ್ಳಿ**



**ಜನ ಧನ ಯೋಜನೆ ಹೆಚ್ಚಾಗಿ ಬ್ಯಾಂಕ್ ಖಾತೆ ತೆರೆಯುವುದಕ್ಕೆ ಸಂಬಂಧಿಸಿದ್ದಾದರೂ ಅದಕ್ಕೇ ಸೀಮಿತವಲ್ಲ. ಅದರ ಇತರ ಗುರಿಗಳೆಂದರೆ ಬಡಜನರಿಗೆ ಡೆಬಿಟ್ ಕಾರ್ಡು, ಒಂದು ಲಕ್ಷ ರೂಪಾಯಿಗಳವರೆಗೆ ಅಪಘಾತ ವಿಮೆ, ಮತ್ತು 2015ರ ಸ್ವಾತಂತ್ರ್ಯೋತ್ಸವದೊಳಗೆ ಖಾತೆ ತೆರೆಯುವವರಿಗೆ 30 ಸಾವಿರ ರೂ.ಗಳ ವರೆಗೆ ಜೀವವಿಮಾ ಪಾಲಿಸಿ ನೀಡುವುದೂ ಸೇರಿದೆ.**

ಯಾವುದೇ ಮಾನದಂಡದಿಂದ ನೋಡಿದರೂ, ಭಾರತದಲ್ಲಿ ಆರ್ಥಿಕ ಒಳಗೊಳ್ಳುವಿಕೆಯೆಂಬುದು ಸವಾಲಿನ ಮಾತು. 2012ರಲ್ಲಿರುವಂತೆ 15ವರ್ಷ ಮೇಲ್ಪಟ್ಟ ಭಾರತೀಯರಲ್ಲಿ ಕೇವಲ ಶೇ. 35ಜನ ಮಾತ್ರ ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳಲ್ಲಿ ಖಾತೆ ಹೊಂದಿರುತ್ತಾರೆ. ವಿಶ್ವಸಂಸ್ಥೆಯ 2012ರ ವರದಿಯ ಪ್ರಕಾರ, ಅಭಿವೃದ್ಧಿ ಶೀಲ ದೇಶಗಳಲ್ಲಿ ಈ ಪ್ರಮಾಣ ಶೇಕಡಾ 41ರಷ್ಟಿದೆ. 2011–13ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಆರ್ಥಿಕ ಒಳಗೊಳ್ಳುವಿಕೆಯ ಕಟ್ಟುನಿಟ್ಟಾದ ಸೂಚನೆ ನೀಡಿದ ಫಲವಾಗಿ ನೂರು ಮಿಲಿಯ ಜನ ಹೊಸದಾಗಿ ಬ್ಯಾಂಕು ಖಾತೆಗಳನ್ನು ತೆರೆದರು. ಇಂದು ದೇಶದಲ್ಲಿ 229 ಮಿಲಿಯ ಬ್ಯಾಂಕ್ ಖಾತೆಗಳಿವೆ. ಹಣಕಾಸು ಸಂಸ್ಥೆಗಳ ಸಂಪರ್ಕ ನಿಧಾನವಾಗಿ ಸುಧಾರಿಸಿದೆ. ಆದರೂ ಸಾವಿರಾರು ಹಳ್ಳಿಗಳಲ್ಲಿ ಇಂದಿಗೂ ಬ್ಯಾಂಕ್ ಶಾಖೆಗಳಿಲ್ಲ. ವಾಣಿಜ್ಯ ಬ್ಯಾಂಕುಗಳ ಶೇಕಡಾ 10ಕ್ಕಿಂತ ಕಡಿಮೆ ಸಾಲ ಮಾತ್ರ ಭಾರತದ ಶೇಕಡಾ 70ರಷ್ಟು ಜನ ವಾಸಮಾಡುವ ಹಳ್ಳಿಗಳಿಗೆ ಸಲ್ಲುತ್ತದೆ. ಆದ್ದರಿಂದ ಆರ್ಥಿಕ ಒಳಗೊಳ್ಳುವಿಕೆಯ ವಿಶೇಷ ಕಾರ್ಯಕ್ರಮ ಅತ್ಯವಶ್ಯಕ ಎಂಬುದಕ್ಕೆ ಎರಡು ಮಾತಿಲ್ಲ.


ಪ್ರಧಾನಮಂತ್ರಿ ಜನಧನ ಯೋಜನೆ (ಪಿಎಂಜೆಡಿವೈ)ಯನ್ನು ಆಗಸ್ಟ್ 28, 2014ರಂದು ಆರಂಭಿಸಲಾಗಿದ್ದು ಪ್ರಾರಂಭದಲ್ಲಿ ಈ ಯೋಜನೆಯು 2015ರ ಆಗಸ್ಟ್ 15ರ ಒಳಗೆ 7.5 ಕೋಟಿ ಕುಟುಂಬಗಳಿಗೆ ಬ್ಯಾಂಕ್ ಖಾತೆಗಳನ್ನು ತೆರೆಸುವ ಗುರಿ ಹೊಂದಿದೆ. ಯೋಜನೆಯ ಉದ್ಘಾಟನೆಯ ಮೊದಲ ದಿನವೇ ಒಂದು ಕೋಟಿ ಖಾತೆಗಳನ್ನು ತೆರೆಯಲಾಗಿದೆ. ಒಟ್ಟಾರೆ ಅರ್ಹನಾದ ಪ್ರತಿಯೊಬ್ಬ ಭಾರತೀಯನನ್ನೂ ಬ್ಯಾಂಕಿಂಗ್ ವ್ಯವಸ್ಥೆಯೊಳಗೆ ತರುವುದು ಈ ಯೋಜನೆಯ ಉದ್ದೇಶ. ಮೊದಲ ಹಂತದಲ್ಲಿ ಎಲ್ಲ ಮನೆಗಳಿಗೆ ಮೂಲ ಬ್ಯಾಂಕ್ ಖಾತೆ ನೀಡಲಾಗುತ್ತದೆ. ಆರ್ಥಿಕ ಸಾಕ್ಷರತೆಯನ್ನು ದೇಶದ ಕುಗ್ರಾಮಗಳಿಗೂ ತಲುಪಿಸಲಾಗುತ್ತದೆ ಹಾಗೂ ಸರ್ಕಾರಿ ಸೌಲಭ್ಯಗಳ ಹಣವನ್ನು ನೇರವಾಗಿ ಈ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ. ಎರಡನೇ ಹಂತದಲ್ಲಿ ಈ ಬ್ಯಾಂಕ್ ಖಾತೆ ಹೊಂದಿರುವವರಿಗೆ ಹಣಕಾಸು ಸೇವೆಯನ್ನು ವಿಸ್ತರಿಸುವುದು ಮತ್ತು ಮೈಕ್ರೊ ವಿಮೆ ಹಾಗೂ ನಿವೃತ್ತಿ ವೇತನಗಳನ್ನು ತಲುಪಿಸುವುದು ಈ ಯೋಜನೆಯಲ್ಲಿ ಸೇರಿದೆ. ಬ್ಯಾಂಕ್ ಶಾಖೆಗಳಿಲ್ಲದ ಎಲ್ಲ ಹಳ್ಳಿಗಳಿಗೂ ಬ್ಯಾಂಕ್ ಸೇವೆಯನ್ನು ವಿಸ್ತರಿಸುವುದು ಕಷ್ಟವಾದ್ದರಿಂದ 'ಬಿಸಿ'ಗಳು ಎಂದರೆ ಬ್ಯಾಂಕ್ ಕರೆಸ್ಪಾಂಡೆಂಟ್ಸ್ (ಬ್ಯಾಂಕ್ ಪ್ರತಿನಿಧಿಗಳು– ಬಿ. ಸಿ.)ಗಳನ್ನು ದೊಡ್ಡ ಪ್ರಮಾಣದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಬಳಸಲಾಗುವುದು. ಭಾರತದಲ್ಲಿ ಹಣಕಾಸು ವ್ಯವಸ್ಥೆಯ ತಲುಪುವಿಕೆ ಅಭಿವೃದ್ಧಿ ಹೊಂದಿದ ದೇಶಗಳಷ್ಟೇ ಅಲ್ಲ ಪ್ರಮುಖ ಅಭಿವೃದ್ಧಿಶೀಲ ದೇಶಗಳಿಗಿಂತ ಕಡಿಮೆಯಿದೆ. ಆದ್ದರಿಂದ ಆರ್ಥಿಕ ಒಳಗೊಳ್ಳುವಿಕೆ ಸಮರ್ಥನೀಯವಾಗಿದೆ. ನಿಜವಾಗಿ ಆರ್ಥಿಕ ಒತ್ತಾಸೆ ಮತ್ತು ವ್ಯವಸ್ಥಿತ ಸಾಲಯೋಜನೆ ಆರ್ಥಿಕ ಅಭಿವೃದ್ಧಿ ಹಾಗೂ ಉದ್ಯಮ ಸಂಬಂಧಿ ಚಟುವಟಿಕೆಗಳ ಪ್ರಮುಖ ಉತ್ತೇಜಕವೆಂದು ನಂಬಲಾಗಿದೆ. ಈ ಪ್ರಕ್ರಿಯೆ ಜನಗಳ ಸಶಕ್ತೀಕರಣವೇ ಆಗಿದೆ.

ಸಹ ಪ್ರಾಧ್ಯಾಪಕರು. ಆರ್ಥಿಕ ಬೆಳವಣಿಗೆಯ ಸಂಸ್ಥೆ , ದೆಹಲಿ. **Email : pravakarfirst@gmail.com**

### 1. ಆರ್ಥಿಕ ಒಳಗೊಳ್ಳುವಿಕೆಯ ಪ್ರಾಮುಖ್ಯತೆ


ಆರ್ಥಿಕ ಒಳಗೊಳ್ಳುವಿಕೆ ಅಥವಾ ಆರ್ಥಿಕ ಸೇವೆಗಳನ್ನು ತಲುಪಿಸುವುದು ಬೆಳವಣಿಗೆ ಮತ್ತು ಉದ್ಯೋಗದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ( ಲೆವಿನ್ 2005) ಈ ಧನಾತ್ಮಕ ಬೆಳವಣಿಗೆಯ ತಂತ್ರವೆಂದರೆ ವಿತರಣೆಗೆ ಕಡಿಮೆ ಖರ್ಚುಮಾಡುವುದು ಮತ್ತು ಸುಧಾರಿತ ಬಂಡವಾಳ ವಿತರಣೆ(ಜಹಾನ್ ಮತ್ತು ಡೊನಾಲ್ಡ್ 2011ರಲ್ಲಿ) ಆರ್ಥಿಕತೆಯ ಆಳಕ್ಕೂ ಅತ್ಯಂತ ಕಡಿಮೆ ವರಮಾನದ ಗುಂಪುಗಳ ಆದಾಯ ಪಾಲುದಾರಿಕೆಗೂ, ಆ ಮೂಲಕ ಬಡತನ ನಿರ್ಮೂಲನಾ ಪ್ರಕ್ರಿಯೆಗೂ ನೇರ ಸಂಬಂಧವಿದೆ. ಅಲ್ಲದೇ ಆರ್ಥಿಕ ಒಳ್ಳಗೊಳ್ಳುವಿಕೆ ಯಾರ ಬೆಂಬಲವೂ ಇಲ್ಲದ ಕಡುಬಡವರಿಗೆ ಈ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಸೌಲಭ್ಯ ಪಡೆಯುವ ಅವಕಾಶವನ್ನು ದೊರಕಿಸಿಕೊಡುವ ಮೂಲಕ ತಾರತಮ್ಯವನ್ನು ಹೋಗಲಾಡಿಸುತ್ತದೆ. ಆರ್ಥಿಕ ಸೇವೆಗಳ ತಲುಪುವಿಕೆ ಈ ಸ್ವ ಉದ್ಯೋಗ ಚಟುವಟಿಕೆಗಳ ಮೇಲೆ ಹಾಗೂ ಕುಟುಂಬಗಳ ಆರ್ಥಿಕ ಚಟುವಟಿಕೆಗಳ ಮೇಲೆ, ಒಟ್ಟಾರೆ ಕಡಿಮೆ ಆದಾಯದ ಗುಂಪುಗಳ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ.

ಬಡತನದ ವಿರುದ್ಧ ಹೋರಾಡಲು ಸಣ್ಣ ಹಣಕಾಸು ವ್ಯವಹಾರ ಎಂಬುದು ಮುಖ್ಯ ಅಸ್ತ್ರ ಎಂಬುದನ್ನು ಸಮರ್ಥಿಸಲು ಬೇಕಷ್ಟು ಸಾಹಿತ್ಯ ಸಾಮಗ್ರಿಗಳು ಹಾಗೂ ಆಧಾರಗಳು ಲಭ್ಯ ಇವೆ. (ಬಜೆಟ್ 2011 ಮತ್ತು ಬ್ಯಾನರ್ಜಿ ಮತ್ತು ಡೌಫ್ಲೊ 2013) ಭಾರತದಂತ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಡಕುಟುಂಬಗಳು ತಮ್ಮ ಹಣಕಾಸು ಚಟುವಟಿಕೆಗಳನ್ನು ಅನಿಶ್ಚಿತ ಮಾದರಿಯಲ್ಲಿ ನಡೆಸುತ್ತವೆ. ಕುಟುಂಬದ ಸ್ನೇಹಿತರಿಂದ, ಬಡ್ಡಿವ್ಯಾಪಾರಿಗಳಿಂದ ಸಾಲ ಪಡೆಯುವುದರಿಂದ ಅದು ನಂಬುವಂತಿರದೇ ಬಹಳ ತುಟ್ಟಿಯಾಗುವ ಅಪಾಯವಿದೆ. ಜನಧನ ಯೋಜನೆಯು ಭರವಸೆನೀಡುವ ಹಣಕಾಸು ಒಳಗೊಳ್ಳುವಿಕೆಯಿಂದ ಉಳಿತಾಯವನ್ನು ಹೆಚ್ಚಿಸಲು ಖಂಡಿತವಾಗಿ ಸಾಧ್ಯವಿದೆ. ಭಾರತ ಮತ್ತು ದಕ್ಷಿಣ ಏಷಿಯಾದಂಥ ಅಭಿವೃದ್ಧಿ ಶೀಲ ದೇಶಗಳಲ್ಲಿ ನಡೆದ ಅಧ್ಯಯನಗಳು ಹೇಳುವಂತೆ ಸನಿಹವೇ ಬ್ಯಾಂಕು ಶಾಖೆಗಳಿರುವುದು ಸಣ್ಣ ಮಟ್ಟ ಉಳಿತಾಯವನ್ನು ಹೆಚ್ಚಿಸುತ್ತದೆ.




ಭಾರತದಲ್ಲಿ ಆರ್ಥಿಕ ಸುಧಾರಣೆಗಳ ಮಹತ್ವದ ಅಂಶವೆಂದರೆ, ಉಳಿತಾಯ ಮಾಡಲು ಜನರ ನಂಬಿಕೆಗೆ ಅರ್ಹವಾದ, ಪರ್ಯಾಯ ಆರ್ಥಿಕ ಸಂಸ್ಥೆಗಳನ್ನು ಸ್ಥಾಪಿಸುವುದು. ಇಂಥ ಆರ್ಥಿಕ ಸೌಕರ್ಯಗಳು ಭಾರತದಂಥ ದೇಶಗಳಲ್ಲಿ ಎಲ್ಲಾಕಡೆ ಅದರಲ್ಲೂ ಮುಖ್ಯವಾಗಿ ಗ್ರಾಮೀಣಪ್ರದೇಶಗಳಲ್ಲಿ ಲಭ್ಯವಿಲ್ಲ. ಸಾಂಪ್ರದಾಯಿಕ ಹಣಕಾಸು ಸಂಸ್ಥೆಗಳ ಇರುವಿಕೆ, ಬಡಕುಟುಂಬಗಳು ಸರಾಗವಾಗಿ ಹಣವನ್ನು ಇಡಲು, ಖರ್ಚುಮಾಡಲು ಹಾಗೂ ದುಡಿಯುವ ಬಂಡವಾಳವನ್ನು ಬೆಳೆಸಲು ಸ್ವಾತಂತ್ರ್ಯವನ್ನು ನೀಡುತ್ತದೆ.ಬದಲಾಗಿ ಬಡಕುಟುಂಬಗಳಿಗೆ ಉಳಿತಾಯದ ಮಾರ್ಗಗಳು ಇಲ್ಲವಾದರೆ ಅನಗತ್ಯ ಖರ್ಚುಗಳಿಗೆ ದಾರಿಯಾಗುತ್ತದೆ. ಪ್ರಧಾನಮಂತ್ರಿ ಜನಧನ ಯೋಜನೆಯು ಸಾಲ ಮತ್ತು ಮುಂಗಡ (ಓವರ್ ಡ್ರಾಫ್ಟ್) ಸೌಲಭ್ಯವನ್ನು ಒದಗಿಸುವ ಭರವಸೆಯಿತ್ತಿರುವುದು ಬಹಳ ಮುಖ್ಯ ವಿಚಾರ. ಆ ಮೂಲಕ ಸಂತೃಪ್ತಿಯನ್ನು, ಹಣಕಾಸು ನಿರ್ಧಾರ ಕೈಗೊಳ್ಳುವ ಧೈರ್ಯವನ್ನು ನೀಡುತ್ತದೆ. ಅಲ್ಲದೇ ಒಂದುಲಕ್ಷ ರೂಪಾಯಿವರೆಗೆ ವಿಮಾಸೌಲಭ್ಯದ ಭರವಸೆ ನೀಡಲಾಗಿದ್ದು ಬ್ಯಾಂಕ್ ಖಾತೆ ಹೊಂದಿರುವ ಬಡವರು ಅನಿರೀಕ್ಷಿತವಾಗಿ ಆರ್ಥಿಕ ತೊಂದರೆಗಳನ್ನು ಎದುರಿಸ ಬೇಕಾಗಿ ಬಂದರೆ ಅದನ್ನು ಧೈರ್ಯವಾಗಿ ಎದುರಿಸುವ ಸಾಮರ್ಥ್ಯ ನೀಡುತ್ತದೆ. ಬ್ಯಾಂಕುಗಳಿಲ್ಲದ ಕಡೆ ಬ್ಯಾಂಕು ಶಾಖೆಗಳನ್ನು ತೆರೆಯುವುದು ಗ್ರಾಮೀಣ ಭಾಗದಲ್ಲಿ ಬಡತನ ನಿರ್ಮೂಲನೆಯತ್ತ ದೃಢವಾದ ಹೆಜ್ಜೆ (ಬರ್ಗೆಸ್ ಮತ್ತು ಪಾಂಡೆ 2009) ಎನಿಸಿದೆ. ಈ ಆರ್ಥಿಕ ಲಾಭಗಳಲ್ಲದೇ ಜನಧನ ಯೋಜನೆಯಲ್ಲಿ ಜನಸಾಮಾನ್ಯರನ್ನೂ ಬ್ಯಾಂಕಿಂಗ್ ವ್ಯವಸ್ಥೆಯಡಿ ತರುವ ಉದ್ದೇಶ ಹೊಂದಿದ್ದು ಸರ್ಕಾರವು ಜನರನ್ನು ಕಡಿಮೆ ಖರ್ಚಿನಲ್ಲಿ ತಲುಪುವುದಕ್ಕೆ ಸಹಕಾರಿ. ಆರ್ಥಿಕ ಒಳಗೊಳ್ಳುವಿಕೆ ಸಾಮಾಜಿಕ ಸೇವೆಗಳ ಲಾಭಗಳನ್ನು ನೇರವಾಗಿ ಅವರ ಖಾತೆಗಳಿಗೆ ವರ್ಗಾವಣೆ ಮಾಡಲು ಕಾರಣವಾಗಬಹುದು.

**ಚಿತ್ರ – 1 : 15ಕ್ಕೂ ಹೆಚ್ಚು ವಯೋಮಾನದ ಜನರ ಬ್ಯಾಂಕ್ ಖಾತೆ 2011 ರಲ್ಲಿದ್ದಂತೆ**





ಮೂಲ : ವಿಶ್ವಬ್ಯಾಂಕ್ 2012

## 2. ಯೋಜನೆಯ ಸಾಧ್ಯತೆ ಮತ್ತು ಬ್ಯಾಂಕಿಂಗ್ ಮೂಲ ಸೌಕರ್ಯ


ಜನಧನ ಯೋಜನೆ ಹೆಚ್ಚಾಗಿ ಬ್ಯಾಂಕ್ ಖಾತೆ ತೆರೆಯುವುದಕ್ಕೆ ಸಂಬಂಧಿಸಿದ್ದಾದರೂ ಅದಕ್ಕೇ ಸೀಮಿತವಲ್ಲ. ಅದರ ಇತರ ಗುರಿಗಳೆಂದರೆ ಬಡಜನರಿಗೆ ಡೆಬಿಟ್ ಕಾರ್ಡು, ಒಂದು ಲಕ್ಷ ರೂಪಾಯಿಗಳ ವರೆಗೆ ಅಪಘಾತ ವಿಮೆ, ಮತ್ತು 2015ರ ಸ್ವಾತಂತ್ರ್ಯೋತ್ಸವದೊಳಗೆ ಖಾತೆ ತೆರೆಯುವವರಿಗೆ 30 ಸಾವಿರ ರೂ.ಗಳ ವರೆಗೆ ಜೀವವಿಮಾ ಪಾಲಿಸಿ ನೀಡುವುದೂ ಸೇರಿದೆ. ಖಾತೆಯನ್ನು ಜನರು ಹೇಗೆ ನಿರ್ವಹಿಸುತ್ತಾರೆಂಬ ಬಗ್ಗೆ ಕಣ್ಗಾವಲು ಇಡಲಾಗುತ್ತದೆ ಮತ್ತು ಸರಿಯಾಗಿ ನಿರ್ವಹಿಸುವವರಿಗೆ ಓವರ್ ಡ್ರಾಫ್ಟ್ ಸೌಲಭ್ಯವೂ ದೊರಕುತ್ತದೆ. ಹೊಸಖಾತೆ ತೆರೆಯುವ ವಿಧಾನ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಸಮಯ ಬಯಸುವುದರಿಂದ ಜನಧನ ಯೋಜನೆ ನಿರೀಕ್ಷಿತ ಗುರಿಮುಟ್ಟುವುದು ಕಷ್ಟ. ಒಂದು ಖಾತೆ ತೆರೆಯಲು ಕನಿಷ್ಠ 20 ನಿಮಿಷ ಬೇಕು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಂಟು ತಾಸು ಕೆಲಸ ಮಾಡುವ ಬ್ಯಾಂಕಿನಲ್ಲಿ ಒಂದು ದಿನಕ್ಕೆ 24 ಖಾತೆಗಳನ್ನು ಮಾತ್ರ ತೆರೆಯಲು ಸಾಧ್ಯ.ಕೆಲವರ್ಷಗಳ ಹಿಂದೆ ಆರ್‌ಬಿಐ ದೇಶದಲ್ಲಿ ಆರ್ಥಿಕ ಒಳಗೊಳ್ಳುವಿಕೆ ಹೆಚ್ಚಿಸಲು ಬ್ಯಾಂಕ್ ಸೇವೆಗಳನ್ನು ವಿಸ್ತರಿಸಲು ನೀಡಿದ ನಿರ್ದೇಶನದನ್ವಯ ಒಂದು ನೂರು ಮಿಲಿಯ ಖಾತೆಗಳನ್ನು ತೆರೆಯಲಾಗಿದ್ದರೂ ಅದಕ್ಕೆ ಮೂರುವರ್ಷ ಬೇಕಾಯಿತು. ಜನಧನ ಯೋಜನೆಯ ವ್ಯಾಪ್ತಿ ಇನ್ನೂ ಹೆಚ್ಚಿನದು. ಈ ಯೋಜನೆ ಜಾರಿಗೆ ಬಂದ ಮೊದಲ ದಿನವೇ ತೆರೆಯಲ್ಪಟ್ಟ ಒಂದು ಕೋಟಿ ಖಾತೆಗಳಲ್ಲಿ ನಗರ ಮಟ್ಟದವೂ ಸೇರಿವೆ. ಆದರೆ ಭಾರತದಲ್ಲಿ ಹೆಚ್ಚುತ್ತಿರುವ ಖಾತೆಗಳ ಸಂಖ್ಯೆ ಬ್ಯಾಂಕಿಂಗ್ ಮೂಲಸೌಕರ್ಯಗಳ ಮೇಲೆ ವಿಪರೀತ ಹೊರೆ ಹೇರಬಹುದು. ಚಿತ್ರ ಎರಡು ಮತ್ತು ಮೂರು ಭಾರತದಲ್ಲಿರುವ ಬ್ಯಾಂಕ್ ಶಾಖೆಗಳ ಮತ್ತು ಎಟಿಎಂಗಳ ಸಂಖ್ಯೆಯನ್ನು ಇತರ ದೇಶಗಳೊಂದಿಗೆ ಹೋಲಿಸುತ್ತವೆ. ಈಚೆಗೆ ಲಕ್ಷ ಜನಸಂಖ್ಯೆಗೆ ಒಂದು ಬ್ಯಾಂಕ್ ಶಾಖೆ ತೆರೆಯಲ್ಪಟ್ಟಿದೆ. ಆದರೆ ಬ್ರೆಜಿಲ್, ರಶಿಯಾ ಮತ್ತು ಮೆಕ್ಸಿಕೊಗಳಿಗೆ ಹೋಲಿಸಿದರೆ ನಮ್ಮ ಸಂಖ್ಯೆ ಬಹಳ ಕೆಳಗಿವೆ.

**ಚಿತ್ರ – 2 : ಬ್ಯಾಂಕ್ ಶಾಖೆಗಳು / ಒಂದು ಲಕ್ಷ ಜನಸಂಖ್ಯೆಗೆ**




ಮೂಲ : ವಿಶ್ವ ಅಭಿವೃದ್ಧಿ ಸೂಚಕಗಳು, ವಿಶ್ವಬ್ಯಾಂಕ್, 2014

**ಚಿತ್ರ – 3 : ಎಟಿಎಮ್‌ಗಳು / ಒಂದು ಲಕ್ಷ ಜನಸಂಖ್ಯೆಗೆ**




ಮೂಲ : ವಿಶ್ವ ಅಭಿವೃದ್ಧಿ ಸೂಚಕಗಳು, ವಿಶ್ವಬ್ಯಾಂಕ್, 2014

ಭಾರತದಲ್ಲಿ ಆರ್ಥಿಕ ಹೊರಗುಳಿದಿರುವಿಕೆಯ ಪ್ರಮಾಣ ಬಹಳ ದೊಡ್ಡದು. ಒಟ್ಟೂ ಜನಸಂಖ್ಯೆಯ ಶೇಕಡಾ 42ರಷ್ಟು ಜನ ಸಾಂಪ್ರದಾಯಕ ಬ್ಯಾಂಕಿಂಗ್ ವ್ಯವಸ್ಥೆಯಿಂದ ದೂರವುಳಿದಿದ್ದು ತಮ್ಮ ಹಣಕಾಸು ಅಗತ್ಯಗಳಿಗಾಗಿ ಬಡ್ಡಿವ್ಯವಹಾರ ಮಾಡುವ ವ್ಯಕ್ತಿಗಳ ಬಳಿ ವ್ಯವಹರಿಸುತ್ತಾರೆ. ಈಗ 115082 ಬ್ಯಾಂಕ್ ಶಾಖೆಗಳು ಮತ್ತು160055 ಎಟಿಎಂಗಳು ಇದ್ದು ಅದರಲ್ಲಿ 43962 ಶಾಖೆಗಳು(ಶೇ.38.2) 23334 (ಶೇ. 14.58) ಎಟಿಎಂಗಳು ಗ್ರಾಮಿಣ ಭಾಗದಲ್ಲಿವೆ. ಬ್ಯಾಂಕಿಂಗ್ ಸೇವೆ ಈ ಮಟ್ಟದಲ್ಲಿ ಹಳ್ಳಿಗಳಿಗೆ ವಿಸ್ತರಿಸಿದ್ದು ಕೂಡಾ ಆರ್‌ಬಿಐ ಬ್ಯಾಂಕುಗಳಿಗೆ ತಮ್ಮ ಶಾಖೆ ಮತ್ತು ಎಟಿಎಂಗಳ ನಿಶ್ಚಿತ ಭಾಗವನ್ನು ಗ್ರಾಮೀಣ ಪ್ರದೇಶಕ್ಕೆ ಮೀಸಲಿಡಬೇಕೆಂದು ನಿರ್ದೇಶಿಸಿದ ಮೇಲೆ. ಆರ್ಥಿಕ ಒಳಗೊಳ್ಳುವಿಕೆಯ ಜನಧನ ಯೋಜನೆಯನ್ನು ಸರಿಯಾಗಿ ಜಾರಿಗೆ ತರಲು ಲಭ್ಯವಿರುವ ಬ್ಯಾಂಕಿಂಗ್ ಜಾಲವನ್ನು ಇನ್ನಷ್ಟು ವಿಸ್ತರಿಸಬೇಕಿದೆ. ಸರ್ಕಾರಿ ಸಂಸ್ಥೆಗಳ ಪೈಕಿ ಅತ್ಯಂತ ಹಿಂದುಳಿದ ಪ್ರದೇಶಗಳನ್ನೂ ತಲುಪಿರುವ ಅಂಚೆಕಛೇರಿ ಜಾಲವನ್ನು ಬ್ಯಾಂಕಿಂಗ್ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾಗಿದೆ. ಜನಧನ ಯೋಜನೆ ಡೆಬಿಟ್ ಕಾರ್ಡುಗಳನ್ನು ನೀಡುವ ಯೋಜನೆ ಹೊಂದಿದ್ದು ಎಟಿಎಂ ನೆಟ್ ವರ್ಕ್‌ಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಬರುತ್ತದೆ.

ಮೂರನೇ ಚಿತ್ರ ಭಾರತದಲ್ಲಿ ಲಭ್ಯವಿರುವ ಎಟಿಎಂ ಸೌಕರ್ಯಗಳನ್ನು ಅಭಿವೃದ್ಧಿಶೀಲಗಳಿಗೆ ಹೋಲಿಸುತ್ತದೆ. ಭಾರತದಲ್ಲಿ ಎಟಿಎಂಗಳ ಸಂಖ್ಯೆ ಒಂದು ಲಕ್ಷಕ್ಕೆ 11ಇವೆ. ಆದರೆ ರಶಿಯಾದಲ್ಲಿ ಈ ಸಂಖ್ಯೆ 182, ಬ್ರೆಜಿಲ್‌ನಲ್ಲಿ 118, ಮೆಕ್ಸಿಕೊದಲ್ಲಿ 47 ಮತ್ತು ಚೀನಾದಲ್ಲಿ 37. ರಶಿಯಾದಲ್ಲಿ ಈ ಸಂಖ್ಯೆ 2007ರಲ್ಲಿ 45 ಇದ್ದುದು 2012ರಲ್ಲಿ 182 ಆಗಿರುವುದನ್ನು ಗಮನಿಸಬೇಕು. ಅದೇ ಹೊತ್ತಿಗೆ ಭಾರತದಲ್ಲಿ ಆದ ಬೆಳವಣಿಗೆ 3ರಿಂದ 11. ಆದರೆ ಕಳೆದ ಐದು ವರ್ಷಗಳಲ್ಲಿ ಎಟಿಎಂಗಳ ಬೆಳವಣಿಗೆಯ ದರದಲ್ಲಿ ಭಾರತ ಎರಡನೇ

ಸ್ಥಾನದಲ್ಲಿದೆ. ಧನಜನ ಯೋಜನೆಯಿಂದಾಗಿ ಖಾತೆಗಳು ಏಕಾಏಕಿ ಏರುವುದೆಂದು ನಂಬಿದರೂ (ಗುರಿಯಿರುವುದು 7.5 ಕೋಟಿ. ಇನ್ನು ಒಂದು ವರ್ಷದಲ್ಲಿ ಈ ಗುರಿ ತಲುಪುವುದೆಂದು ಭಾವಿಸಿದರೆ)ಬ್ಯಾಂಕಿಂಗ್ ವ್ಯವಸ್ಥೆಯು ತಮ್ಮ ಗ್ರಾಹಕ ತಳಹದಿಯನ್ನು 7.5 ಕೋಟಿ ಡೆಬಿಟ್ ಕಾರ್ಡುಗಳಿಗೆ ಏರಿಸಬೇಕು. ಇದು ಈಗಿನ ಬ್ಯಾಂಕಿಂಗ್ ಸೇವೆಗಳ ಮೇಲೆ ಅಗಾಧ ಒತ್ತಡ ಹೇರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಎಟಿಎಂಗಳ ಸೇವೆ ಸಮಾನವಾಗಿ ವಿಸ್ತರಿಸಿಲ್ಲವಾದ್ದರಿಂದ ಈ ಒತ್ತಡವು ಇನ್ನೂ ಹೆಚ್ಚಾಗುತ್ತದೆ. ಆರ್ಥಿಕ ಹೊರಗುಳಿಯುವಿಕೆಗೆ ಅಂತ್ಯಹಾಡಲು ಜಗತ್ತಿನಾದ್ಯಂತ ಜಾರಿಯಲ್ಲಿರುವ ಒಳ್ಳೆಯ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಇದು ಸಕಾಲ.

ಐಆರ್‌ಡಿಎ ಕಾನೂನು 1999ರಲ್ಲಿ ಜಾರಿಗೆ ಬಂದಾಗಿನಿಂದ ಭಾರತದಲ್ಲಿ ವಿಮಾ ಕ್ಷೇತ್ರ ಅಭೂತ ಬೆಳವಣಿಗೆ ಕಂಡಿದೆ. 1990ರಲ್ಲಿ ಆರು ರಾಷ್ಟ್ರೀಯ ಕಂಪನಿಗಳಿದ್ದುದು 51 ಖಾಸಗಿ ಮತ್ತು ವಿಮೇತರ ಕಂಪನಿಗಳ ಬೆಳವಣಿಗೆ ಕಂಡಿದೆ. ಇದು ಭಿನ್ನ ಅಗತ್ಯಗಳಿಗೆ ತಕ್ಕಂತೆ ಸಮಾಜದ ವಿವಿಧ ಉತ್ಪಾದನೆಗಳನ್ನು ಹೊಂದಿವೆ. 2011–12ರಲ್ಲಿ ವಿಮಾ ಕ್ಷೇತ್ರದ ಈಕ್ವಿಟಿ ಬಂಡವಾಳ 32, 328 ಕೋಟಿ ರೂ. ಗಳಷ್ಟಿದ್ದವು. ಅದರಲ್ಲಿ ಜೀವ ವಿಮೆಯ ಪಾಲು ಶೇ. 77ರಷ್ಟಾಗಿತ್ತು (25000 ಕೋಟಿ) ಜೀವವಿಮೇತರ ಕ್ಷೇತ್ರ ಜೀವವಿಮಾ ಕ್ಷೇತ್ರಕ್ಕಿಂತ ತ್ವರಿತವಾಗಿ ಬೆಳೆಯಿತು. 2011–12ರಲ್ಲಿ ಭಾರತದಲ್ಲಿ ಜೀವವಿಮಾ ಕಂತು ಶೇ. 8,5ಕ್ಕೆ ಕುಸಿಯಿತು. ಜಾಗತಿಕ ಮಟ್ಟದಲ್ಲಿ ಈ ಕುಸಿತ ಶೇ2.7 ಆಗಿತ್ತು. ಜೀವ ವಿಮೇತರ ಕಂತು 13.5 ಶೇಕಡಾಕ್ಕೆ ಏರಿತು. (ಜಾಗತಿಕವಾಗಿ 1.8ರಷ್ಟು ಮಾತ್ರ) ವಿಮಾ ಹಾಗೂ ವಿಮೆಯೇತರ ಸಂಸ್ಥೆಗಳ ಸೇವೆಯನ್ನು ಹಳ್ಳಿಗಳು ಹಾಗೂ ಸಣ್ಣ ಪಟ್ಟಣಗಳಿಗೆ ವಿಸ್ತರಿಸುವ ಹಾಗೂ ಅಲ್ಲಿಯ ಜನಗಳ ಅರಿವಿನ ಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ 2011ರಲ್ಲಿ ಪಾನ್ ಇಂಡಿಯಾ ಅವೇರ್‌ನೆಸ್ ಆಂದೋಲನವನ್ನು ಹಮ್ಮಿಕೊಳ್ಳಲಾಗಿತ್ತು. ಜನಧನ ಯೋಜನೆ ಜಾರಿಗೆ ಬಂದರೆ ವಿಮಾ ವ್ಯವಸ್ಥೆ ವಿಸ್ತರಣೆಗೊಂಡಂತಾಗುತ್ತದೆ. ಅದಕ್ಕೆ ಸೃಜನಶೀಲ ವಿಮಾ ಉತ್ಪನ್ನಗಳ ಸುಧಾರಿತ ವಿತರಣಾ ಜಾಲ ಮತ್ತು ಆಕಸ್ಮಿಕಗಳ ನಿರ್ವಹಣೆ ಮತ್ತು ಹೆಚ್ಚಿನ ಬಂಡವಾಳ ಹೂಡಿಕೆ ಬೇಕು.

ಗ್ರಾಹಕರ ಮೂಲವನ್ನು ಕಾಪಾಡಿಕೊಂಡು ವೃದ್ಧಿಸಿಕೊಳ್ಳಲು ಐಆರ್‌ಡಿಎ ಯ ನಿರೀಕ್ಷೆಯ ಪ್ರಕಾರ ವಿಮಾ ಕಂಪನಿಗಳಿಗೆ 61200 ಕೋಟಿ ಹಣ ಬೇಕು. ಭಾರತೀಯ ಬಂಡವಾಳ ಮಾರುಕಟ್ಟೆಗೆ ಇದು ಬಹಳ ದೊಡ್ಡ ಮೊತ್ತ. ಖಾಸಗಿ ಮತ್ತು ವಿದೇಶೀ ಕಂಪನಿಗಳ ಪಾಲ್ಗೊಳ್ಳುವಿಕೆ (ಶೇ. 26ಕ್ಕೆ ಸೀಮಿತ) ವಿಮಾ ಕ್ಷೇತ್ರದ ತಲುಪುವಿಕೆಯನ್ನು ಹೆಚ್ಚಿಸಿದೆ. ಆದರೂ ವಿಮಾ ಕಂಪನಿಗಳ ತಲುಪುವಿಕೆ ಪ್ರಮಾಣ ವಿಮಾ ಮತ್ತು ವಿಮೇತರ ಕ್ಷೇತ್ರಗಳಲ್ಲಿ ಶೇ. 4.1ರಷ್ಟು ಕೆಳಗೇ ಉಳಿದಿದೆ. ಜೀವ ವಿಮೇತರ ಕ್ಷೇತ್ರದ ಜಾಗತಿಕ ರ‍್ಯಾಂಕಿಂಗ್‌ನಲ್ಲಿ ಭಾರತದ ಸ್ಥಾನ 52ನೆಯದು. ತಲುಪುವಿಕೆಯ ಪ್ರಮಾಣ ಶೇ. 3.4ರಷ್ಟಿದ್ದು (ಜಾಗತಿಕವಾಗಿ ಶೇ. 2.8 ಇಂಗ್ಲೆಂಡಿನಲ್ಲಿ ಶೇ. 12.5, ಜಪಾನಿನಲ್ಲಿ ಶೇ. 10.5, ಕೊರಿಯಾ ಶೇಕಡಾ. 10.3, ಅಮೆರಿಕ ಶೇ. 9.2) ಭಾರತದಲ್ಲಿ ವಿಮಾ ಕ್ಷೇತ್ರ ಇನ್ನೂ ಹಿಂದುಳಿದಿರುವುದನ್ನು ಎತ್ತಿ ತೋರಿಸುವ ಇನ್ನೊಂದು ಸೂಚಿ ವಿಮಾ ಸಾಂದ್ರತೆ. (ತಲಾ ಕಂತು) ಭಾರತದಲ್ಲಿ ತಲಾ ಕಂತು ಜೀವವಿಮೆಗೆ 49 ಡಾಲರುಗಳಾದರೆ ಜೀವವಿಮೇತರಕ್ಕೆ ಹತ್ತು ಡಾಲರ್. ಈ ಪ್ರಮಾಣ ಚೀನಾದಲ್ಲಿ 99 ಮತ್ತು 64 ಡಾಲರ್ ಗಳಷ್ಟು. ಜನಧನ ಯೋಜನೆಯ ಮೂಲಕ ಈ ಹಿನ್ನೆಲೆಯಲ್ಲಿ ಬಡವರಾಗಿರುವ ಬ್ಯಾಂಕ್ ಖಾತೆ ಉಳ್ಳವರಿಗೆ ವಿಮಾ ಸೌಲಭ್ಯ ಒದಗಿಸುವ ಸರ್ಕಾರದ ನಿರ್ಧಾರ ಬೃಹತ್ ಹೆಜ್ಜೆ. ಆದರೆ ಯಶಸ್ಸಿರುವುದು ಅದನ್ನು ಹೇಗೆ ಜಾರಿಗೆ ತರಲಾಗುತ್ತದೆ ಮತ್ತು ಬ್ಯಾಂಕಿಂಗ್ ಮತ್ತು ಆರ್ಥಿಕ ಮೂಲಸೌಕರ್ಯವನ್ನು ಹೇಗೆ ಸುಧಾರಿಸುತ್ತದೆ ಎಂಬುದರ ಮೇಲೆ.

### 3. ಇತರೆಡೆ ಆರ್ಥಿಕ ಒಳಗೊಳ್ಳುವಿಕೆ

ಜಾಗತಿಕವಾಗಿ ಅನೇಕ ಅಭಿವೃದ್ಧಿ ಶೀಲ ದೇಶಗಳಲ್ಲಿ, ಬೃಹತ್ ಒಳಗೊಳ್ಳುವಿಕೆ ಪ್ರಮುಖ ಅಭಿವೃದ್ಧಿಯೋಜನೆಯಾಗಿ ಗುರುತಿಸಲ್ಪಟ್ಟಿದೆ. ಮತ್ತು ಆರ್ಥಿಕ ಒಳಗೊಳ್ಳುವಿಕೆಯ ಮುಖ್ಯ ಉದಾಹರಣೆಗಳು ಉನ್ನತ ಮಟ್ಟದ ಹೊಸ ಮಾದರಿಯಾಗಿ ಕಾಣುತ್ತದೆ. ಅನೇಕರು ವಾಸ್ತವಿಕ ಮೂಲ ಸೌಕರ್ಯ ರಚಿಸುವುದಕ್ಕೆ ಪರ್ಯಾಯವಾಗಿ ಬ್ಯಾಂಕಿಂಗ್ ಮಾದರಿಯನ್ನು ಅಳವಡಿಸಿಕೊಂಡರು. ಉದಾಹರಣೆಗೆ ಬ್ರೆಜಿಲ್ ದೊಡ್ಡ ಮಟ್ಟದಲ್ಲಿ ಬ್ಯಾಂಕಿಂಗ್ ಪ್ರತಿನಿಧಿಗಳನ್ನು (ಬಿ.ಸಿಗಳು) ಬಳಸಿ ಬ್ಯಾಂಕಿಂಗ್ ಸೌಲಭ್ಯ ವಂಚಿತ ಬ್ರೆಜಿಲಿಯನ್ನರಿಗೆ ಮೊದಲು ಅನುದಾನವನ್ನು



ವಿತರಿಸಲು ಬಳಸಿತು. 2000ದಲ್ಲಿ ಮೂರರಲ್ಲಿ ಒಂದು ಮುನಿಸಿಪಾಲಿಟಿಯಲ್ಲಿ ಬ್ಯಾಂಕ್ ಶಾಖೆಗಳಿದ್ದವು. ಈ ಮಾದರಿಯನ್ನು ಬಳಸಿದ ಮೇಲೆ 95 ಸಾವಿರ ಪ್ರತಿನಿಧಿಗಳು ಮೂರು ವರ್ಷಗಳಲ್ಲಿ ಬ್ರೆಜಿಲ್ ನ ಎಲ್ಲ ಮುನಿಸಿಪಾಲಿಟಿಗಳಲ್ಲಿ 12 ಮಿಲಿಯ ಬ್ಯಾಂಕ್ ಖಾತೆಗಳನ್ನು ತೆರೆಯಲು ಕಾರಣರಾದರು. ಬ್ರೆಜಿಲ್‌ನ ಈ ಯಶಸ್ಸು ಇತರ ದಕ್ಷಿಣ ಅಮೆರಿಕ ದೇಶಗಳಾದ ಕೊಲಂಬಿಯಾ, ಪೆರು, ಮೆಕ್ಸಿಕೊ ಮತ್ತು ಚಿಲಿ ದೇಶಗಳು ಇದೇ ಮಾದರಿಯ ಪ್ರಯೋಗ ನಡೆಸಲು ಪ್ರೇರೇಪಿಸಿತು. ಈ ಮಾದರಿಯಲ್ಲಿ ಖರ್ಚು ಕಡಿಮೆ, ಲಾಭ ಬಹಳ.

ಬ್ರೆಜಿಲ್‌ನಲ್ಲಿ ಬ್ಯಾಂಕ್ ಶಾಖೆ ಮತ್ತು ಎಟಿಎಂ ಜಾಲ ಭಾರತಕ್ಕಿಂತ ಬಹಳ ಪ್ರಭಾವಶಾಲಿಯಾಗಿದೆ. ತಂತ್ರಜ್ಞಾನದ ಬಳಕೆಯೂ ಒಳಗೊಳ್ಳುವ ಬ್ಯಾಂಕಿಂಗ್ ಸೇವೆಯ ಅವಿಭಾಜ್ಯ ಅಂಗವಾಗಿದೆ. ವಿಶೇಷವಾಗಿ ಆಫ್ರಿಕಾದಲ್ಲಿ ಎಲ್ಲ ಭೌದ್ಧಿಕ ಮೂಲಸೌಕರ್ಯಗಳು ಬಹಳ ಕಡಿಮೆ ಇರುವಲ್ಲಿ, ಟೆಲಿಕಮ್ಯುನಿಕೇಷನ್ ತಲುಪುವಿಕೆ ಹೆಚ್ಚಾಗಿದೆ. ಉದಾಹರಣೆಗೆ ಕೆನ್ಯಾದಲ್ಲಿ ಸಫಾರಿಕಾಂ ಎಂಬ ಮೊಬೈಲು ಆಪರೇಟರ್ ಸಂಸ್ಥೆ ಎಂಪಿಎಸ್‌ಎ ಎಂಬ ಹಣ ವರ್ಗಾವಣೆಯ ಸೇವೆ ಒದಗಿಸುತ್ತಿದ್ದು ಅದಕ್ಕೆ ಮಿಲಿಯಾಂತರ ನೊಂದಾಯಿತ ಬಳಕೆದಾರರಿದ್ದಾರೆ. ಅವರಲ್ಲಿ ಹೆಚ್ಚಿನವರು ಈ ಹಿಂದೆ ಬ್ಯಾಂಕ್ ಸೇವೆಯಿಂದ ವಂಚಿತರಾಗಿದ್ದವರು.

ಯೋಜನೆ ಆರಂಭದ ಎರಡು ವರ್ಷಗಳಲ್ಲಿ ಬ್ಯಾಂಕು ಸೇವೆ ರಹಿತರ ಸಂಖ್ಯೆ ಶೇಕಡಾ 6ರಷ್ಟು ಕಡಿಮೆಯಾಯ್ತು. ಮೊಬೈಲು ಕ್ರಾಂತಿಯಿಂದಾಗಿ ಇಂದು ಶೇ. 75ಕ್ಕಿಂತ ಹೆಚ್ಚು ಕೆನ್ಯಾ ಪ್ರಜೆಗಳಿಗೆ ಈಗ ಆರ್ಥಿಕ ಸೇವೆ ತೆರೆದುಕೊಂಡಿದೆ. ಇದು ಉಪಸಹರಾ ಆಫ್ರಿಕಾದಲ್ಲಿ ಅತೀ ಹೆಚ್ಚು. ಎಂಪಿಇಎಸ್‌ಎ ಮಾದರಿ ಸೇವೆಗಳು ಮೆಕ್ಸಿಕೊದಲ್ಲೂ ಇದ್ದು ಅಲ್ಲಿ ಬ್ಯಾಂಕ್

ಖಾತೆಗಳನ್ನು ಕಲ್ಯಾಣ ಯೋಜನೆಗಳ ಹಣವರ್ಗಾವಣೆಗೂ ಬಳಸಲಾಗುತ್ತಿದೆ. ಸಹಜವಾಗಿ ಜನ ಹಣ ತೆಗೆಯುವ ಹಾಗೂ ವೈಯಕ್ತಿಕ ಹಣ ಶೇಖರಿಸುವ ಕ್ರಿಯೆಗಳಲ್ಲಿ ಭಾಗಿಯಾಗುತ್ತಾರೆ. ಇದು ಬ್ಯಾಂಕಿಂಗ್‌ನಿಂದ ವಂಚಿತರಾದವರನ್ನು ಆರ್ಥಿಕ ವ್ಯವಸ್ಥೆಯ ಆವರಣದೊಳಕ್ಕೆ ತರುತ್ತದೆ. ಈ ಪ್ರಕ್ರಿಯೆಯು ಬ್ರೆಜಿಲ್, ಮೆಕ್ಸಿಕೊ, ಮತ್ತಿತರ ದಕ್ಷಿಣ ಅಮೆರಿಕದ ಅಭಿವೃದ್ಧಿಶೀಲ ದೇಶಗಳ ನಗದು ಲಾಭದ ಯೋಜನೆಗೆ ಅನುಗುಣವಾಗಿದೆ. ಇದು ಮಧ್ಯವರ್ತಿಗಳನ್ನು ತಪ್ಪಿಸುತ್ತದೆ. ಪಾರದರ್ಶಕತೆಯ ಭರವಸೆ ನೀಡುತ್ತದೆ. ಮತ್ತು ಕುಟುಂಬಗಳಿಗೆ ತಮ್ಮ ಹಣವನ್ನು ಬಳಸಲು ಸ್ವಾಯತ್ತತೆ ನೀಡುತ್ತದೆ. ನೇರ ಹಣ ಮತ್ತು ಎಲೆಕ್ಟ್ರಾನಿಕ್ ವರ್ಗಾವಣೆಯ ಯೋಜನೆಗಳು ಇಂದಿಗೂ ಚರ್ಚಾಸ್ಪದವಾಗಿವೆ.

ಹೊಸದಾಗಿ ಆರ್ಥಿಕ ಮೂಲಭೂತ ಸೌಕರ್ಯಗಳನ್ನು ರಚಿಸುವ, ಅದರಲ್ಲೂ ಬ್ಯಾಂಕಿಂಗ್ ಸೇವೆಗಳ ತಲುಪುವಿಕೆ ಅಲ್ಲದೇ ಆರ್ಥಿಕ ಒಳಗೊಳ್ಳುವಿಕೆಯನ್ನು ಹೆಚ್ಚಿಸಲು ಅಂಚೆ ಕಛೇರಿಗಳನ್ನು ಬಳಸುವುದು ಆರ್ಥಿಕ ಹೊರಗುಳಿಯುವಿಕೆಯನ್ನು ಎದುರಿಸುವ ಸುಲಭದ ದಾರಿಯಾಗಿ ಕಾಣುತ್ತದೆ. ಅದರಲ್ಲೂ ಬ್ಯಾಂಕಿಂಗ್ ಸೇವೆಗಳ ತಲುಪುವಿಕೆ ಕೇವಲ ಭೌತಿಕ ತಲುಪುವಿಕೆಗಿಂತ ಹೆಚ್ಚಿನದು. ಬ್ಯಾಂಕಿಂಗ್ ಸೇವೆಯ ಮುಖ್ಯ ವಿಶೇಷವೆಂದರೆ, ನಮ್ಮ ಗ್ರಾಹಕರು ಸಾಂಸ್ಥಿಕ ಬ್ಯಾಂಕ್ ಖಾತೆಗಳನ್ನು ತೆರೆಯುವಂತೆ ಪ್ರೇರೇಪಿಸುವುದು. ಜಗತ್ತಿನ ಇತರ ಭಾಗಗಳಲ್ಲಿ ಯಶಸ್ವಿಯಾದ ಬ್ಯಾಂಕಿಂಗ್ ಏಜನ್ಸಿಗಳ ಕಾರ್ಯವೇ ಅಗಿದೆ. ಧನಾತ್ಮಕವಾಗಿ ಜನಧನ ಯೋಜನೆಯು ಸರಳೀಕೃತ ಮೊಬೈಲು ಬ್ಯಾಂಕಿಂಗ್ ಸೇವೆಯನ್ನು ಒದಗಿಸುವುದಾಗಿ ವರದಿಯಾಗಿದೆ. ಚಿಹ್ನೆ #99 ಬಳಸಿ ಬಳಕೆದಾರರು ತಮ್ಮ ಖಾತೆಯಲ್ಲಿರುವ ಉಳಿತಾಯ ಮತ್ತು ಹಣವರ್ಗಾವಣೆಯನ್ನು ಕೇವಲ ಸಮಾನ್ಯ ಮೊಬೈಲು ಸೆಟ್ಟುಗಳನ್ನು ಬಳಸಿಯೂ ಮಾಡಬಹುದಾಗಿದೆ. ಬ್ಯಾಂಕಿಂಗ್ ಪ್ರತಿನಿಧಿಗಳು ಖಾತೆ ತೆರೆಯುವುದಕ್ಕೆ ಹಣ ವಿತರಣೆಗೆ ಜವಾಬ್ದಾರರು. ಅದರೆ ಅವರ ಚಲನವಲನಗಳನ್ನು ಪರೀಕ್ಷಿಸಲು, ಸಕಾಲದಲ್ಲಿ ಅವರು ಸೇವೆಗಳನ್ನು ಗ್ರಾಹಕರಿಗೆ ತಲುಪಿಸುವಂತೆ ಮಾಡಲು ಸರಿಯಾದ ಪರಿವೀಕ್ಷಣಾ ವ್ಯವಸ್ಥೆ ಇರಬೇಕು.

ಸರ್ಕಾರವು ಅಂಥವರಿಗೆ ತಿಂಗಳಿಗೆ ಐದು ಸಾವಿರ ರೂಪಾಯಿ ಕೊಡುವ ಭರವಸೆ ನೀಡಿದ್ದರೂ ಈಗ 1500–2000 ರೂ ಮಾತ್ರ ನೀಡಲಾಗುತ್ತಿದೆ. ಇಷ್ಟು ಕಡಿಮೆ ಹಣಕೊಟ್ಟು ಯೋಗ್ಯ ಮತ್ತು ಪರಿಣಾಮಕಾರಿ ಬ್ಯಾಂಕಿಂಗ್ ಪ್ರತಿನಿಧಿಯನ್ನು ಉಳಿಸಿಕೊಳ್ಳಲಾಗದು. ಆದ್ದರಿಂದ ಸರ್ಕಾರವು ಕೂಡಲೇ ಗಮನ ಹರಿಸಬೇಕಾದ ಸವಾಲುಗಳಲ್ಲಿ ಇದೂ ಒಂದು.

ಜನಧನ ಯೋಜನೆಯು ಬಹುಮುಖೀ ಯೋಜನೆ. ಉಳಿತಾಯ ಖಾತೆ, ವಿಮೆ, ಸಾಲದ ಕಾರ್ಡು ನೀಡಿಕೆ, ಮುಂತಾಗಿ ಇತರೆ ಸವಲತ್ತುಗಳು ಇದರಲ್ಲಿ ಸೇರಿವೆ. ಈಗಿರುವ ಮೂಲ ಸೌಕರ್ಯಗಳು ಮುಖ್ಯವಾಗಿ ಹಳ್ಳಿಗಳಿಗೆ ವಿಸ್ತರಿಸದ ಎಟಿಎಂ ಜಾಲ ಈ ಯೋಜನೆಯ ಯಶಸ್ಸಿಗೆ ಸಾಕಾಗಲಾರದು. ಯೋಜನೆಯು ಡೆಬಿಟ್ ಕಾರ್ಡು ಬಳಕೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿದ್ದು ಮುಖ್ಯವಾಗಿ ದೇಶದ ಶೇಕಡಾ 70 ಜನ ವಾಸಿಸುತ್ತಿದ್ದೂ ಶೇ.15 ರಷ್ಟು ಮಾತ್ರ ಎಟಿಎಂ ಸೌಲಭ್ಯ ಹೊಂದಿರುವ ಗ್ರಾಮೀಣ ಭಾಗಕ್ಕೆ ಎಟಿಎಂ ವ್ಯಾಪ್ತಿಯನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ. ಬ್ಯಾಂಕು ಶಾಖೆಗಳ ವಿಸ್ತಾರ ಹೆಚ್ಚಾಗಲಿದ್ದು ಅರ್ಥಿಕವಾಗಿ ಹೆಚ್ಚು ಜನ ತೊಡಗಿಸಿಕೊಂಡ ವಿತರಣಾ ವ್ಯವಸ್ಥೆಯನ್ನು ಸದೃಢಗೊಳಿಸಬೇಕಾಗಿದೆ.

ವಿಸ್ತೃತ ಆರ್ಥಿಕ ವಿನ್ಯಾಸವು ಇನ್ನಷ್ಟು ಹೆಚ್ಚು ಜನರ ಸೇವೆಯನ್ನು ಬಯಸುತ್ತದೆ. ಇದು ಈ ಯೋಜನೆಯ ಇನ್ನೊಂದು ಕೊರತೆಯಾಗಿದೆ. ಜನಧನ ಯೋಜನೆಯ ಅನುಷ್ಠಾನಕ್ಕೆ ಪ್ರತಿದಿನ 200 ಖಾತೆಗಳನ್ನು ಹೊಸಬರು ತೆರೆಯುವಂತೆ




ಸೂಚಿಸಲಾಗಿದ್ದು ಬ್ಯಾಂಕುಗಳಲ್ಲಿ ಈಗಿರುವ ಸೌಕರ್ಯ ಈ ಗುರಿ ಮುಟ್ಟಲು ಸಾಲದು. ಆದ್ದರಿಂದ ಬ್ಯಾಂಕ್ ತಲುಪುವಿಕೆಯನ್ನು ಬ್ಯಾಂಕಿನ ಸಾಮರ್ಥ್ಯಕ್ಕೆ ಅನುಗುಣವಾಗಿ ನಿಧಾನವಾಗಿ ಹೆಚ್ಚಿಸುವುದು ಅಗತ್ಯ. ಆಮೂಲಕ ಯಾವುದೇ ಸಮಯದಲ್ಲಿ ನಿಗದಿತ ಸಂಖ್ಯೆಯ ಗ್ರಾಹಕರಿಗೆ ಯುಕ್ತ ಸೇವೆ ಒದಗಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ ವ್ಯವಸ್ಥೆಯ ಮೇಲೆ ಅತೀ ಒತ್ತಡ ಬೀಳುವುದು ತಪ್ಪುತ್ತದೆ.

ಒಟ್ಟಾರೆ ಜನಧನ ಯೋಜನೆ ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಮಹತ್ತರ ಹೆಜ್ಜೆ. ಮೂಲ ಖಾತೆ, ಅದಕ್ಕೆ ಸೇರಿದ ವಿಮೆ, ಡೆಬಿಟ್ ಕಾರ್ಡು ಸೌಕರ್ಯ, ಮುಂತಾದ ಸವಲತ್ತುಗಳು ಈ ವರೆಗೂ ಬ್ಯಾಂಕಿನಿಂದ ವಿಮುಖರಾಗಿದ್ದ ಬಡಕುಟುಂಬಗಳ ಆಶಾಕಿರಣವಾಗಲಿವೆ.

ಅಲ್ಲದೇ ಕಲ್ಯಾಣಯೋಜನೆಗಳ ವಿತರಣೆಗೆ ಬಳಕೆಯಗುವ ಜೊತೆಗೆ, ಆರ್ಥಿಕ ಚಟುವಟಿಕೆಗಳ ಸದೃಢತೆ ಮತ್ತು ಅನಿರೀಕ್ಷಿತ ಆಘಾತಗಳನ್ನು ಎದುರಿಸುವ ಸಾಮರ್ಥ್ಯಗಳನ್ನು ಬೆಳೆಸುತ್ತದೆ. ಈ ಯೋಜನೆ ತನ್ನೆದುರಿಗಿರುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿದರೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಹೆಚ್ಚಿಸಿಕೊಂಡು ಅಂತಿಮವಾಗಿ ಪರಿಣಾಮಕಾರಿ ಒಳಗೊಳ್ಳುವಿಕೆಗೆ ಕಾರಣವಾಗುತ್ತದೆ. ❑



**ಬಾಹ್ಯವಾಗಿ ಸ್ವಚ್ಛವಾಗಿರುವುದು ಎಷ್ಟು ಮುಖ್ಯವೊ**
**ಅಂತರಂಗದಲ್ಲೂ ಅಷ್ಟೇ ನಿರ್ಮಲವಾಗಿರುವುದು ಮುಖ್ಯ.**
**ನಮ್ಮ ನೆರೆಯವರು ಅಂತರಂಗದಲ್ಲ ಪರಿಶುದ್ಧವಾಗಿರದಿದ್ದರೆ,**
**ಅದು ನಮ್ಮ ಮೇಲೂ ಪರಿಣಾಮ ಬೀರುತ್ತದೆ.**

# ಗಾಂಧಿ ಮತ್ತು ನೈರ್ಮಲ್ಯ

ಸುದರ್ಶನ್ ಅಯ್ಯಂಗಾರ್

ಕನ್ನಡಕ್ಕೆ : ಕುಚ್ಚಣ್ಣ ಶ್ರೀನಿವಾಸನ್



> ತಮ್ಮ ದಕ್ಷಿಣ ಆಫ್ರಿಕಾದ ದಿನಗಳಿಂದ ಹಿಡಿದು ಭಾರತದಲ್ಲಿನ ತಮ್ಮ ಜೀವನಪೂರ್ತಿ ಗಾಂಧಿ ಎಡೆಬಿಡದೇ ದಣಿವರಿಯದಂತೆ ನೈರ್ಮಲ್ಯ ಕುರಿತು ಪ್ರಚಾರ ನಡೆಸಿದರು. ಗಾಂಧಿಯವರಿಗೆ ನೈರ್ಮಲ್ಯವೆನ್ನುವುದು ಒಂದು ಅತ್ಯಂತ ಪ್ರಮುಖವಾದ ಸಾರ್ವಜನಿಕ ಚರ್ಚಾವಸ್ತು ಆಗಿತ್ತು.

ಭಾವೀ ಫಲಾನುಭವಿಗಳು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲು ಧನ ಸಹಾಯಕ್ಕಾಗಿ ತಾವು ತಯಾರಿಸಿ ನಿಲ್ಲಿಸಿದ ಪ್ರಸ್ತಾವನೆಗಳು ತಮಗೆ ತಲುಪಿದ್ದನ್ನೇ ನಿರಾಕರಿಸಿದ ಗ್ರಾಮ ಮತ್ತು ಬ್ಲಾಕ್ ಮಟ್ಟದ ಸರ್ಕಾರಿ ನೌಕರರ ಸಂದೇಹಾತ್ಮಕ ಮನೋಭಾವದ ಬಗ್ಗೆ ಮೊನ್ನೆ ಮೊನ್ನೆತಾನೇ ನಮ್ಮ ಕಾರ್ಯಕರ್ತರು ಮತ್ತು ಅಧ್ಯಾಪಕರಲ್ಲೇ ಅತ್ಯುತ್ತಮರೆಂದು ಪರಿಗಣಿಸಲ್ಪಟ್ಟ ಪ್ರಚಾರಕರೊಬ್ಬರು ತಮ್ಮ ಚಿಂತೆ ವ್ಯಕ್ತಪಡಿಸಿದರು.

ನಮಗೆ ನಾವೇ ವಿಧಿಸಿಕೊಂಡ ಬದ್ಧತೆಯ ಕಾರಣಕ್ಕಾಗಿ ಶೌಚಾಲಯಗಳನ್ನು ನಿರ್ಮಿಸುವುದನ್ನು ಉತ್ತೇಜಿಸುವ ಕೆಲಸದಲ್ಲಿ ವಿದ್ಯಾಪೀಠವು ತನ್ನನ್ನು ಸಕ್ತಿಯವಾಗಿ ತೊಡಗಿಸಿಕೊಂಡಿತು. ಶ್ರೀ ನಾರಾಯಣ ದೇಸಾಯಿಯವರ 108ನೇ 'ಗಾಂಧಿಕಥಾ'ದ ನಂತರವೇ ಈ ತೀರ್ಮಾನವನ್ನು ಕೈಗೊಳ್ಳಲಾಗಿತ್ತು. ಮೇಲೆ ಉಲ್ಲೇಖಿಸಿದ ಸಮಸ್ಯೆಯ ಹೊರತಾಗಿಯೂ ವಿದ್ಯಾಪೀಠದ ಗ್ರಾಮೀಣ ಕ್ಯಾಂಪಸ್ ಇರುವ ಸದ್ರಾದ ಸುತ್ತ ಮುತ್ತಲ ಹಳ್ಳಿಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 1300ಕ್ಕೂ ಮಿಕ್ಕು ಶೌಚಾಲಯಗಳನ್ನು ನಿರ್ಮಿಸಲು ನಾವು ಅನುಕೂಲ ಮಾಡಿಕೊಡಬಲ್ಲವರಾಗಿದ್ದೇವೆ. ಈ ಸ್ಥಳವು ಗುಜರಾತನ ರಾಜಧಾನಿಯಿಂದ ಕೇವಲ 20 ಕಿ.ಮೀ ದೂರದಲ್ಲಷ್ಟೇ ಇದ್ದರೂ ಜನರ ಮನ ಒಲಿಸುವುದು ಸುಲಭವಲ್ಲ. ನಿರಾಸಕ್ತ ಮತ್ತು ಭ್ರಷ್ಟ ಸರ್ಕಾರಿ ಅಧಿಕಾರಿಗಳನ್ನು ಎದುರಿಸುವಾಗ ಈ ಕಷ್ಟಗಳು ಮತ್ತಷ್ಟು ಉಲ್ಬಣಗೊಳ್ಳುತ್ತವೆ. ತಮ್ಮ ಮನೆಗಳಲ್ಲಿನ ಶೌಚಾಲಯಗಳಿಗಿಂತ ಹೆಚ್ಚಿನ ಸಂಖ್ಯೆಯ ಮೊಬೈಲುಗಳನ್ನು ಭಾರತೀಯರು ಹೊಂದಿದ್ದಾರೆ. ಇದು ನೈರ್ಮಲ್ಯ ಕುರಿತು ಜನರ ಅರಿವು, ತಿಳಿವಳಿಕೆ ಮತ್ತು ಆದ್ಯತೆಗಳನ್ನು ಪ್ರತಿಫಲಿಸುತ್ತದೆ. ಭಾರತೀಯರ ಈ ಕೊರತೆಯನ್ನು ಗಾಂಧಿ ತಮ್ಮ ಬಾಲ್ಯದಿಂದಲೇ ಗುರುತಿಸಿದ್ದರು. ಯಾವುದೇ ಅಭಿವೃದ್ಧಿ ಹೊಂದಿದ ಮತ್ತು ಸುಸಂಸ್ಕೃತ ಸಮಾಜಕ್ಕೆ ಉತ್ತಮ ಮಟ್ಟದ ನೈರ್ಮಲ್ಯದ ಅಗತ್ಯವನ್ನು ಅವರು ಅಂತರ್ಗತಗೊಳಿಸಿಕೊಂಡಿದ್ದರು. ಪಾಶ್ಚಾತ್ಯ ಸಮಾಜಕ್ಕೆ ತಮ್ಮನ್ನು ತಾವು ತೆರೆದುಕೊಂಡಿದ್ದರಿಂದಲೇ ಅವರಿಗೆ ಈ ತಿಳವಳಿಕೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ತಮ್ಮ ದಕ್ಷಿಣ ಆಫ್ರಿಕಾದ ದಿನಗಳಿಂದ ಹಿಡಿದು ಭಾರತದಲ್ಲಿನ ತಮ್ಮ ಜೀವನಪೂರ್ತಿ ಗಾಂಧಿ ಎಡೆಬಿಡದೇ ದಣಿವರಿಯದಂತೆ ನೈರ್ಮಲ್ಯ ಕುರಿತು ಪ್ರಚಾರ ನಡೆಸಿದರು. ಗಾಂಧಿಯವರಿಗೆ ನೈರ್ಮಲ್ಯವೆನ್ನುವುದು ಒಂದು ಅತ್ಯಂತ ಪ್ರಮುಖವಾದ ಸಾರ್ವಜನಿಕ ಚರ್ಚಾವಸ್ತು ಆಗಿತ್ತು. 1895ರಲ್ಲಿ ದಕ್ಷಿಣ ಆಫ್ರಿಕಾದಲ್ಲಿನ ಬ್ರಿಟಿಷ್ ಸರ್ಕಾರ ವಾಣಿಜ್ಯ ಪ್ರದೇಶಗಳಲ್ಲಿ ಭಾರತೀಯ ಮತ್ತು ಏಶಿಯಾದ ವ್ಯಾಪಾರಿಗಳ ವಿರುದ್ಧ, ಅವರ ನೈರ್ಮಲ್ಯ ಹೀನತೆಯ ಆಧಾರದ ಮೇಲೆ, ಪಕ್ಷಪಾತ ತೋರಲು ಪ್ರಯತ್ನಿಸಿತ್ತು. ಅಂದಿನಿಂದ ಹಿಡಿದು 1948ರ ಜನವರಿ 29 ಅಂದರೆ ತಾವು ಹುತಾತ್ಮರಾಗುವ ಹಿಂದಿನ ದಿನದವರೆಗೂ ನೈರ್ಮಲ್ಯದ ವಿಷಯ ಕುರಿತು ಸಾರ್ವಜನಿಕ ರಂಗದಲ್ಲಿ ಚರ್ಚಿಸುವುದನ್ನು ಮುಂದುವರಿಸಿಯೇ ಇದ್ದರು. ಕಾಂಗ್ರೆಸ್‌ನ ಜಾಗದಲ್ಲಿ ನೆಲೆಗೊಳಿಸಲು ಅವರು ಉದ್ದೇಶಿಸಿದ್ದ ಲೋಕ ಸೇವಕ ಸಂಘದ ಕರಡು ಸಂವಿಧಾನದಲ್ಲಿ

ಉಪಕುಲಪತಿ, ಗುಜರಾತ್ ವಿದ್ಯಾಪೀಠ, ಅಹಮದಾಬಾದ್.

ಜನಸೇವಕರ ಕರ್ತವ್ಯಗಳ ಪಟ್ಟಿಯಲ್ಲಿ ಅವರು ಹೀಗೆ ನಮೂದಿಸಿದ್ದರು: "ಆತನು ನೈರ್ಮಲ್ಯ ಮತ್ತು ಸ್ವಚ್ಛತೆಯ ಬಗ್ಗೆ ಹಳ್ಳಿಗರಿಗೆ ಶಿಕ್ಷಣ ನೀಡತಕ್ಕದ್ದು ಮತ್ತು ಅವರ ಅನಾರೋಗ್ಯ ಮತ್ತು ಖಾಯಿಲೆಗಳನ್ನು ನಿವಾರಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು" (ಮಹಾತ್ಮ ಗಾಂಧಿಯವರ ಬರಹಗಳ ಸಂಗ್ರಹ:3 ಸಂಪುಟ 90, ಪು 528) ನೈರ್ಮಲ್ಯದ ಜೊತೆ ಗಾಂಧೀಜಿಯ ಮುಖಾಮುಖಿಯ ಒಂದು ಸಂಕ್ಷಿಪ್ತ ವರದಿಯನ್ನು ಇಲ್ಲಿ ನೀಡಲಾಗಿದೆ ಮತ್ತು ಈಗಿನ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ಸಮೀಕ್ಷಿಸಲು ಪ್ರಯತ್ನಿಸಲಾಗಿದೆ.



### ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ

ದಕ್ಷಿಣಾ ಆಫ್ರಿಕಾದಲ್ಲಿ ತಮ್ಮ ವ್ಯಾಪಾರ ವಹಿವಾಟಿನ ಸ್ಥಳಗಳಲ್ಲಿ ಭಾರತೀಯ ವ್ಯಾಪಾರಿಗಳ ನೈರ್ಮಲ್ಯ ಕುರಿತ ಪದ್ಧತಿಗಳನ್ನು ಸಮರ್ಥಿಸಿಕೊಳ್ಳುವ ಮೂಲಕವೇ ಗಾಂಧೀಜಿ ಮೊಟ್ಟಮೊದಲನೇ ಬಾರಿಗೆ ನೈರ್ಮಲ್ಯದ ವಿಷಯವನ್ನು ಸಾರ್ವಜನಿಕ, ರಂಗದ ಮೇಲೆ ತಂದರು ಎನ್ನುವುದು ಕುತೂಹಲಕರ ಅಂಶ. ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರು ಮತ್ತು ಏಶಿಯಾದ ಜನರ ಪರವಾಗಿ ಅರ್ಜಿದಾರರಾಗಿದ್ದ ಗಾಂಧೀಜಿ ತಮ್ಮ ಅರ್ಜಿಯಲ್ಲಿ ಭಾರತೀಯ ವ್ಯಾಪಾರಿಗಳ ನೈರ್ಮಲ್ಯ ಕುರಿತ ಪದ್ಧತಿಗಳನ್ನು ಸಾಕಷ್ಟು ಸಮರ್ಥಿಸಿಕೊಂಡಿದ್ದರು ಮತ್ತು ಸ್ವಚ್ಛತೆಗೆ ಸಂಬಂಧಿಸಿದಂತೆ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಸಮುದಾಯಗಳಿಗೆ ಮೊರೆ ಇಡುತ್ತಿದ್ದರು. ಲಾರ್ಡ್ ರಿಪ್ಪನ್‌ನಿಗೆ ಸಲ್ಲಿಸಿದ ಅರ್ಜಿಯಲ್ಲಿ ನೈರ್ಮಲ್ಯದ ವಿಷಯವನ್ನು ಹೀಗೆ ಗಮನಕ್ಕೆ ತಂದಿದ್ದರು.

"ಸ್ಥಾನೀಯರಲ್ಲದ ಎಲ್ಲ ವ್ಯಕ್ತಿಗಳ ಹಿತಾಸಕ್ತಿಗಳನ್ನು ಸಮಾನವಾಗಿ ರಕ್ಷಿಸುವ 1881ನೇ ಒಪ್ಪಂದದ 14ನೇ ಕಲಂ ನಿಂದ ದುರದೃಷ್ಟವಶಾತ್ ದೂರ ಸರಿದಿರುವುದು ಟ್ರಾನ್ಸ್‌ವಾಲ್‌ನಲ್ಲಿ ನೆಲೆಸಿರುವ ಭಾರತೀಯರು ಉತ್ತಮವಾಗಿ ನೈರ್ಮಲ್ಯವನ್ನು ಕಾಪಾಡುತ್ತಿಲ್ಲ ಅನ್ನುವ ಕಲ್ಪನೆಯಲ್ಲಿ ಹುಟ್ಟಿದ್ದು ಇದು ಕೆಲವು ಆಸಕ್ತರ ತಪ್ಪು ನಿವೇದನೆಯನ್ನು ಆಧರಿಸಿದೆ".

ಈ ಅರ್ಜಿ ಮತ್ತು ಇತರೆ ನಿವೇದನೆಗಳ ಮೂಲಕ, ಭಾರತೀಯರಿಗೆ ವ್ಯಾಪಾರದ ಪರವಾನಗಿ ನೀಡದೇ ಇರಲು ಕಾರಣ ಅವರು ಬ್ರಿಟಿಷ್ ವ್ಯಾಪಾರಿಗಳಿಗೆ ಸಾಕಷ್ಟು ಸ್ಪರ್ಧೆ ನೀಡಬಲ್ಲರು ಅನ್ನುವುದೇ ಎಂದು ಗಾಂಧೀಜಿ ಸಾಧಿಸಲು ಬಯಸಿದ್ದರು. ಎರಡನೆಯದಾಗಿ ಭಾರತೀಯ ವ್ಯಾಪಾರಿಗಳು ಮತ್ತು ವ್ಯವಹಾರಸ್ಥರು ಉತ್ತಮ ಸ್ವಚ್ಛತಾ ಅಭ್ಯಾಸಗಳು ಉಳ್ಳವರು ಎಂದು ವಾದಿಸಿದ್ದರು. ಭಾರತೀಯರು ಕೊಳೆ ಮತ್ತು ಅಸಡ್ಡೆಯ ಅಭ್ಯಾಸಗಳಿಂದ ಬರಬಹುದಾದ ವೈಯಕ್ತಿಕ ಕಾಯಿಲೆಗಳಿಂದ ಮುಕ್ತರೂ ಮತ್ತು ತಮ್ಮ ದೇಹಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವವರೂ ಆಗಿದ್ದಾರೆ ಎಂದಿದ್ದ ಪುರಸಭೆಯ ವೈದ್ಯ ಡಾ॥ ವೀಲ್‌ರ ವರದಿಯನ್ನು ಉದಾಹರಿಸಿದ್ದರು. ಭಾರತೀಯರಿಗೆ ವ್ಯಾಪಾರ ಪರವಾನಗಿ ನೀಡದೇ ಇರಲು ಈರ್ಷೆಯೇ ಕಾರಣ. ಮಿತವ್ಯಯ ಮತ್ತು ಸಂಯಮದ ಹವ್ಯಾಸಗಳನ್ನು ಹೊಂದಿರುವ ಭಾರತೀಯರು ಜೀವನದ ಅವಶ್ಯಕ ವಸ್ತುಗಳ ಬೆಲೆಗಳನ್ನು ತಗ್ಗಿಸಿ ಬಿಳಿಯ ವ್ಯಾಪಾರಿಗಳೊಂದಿಗೆ ಸ್ಪರ್ಧಿಸಬಲ್ಲವರಾಗಿದ್ದಾರೆ ಎಂದು ವಾದಿಸಿದ್ದರು.

ಭಾರತೀಯರಲ್ಲಿ ಉತ್ತಮ ಸ್ವಚ್ಛತಾ ಪದ್ಧತಿಗಳ ಕೊರತೆ ಇತ್ತು ಅನ್ನುವುದನ್ನೂ ಗಾಂಧೀಜಿ ಅರಿತಿದ್ದರು ಮತ್ತು ಆ ಬಗ್ಗೆ 1914ರ ವರೆಗೆ ಎಲ್ಲಾ 20 ವರ್ಷಗಳೂ ಪ್ರಬಲವಾಗಿ ಪ್ರಚಾರ ಮಾಡಿದರು. ಯಾವುದೇ ಜಾಗದಲ್ಲಿ ಶುಚಿತ್ವ ಇಲ್ಲದೇ ಹೋಗಲು ಅತಿ ಜನದಟ್ಟಣೆ ಒಂದು ಮುಖ್ಯ ಕಾರಣ ಅನ್ನುವುದನ್ನು ಗಾಂಧೀಜಿ ಅರ್ಥ ಮಾಡಿಕೊಂಡರು. ದಕ್ಷಿಣ ಆಫ್ರಿಕಾದ ಪಟ್ಟಣಗಳ ಕೆಲವು ಸ್ಥಳಗಳಲ್ಲಿ ಭಾರತೀಯ ಸಮುದಾಯಗಳಿಗೆ ಸಾಕಷ್ಟು ಸ್ಥಳಾವಕಾಶ ಮತ್ತು ಮೂಲ ಸೌಕರ್ಯಗಳನ್ನು ನಿಗದಿಪಡಿಸಿರಲಿಲ್ಲ. ಸ್ವಚ್ಛವಾದ ಪರಿಸರದಲ್ಲಿ ವಾಸಿಸಲು ಅವಶ್ಯಕವಾದ ಸ್ಥಳಾವಕಾಶ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವುದು ಪುರಸಭೆಗಳ ಜವಾಬ್ದಾರಿ ಎಂದು ಗಾಂಧೀಜಿ ನಂಬಿದ್ದರು. ಜೋಹಾನ್ಸ್‌ಬರ್ಗ್‌ನ ಆರೋಗ್ಯ ವೈದ್ಯಾಧಿಕಾರಿ ಡಾ॥ ಸಿ. ಪೋರ್ಟರ್‌ಗೆ ಬರೆದ ಒಂದು ಪತ್ರದಲ್ಲಿ ಗಾಂಧೀಜಿ ಹೀಗೆಂದರು: "ಭಾರತೀಯರು ವಾಸಿಸುವ ಜಾಗದ ಆಘಾತಕಾರಿ ಸ್ಥಿತಿಯ ಬಗ್ಗೆ ನಿಮಗೆ ಬರೆಯುವ ಧೈರ್ಯ ಮಾಡುತ್ತಿದ್ದೇವೆ. ಕೋಣೆಗಳು ಜನರಿಂದ ತುಂಬಿ ತುಳುಕುತ್ತಿರುವುದನ್ನು ವಿವರಿಸಲು ಅಸಾಧ್ಯ. ನಿರ್ಮಲೀಕರಣ ಸೇವೆಯು ಸೂಕ್ತವಾಗಿ ಲಭ್ಯವಿಲ್ಲ. ಸ್ವಚ್ಛತೆಯು ಈಗ ಹಿಂದಿಗಿಂತಲೂ ಹದಗೆಟ್ಟಿದೆ ಎಂದು ದೂರಿ ಅಲ್ಲಿನ ಅನೇಕ ವಾಸಿಗಳು ನನ್ನ ಕಛೇರಿಗೆ ಬಂದಿದ್ದರು". (ಮಾಹಾತ್ಮಗಾಂಧಿಯ ಬರಹಗಳು ಸಂಗ್ರಹ; ಸಂಪುಟ 4, ಪುಟ 129)

ತಮ್ಮ ಆತ್ಮಕತೆಯಲ್ಲಿ ಗಾಂಧೀಜಿ ಹೀಗೆ ಬರೆದಿದ್ದಾರೆ : "ಪುರಸಭೆಯ ಶಿಕ್ಷಾರ್ಹ ನಿರ್ಲಕ್ಷ್ಯ ಮತ್ತು ಭಾರತೀಯ ವಲಸೆಗಾರರ ಮೌಢ್ಯಗಳೆರಡೂ ಆ ಸ್ಥಳದ ಸಂಪೂರ್ಣ ಹೊಲಸಿಗೆ ಸಂಚು ಹೂಡಿದ್ದವು. (ಒಂದು ಆತ್ಮಕತೆ; ಟಿಪ್ಪಣಿ ಪು 265) ಒಮ್ಮೆ 'ಬ್ಲ್ಯಾಕ್ ಪ್ಲೇಗ್' ರೋಗ ಭುಗಿಲೆದ್ದಿತು. ಅದೃಷ್ಟವಶಾತ್ ಇದಕ್ಕೆ ಭಾರತೀಯರ ವಾಸಸ್ಥಳ ಕಾರಣವಾಗಿರಲಿಲ್ಲ. ಅದು ಜೋಹನ್ಸ್ ಬರ್ಗ್ ಸಮೀಪದ ಒಂದು ಚಿನ್ನದಗಣಿ ಆಗಿತ್ತು. ಗಾಂಧೀಜಿ ತಮ್ಮೆಲ್ಲಾ ಸಾಮರ್ಥ್ಯದೊಂದಿಗೆ ಸ್ವಯಂಸೇವಕರಾಗಿ ತಮ್ಮ ಜೀವನೋಪಾಯವನ್ನು ಲೆಕ್ಕಿಸದೇ ಹೋಗಿ ರೋಗಿಗಳ ಸೇವೆ ಮಾಡಿದರು. ಪುರಸಭೆಯ ವೈದ್ಯರು ಮತ್ತು ಅಧಿಕಾರಿಗಳು ಗಾಂಧಿಯವರ ಸೇವೆಯನ್ನು ಬಹಳ ಮೆಚ್ಚಿಕೊಂಡರು. ಭಾರತೀಯರು ಇದರಿಂದ ಒಂದು ಪಾಠ ಕಲಿಯಬೇಕೆಂದು ಗಾಂಧಿ ಬಯಸಿದರು. "ಈ ರೀತಿಯ ನಿರ್ಬಂಧಗಳು ಅಸಹನೀಯವಾಗಿವೆ ಆದರೂ ಅವು ನಮ್ಮನ್ನು ಕೆರಳಿಸಬಾರದು. ಅವು ಪುನರಾವರ್ತನೆಯಾಗದಂತೆ

ನಾವು ನಮ್ಮ ನಡೆತೆಯನ್ನು ಕ್ರಮಬದ್ಧಗೊಳಿಸಿಕೊಳ್ಳಬೇಕು.... ನಮ್ಮಲ್ಲಿನ ಅತ್ಯಂತ ನಿಕೃಷ್ಟನೂ ನೈರ್ಮಲ್ಯ ಮತ್ತು ಶುಚಿತ್ವದ ಬೆಲೆಯನ್ನು ಅರಿಯಬೇಕು. ಜನದಟ್ಟಣೆಯನ್ನು ನಿವಾರಿಸಬೇಕು. ಸ್ವಚ್ಛತೆ ತಾನೇ ಒಂದು ವರ ಅಲ್ಲವೇ?...... ಇತ್ತೀಚೆಗೆ ಅವರು ಅನುಭವಿಸಿದ ಕಷ್ಟಗಳಿಂದ ಈ ಪಾಠವನ್ನೇ ನಮ್ಮ ದೇಶವಾಸಿಗಳು ಕಲಿಯಬೇಕೆಂದು ನಾವು ಆಶಿಸುತ್ತೇವೆ" (ಮಹಾತ್ಮ ಗಾಂಧಿ ಬರಹಗಳ ಸಂಗ್ರಹ: ಸಂಪುಟ 4, ಪುಟ 146).

ಆದರೆ, ನೈರ್ಮಲ್ಯದ ಬಗ್ಗೆ ದಕ್ಷಿಣ ಆಫ್ರಿಕಾ ಮತ್ತು ಭಾರತದಲ್ಲಿ ಬಾಪು ಬುದ್ಧಿಮಾತಿಗೆ 100 ವರ್ಷಗಳ ನಂತರವೂ ಒಂದು ಸಮುದಾಯವಾಗಿ ನಾವು ಸೂಕ್ತವಾಗಿ ಸ್ಪಂದಿಸಿಲ್ಲ. ಹೊಲಸು ಮತ್ತು ಅಶುಚಿಯಿಂದಾಗಿಯೇ ಹರಡುವ ಮಲೇರಿಯಾ, ಚಿಕನ್‌ಗುನ್ಯಾ, ಡೆಂಗ್ಯೂ ಮತ್ತಿತರ ಅನೇಕ ರೋಗಗಳು ರಾಜಧಾನಿ ಸೇರಿದಂತೆ ನಗರಗಳಲ್ಲಿ ವ್ಯಾಪಕವಾಗಿ ನೆಲೆಯೂರಿವೆ.

ಈ ಲೇಖಕರು ಡೆಂಗ್ಯೂ ಕಾರಣದಿಂದ (ಅಹಮದಾಬಾದ್‌ನ ಸಿವಿಲ್ ಆಸ್ಪತ್ರೆಯಲ್ಲಿ) ವೈದ್ಯರು ಮತ್ತು ಶುಶ್ರೂಕರು ಸತ್ತದ್ದಕ್ಕೆ ಮತ್ತು ರೋಗಕ್ಕೀಡಾದದ್ದಕ್ಕೆ ಕಾರಣಗಳೇನು ಎಂದು ತನಿಖೆ ಮಾಡಲು ಗುಜರಾತ್ ಉಚ್ಚ ನ್ಯಾಯಾಲಯ ನೇಮಿಸಿದ ವಿಚಾರಣಾ ಸಮಿತಿಯ ಒಬ್ಬ ಸದಸ್ಯರಾಗಿದ್ದರು. ನೈರ್ಮಲ್ಯ ಕಾಪಾಡಲು ಸಲಹೆಗಳನ್ನೊಳಗೊಂಡಂತೆ ಸಮಿತಿಯ ತನ್ನ ವರದಿ ಸಲ್ಲಿಸಿ ಎರಡು ವರ್ಷಗಳಾಗಿದೆ.

ಸಿವಿಲ್ ಆಸ್ಪತ್ರೆ ಮತ್ತು ಸ್ಥಳೀಯ ಸಂಸ್ಥೆ ನಡೆಸುವ ಆಸ್ಪತ್ರೆಗಳಲ್ಲಿ ಈ ಸಲಹೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ. ರೋಗ ಮತ್ತು ಸಾವುಗಳು ಮುಂದುವರೆದಿವೆ.

### ಭಾರತದಲ್ಲಿ ನೈರ್ಮಲ್ಯದೊಂದಿಗೆ ಗಾಂಧೀಜಿಯ ಮುಖಾಮುಖಿ

1916 ಫೆಬ್ರವರಿ 14ರಂದು ಅಂದಿನ ಮದ್ರಾಸ್ (ಇಂದಿನ ಚೆನ್ನೈ)ನಲ್ಲಿ ಮಿಷನರಿ ಕಾನ್‌ಫರೆನ್ಸ್‌ನಲ್ಲಿ 'ಸ್ವದೇಶಿ' ಬಗ್ಗೆ ತಾವು ಮಾಡಿದ ಭಾಷಣದಲ್ಲಿ ಗಾಂಧೀಜಿ ಗ್ರಾಮಗಳ ನೈರ್ಮಲ್ಯದ ವಿಚಾರವನ್ನು ಸಾರ್ವಜನಿಕವಾಗಿ ಎತ್ತಿ ಹೀಗೆಂದರು :



"ಯಾವುದೇ ಅಧ್ಯಯನದ ವಿಷಯವನ್ನು ದೇಶ ಭಾಷೆಗಳಲ್ಲಿ ಕಲಿಸಿದ್ದರೆ ಅವರು ಜ್ಞಾನ ಸಂಪನ್ನರಾಗಿರುತ್ತಿದ್ದರು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಹಳ್ಳಿಗಳ ನೈರ್ಮಲ್ಯದಂತಹ ಪ್ರಶ್ನೆಗಳಿಗೆ ಯಾವಾಗಲೋ ಪರಿಹಾರ ಸಿಕ್ಕಿರುತ್ತಿತ್ತು" ಶಾಲಾ ಮತ್ತು ಉನ್ನತ ಶಿಕ್ಷಣದ ಪಠ್ಯ ಭಾಗವಾಗಿ 'ನೈರ್ಮಲ್ಯ'ವನ್ನು ಸೇರಿಸುವ ಅಗತ್ಯವನ್ನು ಗಾಂಧಿ ಬಹಳ ಬೇಗ ಗುರ್ತಿಸಿದ್ದರು.

1916ರ ಮಾರ್ಚ್ 20 ರಂದು ಗುರುಕುಲ ಕಾಂಗ್ಡಿಯ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ ಅವರು ಹೇಳಿದರು : "ಆರೋಗ್ಯ ಶಾಸ್ತ್ರ ಮತ್ತು ನೈರ್ಮಲ್ಯಗಳ ಸೂತ್ರಗಳ ಬಗ್ಗೆ ಜ್ಞಾನ ಮತ್ತು ಮಕ್ಕಳನ್ನು ಬೆಳೆಸುವ ಕಲೆ ಗುರುಕುಲದ ಬಾಲಕರ ತರಬೇತಿಯ ಭಾಗವಾಗಿರಬೇಕು.

ಆದರೆ ವರ್ಷವರ್ಷ ಬರುವವರಿಗೆ ನೈರ್ಮಲ್ಯದ ಬಗ್ಗೆ ಪ್ರಾಯೋಗಿಕ ತರಬೇತಿ ನೀಡುವ ಸುವರ್ಣ ಅವಕಾಶವನ್ನು ಕಳೆದುಕೊಳ್ಳುತ್ತಿರುವುದು ನಮ್ಮ ದುರದೃಷ್ಟವೆಂದೇ ನನಗೆ ತೋರುತ್ತದೆ" (ಮ.ಗಾ.ಬ.ಸ : ಸಂಪುಟ 13, ಪುಟ 264)

ಇಂಡಿಗೊ ರೈತರ ಸಮಸ್ಯೆಯನ್ನು ಪರಿಹರಿಸಲು ಗಾಂಧೀಜಿ ಚಂಪಾರಣ್ಯದಲ್ಲಿ ಇದ್ದರು. ವಿಚಾರಣಾ ಸಮಿತಿಯ ವರದಿಯ ಭಾಗವಾಗಿ ಅವರು ನೈರ್ಮಲ್ಯದ ಪರಿಸ್ಥಿತಿಯ ಬಗ್ಗೆ ಹೇಳುವ ಒಂದು ಗುಪ್ತ ಟಿಪ್ಪಣಿಯನ್ನು ತಯಾರಿಸಿದ್ದರು. ಸಮುದಾಯಗಳಲ್ಲಿ ಶಿಕ್ಷಣ ಮತ್ತು ನೈರ್ಮಲ್ಯದ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುವಂತೆ ತಮ್ಮ ಕೆಲಸಗಾರರನ್ನು ಬ್ರಿಟಿಷ್ ಆಡಳಿತವು ಒಪ್ಪಿಕೊಳ್ಳಬೇಕೆಂದು ಗಾಂಧೀಜಿ ಅಪೇಕ್ಷಿಸಿದ್ದರು. "ಹಳ್ಳಿಗಳಲ್ಲಿ ವಾಸಿಸುವಾಗ ಅವರ ಬಾಲಕ ಬಾಲಕಿಯರಿಗೆ ವಿದ್ಯಾಭ್ಯಾಸ ಮಾಡಿಸುವವರು ಮತ್ತು ರೈತರಿಗೆ ಸರಳ ನೈರ್ಮಲ್ಯದ ಪಾಠಗಳನ್ನು ತಿಳಿಸಿಕೊಡುವವರು" (ಮ.ಗಾ.ಬ.ಸ: ಸಂಪುಟ 13, ಪುಟ 264, 393)

1920ರಲ್ಲಿ ಗಾಂಧೀಜಿ ಗುಜರಾತ್ ವಿದ್ಯಾಪೀಠವನ್ನು ಸ್ಥಾಪಿಸಿದರು. ಅಲ್ಲಿ ಆಶ್ರಮದಂತಹ ಜೀವನ ಪದ್ಧತಿ ಇತ್ತು. ಆದ್ದರಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಇತರೆ ಸ್ವಯಂಸೇವಕರು ಮತ್ತು ಕೆಲಸಗಾರರು ಪ್ರಾರಂಭದಿಂದಲೇ ನೈರ್ಮಲ್ಯಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ವಸತಿಗೃಹಗಳು, ಬೀದಿಗಳು, ಕಛೇರಿಗಳು ಮತ್ತು ಇಡೀ ಆವರಣವನ್ನು ಸ್ವಚ್ಛಗೊಳಿಸುವುದು ದೈನಂದಿನ ಪರಿಪಾಠವಾಗಿತ್ತು. ಕಕ್ಕಸ್ಸು ಮತ್ತು ಮೂತ್ರಾಲಯಗಳನ್ನು ಶುಚಿಗೊಳಿಸುವುದೂ ಸಹ ದೈನಂದಿನ ಪರಿಪಾಠದ ಭಾಗವೇ ಆಗಿತ್ತು. ಗಾಂಧೀಜಿ ಈ ಬಗ್ಗೆ ಹೊಸಬರಿಗೆ ಉತ್ತಮವಾದ ಪಾಠ ಹೇಳಬಲ್ಲವರಾಗಿದ್ದರು ಮತ್ತು ಹೇಳುತ್ತಿದ್ದರು ಕೂಡ ಈ ಪದ್ಧತಿಯು ಇಂದಿಗೂ ಸ್ವಲ್ಪ ಮಟ್ಟಿಗೆ ಉಳಿದುಕೊಂಡು ಬಂದಿದೆ ಮತ್ತು ಒಳ್ಳೆಯ ಪ್ರಭಾವ ಬೀರಿದೆ.

ಗಾಂಧೀಜಿಯು ರೈಲಿನ ತೃತೀಯ ದರ್ಜೆಯಲ್ಲಿ ಪ್ರಯಾಣಿಸುತ್ತಾ ದೇಶಾದ್ಯಂತ ಪರ್ಯಟನೆ ಮಾಡಿದರು. ಭಾರತೀಯ ರೈಲ್ವೆಯ ಮೂರನೇ ದರ್ಜೆಯ ಬೋಗಿಗಳಲ್ಲಿನ ಕೊಳಕು ಕಂಡು ಗಾಂಧೀಜಿ ದಿಗಿಲುಗೊಂಡರು. ಪತ್ರಿಕೆಗೆ ಒಂದು ಪತ್ರ ಬರೆಯುವುದರ ಮುಖಾಂತರ ಈ ಬಗ್ಗೆ ಎಲ್ಲರ ಗಮನ ಸೆಳೆದರು. 1917ರ ಸೆಪ್ಟಂಬರ್

25 ರ ತಮ್ಮ ಪತ್ರದಲ್ಲಿ ಅವರು ಹೀಗೆ ಬರೆದಿದ್ದಾರೆ – "ಆರೋಗ್ಯ ಮತ್ತು ನೈತಿಕತೆಗಳನ್ನು ಕಸಿಯುವ ಪರಿಸ್ಥಿತಿಯನ್ನು ಮತ್ತು ಹೊಲಸನ್ನು ಬೆಳೆಸುವ ಅಥವಾ ಮುಂದುವರಿಸುವ ಬದಲು ಇಂಥ ಗಂಡಾಂತರ ಕಾಲದಲ್ಲಿ ಪ್ರಯಾಣಿಕ ಸಂಚಾರವನ್ನೆಲ್ಲ ಇಡಿಯಾಗಿ ನಿಲ್ಲಿಸಿಬಿಡುವುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಖಂಡಿತವಾಗಿಯೂ ಮೂರನೇ ದರ್ಜೆ ಪ್ರಯಾಣಿಕನೂ ಕನಿಷ್ಠ ಮಟ್ಟದ ಜೀವ ಮೂಲದ ಸೌಕರ್ಯಗಳಿಗೆ ಅರ್ಹನು. ಮೂರನೇ ದರ್ಜೆ ಪ್ರಯಾಣಿಕನನ್ನು ನಿರ್ಲಕ್ಷಿಸುವ ಮೂಲಕ ಲಕ್ಷಾಂತರ ಜನರಿಗೆ ಕ್ರಮಬದ್ಧ, ನಿರ್ಮಲ ಹಾಗೂ ಶಾಂತ ಬದುಕಿನ ಬಗ್ಗೆ ಅದ್ಭುತ ಶಿಕ್ಷಣ ನೀಡುವ ಮತ್ತು ಸರಳ, ಶುದ್ಧ ಅಭಿರುಚಿಗಳನ್ನು ಬೆಳೆಸುವ ಅವಕಾಶ ಕೈ ತಪ್ಪುತ್ತಿದೆ".

ಧಾರ್ಮಿಕ ಸ್ಥಳಗಳಲ್ಲಿನ ಶುಚಿತ್ವದ ಕೊರತೆಯ ಬಗ್ಗೆಯೂ ಗಾಂಧೀಜಿ ಗಮನ ಹರಿಸಿದರು. 1917ರ ನವೆಂಬರ್ 3 ರಂದು ಗುಜರಾತ್ ರಾಜಕೀಯ ಸಮ್ಮೇಳನದಲ್ಲಿ ಅವರು ಹೀಗೆಂದರು : "ಇಲ್ಲಿಗೆ ಸಮೀಪದಲ್ಲೇ ಪವಿತ್ರ ಯಾತ್ರಾಸ್ಥಳವಾದ ದಕೋರ್ ಇದೆ. ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲಿನ ಅಪವಿತ್ರತೆಗೆ ಮಿತಿಯೇ ಇಲ್ಲ. ನಾನು ಒಬ್ಬ ಶ್ರದ್ಧಾಪೂರ್ವಕ ವೈಷ್ಣವನೆಂದೇ ನನ್ನ ಭಾವನೆ. ಆದ್ದರಿಂದ, ದಕೋರ್‌ಜಿಯ ಪರಿಸ್ಥಿತಿಯನ್ನು ಟೀಕಿಸಲು ನನಗೆ ವಿಶೇಷ ಸವಲತ್ತು ಇದೆ ಎಂದೇ ನಾನು ವಾದಿಸುತ್ತೇನೆ. ಅಲ್ಲಿನ ಹೊಲಸು ಎಷ್ಟು ಅಗಾಧವಾಗಿದೆಯೆಂದರೆ ಸಾಮಾನ್ಯವಾಗಿ ಆರೋಗ್ಯಕರ ಪರಿಸರಕ್ಕೆ ಒಗ್ಗಿಕೊಂಡವರು ಅಲ್ಲಿ ಇಪ್ಪತ್ನಾಲ್ಕು ಗಂಟೆ ಕಳೆಯುವುದೂ ದುಸ್ತರ. ಯಾತ್ರಿಗಳು ಕೆರೆಯನ್ನು ಮತ್ತು ಬೀದಿಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಮಲಿನಗೊಳಿಸುತ್ತಾರೆ".

ಇದೇ ರೀತಿ, 3–2–1927ರ ಯಂಗ್ ಇಂಡಿಯಾ (ತರುಣ ಭಾರತ) ಪತ್ರಿಕೆಯಲ್ಲಿ, ಮತ್ತೊಂದು ಪವಿತ್ರ ಧಾರ್ಮಿಕ ಸ್ಥಳವಾದ ಬಿಹಾರದ ಗಯಾದ ಅನಾರೋಗ್ಯಕರ ಸ್ಥಿತಿಗತಿಯ ಬಗ್ಗೆ ಬರೆದರು. ತಮ್ಮ ಹಿಂದೂ ಆತ್ಮವು ಗಯಾದ ತುಂಬಾ ಹರಡಿದ ನಾರುವ ಕೊಚ್ಚೆಗುಂಡಿಗಳ ವಿರುದ್ಧ ಬಂಡೆದ್ದರೆಂದು ಒತ್ತಿ ಹೇಳಿದರು.

ಭಾರತೀಯ ರೈಲ್ವೆಯಲ್ಲಿ ನೈರ್ಮಲ್ಯರಹಿತ ಸ್ಥಿತಿ ಅದೇ ಮಟ್ಟದಲ್ಲಿ ಇಂದಿಗೂ ಮುಂದುವರೆದಿದೆ. ಬೋಗಿಗಳನ್ನು ಶುಚಿಗೊಳಿಸಲು ಮತ್ತು ಕಕ್ಕಸ್ಸುಗಳನ್ನು ತೊಳೆಯಲು ಜನರನ್ನೇನೋ ನೇಮಿಸಿದ್ದಾರೆ ಆದರೆ ನಾವು ಭಾರತೀಯ ಪ್ರಯಾಣಿಕರು ಮಾತ್ರ ನೈರ್ಮಲ್ಯ ಮತ್ತು ಆರೋಗ್ಯಕರ ಪರಿಸರದ ಬಗ್ಗೆ ಯಾವುದೇ ಪ್ರಜ್ಞೆ ಅಥವಾ ನಾಚಿಕೆ ಇಲ್ಲದವರಾಗಿದ್ದೇವೆ. ಕಕ್ಕಸ್ಸುಗಳ ದುರುಪಯೋಗವನ್ನು ಎಲ್ಲೆಡೆ ಕಾಣಬಹುದು. ರೈಲ್ವೆಯ ಹವಾ ನಿಯಂತ್ರಿತ ಬೋಗಿಗಳಲ್ಲೂ ಸಹ ಸುಶಿಕ್ಷಿತರೂ ತಮ್ಮ ಮಕ್ಕಳನ್ನು ಪಾಯಿಖಾನೆಯ ಹೊರಗೆ ಮಲ ವಿಸರ್ಜಿಸಲು ಬಿಡುತ್ತಾರೆ. ಎಲ್ಲೆಂದರಲ್ಲಿ ಕಸ ಒಗೆಯುವುದಂತೂ ತೀರಾ ಸಾಮಾನ್ಯ.

2013ರಲ್ಲಿ ನಾನು ದಕೋರ್ ಮತ್ತು ಇನ್ನೂ ಅನೇಕ ಧಾರ್ಮಿಕ ಕ್ಷೇತ್ರಗಳನ್ನು ಸಂದರ್ಶಿಸಿದ್ದೆನೆ. ನೈರ್ಮಲ್ಯ ಮತ್ತು ಶುಚಿತ್ವಗಳ ಬಗ್ಗೆ ಎಚ್ಚರವಿರುವ ಯಾರೇ ಆದರೂ ದಕೋರ್ ಬಗ್ಗೆ ಗಾಂಧೀಜಿಯವರು 1917ರಲ್ಲಿ ಹೇಳಿದ್ದನ್ನೇ ಅಕ್ಷರಶಃ ಹೇಳಿಯಾರು.

### ನೈರ್ಮಲ್ಯದ ಬಗ್ಗೆ ಗಾಂಧೀಜಿ ಸಾರ್ವಜನಿಕವಾಗಿ ಗಮನ ಸೆಳೆದದ್ದು

1919 ರ ಡಿಸೆಂಬರ್ 29 ರಂದು ಅಮೃತಸರ ಕಾಂಗ್ರೆಸ್‌ನಲ್ಲಿನ ತಮ್ಮ ಭಾಷಣದಲ್ಲಿ ಸಿ.ಎಸ್. ಆಂಡ್ರ್ಯೂಸ್‌ರನ್ನು ಉಲ್ಲೇಖಿಸಿದರು. ನೈರ್ಮಲ್ಯ ಮತ್ತು ಶುಚಿತ್ವಗಳ ಬಗ್ಗೆ ತಾನು ಹೊಂದಿರುವ ಅಸಾಧ್ಯ ವಿರೋಧದಿಂದಾಗಿ ಭಾರತೀಯನು ದೈಹಿಕವಾಗಿ ಅಷ್ಟು ಹಿತಕರವಾದ ಪ್ರೇರಣೆಯಲ್ಲವೆಂದು ಯೂರೋಪಿಯನ್ನರು ಭಾವಿಸುವರೆನ್ನುವುದು ಅವರ ಅಭಿಪ್ರಾಯವಾಗಿತ್ತು.

ಬಹುಪಾಲು ಎಲ್ಲಾ ಪ್ರಮುಖ ಕಾಂಗ್ರೆಸ್ ಸಮಾವೇಶಗಳಲ್ಲಿ ತಮ್ಮ ಭಾಷಣಗಳಲ್ಲಿ ಗಾಂಧೀಜಿ ನೈರ್ಮಲ್ಯದ ಪ್ರಸ್ತಾಪ ಮಾಡಿದರು. 1924ರ ಏಪ್ರಿಲ್‌ನಲ್ಲಿ ದೋಹದ (ಈಗಿನ ದಾಹೋದ) ನಗರದ ಕಾಂಗ್ರೆಸ್ ಸದಸ್ಯರನ್ನು ಅಭಿನಂದಿಸಿ ಅಸ್ಪೃಶ್ಯ ಸಮುದಾಯಗಳ ವಾಸ್ಥಳಗಳಿಗೆ ಭೇಟಿ ನೀಡಲು ಮತ್ತು ಅವರಲ್ಲಿ ಉತ್ತಮ ನೈರ್ಮಲ್ಯದ ಪದ್ಧತಿಗಳ ಪ್ರಚಾರ ಮಾಡಲು ಸೂಚಿಸಿದರು. ಇದೇ ರೀತಿ 1925ರಲ್ಲಿ ಕಾನ್ಪುರ ಕಾಂಗ್ರೆಸ್‌ನಲ್ಲಿ ಮಾಡಲಾಗಿದ್ದ ಅತ್ಯುತ್ತಮ ಶುಚಿತ್ವದ ವ್ಯವಸ್ಥೆಯನ್ನು ಬಹಳ ಹೊಗಳಿದ್ದರು.

ನಗರಗಳು ಮತ್ತು ಪಟ್ಟಣಗಳಲ್ಲಿ ನೈರ್ಮಲ್ಯವೇ ಪುರಸಭೆಗಳ ಅತಿ ಪ್ರಮುಖ ಕರ್ತವ್ಯವೆಂದು ಭಾವಿಸಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಪುರಸಭೆಯ ಸದಸ್ಯರಾದ ನಂತರ ಒಳ್ಳೆಯ ನಿರ್ಮಲೀಕರಣ



ಕಾರ್ಯಕರ್ತನಾಗಬೇಕೆಂದು ಬುದ್ಧಿವಾದ ಹೇಳಿದ್ದರು. ಗಾಂಧೀಜಿಗೆ ಕೊಳೆ ಅನ್ನುವುದು ಕೇಡಿಗೆ ಸಮನಾಗಿತ್ತು. 1925ರ ಆಗಸ್ಟ್ 25ರ ಕಲ್ಕತ್ತಾ (ಈಗಿನ ಕೊಲ್ಕತಾ)ದಲ್ಲಿನ ಒಂದು ಭಾಷಣದಲ್ಲಿ ಅವರು ಹೀಗೆಂದರು :

"ಆತನು (ಕಾರ್ಯಕರ್ತನು) ಹಳ್ಳಿಗಳಿಗೆ ಸಂರಕ್ಷಕ ಸಾಧುವಿನಂತೆ ಹೋಗತಕ್ಕದ್ದಲ್ಲ ಬದಲಿಗೆ ವಿನೀತನಾಗಿ ಕೈಯಲ್ಲಿ ಕಸಬರಿಗೆ ಹಿಡಿದು ಹೋಗತಕ್ಕದ್ದು. ಕೇಡಿನ ತ್ರಿಮೂರ್ತಿಗಳಾದ ಕೊಳೆ, ಬಡತನ ಮತ್ತು ಮೈಗಳ್ಳತನಗಳನ್ನು ಎದುರಿಸುವೆ. ಅವುಗಳೊಂದಿಗೆ ನೀನು ಕಸಬರಿಗೆ, ಕ್ವಿನೈನ್ ಮತ್ತು ಹರಳೆಣ್ಣೆಗಳನ್ನು ಹಿಡಿದು ಹೋರಾಡುವೆ...." (ಮ. ಗಾ.ಬ.ಸಂ. ಸಂಪುಟ 28, ಪುಟ 109)

19–11–1925ರ ಯಂಗ್ ಇಂಡಿಯಾ ಸಂಚಿಕೆಯಲ್ಲಿ ಗಾಂಧೀಜಿ ಭಾರತದಲ್ಲಿನ ನೈರ್ಮಲ್ಯದ ಸ್ಥಿತಿಗತಿಯ ಬಗ್ಗೆ ತಮ್ಮ ಅನಿಸಿಕೆಯನ್ನು ಹೀಗೆ ಸಂಗ್ರಹವಾಗಿ ಹೇಳಿದ್ದಾರೆ. "ನನ್ನ ಅಲೆದಾಟಗಳಲ್ಲಿ ದೇಶದ ಉದ್ದಗಲಕ್ಕೂ ಹಬ್ಬಿರುವ ಹೊಸಲನ್ನು ನೋಡುವುದಕ್ಕಿಂತ ನೋವಿನ ಸಂಗತಿ ಮತ್ತೊಂದಿರಲಿಲ್ಲ..... ಅತ್ಯಂತ ಮುಖ್ಯವಾದ ಈ ನೈರ್ಮಲ್ಯದ ವಿಚಾರದಲ್ಲಿ ಬಲಪ್ರಯೋಗವೇ ಪರಿಹಾರ ಎಂದು ಒಪ್ಪಿಕೊಳ್ಳುವುದರಲ್ಲಿದ್ದೇನೆ". (ಮ. ಗಾ.ಬ.ಸಂ. ಸಂಪುಟ 28, ಪು 461)

### ಕಟ್ಟಡ ಕಾರ್ಮಿಕರಿಗೆ ನೈರ್ಮಲ್ಯದ ಪಾಠ ಮತ್ತು ಶಿಕ್ಷಣದಲ್ಲಿ ನೈರ್ಮಲ್ಯ

ಆನೇಕರು ಗಾಂಧೀಜಿಗೆ ಪತ್ರ ಬರೆದು ಆಶ್ರಮವಾಸಿಗಳಾಗಿ ಸೇರಲು ಇಚ್ಛೆ ವ್ಯಕ್ತಪಡಿಸುತ್ತಿದ್ದರು. ಅವರ ಮೊದಲ ಷರತ್ತೆಂದರೆ ಮಲವನ್ನು ವೈಜ್ಞಾನಿಕವಾಗಿ ನಿರ್ವಹಿಸುವ ನೈರ್ಮಲ್ಯದ ಕೆಲಸಕ್ಕೆ ಸೇರುವುದು. ನೈರ್ಮಲ್ಯದ ವಿಜ್ಞಾನವನ್ನು ಪಾಶ್ಚಿಮಾತ್ಯರಿಂದ ಕಲಿತು ಆಚರಣೆಗೆ ತರಲು ಗಾಂಧೀಜಿ ಆಶಿಸಿದ್ದರು. 1924 ಡಿಸೆಂಬರ್ 21ರಂದು ಬೆಳಗಾವಿಯಲ್ಲಿ ತಮಗೆ ನೀಡಿದ ಪೌರ ಸನ್ಮಾನಕ್ಕೆ ಉತ್ತರವಾಗಿ ಅವರು ಹೇಳಿದ್ದು


– "ನಾವು ಪಾಶ್ಚಾತ್ಯರಿಂದ ಕಲಿಯಲೇಬೇಕಾದ ಒಂದು ಪಾಠವೆಂದರೆ ಪುರ ನೈರ್ಮಲ್ಯದ ವಿಜ್ಞಾನ...... ಪಾಶ್ಚಾತ್ಯರು ಪುರ ನೈರ್ಮಲ್ಯ ಮತ್ತು ಕಟ್ಟಡಗಳ ವಿಜ್ಞಾನವನ್ನು ವಿಕಾಸಗೊಳಿಸಿದ್ದಾರೆ, ಇದರಿಂದ ನಾವು ಕಲಿಯುವುದು ಬಹಳ ಇದೆ...... ಕುಡಿಯುವ ನೀರಿನ ಮೂಲಗಳನ್ನು ನಿರ್ಲಕ್ಷಿಸಿರುವ ನಮ್ಮ ದಂಡನೀಯ ವರ್ತನೆಯನ್ನು ತಿದ್ದಿಕೊಳ್ಳಬೇಕಾಗಿದೆ....." (ಮ.ಗಾ.ಬ.ಸಂ. ಸಂಪುಟ 25, ಪುಟ 461)

ಸಂಸ್ಥಾನಗಳ ಕಾಂಗ್ರೆಸ್ ಸಮಿತಿಗಳಿಗಾಗಿ ರೂಪಿಸಿದ ಕರಡು ನಿಯಮಗಳಲ್ಲಿ ಅವರು ಪಂಚಾಯುತಿಗಳ ಪಾತ್ರವನ್ನು ಎತ್ತಿತೋರಿಸಿ ಅವರು ಹೀಗೆ ಬರೆದಿದ್ದಾರೆ – "ಇಂಥ ಪ್ರತಿಯೊಂದು ಪಂಚಾಯಿತಿಯೂ ಹಳ್ಳಿಯಲ್ಲಿ ವಾಸಿಸುವ ಪ್ರತಿಯೊಂದು ಗಂಡು ಅಥವಾ ಹೆಣ್ಣು ಮಗುವಿನ ಪ್ರಾಥಮಿಕ ಶಿಕ್ಷಣ, ಪ್ರತಿಯೊಂದು ಮನೆಯಲ್ಲಿ ಚರಕವನ್ನು ಪರಿಚಯಿಸಲು ಮತ್ತು ಆರೋಗ್ಯಕರ ನೈರ್ಮಲ್ಯವನ್ನು ವ್ಯವಸ್ಥೆಗೊಳಿಸಲು ಜವಾಬ್ದಾರನಾಗಿರತಕ್ಕದ್ದು." (ಮ.ಗಾ.ಬ.ಸಂ. ಸಂಪುಟ 19, ಪುಟ 217)

ನೈರ್ಮಲ್ಯಕ್ಕಾಗಿ ಶಿಕ್ಷಣ ಅನ್ನುವ ಸ್ಪಷ್ಟವಾದ ನಿಲುವನ್ನು ಅವರು ತಳೆದಿದ್ದರು. 1933ರಷ್ಟು ಹಿಂದೆಯೇ ಅವರು ಹೀಗೆ ಬರೆದರು – "ಶಿಕ್ಷಣವೆಂದರೆ ಕೇವಲ ಓದುವುದು, ಬರೆಯುವುದು ಮತ್ತು ಲೆಕ್ಕಹಾಕುವುದಲ್ಲ. ಪರಿಶಿಷ್ಟ ಸಮುದಾಯಕ್ಕೆ ಶಿಕ್ಷಣವೆಂದರೆ ಅದು ಇನ್ನೂ ಅನೇಕ ಅಂಶಗಳು ಒಳಗೊಳ್ಳುತ್ತವೆ. ಈ ಮೂರೂ ಓದು, ಬರಹ, ಲೆಕ್ಕ ಅನಿವಾರ್ಯವಾದ ಪೀಠಿಕೆಗಳೆಂದರೆ ಸದ್ವರ್ತನೆ ಮತ್ತು ನೈರ್ಮಲ್ಯಗಳ ಪಾಠಗಳೇ....." (ಮ.ಗಾ.ಬ.ಸಂ: ಸಂಪುಟ 56, ಪುಟ 91)

1935ರಲ್ಲಿ ಮತ್ತೊಮ್ಮೆ ಜನರನ್ನು ಸಾಕ್ಷರರನ್ನಾಗಿಸಲು ಓದು, ಬರಹ, ಲೆಕ್ಕಗಳನ್ನು ಕಲಿಸುವುದರ ಬಗ್ಗೆ ಚಿಂತಿಸದೆ ನೈರ್ಮಲ್ಯದ ಪಾಠ ಕಲಿಸಬೇಕೆಂದು ಪ್ರತಿಪಾದಿಸಿದರು. ಹರಿಜನ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಅವರು ಆರೋಗ್ಯಕರ ನೈರ್ಮಲ್ಯದ ಮೂಲ ಪಾಠಗಳಿಗೆ ಹೋಲಿಸಿದರೆ ಓದು, ಬರಹ, ಲೆಕ್ಕಗಳು ಏನೇನೂ ಅಲ್ಲ ಎಂದು ಬರೆದರು. (ಮ.ಗಾ.ಬ.ಸಂ: ಸಂಚಿಕೆ 60, ಪುಟ 120).

ಇದನ್ನು ಈಗ ನಾವು ಕೈ ಬಿಟ್ಟಿದ್ದೇವೆ ಅನ್ನುವುದು ವಿಷಾದನೀಯ. ವಿದ್ಯಾಸಂಸ್ಥೆಗಳಲ್ಲಿ ನಾವು ಗುಡಿಸುವವರನ್ನು ತೊಳೆಯುವವರನ್ನು ನೇಮಿಸಿಕೊಂಡಿದ್ದೇವೆ. ಪ್ರಾಯೋಗಿಕವಾಗಿ ನೈರ್ಮಲ್ಯದ ಪಾಠಗಳನ್ನು ಕಲಿಯುವ ಮಕ್ಕಳನ್ನು 'ಹಕ್ಕುಗಳ' ಬಗ್ಗೆ ವಿಪರೀತ ಹಚ್ಚಿಕೊಂಡಿರುವ



ಹೋರಾಟಗಾರರು ಬಾಲಕಾರ್ಮಿಕರೆಂದು ಭಾವಿಸಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ಕೆಲಸದ ಮೂಲಕ ಕಲಿಯುವ 'ನಯೀ ತಾಲೀಂ' ಪದ್ಧತಿಯನ್ನು ಮತ್ತೆ ಪರಿಚಯಿಸಬೇಕು.

### ಗಾಂಧಿ, ನೈರ್ಮಲ್ಯ ಮತ್ತು ಅಸ್ಪೃಶ್ಯತೆ

ಗಾಂಧಿ ಅಸ್ಪೃಶ್ಯತೆಯನ್ನು ಅಸಹ್ಯಸಿಕೊಂಡವರು. ಚಿಕ್ಕವಯಸ್ಸಿನ ಮೋಹನ (ಕರಮ ಚಂದ ಗಾಂಧಿ)ನಿಗೆ ತಾಯಿಯ ಬಗ್ಗೆ ಪ್ರೀತಿ ಮತ್ತು ಅಪಾರ ಗೌರವ. ಆದರೂ, ಪೌರ ಕಾರ್ಮಿಕನನ್ನು ಮುಟ್ಟಬೇಡವೆಂದು ತಾಯಿ ತಡೆದಾಗ ಆ ಎಳೆ ವಯಸ್ಸಿನಲ್ಲಿಯೇ ಅದನ್ನು ವಿರೋಧಿಸಿದರು. ನೈರ್ಮಲ್ಯ ಮತ್ತು ಶುಚಿತ್ವಗಳು ಪ್ರತಿಯೊಬ್ಬರ ಕರ್ತವ್ಯವೆಂದು ಬಲವಾಗಿ ನಂಬಿದ್ದರು. ಕೈಯಾರೆ ಮಲ ಸಾಗಿಸುವ ಮತ್ತು ತೊಳೆಯುವ ಕಾರ್ಮಿಕತೆ ನಿರ್ಮೂಲನೆ ಮಾಡಬೇಕೆಂದು ಅವರು ಆಶಿಸಿದರು. ಏಕೆಂದರೆ ಚಾರಿತ್ರಿಕವಾಗಿ ಸಮಾಜದಲ್ಲಿ ಆ ಕೆಲಸಗಳನ್ನು ಮಾಡುವ ಒಂದು ಜಾತಿಯೆಂದು ಅವರನ್ನು ನಿರ್ಬಂಧಿಸಲಾಗಿತ್ತು ಹೀಗೆಳೆಯಲಾಗಿತ್ತು. ಅವರು ಜನವಸತಿಯಿಂದ ದೂರ, ಹಳ್ಳಿಯ ಹೊರಗೆ, ವಾಸ ಮಾಡಬೇಕಾಗಿತ್ತು ಮತ್ತು ಅವರ ಕೇರಿಗಳು ಕೊಳಕೂ ನೈರ್ಮಲ್ಯರಹಿತವೂ ಆಗಿದ್ದವು, ಅನಕ್ಷರತೆ ಮತ್ತು ಸಾಮಾಜಿಕ ತುಚ್ಛೀಕರಣಗಳ ಕಾರಣದಿಂದ ಅವರದು ನಿಕೃಷ್ಟವಾದ ಬದುಕಾಗಿತ್ತು. ಗಾಂಧೀಜಿ ಹೋಗಿ ಅವರನ್ನು ಅಪ್ಪಿಕೊಂಡರು ಮತ್ತು ಎಲ್ಲಾ ಕಾರ್ಯಕರ್ತರು ನಾಯಕರುಗಳನ್ನು ಹಾಗೇ ಮಾಡಲು ಕೋರಿದರು. ಅವರೆಲ್ಲರೂ ಅಭಿವೃದ್ಧಿಯಾಗಿ ಮುಖ್ಯವಾಹಿನಿಗೆ ಸೇರಬೇಕೆಂದು ಗಾಂಧೀಜಿ ಬಯಸಿದರು. ವಿದ್ಯಾರ್ಥಿಗಳೂ ಸೇರಿದಂತೆ ಭಾರತದಾದ್ಯಂತ ಎಲ್ಲರನ್ನೂ ಇದಕ್ಕಾಗಿ ನೆರವಾಗಲು ಆಗ್ರಹಿಸಿದರು.

ಪೌರ ಕಾರ್ಮಿಕರು ಭಾರತೀಯ ಸಮಾಜದಲ್ಲಿ ಮಾಡುವ ಅಮಾನವೀಯ ಕೆಲಸದ ಬಗ್ಗೆ ಗಾಂಧೀಜಿ ಒಂದು ಸೂಕ್ಷ್ಮ ದೃಷ್ಟಿಯ ವ್ಯಾಖ್ಯಾನ ಮಾಡಿದ್ದಾರೆ.

"ಪರಿಶಿಷ್ಟರಲ್ಲಿಯೇ ಪೌರ ಕಾರ್ಮಿಕ" ಸಾಲಿನ ಕೊಟ್ಟ ಕೊನೆಯಲ್ಲಿ ನಿಲ್ಲುತ್ತಾರೆ – ತಾನು ಬಹುಶಃ ಸಮಾಜದ ಅತಿ ಮುಖ್ಯ ಮತ್ತು ಅನಿವಾರ್ಯ ಸದಸ್ಯನಾಗಿದ್ದರೂ ಸಹ ಒಂದು ಮಗುವಿಗೆ ತಾಯಿ ಎಷ್ಟು ಅನಿವಾರ್ಯವೊ ಒಂದು ವಿಧದಲ್ಲಿ ಸಮಾಜಕ್ಕೆ ಪೌರ ಕಾರ್ಮಿಕ ಅಷ್ಟೇ ಅನಿವಾರ್ಯ. ಒಬ್ಬ ತಾಯಿಯು ತನ್ನ ಮಗುವಿನ ನೈರ್ಮಲ್ಯವನ್ನು ಕಾಪಾಡುವಂತೆ ಪೌರ ಕಾರ್ಮಿಕ ಸಮಾಜದ ನೈರ್ಮಲ್ಯ ಕಾಪಾಡುತ್ತಾನೆ. ಸವರ್ಣೀಯರು ಪೌರ ಕಾರ್ಮಿಕರ ಕೆಲಸವನ್ನೂ ತಾವೇ ಮಾಡಬೇಕೆಂದಿದ್ದಿದ್ದರೆ ತಾನು ಮಾಡುವ ಕೆಲಸದ ಕಾರಣಕ್ಕಾಗಿ ಪೌರ ಕಾರ್ಮಿಕ ಅನುಸರಿಸಬೇಕಾಗಿ ಬಂದಿರುವ ಪದ್ಧತಿಗಳು ಬಹಳ ಹಿಂದೆಯೇ ತೊಡೆದುಹೋಗುತ್ತಿದ್ದವು". (ಮ.ಗಾ.ಬ.ಸಂ: ಸಂಪುಟ 54, ಪುಟ 109)

### ನೈರ್ಮಲ್ಯ : ಈಗಿನ ಸ್ಥಿತಿಗತಿ

ಕೈಯಾರೆ ಮಲ ತೆಗೆಯುವ ಪೌರ ಕಾರ್ಮಿಕರ ಏಳಿಗೆಗಾಗಿ ಗಾಂಧೀಜಿ ಮೊರೆ ಇಟ್ಟು ಕೆಲಸ ಮಾಡಿದ 75 ವರ್ಷಗಳ ನಂತರವೂ ದುರದೃಷ್ಟವಶಾತ್ ಅವರು ಹಾಗೇ ಉಳಿದಿದ್ದಾರೆ. 1993ರ ಕಾಯ್ದೆಯ ಅಡಿಯಲ್ಲಿ ಒಂದೂ ಶಿಕ್ಷೆ ಆಗಲಿಲ್ಲ ಆದ್ದರಿಂದ 2013 ರಲ್ಲಿ ಕೈಯಾರೆ ಮಲ ಬಳಿಯುವುದನ್ನು ನಿರ್ಮೂಲ ಮಾಡಲು

ಹೊಸ ಕಾಯಿದೆ ಬಂತು. ಆದರೆ ಈ ಕಾಯ್ದೆಯ ಅಡಿಯಲ್ಲಿ ನಿಯಮಗಳನ್ನು ರಾಜ್ಯಗಳು ಇನ್ನೂ ರೂಪಿಸುವುದಲ್ಲದೆ, ಗುಜರಾತ್ ಸರ್ಕಾರವು ಅವರ ಇರವನ್ನೇ ಒಪ್ಪಿಕೊಳ್ಳಲು ನಿರಾಕರಿಸಿದೆ!

ಸಹಸ್ರಮಾನದ ಬೆಳವಣಿಗೆ ಗುರಿಗಳು (ಎಮ್‌ಡಿಜಿಎಸ್) ಸುಸ್ಥಿರ ಬೆಳವಣಿಗೆ ಗುರಿಗಳಾಗುತ್ತಿದೆ (ಎಸ್‌ಡಿಜಿಎಸ್) ಆದರೂ ಭಾರತದಲ್ಲಿ ನೈರ್ಮಲ್ಯಕ್ಕೆ ದಾರಿ ಮಾತ್ರ ನಿರಾಶಾದಾಯಕವಾಗಿದೆ. ಜಾಗತಿಕ ಸಂಸ್ಥೆಯೊಂದರ (ವಾಟರ್ ಆಫ್ ದಿ ಫೆಸಿಫಿಕ್ ಇನ್ಸ್‌ಟಿಟ್ಯೂಟ್) ಅಂಕಿ ಅಂಶಗಳ ಪ್ರಕಾರ 1970ರಲ್ಲಿ ಕೇವಲ ಶೇಕಡ 19 ರಷ್ಟು ಕುಟುಂಬಗಳಿಗೆ ಮಾತ್ರ ಕ್ಷೇಮಕರ ಪಾಯಿಖಾನೆಗಳು ಲಭ್ಯವಿದ್ದವು (85% ನಗರ ಪ್ರದೇಶಗಳಲ್ಲಿ 5% ಗ್ರಾಮಗಳಲ್ಲಿ) 2008ರಲ್ಲಿ ಒಟ್ಟಾರೆ ಇದು ಶೇಕಡ 30 ಆಗಿತ್ತು, 52% ನಗರ ಪ್ರದೇಶಗಳು 20% ಗ್ರಾಮಗಳು, ನಗರ ಪ್ರದೇಶಗಳಲ್ಲಿ ಇದೊಂದು ಗಂಭೀರವಾದ ವೈಫಲ್ಯ ವಲಸೆ ಬರುವ ಜನರಿಗೆ ಶೀಘ್ರವಾಗಿ ಮೂಲ ಸೌಲಭ್ಯಗಳು ನಗರ ಪ್ರದೇಶಗಳಲ್ಲಿ ದೊರಕಲಿಲ್ಲ. 2012ರಲ್ಲಿ 62.6 ಕೋಟಿ ಜನ – ಅಂದರೆ ಸುಮಾರು ಜನಸಂಖ್ಯೆಯ ಅರ್ಧದಷ್ಟು, ನಮ್ಮ ದೇಶದಲ್ಲಿ ಬಯಲಿನಲ್ಲಿ ಮಲ ವಿಸರ್ಜನೆ ಮಾಡುತ್ತಿದ್ದರು.

ನೈರ್ಮಲ್ಯವೆಂದರೆ ಕೇವಲ ಪಾಯಿಖಾನೆಗಳಲ್ಲ. 2012ರ ಹೊತ್ತಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯ ಒದಗಿಸುವುದಾಗಿ ಭಾರತ ತನಗೆ ತಾನೇ ಭಾಷೆ ಕೊಟ್ಟುಕೊಂಡಿತ್ತು. ಆದರೆ ಗುರಿ ಇನ್ನೂ ಬಹಳ ದೂರ ಇದೆ. 1981ರಲ್ಲಿ ಗ್ರಾಮೀಣ ಭಾರತದ ಕೇವಲ ಶೇಕಡ 1 ರಷ್ಟು ಮಾತ್ರ ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮದಡಿ ಸ್ಥಾನ ಪಡೆದಿತ್ತು. 1991ರಲ್ಲಿ ಇದು ಶೇಕಡ 11ಕ್ಕ ಏರಿತು 2001ರಲ್ಲಿ ಇದು ಶೇಕಡ 22 ಇದ್ದರೆ, 2011ರಲ್ಲಿ ಶೇಕಡ 50 ಇತ್ತೆಂದು ಹೇಳಲಾಗಿತ್ತು. ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮವೆಂದರೆ ಪ್ರತಿ ಕುಟುಂಬಕ್ಕೆ ಪಾಯಿಖಾನೆ ಕಟ್ಟಿಸುವುದು, ಗ್ರಾಮೀಣ ಶಾಲೆಗಳನ್ನು ಸೇರಿಸಿಕೊಳ್ಳುವುದು ಮತ್ತು ಘನ ತ್ಯಾಜ್ಯ ನಿರ್ವಹಣೆ ಸಂಪೂರ್ಣ ಅಳವಡಿಕೆ ಮರೀಚಿಕೆಯೇ ಸರಿ.

ಆರೋಗ್ಯಕರ ನೈರ್ಮಲ್ಯವನ್ನು ಒಪ್ಪಿಕೊಂಡು ವಿಸ್ತರಿಸುವಲ್ಲಿ ತಡೆಗೋಡೆಗಳಾಗಿ ಸಾಂಸ್ಕೃತಿಕ ಅಂಶಗಳಿವೆ. ಈ ಬಗ್ಗೆ ಎರಡು ನಿರ್ದಿಷ್ಟವಾದ ಅಂಶಗಳನ್ನು ಗಮನಿಸಬಹುದು. ಮೊದಲನೆಯದು; ಧಾರ್ಮಿಕತೆ (ಪವಿತ್ರತೆ) ಮತ್ತು ಭಕ್ತಿಭಾವಗಳು ಆರೋಗ್ಯ ಮತ್ತು ಶುಭ್ರತೆಗಳಿಗಿಂತ ಮುಖ್ಯ. ಈಗಾಗಲೇ ಗಮನಿಸಿದಂತೆ ಭಾರತದಲ್ಲಿನ ಬಹುತೇಕ ಧಾರ್ಮಿಕ ಕ್ಷೇತ್ರಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ. ದೇವಾಲಯಗಳು, ದೇವಾಲಯಗಳಿರುವ ನಗರ / ಪಟ್ಟಣ ಮತ್ತು ಗ್ರಾಮಗಳಲ್ಲಿ ನೈರ್ಮಲ್ಯ ಮತ್ತು ಶುಚಿತ್ವಗಳ ತೀವ್ರ ಕೊರತೆಯನ್ನು ಕಾಣುತ್ತೇವೆ. ಎಲ್ಲೆಂದರಲ್ಲಿ ಕಸ ಚೆಲ್ಲುವುದು, ಬಯಲಿನಲ್ಲಿ ಮಲವಿಸರ್ಜನೆ ಮಾಡುವುದು ಮತ್ತು ಕುಡಿಯುವ ನೀರಿನ ಜಲ ಮೂಲಗಳನ್ನು ಮಲಿನಗೊಳಿಸುವುದು ಮತ್ತು ಕೆಡಿಸುವುದೂ ಸಹ ಇಂತಹ ಬಹುತೇಕ ಸ್ಥಳಗಳಲ್ಲಿ ಸರ್ವೇ ಸಾಮಾನ್ಯ. ಇದು ಮೇರೆ ಮೀರಿದೆ. ಜಾತಿ ಭೇದ ಭಾವಗಳು ಇನ್ನೂ ಜೀವಂತವಾಗಿದೆ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ, ನಗರಗಳಲ್ಲಿ ಇದು ಬಹಳ ಸೂಕ್ಷ್ಮವಾಗಿದೆ. ಮಡಿ–ಮೈಲಿಗೆಯ ಸಾಮಾಜಿಕ ಮನ್ನಣೆ ಮುಂದುವರೆದಿರುವುದರಿಂದ ಶುಭ್ರತೆ, ಶುಚಿತ್ವ ಮತ್ತು ನೈರ್ಮಲ್ಯಗಳು ಅವಗಣನೆಗೀಡಾಗಿವೆ.

ಎರಡನೆಯದು; ವೈರಸ್ ಬ್ಯಾಕ್ಟೀರಿಯಾಗಳಂತಹ ಸೂಕ್ಷ್ಮಾಣು ಜೀವಿಗಳ ಇರುವಿಕೆಯ ಬಗ್ಗೆ ಅರಿವಿಲ್ಲದಿರುವುದು, ಶಾಲಾಶಿಕ್ಷಣ ಪಡೆದು ವಿಜ್ಞಾನದ ಪ್ರಾಥಮಿಕ ಪಾಠಗಳನ್ನು ಓದಿದವರೂ ಸೇರಿದಂತೆ ಬಹುಪಾಲು ಜನರು ಕಲುಷಿತಗೊಳ್ಳುವಿಕೆ ಮತ್ತು ಸೂಕ್ಷ್ಮಾಣು ಜೀವಿಗಳಿಂದ ಮಲಿನಗೊಳ್ಳುವುದನ್ನು ಅರ್ಥಮಾಡಿಕೊಳ್ಳದೇ ಇರುವುದು. ಬಹುಪಾಲು ಸುಶಿಕ್ಷಿತ ನಗರ ಪ್ರದೇಶಗಳ ಸಮುದಾಯಗಳಲ್ಲಿಯೂ ಅಪಾಯಕಾರಿಯೂ ಆಗಿದೆ. ನಲ್ಲಿಗೆ ಅಳವಡಿಸುವ ಆರ್‌ಓ ಮತ್ತಿತರ ಶೋಧಿಸುವ ಪದ್ಧತಿಗಳು ನಗರಗಳಲ್ಲಿ ಜನಪ್ರಿಯವಾಗುವ ಮೊದಲು ಶ್ರೀಮಂತರೂ ಸಹ ಮಣ್ಣಿನ ಪಾತ್ರೆಗಳನ್ನು ಹೊಂದಿದ್ದರೂ – ಮಡಕೆ ನೀರನ್ನು ಕಲುಷಿತಗೊಳಿಸದಂತೆ ಮಡಕೆಯಿಂದ ತೆಗೆಯಲು ಉದ್ದದ ಸೌಟನ್ನು ಉಪಯೋಗಿಸುವುದು ಅತ್ಯುತ್ತಮವಾದ ರೀತಿಯಾಗಿತ್ತು. ಆದರೆ ಬಹುತೇಕ ಮನೆಗಳಲ್ಲಿ ಅದು ಇರುತ್ತಿರಲಿಲ್ಲ ಇದ್ದರೂ ಅಲಂಕಾರಿಕವಾಗಿ ಗೋಡೆಗೆ ನೇತುಹಾಕಲ್ಪಟ್ಟಿರುತ್ತಿತ್ತು.

ಭಾರತದಲ್ಲಿ ನೈರ್ಮಲ್ಯದ ಸ್ಥಿತಿಗತಿ ಇದುವರೆಗೂ ಮನ ನೋಯಿಸುವಂತಿದೆ.



ನಾವು ಮತ್ತೊಮ್ಮೆ ಗಾಂಧೀಜಿಯನ್ನು ಸೋಲಿಸಿದ್ದೇವೆ. ಗಾಂಧೀಜಿ ಸಮಾಜದ ಆಂತರ್ಯವನ್ನು ಅರಿತಿದ್ದರು. ನೈರ್ಮಲ್ಯದಲ್ಲಿ ಘನತೆಯನ್ನು ಕಾಣುವ ಮೂಲಕ ನಿರ್ಬಂದಿತ ಹಾಗೂ ತುಚ್ಛೀಕರಣಗೊಂಡ ಪಾರಂಪರಿಕ ಪೌರ ಕಾರ್ಮಿಕರಿಗೆ ಘನತೆಯನ್ನು ತಂದುಕೊಡಲು ಅವರು ಪ್ರಯತ್ನಿಸಿದರು. ಸ್ವಾತಂತ್ರ್ಯಾ ನಂತರ ನಾವು ಚಳವಳಿಯನ್ನು ಒಂದು ಸರ್ಕಾರಿ ಕಾರ್ಯಕ್ರಮಗಳನ್ನಾಗಿಸಿದೆವು. ಕಾರ್ಯಕ್ರಮವು ನಿಗಧಿತ ಗುರಿಗಳು, ಆಡಳಿತ ವ್ಯವಸ್ಥೆಗಳು ಮತ್ತು ಸಂಖ್ಯೆಗಳಾಗಿ ಕೆಳಗೆ ತಳ್ಳಲ್ಪಟ್ಟಿತು. ನಾವು ಭೌತಿಕ ಆಡಳಿತ ಸಂರಚನೆ ಮತ್ತು ಪದ್ಧತಿಗಳೆಂಬ ‘ತಂತ್ರ’ದ ಕಡೆ ಗಮನವಿಟ್ಟೆವು. ಜನರಲ್ಲಿ ಬೆಳೆಸಬೇಕಾದ ಮೌಲ್ಯವೆಂಬ ‘ತತ್ವ’ವನ್ನು ಮರೆತೆವು. ನಮಗೆ ಮೂಲಭೂತ ಸೌಕರ್ಯ ಬೇಕು. ಜೊತೆಗೆ ಮೂಲ ನೈರ್ಮಲ್ಯದ ಮೌಲ್ಯಗಳೂ ಬೇಕು, ‘ಆರೋಗ್ಯ ತತ್ವ’ ಇದನ್ನು ಶಿಕ್ಷಣದ ಮೂಲಕವೇ ಮನನ ಮಾಡಿಸಲು ಸಾಧ್ಯ. ಗಾಂಧೀಜಿ ನೈರ್ಮಲ್ಯದ ಶಿಕ್ಷಣ ಬಯಸಿದರು. ಭಾರತದಲ್ಲಿ ನಮ್ಮಲ್ಲಿನ ಬಹುತೇಕರಿಗೆ ಪಾಯಿಖಾನೆ ಉಪಯೋಗಿಸುವ ಪದ್ಧತಿಯ ತರಬೇತಿ ಬೇಕಾಗಿದೆ; ನೈರ್ಮಲ್ಯ ಮತ್ತು ಶುಚಿತ್ವಗಳ ಶಿಕ್ಷಣ ಬೇಕಾಗಿದೆ. ಗಾಂಧೀಜಿ ಕರೆಯುತ್ತಿದ್ದಾರೆ. ❑



**ನಾವು ನಮ್ಮ ಹಿತ್ತಲನ್ನು,**
**ಹಿನ್ನಲೆಯನ್ನು ಸ್ವಚ್ಛವಾಗಿಡದಿದ್ದರೆ,**
**ನಮ್ಮ ಸ್ವರಾಜ್ಯ**
**ಕೊಳೆತು ನಾರುತ್ತದೆ.**

# ಅಸಂಘಟಿತ ವಲಯ; ಸ್ತ್ರೀಯರ ಸ್ಥಿತಿ-ಗತಿ

ವಿಮಲ ಕೆ. ಎಸ್.



ನಜ್ಜು
ಗುಜ್ಜಾಗಿಸುವ
ಗೃಹ ಕೃತ್ಯದಿಂದ
ಬಿಡುಗಡೆಗೊಳಿಸದ
ಹೊರತು
ಮಹಿಳೆಯರ
ವಿಮೋಚನೆ
ಸಾಧ್ಯವಿಲ್ಲ.

– ಲೆನಿನ್

ದುಡಿಯುವ ಮಹಿಳೆಯರೆಂದು ಮಾತನಾಡಲು ಹೊರಟ ತಕ್ಷಣ ನೆನಪಾಗುವುದು ಕಿಸಾ ಗೋತಮಿಯ ಸಾವಿಲ್ಲದ ಮನೆಯ ಸಾಸಿವೆಯ ಕಥೆ. ಮನೆ ಮನೆ ಅಲೆದು ಅಲೆದು ಒಂದು ಕಟು ಸತ್ಯವನ್ನು ಕಿಸಾಗೋತಮಿ ಅರಿಯುವಂತೆ ಮಾಡಿದ ಬುದ್ಧನ ಅರಿವಿನ ದೀಪದಂತೆ ಈ ಪ್ರಪಂಚ ತಿಳಿದುಕೊಳ್ಳಬೇಕಾಗಿರುವುದು –ಬಹುಷಃ ದೇದೀಪ್ಯಮಾನನಾಗಿ ಸೂರ್ಯ ಬೆಳಗುತ್ತಿರುವ ಹಾಡುಹಗಲಿನಲ್ಲೂ ಒಂದು ಪ್ರಖರವಾದ ದೀಪವನ್ನು ಹಚ್ಚಿ ಹುಡುಕಿದರೂ 'ದುಡಿಯದ ಮಹಿಳೆ' ಸಿಗಲು ಸಾಧ್ಯವಿಲ್ಲ. ಹಾಗಾಗಿ ದುಡಿಯುವ ಮಹಿಳೆಯರ ಸ್ಥಾನ ಮಾನ, ಬವಣೆ ಬದುಕು, ದುಗುಡ ದುಮ್ಮಾನ, ಸಾಧನೆ ವೇದನೆಗಳ ಕುರಿತು ಮಾತನಾಡುವಾಗ ಸಾಮಾನ್ಯವಾಗಿ ಎಲ್ಲ ಮಹಿಳೆಯರ ಸಮಸ್ಯೆಗಳು ಚರ್ಚೆಗೆ ಬಂದೇ ಬರುತ್ತವೆ. ಆದರೆ ಇಲ್ಲಿ ನಾವು ಅಸಂಘಟಿತ ವಲಯ ಮತ್ತು ಅಲ್ಲಿನ ಮಹಿಳೆಯರ ಸ್ಥಿತಿ ಗತಿಗಳ ಬಗ್ಗೆ ಗಮನಿಸೋಣ.

**ಅಸಂಘಟಿತ ವಲಯವೆಂದರೆ ಯಾವುದು?**

ಉದ್ಯೋಗದ ಅಭದ್ರತೆ, ಕೆಲಸದ ಅಭದ್ರತೆ, ಮತ್ತು ಸಾಮಾಜಿಕ ಅಭದ್ರತೆ ಯನ್ನು ಹೊಂದಿರುವ ಕಾರ್ಮಿಕರನ್ನು ಅಸಂಘಟಿತ ಮತ್ತು ಅನೌಪಚಾರಿಕ ವಲಯದವರೆಂದು ಗುರುತಿಸಲಾಗುತ್ತದೆ. ಅರ್ಜುನ್ ಸೇನ್ ಗುಪ್ತಾ ವರದಿಯು ಹೇಳುವಂತೆ ಅನೌಪಚಾರಿಕ ವಲಯದಲ್ಲಿ 93% ಜನರು ದುಡಿಯುತ್ತಾರೆ ಮತ್ತು ಅದರಲ್ಲಿ 77% ಗೂ ಹೆಚ್ಚು ಜನರ ದಿನವೊಂದರ ಉಪಭೋಗ 20% ಕ್ಕಿಂತಲೂ ಕಡಿಮೆ. ಈ ಗುಂಪಿಗೆ ಸೇರಿದ ಜನ 836 ಮಿಲಿಯನ್ ಎಂದು ಅರ್ಜುನ್ ಸೇನ್ ಗುಪ್ತ ವರದಿ ಹೇಳಿದೆ. ಹಾಗೆಯೇ ಮೊದಲ ರಾಷ್ಟ್ರೀಯ ಕಾರ್ಮಿಕ ಆಯೋಗ ಅಸಂಘಟಿತ ಕಾರ್ಮಿಕರು ಎಂದರೆ ತಾತ್ಕಾಲಿಕ ಉದ್ಯೋಗ, ಅಜ್ಞಾನ, ಅನಕ್ಷರತೆ, ಸಣ್ಣ ಸಣ್ಣ ಮತ್ತು ಹಂಚಿಹೋದಂತಿರುವ ಸಂಸ್ಥೆಗಳು ಹಾಗೂ ಏಕವ್ಯಕ್ತಿಗಳ/ಕೆಲವು ವ್ಯಕ್ತಿಗಳ ಒಡೆತನ ದ ಸಂಸ್ಥೆಗಳಾದ ಕಾರಣದಿಂದ ಸಮಾನ ಉದ್ದೇಶಗಳ ನೆಲೆಯಲ್ಲಿ ಸಂಘಟಿತರಾಗಲು ಸಾಧ್ಯವಿಲ್ಲದ ವರ್ಗಕ್ಕೆ ಸೇರಿದ ಈ ವಲಯದವರನ್ನು ಅಸಂಘಟಿತ ವರ್ಗವೆಂದು ಹೆಸರಿಸಿದೆ. ಸಾಮಾನ್ಯವಾಗಿ ಈ ವರ್ಗ ಸಂಘಟಿತರಾಗುವುದಿಲ್ಲ ಎಂಬ ಭಾವನೆಗೆ ಸಿಗುವ ಕಾರಣಗಳು ಬಡತನ,ಸಾಲದ ಹೊರೆ, ಕಡಿಮೆ ಕೂಲಿಯ ಕೆಲಸ, ಚೌಕಾಸಿ ಮಾಡುವ ಸಾಮರ್ಥ್ಯವಿಲ್ಲದಿರುವುದು, ವಲಸೆ ಮುಂತಾದ ಕಾರಣಗಳನ್ನೂ ಅದು ಕೊಟ್ಟಿದೆ. ಕಾನೂನು ಸಚಿವಾಲಯ ವೃತ್ತಿ, ಕೆಲಸದ ಬಗೆ, ಬೇಗುದಿಗೆ ಬಿದ್ದ ಮತ್ತು ಸೇವಾ ವಿಭಾಗಗಳನ್ನು ಅಸಂಘಟಿತವೆಂದು ಗುರುತಿಸಿದೆ. ಈ ವಿಭಾಗಗಳಲ್ಲಿ ಸಾಮಾನ್ಯವಾಗಿ ಸಮಾಜಕ್ಕೆ ಅಗತ್ಯವಿರುವ ಕೆಲಸಗಳನ್ನು ಮಾಡುವ ಎಲ್ಲ ರೀತಿಯ ಕೆಲಸಗಾರರೂ ಬರುತ್ತಾರೆ.

– ಐ.ಎಲ್.ಓ ದ ಪ್ರಕಾರ

- ಜಗತ್ತಿನ ಜನಸಂಖ್ಯೆಯ 50% ಮಹಿಳೆಯರು. ಭಾರತದ ಜನಸಂಖ್ಯೆಯ 48.46% ಮಹಿಳೆಯರು

ಮಹಿಳಾ ಪರ ಹೋರಾಟಗಾರ್ತಿ ಮತ್ತು ಲೇಖಕಿ, ಬೆಂಗಳೂರು.

- ಶ್ರಮಶಕ್ತಿಯ 30% ಮಹಿಳೆಯರು ಭಾರತದಲ್ಲಿ ಇದು 25.67%
- ಕೆಲಸದ ಅವಧಿಯ 60% ಮಹಿಳೆಯರೇ ಮಾಡುವುದು.
- ಜಗತ್ತಿನ ಆದಾಯದ 10% ಮಹಿಳೆಯರಿಗೆ
- ಜಗತ್ತಿನ ಆಸ್ತಿಯ ಒಡೆತನ 1%ಗೂ ಕಡಿಮೆ ಮಹಿಳೆಯರದು!!!!!!!
- 87% ಗ್ರಾಮೀಣ ಪ್ರದೇಶದ ಮಹಿಳೆಯರು ಕೃಷಿ ಕೆಲಸ ಮಾಡುತ್ತಾರೆ. ಭಾರತದಲ್ಲಿ 62.07%
- ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಭೂಮಿಯಲ್ಲಿ ಒಂದು ಜೊತೆ ಎತ್ತುಗಳು 1064 ಘಂಟೆ,ಪುರುಷರು 1212 ಘಂಟೆ,ಮಹಿಳೆಯರು 3483 ಘಂಟೆಗಳ ಕೆಲಸ ಮಾಡುತ್ತಾರೆ.!!!!!
- ಹಾಗೆಯೇ ಗೃಹ ಕೃತ್ಯಕ್ಕೆ ಸಂಭಂದಿಸಿದಂತೆ ಒಟ್ಟು ಮಾನವ ಘಂಟೆಗಳನ್ನು ತೆಗೆದುಕೊಂಡರೆ 53% ಮಹಿಳೆಯರದಾದರೆ 31% ಪುರುಷನದು ಎಂದು ಒಂದು ಅಧ್ಯಯನ ಹೇಳುತ್ತದೆ.
- ಆಂಧ್ರಪ್ರದೇಶದ ಒಂದು ಸಮೀಕ್ಷೆಯ ಪ್ರಕಾರ ಕೃಷಿ ಹಂಗಾಮಿನಲ್ಲಿ ಮಹಿಳೆ ದಿನವೊಂದಕ್ಕೆ 15 ಘಂಟೆಗಳ ಕಾಲ ದುಡಿಯುತ್ತಾಳೆ. ಅದೇ ಪುರುಷ 8 ಘಂಟೆಗಳ ಕಾಲ ದುಡಿಯುತ್ತಾನೆ.

ಇದಲ್ಲದೇ ಮಹಿಳೆಯರು ಆದ್ಯ ಕರ್ತವ್ಯವೆಂಬಂತೆ ಅವಳ ಹುಟ್ಟಿನಿಂದಲೇ ಪಡೆದುಕೊಂಡು ಬಂದ ಮೀಸಲಾತಿ ಯಾಗಿ ಯಾವತ್ತೂ ಮೌಲ್ಯಮಾಪನಕ್ಕೊಳಪಡದ ಮಾಡುವ ಗೃಹ ಕೃತ್ಯದ ಬಗ್ಗೆಯಂತೂ ಎಲ್ಲಿಯೂ ಅಳತೆಯೇ ಸಿಗುವುದಿಲ್ಲ. ಸ್ವತಃ ಮಹಿಳೆಯರೇ ಅದನ್ನೊಂದು ಕೆಲಸವೆಂದು ಪರಿಗಣಿಸದ ಕ್ಷೇತ್ರವದು. ಸಾಮಾನ್ಯವಾಗಿ ಬೇರೆ ಬೇರೆ ಸಂದರ್ಭದಲ್ಲಿ ಗೃಹಿಣಿಯರ ಜೊತೆ ಸಂಭಾಷಿಸುವಾಗ, ನಿರ್ದಿಷ್ಟವಾಗಿ ಮನೆಯಿಂದಾಚೆ ಅಥವಾ ಮನೆಯಲ್ಲಿಯೇ ವೇತನ/ಕೂಲಿ ಪಡೆಯುವ ಕೆಲಸದಲ್ಲಿ ತೊಡಗಿರದ ಮಹಿಳೆಯರ ಬಳಿ ಔಪಚಾರಿಕವಾಗಿ ಮಾತನಾಡುತ್ತ 'ನೀವೇನು ಕೆಲಸ ಮಾಡುತ್ತೀರಿ? ಎಂದು ಪ್ರಶ್ನಿಸಿದರೆ "ನಾನೇನೂ ಮಾಡುವುದಿಲ್ಲ ಮನೆಯಲ್ಲಿರುತ್ತೇನೆ" ಎಂಬ ಉತ್ತರ ಥಟ್ಟಂತ ಬರುತ್ತದೆ. ಮತ್ತೆ ಬಿಡಿ ಬಿಡಿಯಾಗಿ ಗೃಹ ಕೃತ್ಯಕ್ಕೆ ಸಂಬಂಧಿಸಿದಂತೆ ಒಂದೊಂದೇ ಮೈ ಮುರಿಯುವ ಕೆಲಸಗಳನ್ನು ಪಟ್ಟಿ ಮಾಡುತ್ತ ಹೋದರೆ ಆಗ ಆ ಎಲ್ಲವನ್ನೂ ತಾನೇ ಮಾಡುತ್ತೇನೆ ಎಂದು ಒಪ್ಪಿಕೊಳ್ಳುತ್ತ ಹೋಗುತ್ತಾರೆ. ಆಗ ಕೈಯಲ್ಲಿರುವ ಹತ್ತು ಬೆರಳುಗಳು ಸಾಲುವುದಿಲ್ಲ. ಇದೇ ಕೆಲಸಗಳನ್ನು ಮೌಲ್ಯಮಾಪನಕ್ಕೊಳಪಡಿಸಿದರೆ ಆಗ ದೊಡ್ಡ ಕಾರ್ಪೊರೇಟ್ ಕಂಪನಿಗಳ ಸಿ.ಈ.ಓ.ಗಳ ವೇತನ ಎಲ್ಲರಿಗೂ ಸಿಗಬೇಕಾಗುತ್ತದೆ ಎಂದು ಊಹಿಸಿದರೆ ಉತ್ಪ್ರೇಕ್ಷೆಯಲ್ಲ. ಇಂತಹ ಮೈ ಮುರಿತದ ಮೌಲ್ಯಕ್ಕೊಳಪಡದ, ಕೆಲಸವೆಂದೇ ಪರಿಗಣಿಸದ, ಗೃಹಕೃತ್ಯದ ಬಗ್ಗೆ ಮಹಾನ್ ಮಾನವತಾ ವಾದಿ ಯುಗಪುರುಷ ಲೆನಿನ್ ಅಂದೇ ಹೇಳಿದ್ದರು.

"ನಜ್ಜು ಗುಜ್ಜಾಗಿಸುವ ಗೃಹ ಕೃತ್ಯದಿಂದ ಬಿಡುಗಡೆಗೊಳಿಸದ ಹೊರತು ಮಹಿಳೆಯರ ವಿಮೋಚನೆ ಸಾಧ್ಯವಿಲ್ಲ" (ಲೆನಿನ್ ಆನ್ ದಿ ಇಮ್ಯಾನ್ಸಿಪೇಷನ್ ಆಫ್ ವಿಮೆನ್) ಎಂದು. ಅದು ಇಂದಿಗೂ ಪ್ರಸ್ತುತವೇ.

ಇಷ್ಟೆಲ್ಲದರ ನಂತರವೂ ಮಹಿಳೆಯರು ಎಲ್ಲಕ್ಷೇತ್ರಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳಲು ಶಕ್ತಿ ಮೀರಿ ಪ್ರಯತ್ನಿಸುತ್ತಾರೆ. ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಹೆಣಗಾಡುತ್ತಾರೆ. ಆದರೆ ಅಲ್ಲಿಯೂ ಮೂದಲಿಕೆಗಳೇನು ತಪ್ಪಿದ್ದಲ್ಲ. ಈ ಜಗತ್ತಿನಲ್ಲಿ ಪುರುಷ ಪ್ರಾರಂಭದಿಂದಲೂ ಎಲ್ಲ ಅವಕಾಶಗಳನ್ನು ಪಡೆದೇ ಬೆಳೆಯುತ್ತಿರುತ್ತಾನೆ. ಕುಟುಂಬದ ಪರಿಧಿಯೊಳಗೆ ಕೂಡ ಗಾಣದೆತ್ತಿನ ಹಾಗೆ ದುಡಿಯುವುದು ಬಿಟ್ಟರೆ ತೀರ್ಮಾನಗಳನ್ನು ತೆಗೆದು ಕೊಳ್ಳುವ ಹಂತದಲ್ಲಿ ಅವಳ ಪಾತ್ರ ನಗಣ್ಯವೇ. ಅಂತಹ ಮಹಿಳೆ ಬದುಕಿನ ಅನಿವಾರ್ಯತೆಯೋ, ವ್ಯವಸ್ಥೆಯ ಅಗತ್ಯವೋ ದುಡಿಮೆಯ ಕ್ಷೇತ್ರಕ್ಕೆ, ಬಾಹ್ಯ ಪ್ರಪಂಚಕ್ಕೆ ತೆರೆದುಕೊಂಡಾಗ ನಿರೀಕ್ಷಿತ ಸಾಮರ್ಥ್ಯದ ಪ್ರದರ್ಶನ ಒಮ್ಮಿಂದೊಮ್ಮೆಲೇ ಸಾಧ್ಯವಿಲ್ಲ. ಆದರೆ ಈ ಪ್ರಪಂಚ ಈ ಸಮಸ್ಯೆಯ ಹಿಂದಿರುವ ಕಟು ವಾಸ್ತವವನ್ನು ಪೂರ್ಣ ಅಲಕ್ಷಿಸಿ ಮಹಿಳೆಯರಿಗಿರುವ ಸಾಮರ್ಥ್ಯ ಪುರುಷನಿಗಿಂತ ಕಡಿಮೆ ಹಾಗಾಗಿ ಕೆಲವು ನಿರ್ದಿಷ್ಟ ವಲಯಗಳಲ್ಲಿ ಮಾತ್ರ ಅವಳು ಕೆಲಸ ಮಾಡಬಲ್ಲಳೆಂಬಂತಹ ವಾದವನ್ನು ಮುಂದಿಡುತ್ತದೆ. ಖಂಡಿತ ಈ ಮಾತಿಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದೇ ಬರುತ್ತವೆ



ಗೊತ್ತು. ಯಾಕೆಂದರೆ ನಗರ ಕೇಂದ್ರಿತ, ಮಧ್ಯಮ ಮೇಲ್ ಮಧ್ಯಮ ವರ್ಗದ ಸುಶಿಕ್ಷಿತ ವಲಯವನ್ನು ಕಣ್ಣೆದುರಿಗಿರಿಸಿ ಕೊಂಡು ಮಹಿಳೆಯರಿಗೆ ಅವಕಾಶಗಳು ತೆರೆದುಕೊಂಡಿವೆ. ನೋಡಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರೇ ಹೆಚ್ಚು ಕಾಣಸಿಗುತ್ತಾರೆ ಎಂದು ತೋರಿಸಬಹುದಾದ ಸಂದರ್ಭವೂ ನಮ್ಮ ಕಣ್ಣೆದುರಿಗಿದೆ. ಆದರೆ ದೇಶದ ಅಥವಾ ಜಗತ್ತಿನಾದ್ಯಂತ ಇರುವ ಅಸಂಖ್ಯಾತ ಅಸಂಘಟಿತ ಮತ್ತು ದುಡಿಮೆಯ ಕ್ಷೇತ್ರಕ್ಕೆ (ನಮ್ಮ ಕಣ್ಣಿಗೆ ಕಾಣುವ) ತೆರೆದುಕೊಳ್ಳದ ಮಹಿಳೆಯರ ಪ್ರಮಾಣಕ್ಕೆ ಹೋಲಿಸಿ ನೋಡುವಾಗ ಈ ವಲಯ ಅತ್ಯಂತ ಸಣ್ಣ ವಲಯವಾಗಿ ತೋರುತ್ತದೆ.

### ಕೃಷಿಯಲ್ಲಿ ಮಹಿಳೆ

ಪಾರಂಪರಿಕ ಕ್ಷೇತ್ರವಾದ ಕೃಷಿಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಈಗಾಗಲೇ ಕೊಟ್ಟ ವಿವರ ಮಹಿಳೆ ವಹಿಸುವ ಗುರುತರ ಪಾತ್ರವನ್ನು ತೋರಿಸುತ್ತದೆ. ಅಷ್ಟಲ್ಲದೇ ನಾಟಿ, ಕಳೆ, ಮತ್ತಿತರ ಕೆಲಸಗಳನ್ನು ಮಾಡುವಾಗ ಉರಿಯುವ ಬಿಸುಲು ಅಥವಾ ಸುರಿಯುವ ಮಳೆಯಲ್ಲಿ ಆರೆಂಟು ಘಂಟೆಗಳ ಕಾಲ ಕೆಸರು ಗದ್ದೆಗಳಲ್ಲಿ ಸೊಂಟಬಗ್ಗಿಸಿ ಕೆಲಸ ಮಾಡುವ ಮಹಿಳೆಯ ಪರಿಶ್ರಮವೇನು ಕಡಿಮೆಯದೇನು? ಆದರೆ ಸಿಗುವ ಕೂಲಿ ಮಾತ್ರ ಈಗಲೂ ಪುರುಷನಿಗಿಂತ ಕಡಿಮೆಯೇ. ಅಲ್ಲದೇ ಹೊರಗಿನ ಕೆಲಸದ ನಂತರ ಹುಟ್ಟಿನಿಂದಲೇ ಹೊತ್ತು ತರುವ ಹೊಣೆಗಾರಿಕೆಯಾಗಿ ಗೃಹಕೃತ್ಯದ ಕೆಲಸಗಳಿಂದ ಬಿಡುಗಡೆಯ ಕಲ್ಪನೆಯೂ ಸಾಧ್ಯವಿಲ್ಲ.

## ಬಿಕ್ಕಟ್ಟು ತೋರಿದ ಪರ್ಯಾಯ

ಔದ್ಯೋಗೀಕರಣದ ಬೆಳವಣಿಗೆ, ಮಹಿಳೆಯರನ್ನು ಪಾರಂಪರಿಕ ಕೃಷಿ ಕ್ಷೇತ್ರದಿಂದ ಆಚಿನ ದುಡಿಮೆಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿಸಿತೆಂಬುದೇನೋ ನಿಜ. ಜೊತೆಗೇ ಕೃಷಿ ಕ್ಷೇತ್ರದಲ್ಲಿ ಕಂಡುಬಂದಿರುವ ತೀವ್ರತರ ಬಿಕ್ಕಟ್ಟು ಕೂಡ ಮಹಿಳೆಯನ್ನು ಹೊರಜಗತ್ತಿನಲ್ಲಿ ದುಡಿಮೆ ಕೂಲಿಯನ್ನು ಹುಡುಕುವಂತೆ ಮಾಡಿದೆ. ಕುಟುಂಬಗಳನ್ನು ಕಟ್ಟಿಕೊಂಡು ವಲಸೆ ಕಾರ್ಮಿಕಳಾಗಿ ಕಂಡು ಕೇಳರಿಯದ ನಗರಗಳಿಗೆ ಬರುತ್ತಿದ್ದಾಳೆ, ಆದರೆ ಶ್ರಮಿಕಳಾಗಿ ಬಂದ ಆಕೆಗೆ ಅಗತ್ಯವಿರುವ ಕೌಶಲ್ಯ, ನೈಪುಣ್ಯತೆಯ ವೃದ್ದಿಗೆ ಅಗತ್ಯವಿರುವ ಪರಿಕರಗಳು ಅವಳಿಗೆ ಲಭ್ಯವಾಗಲಿಲ್ಲ. ಪರಿಣಾಮವಾಗಿ ಅವಳು ಅಕುಶಲ ಕ್ಷೇತ್ರಕ್ಕೆ ಹೆಚ್ಚು ಸೀಮಿತವಾಗಬೇಕಾಗಿ ಬಂತು. ಕೃಷಿಯ ಬಿಕ್ಕಟ್ಟಿನಿಂದಾಗಿ ನಿರುಪಾಯಳಾಗಿ ವಲಸೆ ಬಂದ ಈ ಬೆಳವಣಿಗೆಯನ್ನೇ ಗಮನದಲ್ಲಿಟ್ಟುಕೊಂಡು ಮಹಿಳೆಯರ ಉದ್ಯೋಗಾವಕಾಶದಲ್ಲಿ ಹೆಚ್ಚಳವಾಗಿದೆ ಎಂದೂ ಹೇಳಲಾಗುತ್ತಿದೆ. ಹಾಗೊಮ್ಮೆ ಆದ ಅಲ್ಪ ಸ್ವಲ್ಪ ಹೆಚ್ಚಳ ಕೂಡ ಅಸಂಘಟಿತ ಮತ್ತು ಸಂಘಟಿತ ಕ್ಷೇತ್ರದಲ್ಲಿಯೂ ಅನೌಪಚಾರಿಕ ವಲಯದಲ್ಲಿ ಎಂಬುದನ್ನು ಗಮನಿಸಬೇಕು. ರಾಷ್ಟ್ರೀಯ ಮಾದರೀ ಸರ್ವೇಕ್ಷಣಾ ವರದಿಯ ಪ್ರಕಾರ 2004–5 ರಲ್ಲಿ ಮಹಿಳಾ ದುಡಿಮೆಗಾರರ ಸಂಖ್ಯೆ 14.85 ಕೋಟಿಯಿತ್ತು. 2011–12ರಲ್ಲಿ ಅದರ ಸಂಖ್ಯೆ 47.91 ಕೋಟಿಯಾಯಿತು. ಈ ಐದಾರು ವರ್ಷಗಳಲ್ಲಿ ಸುಮಾರು ಎರಡು ಕೋಟಿಯಷ್ಟು ಕಡಿಮೆಯಾಗಿದೆ. ಸಿಗುವ ವರದಿಗಳ ಪ್ರಕಾರ 1983ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇ.34, ನಗರ ಪ್ರದೇಶಗಳಲ್ಲಿ ಶೇ 15 ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರಿತ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರಿದ್ದರು.

ನಮ್ಮ ಬೆಂಗಳೂರನ್ನೇ ತೆಗೆದುಕೊಂಡರೆ ಬಹಳ ವೇಗವಾಗಿ ಔದ್ಯೋಗೀಕರಣಗೊಂಡು ಬಂದಿದ್ದನ್ನೆಲ್ಲ ಬಕಾಸುರನ ಹೊಟ್ಟೆಯಂತೆ ತುಂಬುವುದೇ ಇಲ್ಲವೆಂಬಂತೆ ಬೆಳೆಯುತ್ತಿರುವ ಬೃಹತ್ ನಗರಿ ಇದು. ಈ ನಗರದ ಮುಕುಟ ಪ್ರಾಯಗಳಾಗಿದ್ದ ಸಾರ್ವಜನಿಕ ಉದ್ದಿಮೆಗಳು ಕಳೆಗುಂದಿದ ಅಮವಾಸ್ಯೆಯ ಚಂದ್ರನಂತೆ ಕ್ರಮೇಣ ಕ್ಷೀಣಿಸುತ್ತಿವೆ. ಒಂದು ಕಾಲದಲ್ಲಿ ಬೆಂಗಳೂರಿನ ಯಾವುದೇ ಬಡಾವಣೆಯಲ್ಲಿ ಮುಂಜಾನೆ ನಿಂತು ಕೊಂಡರೂ ತಮ್ಮ ಕಾರ್ಖಾನೆಗಳ ಲಾಂಛನವನ್ನು ಹೊತ್ತು ಸಮವಸ್ತ್ರಧಾರೀ ಕಾರ್ಮಿಕರನ್ನು ಜಂಬದಿಂದ ಹೊತ್ತೊಯ್ಯುತ್ತಿದ್ದ ಸಾರ್ವಜನಿಕ ಉದ್ದಿಮೆಗಳ ವಾಹನಗಳು ಕಾಣಸಿಗುತ್ತಿದ್ದವು .ಅಲ್ಲಿ ಮಹಿಳೆಯರ ಸಂಖ್ಯೆಕೂಡ ಸಾಕಷ್ಟಿತ್ತು. ಆದರೆ ಈಗ! ಎಲ್ಲೋ ಅಲ್ಲೊಂದಿಲ್ಲೊಂದು ಪುಷ್ಪಕ್ ಬಸ್ಸುಗಳಲ್ಲಿ ಬೆರಳೆಣಿಕೆಯ ಮಂದಿ ಹೋಗುವುದನ್ನು ಕಾಣುತ್ತೇವೆ. ಈಗ ಮಾದರಿ ಬದಲಾಗಿದೆ. ರಾಷ್ಟ್ರೀಯ ಕಾರ್ಮಿಕ ಆಯೋಗದ ಒಂದು ವರದಿಯ ಪ್ರಕಾರ 1983ರಲ್ಲಿ 279 ಮಿಲಿಯನ್ ಇದ್ದ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ 2005–2006 ರ ಹೊತ್ತಿಗೆ 359 ಮಿಲಿಯನ್ ಆಯಿತು. ಅದೇ ಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ 1983 ರಲ್ಲಿ 24 ಮಿಲಿಯನ್ ಇದ್ದುದು ಇದೇ ಅವಧಿಯಲ್ಲಿ ಕೇವಲ 26.5 ಮಿಲಿಯನ್ ರಷ್ಟಾಯಿತು. ಹೀಗೆ ಅಸಂಘಟಿತ ವಲಯದಲ್ಲಿ ಆದ ತೀವ್ರ ಹೆಚ್ಚಳಕ್ಕೆ ಕಾರಣಗಳನ್ನು ಗುರುತಿಸುವಾಗ ಗಮನಕ್ಕೆ ಬರುವ ಅಂಶವೆಂದರೆ ದೊಡ್ಡ ದೊಡ್ಡ ಸಂಸ್ಥೆಗಳು ಖರ್ಚು ಮತ್ತು ನಷ್ಟಗಳನ್ನು ಕಡಿಮೆ ಮಾಡಿಕೊಳ್ಳಲು ಅನೌಪಚಾರಿಕ ವಲಯಕ್ಕೆ ತಮ್ಮ ಸಂಸ್ಥೆಯ ಕೆಲಸವನ್ನು ಹೊರಗುತ್ತಿಗೆ ಕೊಡುವ ಮೂಲಕ ಸಂಘಟಿತ ವಲಯದಲ್ಲಿ ಉದ್ಯೋಗ ಸೃಷ್ಟಿ ಕಡಿಮೆಯಾಗಿದೆ. ಆದ್ದರಿಂದ ಅಸಂಘಟಿತ ವಲಯದ ಕಾರ್ಮಿಕರ ಕೆಲಸದ ಕನಿಷ್ಠ ಪರಿಸ್ಥಿತಿಯನ್ನಾದರೂ ಸುಧಾರಿಸಲು ತುರ್ತುಕ್ರಮಗಳನ್ನು ಕೈಗೊಂಡು ಅವರ ಬದುಕಿನ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಆಯೋಗ ಅಭಿಪ್ರಾಯ ಪಟ್ಟಿತ್ತು. ಮತ್ತು ಕೃಷಿ ಮತ್ತು ಕೃಷಿಯೇತರ ಅಸಂಘಟಿತ ವಲಯದ ಕಾರ್ಮಿಕರ ಬದುಕಿನ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು ಅಗತ್ಯವಾದ ಎರಡು ಸಮಗ್ರ ಕಾನೂನುಗಳನ್ನು ಜಾರಿಗೆ ತರಲು ಶಿಫಾರಸು ಮಾಡಿತ್ತು. ಜೊತೆಗೇಅವರ ಬದುಕಿನ ಗುಣಮಟ್ಟವನ್ನು ಎತ್ತರಿಸಲು ಹಲವಾರು ಸಲಹೆಗಳನ್ನೂ ನೀಡಿತ್ತು. ಅದು ಜಾರಿಯಾಗಿದೆಯೇ ಎಂಬುದನ್ನು ವಿವಿಧ ವಲಯಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸ್ಥಿತಿಯ್ನು ಗಮನಿಸಿದರೆ ವಿಷಯ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಬೆಂಗಳೂರನ್ನೇ ತೆಗೆದುಕೊಂಡರೆ ಯಾವುದೇ ಬಡಾವಣೆಯಿಂದ ಬೆಳಿಗ್ಗೆ ಸಂಜೆ ಸಾವಿರಾರು ಮಂದಿ ಅಸಂಘಟಿತ ಕಾರ್ಮಿಕ



ಮಹಿಳೆಯರು ಗಾರ್ಮೆಂಟ್ಸ್, ಕಟ್ಟಡ ಕೆಲಸಗಳಿಗೆ ಹೋಗಲು ನೂಕು ನುಗ್ಗಲಿನ ಬಸ್ಸುಗಳಲ್ಲಿ ತುಂಬಿ ತುಳುಕುತ್ತಿರುತ್ತಾರೆ. ಕಟ್ಟಡ ಕಾರ್ಮಿಕರಂತೂ ಕೆಲಸಕ್ಕೆ ಕರೆಯುವ ಕಂಟ್ರಾಕ್ಟರ್ ತಮ್ಮನ್ನು ಕರೆಯಲೆಂದು ಕಾತರದಿಂದ ಕಾಯುತ್ತಿರುತ್ತಾರೆ. ಒಮ್ಮೆ ಅವರ ಜೊತೆ ಮಾತಿಗಿಳಿದರೆ ಹೊಸದೊಂದು ಜಗತ್ತೇ ಬಿಚ್ಚಿಕೊಳ್ಳುತ್ತದೆ. ಅವರಲ್ಲಿ ಹೆಚ್ಚಿನವರು ವಲಸೆ ಬಂದ ಕಾರ್ಮಿಕರು. ಹಳ್ಳಿಯಲ್ಲಿ ಬದುಕು ದುರ್ಭರವಾಗಿ ಕೃಷಿ ಬಿಕ್ಕಟ್ಟು ಅವರನ್ನು ಕಣ್ಣುಕಟ್ಟಿ ಈ ಬೃಹತ್ ನಗರಿಗೆ ನೂಕಿದೆ. ಇಲ್ಲಿ ಬದುಕು ಕಟ್ಟಿಕೊಳ್ಳ ಬರುವಾಗ ನಿರೀಕ್ಷೆಗಳು ನೂರಾರು. ಬೆರಗು ಮೂಡಿಸುವ ಮಹಾನಗರಿ ಕಟ್ಟಿಕೊಡುವ ಕನಸುಗಳು ನೂರಾರು. ಕನಸುಗಳು ಸಾಕಾರಗೊಳ್ಳದಿದ್ದರೂ ಗಂಜಿ ನೀರಿಗೆ ತತ್ವಾರವಾಗದಂತಹ ಅಕ್ಷಯಪಾತ್ರೆ ಇದೆಂಬುದೂ ನಿಜವೇ!. ಇಲ್ಲಿ ಇರುವ ವೈರುಧ್ಯವನ್ನು ನಾವು ಅರ್ಥಮಾಡಿಕೊಳ್ಳಬೇಕು. ಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸಂದರ್ಭದಲ್ಲಿ ನಿಗದಿತ ವೇತನ, ವೇಳೆಗಳಿದ್ದು ಸೇವಾಹಿರಿತನದ ಆಧಾರದಲ್ಲಿ ಮುಂಬಡ್ತಿ ಸಿಗುವ ಸಾಧ್ಯತೆಗಳೂ ಇರುವಾಗ ಅದನ್ನು ಒಪ್ಪಿಕೊಂಡರೆ ಬೇರೆ ಊರಿಗೆ ಆಗಬಹುದಾದ ವರ್ಗಾವಣೆಯಿಂದ ಕೌಟುಂಬಿಕ ಜೀವನ ವ್ಯತ್ಯಯವಾಗುವುದೆಂಬ ಕಾರಣಕ್ಕಾಗಿ ಅದನ್ನು ನಿರಾಕರಿಸುವ ಉದಾಹರಣೆಗಳು ಇವೆ. ಆದರೆ ಅಸಂಘಟಿತ ವಲಯದಲ್ಲಿ ಅಂತಹುದೇ ಕೌಟುಂಬಿಕ ಜವಾಬ್ದಾರಿಗಳ ಹೊರೆಯನ್ನು ಹೊತ್ತೂ ಕೂಡ ಅನಿಶ್ಚಿತತೆಯ ಮೂಟೆಯನ್ನು ಹೊತ್ತುಕೊಂಡೇ ಗೊತ್ತು ಗುರಿ ಇಲ್ಲದ ಊರಿಗೆ ಅನಿವಾರ್ಯವಾಗಿ ಬರುವ ಮಹಿಳೆಯರು! ಈ ಎರಡರ ಸಂದರ್ಭದಲ್ಲೂ ನೋಡಬೇಕಾಗಿರುವುದು ಮಹಿಳೆ ಎಲ್ಲ ಕಡೆಯೂ ವ್ಯವಸ್ಥೆಯ ಕೈಗೂಸು. ಗಾರ್ಮೆಂಟ್ಸ್ ವಲಯದಲ್ಲಿ ಕೆಲಸ ಮಾಡುತ್ತಿರುವ ಮತ್ತು ಇತರ ಸಣ್ಣ

ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಅಸಂಖ್ಯಾತ ಮಹಿಳೆಯರು ಕೂಡ ಹೆಚ್ಚಿನ ಸಂದರ್ಭದಲ್ಲಿ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬಂದವರೇ ಆಗಿರುತ್ತಾರೆ. ತಮ್ಮ ಹಿಂದೊಂದು ನಿರ್ವಹಿಸಬೇಕಾದ ಕುಟುಂಬ, ಶಿಕ್ಷಣ ಬೇಕಾದ ಸೋದರ, ಚಿಕಿತ್ಸೆ ಬೇಕಾದ ಹೆತ್ತವರು ಹೀಗೆ ಕಷ್ಟ ಕೋಟಲೆಗಳ ಮೂಟೆಯೇ ಅವರ ತಲೆಯ ಮೇಲಿರುತ್ತದೆ. ಆದರೆ ಇವರಿಗೆ ಸಿಗಬೇಕಾದ ಯಾವ ಕನಿಷ್ಠ ಸೌಲಭ್ಯಗಳೂ ಸಿಗುವುದಿಲ್ಲ. ವಿಶೇಷ ಆರ್ಥಿಕ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಪ್ರೊಡಕ್ಟಿವಿಟಿಯ ಒತ್ತಡಕ್ಕೆ ಸಿಲುಕಿ ನೀರು ಕುಡಿದರೆ ಜಲಬಾಧೆಯ ಸಮಸ್ಯೆ ಎದುರಾಗುವುದೆಂದು ನೀರೂ ಕುಡಿಯದ ಪರಿಸ್ಥಿತಿ ಇದೆ.

### ಮನೆ ಕೆಲಸದ ಕಾರ್ಮಿಕರು

ಇನ್ನೊಂದು ನೇರ ಕಣ್ಣಿಗೆ ಕಾಣುವ ವಿಭಾಗವೆಂದರೆ ಮನೆಕೆಲಸದ ಮಹಿಳೆಯರು. ಯಾವುದೇ ರೀತಿಯ ಕೆಲಸದ ಭದ್ರತೆಯೇ ಇಲ್ಲದ, ತೀರ ಅನಿಶ್ಚಿತೆಯಲ್ಲಿಯೇ ಕೆಲಸ ಮಾಡುವ ಮತ್ತೊಂದು ವಿಭಾಗವಿದು. ಸಾಮಾನ್ಯವಾಗಿ ಕೆಳವರ್ಗದ ಮಹಿಳೆಯರೇ ಹೆಚ್ಚಾಗಿ ತೊಡಗಿಕೊಳ್ಳುವ ಈ ಉದ್ಯೋಗದಲ್ಲಿ ಕೂಡ ಯಾವುದೇ ಸಾಮಾಜಿಕ ಸುರಕ್ಷೆಗಳಾಗಲಿ, ಇತರ ಸೌಲಭ್ಯಗಳಾಗಲಿ ಸಿಗದಂತಹ ವಲಯವಿದು. ಮನೆಯ ಕೆಲಸ ಮಾಡುವ ಅವಳು ಮನೆಯ ಶೌಚಾಲಯ ಬಳಸುವಂತಿಲ್ಲ. ಕುಡಿಯುವ ನೀರನ್ನೂ ಮುಟ್ಟುವಂತಿಲ್ಲವೆಂಬಂಥಹ ಅಸ್ಪಶ್ಯತೆಯ ಆಚರಣೆಯಂತಹ ಅವಮಾನಕ್ಕೂ ಒಳಗಾಗುತ್ತಾಳೆ. ವಾರದ ರಜಾ ಕೂಡ ಇಲ್ಲದೇ ಅನಾರೋಗ್ಯದಲ್ಲಿ ನರಳುತ್ತಿದ್ದರೂ ಕೆಲಸ ಬಿಡಲಾರದಂಥಹ ಸ್ಥಿತಿಯಲ್ಲಿ ಬಳಲುತ್ತಾಳೆ. ಇವರ ಸಂಖ್ಯೆ ಎಷ್ಟೆಂದು ನಿಖರವಾಗಿ ಮಾಹಿತಿ ಸಿಗುವುದಿಲ್ಲ. ಕಾರಣ ಒಬ್ಬರೇ ಎರಡು ಮೂರು ಮನೆಗಳಲ್ಲಿ ಕೂಡ ಕೆಲಸ ಮಾಡುವ ಅವಕಾಶಗಳಿವೆ. ಒಂದೇ ಠಾಣದಲ್ಲಿ ಕೆಲಸ ನಿರ್ವಹಿಸದ ಮತ್ತು ಕೆಲಸದ ಅಭದ್ರತೆ ತೀವ್ರವಾಗಿ ಕಾಡುವುದರಿಂದ ಇವರ ಸಮಸ್ಯೆಗಳು ಬೆಳಕಿಗೇ ಬರುವುದಿಲ್ಲ. ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಆಯೋಗ ಈ ವಿಭಾಗವನ್ನು ಸಮಕಾಲೀನ ಜೀತದಾಳುಗಳು ಎಂದು ವರ್ಣಿಸಿದೆ. 2004–2005ರಲ್ಲಿ ನಡೆದ ಎನ್.ಎಸ್.ಎಸ್.ಓ 61 ನೇ ಸುತ್ತಿನ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಸುಮಾರು 4.2 ಮಿಲಿಯನ್ ಮನೆಕೆಲಸದ ಮಹಿಳೆಯರಿದ್ದಾರೆ. ಆದರೆ ದೇಶದ ಆರ್ಥಿಕತೆಯ ಮೌಲ್ಯ ಮಾಪನದಲ್ಲಿ ಇವರ ಕೊಡುಗೆ ಪರಿಗಣಿಸಲ್ಪಡುವುದಿಲ್ಲ.

ಇದಲ್ಲದೇ ಬೀಡಿ, ಅಗರಬತ್ತಿ, ಮಣಿ, ಕಸೂತಿ, ಪೌರ ಕಾರ್ಮಿಕರು, ತೋಟಗಾರಿಕೆ, ಲೇಸ್ ಹೊಲಿಯುವುದು, ಕೈ ಚೀಲ, ಕಾಗದದ ಚೀಲ ಎಲೆಕ್ಟ್ರಾನಿಕ್ ಉಪಕರಣಗಳ ಜೋಡಣೆ, ಹೀಗೆ ಅನೇಕ ವಿಭಾಗಗಳಲ್ಲಿ ಮಹಿಳೆಯರು ದೈನೇಸಿ ಬದುಕು ಬದುಕುತ್ತಿದ್ದಾರೆ. ಈ ಕೆಲಸಗಳೂ ಗೃಹಾಧಾರಿತವೇ ಆಗಿರುವುದರಿಂದ ಅವರ ಕಷ್ಟ ಕಾರ್ಪಣ್ಯಗಳು ಹೊರ ಜಗತ್ತಿನ ಕಣ್ಣಿಗೆ ಗೋಚರಿಸುವುದಿಲ್ಲ. ತೀರ ಅಭದ್ರತೆಯ ಕ್ಷೇತ್ರಗಳಾಗಿರುವುದರಿಂದ ಅವರು ಬಾಯಿ ಬಿಡುವಂತೆ ಕೂಡ ಇಲ್ಲ. ಸರ್ಕಾರದ ಆರೋಗ್ಯ, ವಿಮೆ, ಕನಿಷ್ಠ ಕೂಲಿಗಳೆಲ್ಲ ಇವರ ಪಾಲಿಗೆ ಗಗನ ಕುಸುಮಗಳೇ. ಇವರಲ್ಲಿ ಅನೇಕರು ಕರಾರು ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಸಂಘಟಿತ ಸಾರ್ವಜನಿಕ ವಲಯದಲ್ಲಿ ಸರ್ಕಾರಗಳೆ ಕರಾರು ಕಾರ್ಮಿಕ ಪದ್ಧತಿಯನ್ನು ಒಪ್ಪಿಕೊಂಡ ಪರಿಣಾಮವಾಗಿ ಈ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸುಲಭವಾದ ಯಾವ ಪರಿಹಾರ ಮಾರ್ಗಗಳೂ ಇಲ್ಲದಂತಾಗಿದೆ. ಸಾಮಾನ್ಯವಾಗಿ ಬಡ ದುಡಿಯುವ ಮಹಿಳೆಯರ ಗಳಿಕೆಯ ಬಹುಪಾಲು ಕುಟುಂಬದ ಅನಿವಾರ್ಯ ಅಗತ್ಯಗಳಿಗೆ ವೆಚ್ಚವಾಗುತ್ತದೆ. ಅವಳದೇ ಗಳಿಕೆಯ ಮೇಲೆ ಅವಳಿಗೇ ಅಧಿಕಾರವಿಲ್ಲದ ಸಂದರ್ಭಗಳೂ ಇಲ್ಲದಿಲ್ಲ. ಇಡೀ ಕುಟುಂಬದ ಲಾಲನೆ ಪಾಲನೆ ಕೆಲವು ಬಾರಿ ಮನೆಯ ಪುರುಷ ಸದಸ್ಯರ ಕೆಟ್ಟಚಾಳಿಗಳಿಗಾಗಿ ಪೀಡನೆಗಳನ್ನೂ ಅವಳು ಎದುರಿಸಬೇಕಾಗುತ್ತದೆ.

### ಅಸಂಘಟಿತ ವಲಯದ ಮಹಿಳೆಯರ ವಿವಿಧ ಪ್ರಶ್ನೆಗಳು

ಕೌಟುಂಬಿಕ ನೆಲೆಯ ಎಲ್ಲ ಜವಾಬ್ದಾರಿ ನಿರ್ವಂಚನೆಯಿಂದ ನಿರ್ವಹಿಸುತ್ತಲೇ ಕುಟುಂಬದ ಇತರ ಅವಶ್ಯಕತೆಗಳಿಗಾಗಿ ಗಾಣದೆತ್ತಿನಂತೆ ದುಡಿಯುವ ಮಹಿಳೆಗೆ ನ್ಯಾಯಸಮ್ಮತ ಕೂಲಿ ಸಿಗುತ್ತದೆಯೇ ಎಂಬ ಪ್ರಶ್ನೆಗೆ ನಕಾರಾತ್ಮಕ ಉತ್ತರವೇ ದೊರಕುತ್ತದೆ. ಅತ್ಯಂತ ಕಡಿಮೆ ಕೂಲಿಗೆ ಕೆಟ್ಟ ಕೆಲಸದ ಪರಿಸ್ಥಿತಿಯಲ್ಲಿ ಅವಳು ಸದಾ ಕೆಲಸ ಮಾಡಬೇಕೆಂದೇ ಈ ವ್ಯವಸ್ಥೆ ನಿರೀಕ್ಷಿಸುತ್ತದೆ. ಗೋಣು ಬಗ್ಗಿಸಿ ಕೆಲಸ



ಮಾಡುತ್ತಲೇ ಇದ್ದರೂ ಅವಳ ಕೆಲಸಕ್ಕಾಗಲಿ ಅವಳಿಗಾಗಲೀ ಯಾವುದೇ ಸಾಮಾಜಿಕ ಭದ್ರತೆಗಳನ್ನು ನಿರೀಕ್ಷಿಸುವಂತೆಯೇ ಇಲ್ಲ. ಅಲ್ಲದೇ ಪುರುಷನಿಗೆ ಸಮನಾಗಿ ಕೆಲಸ ಮಾಡಿದಾಗಲೂ ಸಮಾನ ಕೆಲಸಕ್ಕೆ ಸಮಾನ ಕೂಲಿ ಇಲ್ಲ. ಕನಿಷ್ಠ ವೇತನದ ಕಲ್ಪನೆಯಂತೂ ಗಾವುದ ದೂರ. ಒಂದು ದಿನದ ಕೆಲಸಕ್ಕೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು ಯೋಜನೆಯ ವೇತನಕ್ಕಿಂತ ಎಷ್ಟೋ ಪಾಲು ಕಡಿಮೆ ವೇತನ ದೊರೆಯುತ್ತಿದೆ. ಈ ಕಾನೂನು ಜಾರಿಗೆ ಬಂದಿದ್ದು ಕೂಡ ಕೃಷಿಯ ಕೆಲಸವನ್ನೇ ಅವಲಂಬಿಸಿರುವ ಗ್ರಾಮೀಣ ಬಡವರಿಗೆ ಸಹಾಯ ಹಸ್ತವಾಗಿ. ಗ್ರಾಮೀಣ ಭಾಗದ ದುಸ್ಥಿತಿಗೆ ಹಿಡಿದ ಕನ್ನಡಿಯಂತೆ ಸರ್ಕಾರದ ನಿರೀಕ್ಷೆ 30% ಕೆಲಸಗಾರರೆಂದಾದರೆ 2007–08 ರಲ್ಲಿ ಸರಿ ಸುಮಾರು 46% ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿ ಮುಂದೆ ಬಂದಿದ್ದರು. ಇದು ಅವರ ಬದುಕಿಗೆ ಒಂದು ಆಶಾ ಕಿರಣವಾಗಿ ಬಂದ ಕಾನೂನು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅದನ್ನೂ ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ವೈಫಲ್ಯ ಕಾಣುತ್ತಿದೆ. ಒಂದು ವರದಿಯ ಪ್ರಕಾರ 2016–17 ರ ಹೊತ್ತಿಗೆ ದುಡಿಮೆಯ ಕ್ಷೇತ್ರ ಇನ್ನಷ್ಟು ಅನೌಪಚಾರಿಕ ವಲಯಕ್ಕೆ ತಳ್ಳಲ್ಪಟ್ಟು ಈಗಿರುವ 91.8% ನಿಂದ 93.9%ಗೆ ಏರಲಿದೆ. ಬೆಳೆಯುತ್ತಿರುವ ಸಮಸ್ಯೆಗಳ ಅಗಾಧತೆ ಇನ್ನಷ್ಟು ಹೆಚ್ಚಲಿರುವ ಎಲ್ಲ ಸೂಚನೆಗಳಿರುವುದರಿಂದ ಇಲ್ಲಿಯೂ ಮಹಿಳೆ ತೀವ್ರ ತೆರನ ಶೋಷಣೆಗೆ ಒಳಗಾಗುವುದರಲ್ಲಿ ಸಂದೇಹವಿಲ್ಲ. ಲೈಂಗಿಕ ಕಿರುಕುಳಗಳು, ಶೌಚಾಲಯದಂಥಹ ಕನಿಷ್ಠ ಮೂಲಭೂತ ಸೌಲಭ್ಯಗಳೂ ಸಿಗದ ಸ್ಥಿತಿಯಲ್ಲಿ ಅಸಂಘಟಿತ ವಲಯದ ಮಹಿಳೆಯರು ಕೆಲಸ ಮಾಡುತ್ತಾರೆ. ಒಂದು ವರದಿಯ ಪ್ರಕಾರ ನಗರ ಪ್ರದೇಶಗಳಲ್ಲಿ

91% ಮಹಿಳೆಯರು ಲೈಂಗಿಕ ಕಿರುಕುಳಗಳಿಗೆ ಒಳಗಾಗುತ್ತಾರೆ. ಆದರೆ ಸಾಮಾನ್ಯವಾಗಿ ಅವರು ದೂರು ದಾಖಲಿಸಲು ಹಿಂಜರಿಯುತ್ತಾರೆ. ಯಾಕೆಂದರೆ ಅದನ್ನು ಪರಿಹರಿಸಬೇಕಾದ ಸಮಸ್ಯೆಯೆಂದು ಸಮಾಜ ಕುಟುಂಬ ಸ್ವೀಕರಿಸುವುದಿಲ್ಲ. ದೂರು ನೀಡಿದಳೆಂಬ ಕಾರಣಕ್ಕೇ ಇನ್ನಷ್ಟು ಸಮಸ್ಯೆಗೆ ಬೀಳುವ ಸಂಭವಗಳೂ ಇವೆ. ಈ ರೀತಿಯಲ್ಲಿ ಅಸಂಘಟಿತ ವಲಯಕ್ಕೆ ತೆರೆದುಕೊಂಡ ಮಹಿಳೆಯರನೇಕರು ಮಹಿಳೆ ಎಂಬ ಕಾರಣಕ್ಕೆ ವಿವಿಧ ರೀತಿಯ ದೌರ್ಜನ್ಯಕ್ಕೆ ಒಳಗಾಗುವುದೇನೂ

ಹೊಸತಲ್ಲ. ಕೆಲಸ ಕೊಡಿಸುವ ಭರವಸೆಯೊಂದಿಗೆ ಕರೆದು ತಂದಿರುವ ಏಜೆಂಟ್, ಕೆಲಸದ ಸ್ಥಳದಲ್ಲಿ ಮಾಲಿಕ, ಇವರಂತೆಯೇ ಬದುಕು ಕಟ್ಟಿಕೊಳ್ಳಲು ಬಂದ ಇತರ ಪುರುಷರು ಹೀಗೆ ಯಾರ್‍ಯಾರದೋ ಕಾಕ ದೃಷ್ಟಿಗೆ ಬೀಳುವ ಅಪಾಯ ಸದಾ ಅವಳದಾಗಿರುತ್ತದೆ.

ತಂದೆ ತಾಯಿ ಕೆಲಸಕ್ಕೆ ಹೋದಾಗ, ಅಥವಾ ಅನಿವಾರ್ಯ ದೈಹಿಕ ಬಾಧೆಯಾದ ಮಲ ಮೂತ್ರ ವಿಸರ್ಜನೆಗೆ ಮರೆಯಿರುವ ಸ್ಥಳಗಳನ್ನು ಹುಡುಕಿ ಹೋದಾಗ – ಹೀಗೆ ಹಲವು ಸಂದರ್ಭಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳೂ ಅತ್ಯಾಚಾರ ಮಾನಭಂಗದಂತಹ ದೌರ್ಜನ್ಯಗಳಿಗೆ ಒಳಗಾಗುವುದುಂಟು. ಅಂತಹ ಹಲವು ಪ್ರಕರಣಗಳು ಬೆಂಗಳೂರಿನಲ್ಲೇ ವರದಿಯಾಗಿವೆ. ಇವೂ ಅಸಂಘಟಿತ ವಲಯದ ದುಡಿಯುವ ಮಹಿಳೆಯರ ಸಮಸ್ಯೆಯ ಭಾಗವೇ.

ಇದೇ ವೇಳೆಗೆ ಗುರುತಿಸಬೇಕಾದ ಮತ್ತೊಂದು ಅಂಶವೆಂದರೆ ಸರ್ಕಾರದ ಸುಮಾರು 72 ಯೋಜನೆಗಳಲ್ಲಿ 1 ಕೋಟಿಯಷ್ಟು ಜನ ದುಡಿಯುತ್ತಾರೆ. ಅದರಲ್ಲಿ 85% ಮಹಿಳೆಯರೇ ಇದ್ದಾರೆ. ಇವರನ್ನು ಗೌರವ ಹುದ್ದೆಯೆಂದು ಸಂಬೋಧಿಸಿ ಪ್ರೋತ್ಸಾಹ ಧನ, ಗೌರವ ಸಂಭಾವನೆ ಎಂಬಿತ್ಯಾದಿ ಹೆಸರುಗಳನ್ನಿಟ್ಟು ವಂಚಿಸಲಾಗುತ್ತಿದೆ. ಕುಟುಂಬದ ಒಳಗೆ ಗೃಹಕೃತ್ಯದ ಭಾಗವಾಗಿ, ಗೃಹಿಣಿಯ ಕರ್ತವ್ಯವಾಗಿ ಮನೆಮಂದಿಯ ಉಪಚಾರ ಆರೈಕೆ ಯನ್ನು ಯಾವುದೇ ಫಲಾಪೇಕ್ಷೆ ಇಲ್ಲದೇ ಮಾಡುವ ಮಹಿಳೆಯನ್ನು ಹೊರಗೆ ಕೂಡ ಅಂತದೇ ಕೆಲಸವನ್ನು ಗೌರವದ ಹೆಸರಿನಲ್ಲಿ ಹೊರಿಸಲಾಗುತ್ತದೆ.

## ದುಡಿಯುವ ಮಹಿಳೆಯರಿಗೆ ಇರುವ ಕಾನೂನಿನ ಸವಲತ್ತುಗಳು

1961 ರಲ್ಲಿಯೇ ಹೆರಿಗೆ ಸೌಲಭ್ಯದ ಕಾನೂನು ಜಾರಿಗೆ ಬಂದಿದೆ. ಅದರ ಪ್ರಕಾರ (ಈಗ) 6 ತಿಂಗಳ ರಜೆ, ಗರ್ಭಪಾತಕ್ಕೆ ಅರ್ಧ ರಜೆ ಮುಂತಾದ ಸೌಲಭ್ಯಗಳು ಲಭ್ಯವಾಗಬೇಕು. ಆದರೆ ಅಸಂಘಟಿತ ವಲಯದ ಮಹಿಳೆಯರಪಾಲಿಗೆ ಅದು ಅಷ್ಟು ಸುಲಭವಾಗಿ ದಕ್ಕುವುದಲ್ಲ.

ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಶಿಶು ಪಾಲನಾ ಕೇಂದ್ರಗಳನ್ನು ಕಡ್ಡಾಯವಾಗಿ ಒದಗಿಸಬೇಕು ಎಂದು ಕಾನೂನು ಹೇಳುತ್ತದೆ. ಶಿಶುಪಾಲನಾ ಕಾಯ್ದೆ 1966 ರಂತೆ ಶಿಶುಪಾಲನಾ ಮಾತ್ರವಲ್ಲದೇ ಮಕ್ಕಳ ಮತ್ತು ತಾಯಂದಿರ ಆರೋಗ್ಯ ತಪಾಸಣೆ ಮಾಡಬೇಕೆಂದೂ ತಿಳಿಸಿದೆ.

ಪ್ರತ್ಯೇಕ ಶೌಚಾಲಯ ಮತ್ತು ವಿಶ್ರಾಂತಿ ಕೊಠಡಿ ಯನ್ನು ಮಹಿಳಾ ಕಾರ್ಮಿಕರಿಗೆ ಒದಗಿಸಬೇಕೆಂದು ಫ್ಯಾಕ್ಟರಿ ಮತ್ತು ಗಣಿ ಕಾಯ್ದೆಯಡಿ ವಿಧಿಸಲಾಗಿದೆ. ದುಡಿಯುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ದೂರು ಸಮಿತಿಗಳನ್ನು ರಚಿಸಬೇಕೆನ್ನುವ ಸುಪ್ರಿಂ ಕೋರ್ಟ್ ಆದೇಶ ಈಗ ಕಾನೂನಾಗಿದೆ. ಅದರಂತೆ ಮಹಿಳೆಯರು ಕೆಲಸ ಮಾಡುವ ಎಲ್ಲ ಸ್ಥಳಗಳಲ್ಲಿ ಆಂತರಿಕ ದೂರು ನಿರ್ವಹಣಾ ಸಮಿತಿಯ ರಚನೆಯನ್ನು ಕಡ್ಡಾಯಗೊಳಿಸಲಾಗಿದೆ.

ಆಂತರಿಕ ಸಮಿತಿಯ ರಚನೆಗೆ ಅಗತ್ಯವಿರುವ ಮಹಿಳಾ ನೌಕರರು/ಕಾರ್ಮಿಕರು ಇರಲಾರದ ಸಂಸ್ಥೆಗಳ ಮಹಿಳಾ ಉದ್ಯೋಗಿಗಳ ದೂರು ದಾಖಲಿಸಲು ಜಿಲ್ಲಾಡಳಿತ ನಾಗರಿಕರ ಸಮಿತಿಯೊಂದನ್ನು ರಚಿಸಬೇಕೆಂದೂ ಆ ಕಾಯ್ದೆ ವಿಧಿಸುತ್ತದೆ. ದೇಶದ ಪ್ರತಿಯೊಬ್ಬ ಕಾರ್ಮಿಕ/ನೌಕರರಿಗೂ ಕನಿಷ್ಠ ವೇತನ ನೀಡಬೇಕೆನ್ನುವ ಕಾಯ್ದೆ ಕೂಡ ನಮ್ಮ ದೇಶದಲ್ಲಿದೆ.

1982ರಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪೊಂದರಲ್ಲಿ ಶಾಸನಬದ್ಧ ಕನಿಷ್ಠ ವೇತನ ನೀಡದೇ ದುಡಿಸಿಕೊಳ್ಳುವುದು ಬಲವಂತ ದುಡಿಮೆಯಾಗುತ್ತದೆ. ಅದು ಸಂವಿಧಾನದ 23 ನೇ ಕಲಮಿನ ಉಲ್ಲಂಘನೆಯಾಗುತ್ತದೆ. ಯಾರಿಗಾದರೂ ಆರ್ಥಿಕ ಸಂಕಷ್ಟದಿಂದಾಗಿ ಅಂಥಹ ಒಂದು ಕೆಲಸ ಮಾಡುವುದು ಅನಿವಾರ್ಯವಾದರೂ ಅದು ಕಾನೂನಿನ ಪ್ರಕಾರ ಅಪರಾಧ. ಕನಿಷ್ಠ ಕೂಲಿ ಯು ಜೀವನ ನಿರ್ವಹಣೆಯ ವೆಚ್ಚಕ್ಕೆ ಅನುಗುಣವಾಗಿಯೇ ಪರಿಗಣಿಸಲ್ಪಡಬೇಕು ಆದ್ದರಿಂದ ಅದು ರಾಜ್ಯದಿಂದ ರಾಜ್ಯ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾದರೂ ಅದಕ್ಕೆ ಅನುಗುಣವಾಗಿಯೇ ಇರಬೇಕು. ಎಂದು ಹೇಳಿದೆ. ಈ ಎಲ್ಲ ಸಕಾರಾತ್ಮಕ ಅಂಶಗಳ ಬೆಳಕಿನಲ್ಲಿ ನಕಾರಾತ್ಮಕ ಅಂಶಗಳನ್ನು ಹಿಮ್ಮೆಟ್ಟಿಸಿ ದೇಶದ ಆರ್ಥಿಕತೆಗೆ ಭರಪೂರ ಕೊಡುಗೆ ನೀಡುತ್ತಿರುವ ಅಸಂಘಟಿತ ವಲಯದ ಮಹಿಳೆಯರ ಮತ್ತು ಒಟ್ಟು ಕಾರ್ಮಿಕ ವರ್ಗದ ಏಳ್ಗೆಯಲ್ಲಿಯೇ ದೇಶದ ಏಳ್ಗೆಇದೆ. ಅಭಿವೃದ್ದಿಗೆ ಕಾರಣೀಭೂತರಾದ, ಮೈಮುರಿದು ದುಡಿದು ಬದುಕು ಕಟ್ಟಿಕೊಳ್ಳುವ ದುಡಿಯುವ ವರ್ಗವನ್ನು ಅಭಿವೃದ್ಧಿಯ ಫಲಾನುಭವಿಗಳನ್ನಾಗಿಸುವುದು, ಅವರ ಬದುಕಿನ ಮಟ್ಟವನ್ನು ಏರಿಸಬೇಕೆಂಬ ಅರ್ಜುನ್ ಸೇನ್ ಗುಪ್ತಾ ಶಿಫಾರಸುಗಳು, ರಾಷ್ಟ್ರೀಯ ಕಾರ್ಮಿಕ ಆಯೋಗಗಳ ಶಿಫಾರಸುಗಳು, ಜಾರಿಗೆ ಬಂದಲ್ಲಿ ಅವರ ಆದಾಯದಲ್ಲಿ ಏರಿಕೆಯಾಗುತ್ತದೆ. ಅವರ ಸಾಮಾಜಿಕ ಜೀವನ ಉತ್ತಮಗೊಳ್ಳುತ್ತದೆ. ಅವರ ಕೊಳ್ಳುವ ಶಕ್ತಿ ಹೆಚ್ಚುತ್ತದೆ. ಅದರಿಂದಾಗಿ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತದೆ. ಆಮದು ರಫ್ತು ವಹಿವಾಟು ಹೆಚ್ಚುತ್ತದೆ. ಬೇಡಿಕೆಗಾಗಿ ಪೂರೈಕೆಯ ಅಗತ್ಯ ಬರುತ್ತದೆ. ಪೂರೈಕೆಗಾಗಿ ಕಚ್ಚಾ ಮಾಲು ಬೇಕಾಗುತ್ತದೆ. ಕಚ್ಚಾಮಾಲು ತಯಾರಿಕೆಗೆ ದುಡಿಯುವ ಕೈಗಳು ಬೇಕಾಗುತ್ತದೆ. ಕಚ್ಚಾಮಾಲಿಗಾಗಿ ಕೃಷಿ ಚಟುವಟಿಕೆಗಳು ಬೆಳೆಯಬೇಕಾಗುತ್ತದೆ. ಹೀಗೆ ಇದೊಂದು ಅಭಿವೃದ್ದಿಯ ವರ್ತುಲವಾಗಿ ಇಡೀ ದೇಶ ಸಂಚಲನಗೊಳ್ಳುತ್ತದೆ. ಮತ್ತು ದೇಶದ ಎಲ್ಲ ಜನರಿಗೆ ನಿಜವಾದ ಅಭಿವೃದ್ಧಿಯ ಫಲ ಸಿಗಲು ಸಾಧ್ಯವಾಗುತ್ತದೆ. ಇದು ಇಂದಿನ ಅಗತ್ಯ. ಅದು ಸಾಧ್ಯವಾದರೆ ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಬಲಿ ತೆತ್ತ ಹಲವಾರು ಮಹಿಳಾ ಚೇತನಗಳ ಕನಸು ನನಸಾದಂತಾಗುತ್ತದೆ. ❑



# ಅಸಂಘಟಿತ ಮಕ್ಕಳ ದುಡಿಮೆ

ಪಿ.ಪಿ. ಬಾಬುರಾಜ್



**ಪೋಷಕರ**
**ಆರ್ಥಿಕ ಮತ್ತು ಸಾಮಾಜಿಕ ಸುರಕ್ಷೆ**
**ಮಕ್ಕಳ ಭವಿಷ್ಯವನ್ನು ನಿರ್ಧರಿಸುತ್ತದೆ.**
**ಕನಿಷ್ಠ ಆದಾಯ, ಕೆಲಸದ ಒತ್ತಡ,**
**ವಿಮೆಯ ಕೊರತೆ,**
**ಆರೋಗ್ಯ ಸೇವೆಗಳ ಅಲಭ್ಯತೆ,**
**ಬಾಡಿಗೆ ಮನೆ**
**ಇತ್ಯಾದಿ ಸಮಸ್ಯೆಗಳು**
**ಪೋಷಕರನ್ನು ಕಾಡುತ್ತಿರುತ್ತವೆ.**
**ಇದು ಮಕ್ಕಳ ಶಿಕ್ಷಣ,**
**ಶಾಂತಿಯುತ ವಾತಾವರಣಕ್ಕೆ**
**ಚ್ಯುತಿ ತರುತ್ತದೆ.**
**ಮಕ್ಕಳ ದುಡಿಮೆ ಎಂದರೆ**
**ಮಕ್ಕಳ ನೇರ ಶೋಷಣೆ ಎಂದರ್ಥ.**
**ಮಕ್ಕಳ ಹಕ್ಕುಗಳ ಉಲ್ಲಂಘನೆ;**
**ಅವರ ಮೇಲೆ ನಡೆಸುವ ಕ್ರೌರ್ಯ.**

ಭಾರತದಲ್ಲಿ ಸುಮಾರು 40 ಕೋಟಿ ಜನ ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆಂದು ಅಂದಾಜಿಸಲಾಗಿದೆ. ಇದರಲ್ಲಿ 12 ಕೋಟಿಯಷ್ಟು ಮಹಿಳೆಯರು. ಅರ್ಜುನ್ ಸೆನ್‌ಗುಪ್ತ ಸಮಿತಿ 2006ರಲ್ಲಿ ಕೇಂದ್ರಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ 34ರಿಂದ 37 ಕೋಟಿ ಕಾರ್ಮಿಕರು ಅಸಂಘಟಿತ ಕ್ಷೇತ್ರದಲ್ಲಿದ್ದಾರೆಂದು ಹೇಳಿದೆ. 28 ಕೋಟಿ ಜನ ಗ್ರಾಮೀಣ ಪ್ರದೇಶಗಳಿಗೆ ಸೀಮಿತ. ಅದರಲ್ಲಿ 22 ಕೋಟಿ ಕೃಷಿಕ್ಷೇತ್ರದಲ್ಲೇ ಇದ್ದಾರೆ. 12 ಕೋಟಿ ಮಹಿಳಾ ಕಾರ್ಮಿಕರಲ್ಲಿ 8 ಕೋಟಿಯಷ್ಟು ಕೃಷಿಯನ್ನೇ ಅವಲಂಬಿಸಿದ್ದಾರೆ. ದೇಶದ ದುಡಿಯುವ ಜನಸಂಖ್ಯೆಯಲ್ಲಿ ಶೇ.92ರಷ್ಟು ಮಂದಿ ಅಸಂಘಟಿತ ಕ್ಷೇತ್ರದಲ್ಲೇ ಇದ್ದಾರೆಂದು ಸೆನ್‌ಗುಪ್ತ ವರದಿ ಅಂದಾಜಿಸಿದೆ. ಈ ವರದಿಯು ದೇಶದ ದುಡಿಯುವ ಜನವಿಭಾಗದ ಕುರಿತು ದಿಕ್ಸೂಚಿಯನ್ನು ನೀಡುತ್ತದೆ. ಕೃಷಿ, ಕಟ್ಟಡ ನಿರ್ಮಾಣ, ಬೀದಿಬದಿ ವ್ಯಾಪಾರ, ಇಟ್ಟಿಗೆ ತಯಾರಿಕೆ, ಮನೆಗೆಲಸ ಮುಂತಾದ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಮಂದಿ ಬಡವರಾಗಿಯೇ ಉಳಿದಿರುತ್ತಾರೆ. ಸಂಘಟಿತ ಕ್ಷೇತ್ರವಲ್ಲದ ಕಾರಣ ಅವರಿಗೆ ಆದಾಯ ಸುರಕ್ಷೆ, ಆರೋಗ್ಯ ಸುರಕ್ಷೆ, ಇತರೆ ಸೌಲಭ್ಯಗಳು ಇರುವುದಿಲ್ಲ. ಇದರಿಂದ ಬಹುತೇಕ ಮಂದಿ ತನ್ನ ಕುಟುಂಬದವರನ್ನು ಕೂಡಾ ತಾನು ಮಾಡಬೇಕಾದ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹೊಲ–ತೋಟದಲ್ಲಿ ದುಡಿಯುವ ತಂದೆ–ತಾಯಿ ಹಿರಿಯರು ಮಕ್ಕಳನ್ನೂ ದುಡಿಯಲು ಒತ್ತಾಯಿಸುವುದು ಸಹಜ. ಗ್ರಾಮೀಣ ಬಡ ಕುಟುಂಬಗಳಲ್ಲಿ ಪ್ರತಿಯೊಬ್ಬರನ್ನೂ ದುಡಿಯುವ ಎರಡು ಕೈಗಳು ಎಂದೇ ಭಾವಿಸುತ್ತಾರೆ. ಮಕ್ಕಳು ಸ್ವಲ್ಪ ದೊಡ್ಡವರಾದರೆ ಸಾಕು, ದುಡಿಯಲು ಅವರು ಬಲಹೊಂದಿದ್ದಾರೆನ್ನುವುದು ಅವರ ಲೆಕ್ಕಾಚಾರ. ಶಿಕ್ಷಣದ ಅಗತ್ಯದ ಬಗ್ಗೆ ಬಹುತೇಕ ಮಂದಿಗೆ ಅರಿವು ಇರುವುದಿಲ್ಲ; ಕಡ್ಡಾಯ ಶಿಕ್ಷಣದಡಿ ಶಾಲೆಗೆ ನೊಂದಾಯಿಸಲ್ಪಟ್ಟರೂ ಮಕ್ಕಳು ಶಾಲೆ ತೊರೆದು ಪೋಷಕರ ಜೊತೆಗೆ ಹೊಲಕ್ಕೆ ಹೋಗುವುದು ಸಾಮಾನ್ಯವಾಗಿದೆ. ಹಲವು ಮಂದಿ ತಮ್ಮದೇ ಸ್ವಂತ ಹೊಲದಲ್ಲಿ ದುಡಿಯುತ್ತಿದ್ದರೂ ಬರಗಾಲದಲ್ಲಿ ಗುಳೆ ಹೋಗುತ್ತಾರೆ. ಸ್ವಂತ ಹೊಲದಲ್ಲಿ ನೀರು ಮತ್ತು ಇತರೆ ಸೌಲಭ್ಯಗಳ ಕೊರತೆಯಿಂದಾಗಿ ತನ್ನ ಕೃಷಿ ಮುಂದುವರಿಸಲಾಗದೆ ಆತ ಕುಟುಂಬ ಸಮೇತ ಪಟ್ಟಣ ಸೇರುತ್ತಾರೆ. ಅಲ್ಲಿ ಕಟ್ಟಡ ನಿರ್ಮಾಣ, ರಸ್ತೆ – ಸೇತುವೆ ನಿರ್ಮಾಣ ಇತ್ಯಾದಿ ಕೆಲಸಗಳಲ್ಲಿ ತಮ್ಮ ಬದುಕು ಕಂಡುಕೊಳ್ಳುತ್ತಾರೆ. ಹಿರಿಯ ಮಕ್ಕಳು ಈ ಕ್ಷೇತ್ರಗಳಲ್ಲಿ ಪೋಷಕರೊಂದಿಗೆ ಕಾರ್ಮಿಕರಾಗಿ ಸೇರ್ಪಡೆಯಾಗುತ್ತಾರೆ. ಶಿಕ್ಷಣ ಮುಂದುವರೆಸುವ ಅವಕಾಶ ಮಕ್ಕಳಿಗೆ ಪಟ್ಟಣದಲ್ಲಿ ಸಿಗುವುದೇ ಇಲ್ಲ. ಕೃಷಿ ಅಸಂಘಟಿತ ಕ್ಷೇತ್ರ. ಈ ಕ್ಷೇತ್ರದಲ್ಲಿ ಅಸಂಖ್ಯಾತ ಮಕ್ಕಳು ದುಡಿಯುತ್ತಿದ್ದಾರೆ. ಆದರೆ ಕೃಷಿ 1986ರ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಹಲವು ಕ್ಷೇತ್ರಗಳನ್ನು ಗುರುತಿಸಿ ಅವುಗಳನ್ನು ಮಕ್ಕಳ ದುಡಿಮೆಯ ನಿಷೇಧಿತ ಕ್ಷೇತ್ರಗಳನ್ನಾಗಿ ಘೋಷಿಸಿದೆ. ಈ ಕಾಯ್ದೆಯಲ್ಲಿ ಗುರುತಿಸಲಾಗಿದ್ದ ದುಡಿಮೆಯ ಕ್ಷೇತ್ರಗಳನ್ನು ಎರಡು ವಿಭಾಗ ಮಾಡಲಾಗಿದೆ: ಭಾಗ ಎ– ಉದ್ಯೋಗಗಳು ಮತ್ತು ಭಾಗ ಬಿ– ಪ್ರಕ್ರಿಯೆಗಳು. ಕಳೆದ 28 ವರ್ಷಗಳಲ್ಲಿ ಈ ವಿಭಾಗಗಳಲ್ಲಿನ ದುಡಿಮೆಯ ಕ್ಷೇತ್ರಗಳು ಹೆಚ್ಚಾಗುತ್ತಾ ಹೋಯಿತು. ಪ್ರಸ್ತುತ ಈ ಕಾಯ್ದೆಯಡಿಯಲ್ಲಿ

ನ್ಯಾಯವಾದಿ ಮತ್ತು ನಿರ್ದೇಶಕರು, ಪೀಪಲ್ಸ್ ಲೀಗಲ್ ಫೋರಂ, ಮೈಸೂರು.

ಗುರುತಿಸಲ್ಪಟ್ಟಿರುವ ಕ್ಷೇತ್ರಗಳು 82. ಈ ಕಾರಣದಿಂದ ನಿಷೇಧಿತ ಕ್ಷೇತ್ರಗಳಲ್ಲಿದ್ದ ಮಕ್ಕಳು ಕೃಷಿಯಂತಹ ನಿಷೇಧಿಸಲ್ಪಡದ ಕ್ಷೇತ್ರಗಳಿಗೆ ವರ್ಗಾವಣೆಗೊಂಡಿದ್ದಾರೆ. ಕೃಷಿ ಬಹಳ ವಿಸ್ತೃತವಾದ ಕ್ಷೇತ್ರ. ಭಾರತದಂತಹ ದೇಶದಲ್ಲಿ ಬಹುತೇಕ ಮಂದಿ ಕೃಷಿಯನ್ನೇ ಆಶ್ರಯಿಸಿ ಬದುಕು ಸಾಗಿಸುತ್ತಿದ್ದಾರೆ. ಕೃಷಿಕಾರ್ಮಿಕರಾಗಿ ದುಡಿಯುವ ವರ್ಗದವರ ಪ್ರಮಾಣ ಹೆಚ್ಚು. ಪೋಷಕರೊಂದಿಗೆ ಕೃಷಿ ಕ್ಷೇತ್ರದಲ್ಲಿ ನಿರಂತರವಾಗಿ ಹೋಗುವ ಮಕ್ಕಳ ಸಂಖ್ಯೆ ಅಪಾರ. ಈ ಕ್ಷೇತ್ರದಲ್ಲಿ ದುಡಿಯುವ ಮಕ್ಕಳ ಅಂಕಿ ಅಂಶಗಳು ಎಲ್ಲಿಯೂ ಲಭ್ಯವಿಲ್ಲ. ಕಾರಣ, ಈ ಕ್ಷೇತ್ರದಲ್ಲಿ ಅಂಕಿ ಅಂಶ ಸಂಗ್ರಹಿಸುವ ಪ್ರಯತ್ನಗಳು ಇನ್ನೂ ನಡೆದಿಲ್ಲ. ಹೊಲ–ತೋಟದಲ್ಲಿ ದುಡಿಯುತ್ತಿರುವ ಮಕ್ಕಳ ಬಗ್ಗೆ ಮಾಹಿತಿ ಕೊಡಲು ಮಾಲಿಕರು ಹಿಂಜರಿಯುತ್ತಾರೆ.

ಮಕ್ಕಳನ್ನು ಕೆಲಸಕ್ಕೆ ನೇಮಿಸುವುದು ಅಪರಾಧವೆನ್ನುವ ಅರಿವು ಸಾಮಾನ್ಯವಾಗಿ ಈಗ ಎಲ್ಲ ಮಾಲಿಕರಲ್ಲೂ ಬಂದಿದೆ. ಆದರೆ, ಮಕ್ಕಳ ದುಡಿಮೆ ಮುಂದುವರೆಯುತ್ತಲೇ ಇದೆ. ಜೀತಪದ್ಧತಿಯೂ ಕೃಷಿ ಕ್ಷೇತ್ರದಲ್ಲಿ ಸಾಮಾನ್ಯವಾಗಿದೆ. ತೋಟದ ಕೆಲಸಕ್ಕಾಗಿ ಮುಂಗಡ ಹಣ ಪಡೆದು ಮಕ್ಕಳನ್ನೇ ಅಡ ಇಡುವ ವ್ಯವಸ್ಥೆಯೂ ಚಾಲ್ತಿಯಲ್ಲಿದೆ. ಈ ಕಾನೂನುಬಾಹಿರ ಚಟುವಟಿಕೆ ದೇಶದ ಅನೇಕ ಕಡೆ ಇನ್ನೂ ಜೀವಂತ ಇದೆ. ಜೀತಪದ್ಧತಿ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆಯೆಂದು ಸರ್ಕಾರ ಬೀಗುತ್ತಿದ್ದರೂ ಅನೇಕ ಕಡೆ ಜೀತದಾಳುಗಳನ್ನು ಪತ್ತೆ ಹಚ್ಚಿ ಬಿಡುಗಡೆ ಮಾಡುವಂತಹ ಕಾರ್ಯಗಳು ಆಗಾಗ್ಗೆ ನಡೆಯುತ್ತಿವೆ. ಜೀತ ಪದ್ಧತಿಗೆ ಬಲಿಯಾಗುವವರಲ್ಲಿ ಮಕ್ಕಳು ಮೊದಲನೆಯವರು. ಗ್ರಾಮೀಣ ಪ್ರದೇಶದಲ್ಲಿನ ಹೋಟೆಲು, ಟೀ ಅಂಗಡಿಗಳಲ್ಲಿಯೂ ಜೀತ ಮಾಡುವ ಮಕ್ಕಳು ಸಿಗುತ್ತಾರೆ. ಮನೆಗೆಲಸದಲ್ಲಿಯೂ ಜೀತ ಪದ್ಧತಿ ಜೀವಂತವಾಗಿದೆ. ಮನೆಗೆಲಸಕ್ಕೆ ಹೆಣ್ಣುಮಕ್ಕಳನ್ನೇ ಅಡ ಇಟ್ಟು ಹಣ ಮುಂಗಡ ಪಡೆಯುವ ಎಷ್ಟೋ ಮಂದಿ ಪೋಷಕರು ಇದ್ದಾರೆ. ಚಿಂದಿ ಆಯುವುದು, ಭಿಕ್ಷಾಟನೆ ಕ್ಷೇತ್ರಗಳಲ್ಲಿ ಮಕ್ಕಳ ಶೋಷಣೆ ಹೊಸತಲ್ಲ. ಈ ಎರಡು ಕ್ಷೇತ್ರಗಳನ್ನೂ ಇತ್ತೀಚೆಗೆ ಗುರುತಿಸಿ ಅಪಾಯಕಾರಿ ಕ್ಷೇತ್ರಗಳು ಎಂದು ಬಾಲಕಾರ್ಮಿಕ ನಿಷೇಧ ಕಾಯ್ದೆಯಡಿ ಸೇರಿಸಲಾಗಿದೆ.

**ಮನೆಗೆಲಸದಲ್ಲಿನ ಮಕ್ಕಳ ಪಾಡು**

ಮನೆಗೆಲಸದಲ್ಲಿ ದುಡಿಯುವ ಮಕ್ಕಳ ಪಾಡು ಹೇಳತೀರದು. ಇವರಲ್ಲಿ ಎರಡು ವಿಭಾಗಗಳಿವೆ: ಮನೆಯಲ್ಲಿದ್ದು ದುಡಿಯುವವರು ಮತ್ತು ಸ್ವಂತ ಮನೆಯಿಂದ ದಿನಾಲೂ ಬಂದು ವಾಪಸ್ಸಾಗುವವರು. ಮನೆಯಲ್ಲಿದ್ದು ದುಡಿಯುವ ಮಕ್ಕಳು ಎದುರಿಸುವ ಸಮಸ್ಯೆಗಳು ಅನೇಕ. ಇವರ ಕೆಲಸಕ್ಕೆ ಯಾವುದೇ ಮಿತಿ ಇರುವುದಿಲ್ಲ. ವೇಳಾ ಪಟ್ಟಿ ಇಲ್ಲವೇ ಇಲ್ಲ. ಮಾಲಿಕರು ಹೇಳುವ ಎಲ್ಲ ಕೆಲಸಕ್ಕೂ ಸಿದ್ಧವಿರಬೇಕು. ಆಕೆಯ ದಿನ ಬೆಳಿಗ್ಗೆ ಸಮಾರು 5 ಗಂಟೆಗೆ ಪ್ರಾರಂಭ. ಮುಕ್ತಾಯವಾಗುವುದು ರಾತ್ರಿ 11 ಅಥವಾ 12. ಕನಿಷ್ಠ ಸೌಕರ್ಯಗಳೊಂದಿಗೆ ಆಕೆಯು ಮನೆಯೊಳಗೆ ಬಂದಿಯಾಗಿರುತ್ತಾಳೆ. ಬಹುತೇಕ ದಿನಗಳಲ್ಲಿ ಆಕೆಗೆ ತಂಗಳನ್ನವೇ. ಮನೆ ಗುಡಿಸುವುದು, ಒರೆಸುವುದು, ಪಾತ್ರೆಗಳನ್ನು ತೊಳೆಯುವುದು, ಬಟ್ಟೆ ಒಗೆಯುವುದು, ಅಡುಗೆ ಮಾಡುವುದು, ನಾಯಿಯನ್ನು ಓಡಾಡಿಸುವುದು, ಮಕ್ಕಳನ್ನು ಶಾಲೆಗೆ ತಯಾರು ಮಾಡುವುದು, ಕಾರು ಅಥವಾ ಬೈಕ್ ತೊಳೆಯುವುದು, ಸಾಕು ಪ್ರಾಣಿಗಳಿಗೆ ತಿಂಡಿ ತಿನ್ನಿಸಿ ಗೂಡು ಶುಚಿಗೊಳಿಸುವುದು, ಅಂಗಡಿಯಿಂದ ಸಾಮಾನು ತರುವುದು, ನೆಂಟರಿಷ್ಟರು ಬಂದರೆ ಅವರಿಗೆ ಉಪಚಾರ ಮಾಡುವುದು...ಹೀಗೆ ಆಕೆಯ ಕೆಲಸದ ಪಟ್ಟಿ ಮುಂದುವರೆಯುತ್ತದೆ. ಹಿರಿಯ ಕಾರ್ಮಿಕರಿಗೆ ದೊರಕುವ ವಾರದ ರಜೆ ಇವರಿಗೆ ಯಾರೂ ದಯಪಾಲಿಸಿರುವುದಿಲ್ಲ. ಯಾವುದೇ ಸಂಘಟನೆಯ ಸದಸ್ಯರಲ್ಲದ ಕಾರಣ ಅದನ್ನು ಕೇಳಲು ಮಕ್ಕಳಿಗೆ ಆಗುತ್ತಿಲ್ಲ. ಸಂಘಟನೆಗಳ ಸದಸ್ಯರಾಗಬೇಕೆಂದರೆ ಕನಿಷ್ಠ 18 ವರ್ಷವಾಗಿರಬೇಕು ಎನ್ನುವುದು ಇವರ ಮಿತಿಯಾಗಿದೆ. 18ರೊಳಗೆ ಇರುವುದರಿಂದ ಯಾವುದೇ ಪಕ್ಷಗಳಿಗೆ, ಕಾರ್ಮಿಕ ಸಂಘಟನೆಗಳಿಗೆ ಇವರ ನರಕ ಸಮಾನ ಬದುಕಿನಲ್ಲಿ, ಹಕ್ಕುಗಳ ಪ್ರತಿಪಾದನೆಯಲ್ಲಿ ಆಸಕ್ತಿ ಇಲ್ಲ.

ಮನೆಯ ನಾಲ್ಕು ಗೋಡೆ ಮಧ್ಯೆ ನಡೆಯುವುದು ಹೊರ ಪ್ರಪಂಚಕ್ಕೆ ತಿಳಿಯುವುದೇ ಇಲ್ಲ. ಮನೆಗೆಲಸದಲ್ಲಿರುವ ಹೆಣ್ಣುಮಕ್ಕಳ ಮೇಲೆ ಮನೆಮಾಲಿಕರಿಂದಲೇ ಲೈಂಗಿಕ ದೌರ್ಜನ್ಯಗಳು ನಡೆಯುತ್ತವೆ. ಮಾಲಿಕರಲ್ಲದೆ, ಅವರ ಮಕ್ಕಳು ಅಥವಾ ನೆಂಟರಿಷ್ಟರಿಂದಲೂ ಲೈಂಗಿಕ



ಕಿರುಕುಳಕ್ಕೆ ತುತ್ತಾಗುತ್ತಾರೆ. ಅದನ್ನು ಪ್ರತಿಭಟಿಸಲಾಗದ ಪರಿಸ್ಥಿತಿಯಲ್ಲಿ ಆಕೆ ಇರುತ್ತಾಳೆ. ಕೆಲವು ವರ್ಷಗಳ ಹಿಂದೆ ಮೈಸೂರಿನಲ್ಲಿ ಮನೆಯೊಂದರಲ್ಲಿ 14 ವರ್ಷದ ಮನೆಗೆಲಸದ ಹೆಣ್ಣುಮಗಳೊಬ್ಬಳು ಆತ್ಮಹತ್ಯೆಗೆ ಶರಣಾಗಿದ್ದಳು. ತನಿಖೆಯಲ್ಲಿ ಆಕೆ 3 ತಿಂಗಳ ಗರ್ಭಿಣಿ ಎಂದು ತಿಳಿಯಿತು. ಮನೆಗೆಲಸದಲ್ಲಿದ್ದ ಬಾಲಕಿಯರ ಅನುಮಾನಾಸ್ಪದ ಸಾವುಗಳು ಹಲವು ಬಾರಿ ವರದಿಯಾಗಿವೆ. ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ (ಸಿಎಸಿಎಲ್), ಕರ್ನಾಟಕ ಘಟಕ ಇಂತಹ ಹಲವು ಪ್ರಕರಣಗಳನ್ನು ದಾಖಲಿಸಿದೆ. ಘಟಿಸಿದ ಎಲ್ಲ ಸಾವುಗಳೂ ಆತ್ಮಹತ್ಯೆಯಾಗಿಯೇ ವರದಿಯಾಗಿದ್ದವು. ಯಾವುದೇ ಮಾಲಿಕ ಇದುವರೆಗೆ ಬಂಧನಕ್ಕೊಳಗಾಗಲಿಲ್ಲ ಎನ್ನುವುದು ವಿಪರ್ಯಾಸ.

ಬೆಂಗಳೂರಿನ ಮನೆಯೊಂದರಲ್ಲಿ ಕೆಲಸಕ್ಕಿದ್ದ ಬಾಲಕಿಯನ್ನು ಮನೆಯೊಡತಿ ಮೈಮೇಲೆ ಕಚ್ಚಿ ಗಾಯಗೊಳಿಸಿದ ಘಟನೆ ಎರಡು ವರ್ಷಗಳ ಹಿಂದೆ ವರದಿಯಾಗಿತ್ತು. ಇದಲ್ಲದೆ, ಆಕೆಯನ್ನು ಹೊಡೆದ ಪರಿಣಾಮ ಬಾಸುಂಡೆಗಳು ಎದ್ದಿದ್ದವು. ಇಂತಹ ಘಟನೆಗಳು ಕೂಡಾ ಸಾಕಷ್ಟು ವರದಿಯಾಗಿವೆ. ರೆಫ್ರಿಜರೇಟರಿನಲ್ಲಿದ್ದ ಸಿಹಿತಿಂಡಿ ತೆಗೆದು ತಿಂದ ಮನೆಗೆಲಸದ ಬಾಲಕನ ಕೈಯನ್ನೇ ಸುಟ್ಟು ಗಾಯಗೊಳಿಸಿದ ಘಟನೆ ಹಾಸನದಿಂದ ವರದಿಯಾಗಿತ್ತು. ಮನೆಗೆಲಸದ ಮಕ್ಕಳು ತಪ್ಪುಗಳನ್ನು ಎತ್ತಿ ತೋರಿಸಿ ಅವರ ಮೇಲೆ ಕ್ರೌರ್ಯ ಎಸಗಿರುವ ಅನೇಕ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿವೆ. ಇದಲ್ಲದೆ, ಮನೆಯೊಳಗೆ ಯಾವುದೇ ಪದಾರ್ಥ ಕಾಣೆಯಾದರೆ ಕೂಡಲೇ ಮನೆಗೆಲಸದವರು ಅನುಮಾನಕ್ಕೆ ಗುರಿಯಾಗುತ್ತಾರೆ. ಪೊಲೀಸರಿಗೆ ದೂರು ಕೊಟ್ಟು ಮೊಕದ್ದಮೆ ದಾಖಲಿಸಿರುವ ಪ್ರಕರಣಗಳೂ ಇವೆ. ತಮ್ಮ ಮನೆಯಿಂದ ಕೆಲಸಕ್ಕೆ ಹೋಗಿ ಬರುವ

ಮಕ್ಕಳು ಹೆಚ್ಚು ಸ್ವಾತಂತ್ರ್ಯ ಅನುಭವಿಸುತ್ತಾರೆ. ಮನೆಮಾಲೀಕ ಏನಾದರೂ ಕೆಟ್ಟರೀತಿಯಲ್ಲಿ ವರ್ತಿಸಿದರೆ ಆ ಮನೆ ಬಿಟ್ಟು ಬೇರೆ ಮನೆ ಹುಡುಕುವ ಸ್ವಾತಂತ್ರ್ಯವಿರುತ್ತದೆ. ಆದರೆ, ಜೀತ ಮಾಡುವ ಮಕ್ಕಳಿಗೆ ಅದು ಕನಸು ಮಾತ್ರ. ಮನೆಗೆಲಸದಲ್ಲಿ ತೊಡಗಿರುವವರಿಗೆ ಸಮಾನವಾದ ಕೂಲಿ ಇರುವುದಿಲ್ಲ. ತಿಂಗಳಿಗೆ ರೂ.150ರಿಂದ 1500ರ ವರೆಗೆ ದುಡಿಯುವ ಮಕ್ಕಳಿದ್ದಾರೆ. ಮಾಲೀಕರು ಮತ್ತು ಮಕ್ಕಳ ಪೋಷಕರ ಮಧ್ಯೆ ಈ ಒಪ್ಪಂದ ಆಗುತ್ತದೆ. ಮನೆಗೆಲಸದವರ ಸಂಘಟನೆ ಅಲ್ಲಲ್ಲಿ ಹುಟ್ಟಿಕೊಂಡಿದೆಯಾದರೂ ಮನೆಗೆಲಸದವರ ಬದುಕಿನಲ್ಲಿ ಅದು ಹೆಚ್ಚೇನೂ ಪ್ರಭಾವ ಬೀರಲಿಲ್ಲ. 2008ರಲ್ಲಿ ಮೈಸೂರು ನಗರದಲ್ಲಿ ನಡೆಸಿದ ಅಧ್ಯಯನವೊಂದರಲ್ಲಿ 26 ಮನೆಗೆಲಸದವರನ್ನು ಪತ್ತೆ ಹಚ್ಚಿದೆ. ಎಲ್ಲರೂ ಹೆಣ್ಣುಮಕ್ಕಳು. ಶಾಲೆಗೆ ಹೋಗುವವರು. ಬೆಳಿಗ್ಗೆ 6 ಗಂಟೆಗೆ ಅವರ ದುಡಿಮೆ ಪ್ರಾರಂಭವಾಗುತ್ತದೆ. ಎರಡು ಮನೆಗಳ ಕೆಲಸ ಮುಗಿಸಿ ವಾಪಸ್ಸು ಬಂದು ಶಾಲೆಗೆ ಹೊರಡುವುದು. ಸಂಜೆ ಬಂದು ಇನ್ನೊಂದು ಮನೆಗೆ. ತಿಂಗಳಿಗೆ ಅವರ 'ಸಂಬಳ' ರೂ.400ರಿಂದ 500. ಇವರಿಗೆ ಮಾಲಿಕರ ಹೆಸರೇ ತಿಳಿಯದು. ಅವರ ಕಸುಬು ಏನೆಂದಲೂ ಗೊತ್ತಿಲ್ಲ. ಆಂಟಿ ಎಂದಲ್ಲದೆ ಮನೆಯೊಡತಿಯ ಹೆಚ್ಚಿನ ಪರಿಚಯವೂ ಇಲ್ಲ. ಶಾಲೆಗೆ ಹೋಗುತ್ತಿದ್ದರೂ ಬಹುತೇಕ ದಿನಗಳು ಮಕ್ಕಳು ಹೊರಗುಳಿಯುತ್ತಾರೆ. ಈ ಮಕ್ಕಳ ತಾಯಂದಿರು ಎಲ್ಲರೂ ಮನೆಗೆಲಸದವರೇ. ಇವರಿಗೆ ಬೇರೆ ಯಾವುದೇ ಕೌಶಲ್ಯಗಳ ಅರಿವಿಲ್ಲ. ಮಕ್ಕಳಿಗೂ ಕೂಡಾ ಇದೇ ಕಸುಬನ್ನು ಕಲಿಸುತ್ತಾರೆ. ಕ್ರಮೇಣ, ಮಕ್ಕಳು ಬೆಳೆಯುತ್ತಿದ್ದಂತೆ ಶಾಲೆ ತೊರೆಯುತ್ತಾರೆ ಮತ್ತು 'ಫುಲ್‌ಟೈಂ' ಮನೆಗೆಲಸದವರಾಗಿ ಮಾರ್ಪಡುತ್ತಾರೆ. ಮೋಟಾರ್ ಗ್ಯಾರೇಜುಗಳು ಕೂಡಾ ಮಕ್ಕಳನ್ನು ನೇಮಿಸಿಕೊಳ್ಳುವ ಪ್ರಬಲ ಕ್ಷೇತ್ರ. ಮಾಲಿಕ ದಯಪಾಲಿಸುವ ಎರಡು ಟೀಯಲ್ಲಿ ದಿನ ಕಳೆಯುವಂತಹ ಬಾಲಕಾರ್ಮಿಕರು ಇದ್ದಾರೆ. ಅನುಭವ ಪಡೆದ ಮೇಲೆ ಇವರು ಆದಾಯ ಗಳಿಸಲು ಪ್ರಾರಂಭಿಸುತ್ತಾರೆ.

### ಕೃಷಿಕಾರ್ಮಿಕರಾಗಿ ಮಕ್ಕಳು

ಕೃಷಿ ಕ್ಷೇತ್ರವನ್ನು ಸರ್ಕಾರ ಅಪಾಯಕಾರಿ ಕ್ಷೇತ್ರವೆಂದು ಇನ್ನೂ ಗುರುತಿಸಿರುವುದಿಲ್ಲ. ಈ ಕಾರಣದಿಂದ ಹೆಚ್ಚಿನ ಪ್ರಮಾಣದಲ್ಲಿ ಮಕ್ಕಳು ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಹತ್ತಿ ತೋಟಗಳಲ್ಲಿ ಮಕ್ಕಳ ಸಂಖ್ಯೆ ಅಪಾರ ಪ್ರಮಾಣದಲ್ಲಿದೆ. ರಾಯಚೂರು, ಕೊಪ್ಪಳ ಜಿಲ್ಲೆಗಳಿಂದ ಆಂಧ್ರಪ್ರದೇಶದ ಗಡಿ ಜಿಲ್ಲೆಗಳಿಗೆ ಕಾರ್ಮಿಕರಾಗಿ ಮಕ್ಕಳು ಗುಳೆ ಹೋಗುತ್ತಾರೆ. ಕಬ್ಬು ಖಟಾವಿನ ಸಂದರ್ಭದಲ್ಲಿ ಅನೇಕ ಸಂಖ್ಯೆಯಲ್ಲಿ ಮಕ್ಕಳು ಗದ್ದೆಗೆ ಇಳಿಯುವುದುಂಟು. ಹೂ ಕೀಳುವ ವೇಳೆಯಲ್ಲೂ ಮಕ್ಕಳ ಬಳಕೆ ಸಾಮಾನ್ಯ. ಆಗ ಎಲ್ಲ ಶಾಲೆಗಳಲ್ಲೂ ಹಾಜರಿ ಬಹುತೇಕ ಶೂನ್ಯ. ಕೃಷಿಯಲ್ಲಿ ಬಳಸುವ ಕೀಟನಾಶಕಗಳು, ರಸಾಯನಿಕಗಳು, ಯಂತ್ರಗಳು ಮಕ್ಕಳ ಪಾಲಿಗೆ ಅಪಾಯಕಾರಿಯೇ. ಬೆಳೆಗೆ ಬಳಸುವ ಕೀಟನಾಶಿನಿ ವಿಷವಲ್ಲದೆ ಬೇರೇನಲ್ಲ. ಮಕ್ಕಳ ಕೈಯಲ್ಲೇ ಇದನ್ನು ಸಿಂಪಡಿಸುವುದು ಸಾಮಾನ್ಯ. ರಸಾಯನಿಕಗಳನ್ನು ತನ್ನ ಬರಿಗೈಯಲ್ಲೇ ತೆಗೆದು ಗಿಡಗಳಿಗೆ ಹಾಕುವಾಗ ಮಕ್ಕಳು ವಿಷಪ್ರಾಶನಕ್ಕೆ ಒಳಗಾಗುತ್ತಾರೆ. ಟ್ರ್ಯಾಕ್ಟರುಗಳಿಗೆ ಸಿಲುಕಿ ಅಕಾಲ ಸಾವನ್ನಪ್ಪಿದ ಮಕ್ಕಳ ಕಥೆಗಳೂ ಇವೆ. ಕೃಷಿ ಕ್ಷೇತ್ರವನ್ನು ಬಾಲಕಾರ್ಮಿಕ ನಿಷೇಧ ಕಾಯ್ದೆಯ ಅಪಾಯಕಾರಿ ಪಟ್ಟಿಯಲ್ಲಿ ಸೇರಿಸಬೇಕೆಂಬ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ)ಯ ಬೇಡಿಕೆಗೆ ಸರ್ಕಾರ ಇನ್ನೂ ಕಿವಿಕೊಡಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಐಎಲ್‌ಒ ಅನೇಕ ದೇಶಗಳಲ್ಲಿ ಅಧ್ಯಯನ ನಡೆಸಿದೆ ಮತ್ತು ವರದಿಗಳನ್ನು ಸರ್ಕಾರಗಳಿಗೆ ಸಲ್ಲಿಸಿದೆ. ಕೃಷಿ ಕ್ಷೇತ್ರದಲ್ಲಿನ ಮಕ್ಕಳ ದುಡಿಮೆಯ ಬಗ್ಗೆ ರೈತ ಸಂಘಟನೆಗಳು ಕೂಡಾ ಈವರೆಗೆ ಸೊಲ್ಲೆತ್ತಿಲ್ಲ.

### ಕಟ್ಟಡ ನಿರ್ಮಾಣದಲ್ಲಿ ಮಕ್ಕಳು

ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ ಮಕ್ಕಳ ಸಂಖ್ಯೆಯೂ ಕಡಿಮೆಯೇನಲ್ಲ. ರಸ್ತೆ, ಚರಂಡಿ, ಡಾಂಬರು, ಬಹುಮಹಡಿ ಕಟ್ಟಡಗಳು, ಸೇತುವೆ, ಕ್ರೀಡಾಂಗಣ ಮುಂತಾದ ಕಾಮಗಾರಿಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲಾಗುತ್ತಿದೆ. ಮಕ್ಕಳಿಗೆ ಅಪಘಾತಗಳು ತಪ್ಪಿದ್ದಲ್ಲ. ಕೈಕಾಲು ಮುರಿದು ಆಸ್ಪತ್ರೆ ಸೇರಿದ ಮಕ್ಕಳಿಗೆ ಸಂಘಟಿತ ಕ್ಷೇತ್ರದ ಕಾರ್ಮಿಕರಂತೆ ಯಾವುದೇ ಸೌಲಭ್ಯಗಳೂ ದೊರೆಕುವುದಿಲ್ಲ. ಬಹಳಷ್ಟು ಮಕ್ಕಳು ತಮ್ಮ ಪೋಷಕರೊಂದಿಗೆ ಕೆಲಸಕ್ಕೆ ಬರುತ್ತಾರೆ. ಕೆಲಸಕ್ಕಿಟ್ಟುಕೊಳ್ಳುವ ಗುತ್ತಿಗೆದಾರರು ಅವರಿಗೆ ಇತರರಿಗಿಂತ ಕಡಿಮೆ ಕೂಲಿಯೇ ನೀಡುತ್ತಾರೆ. ಬಿಸಿಲಿನ ಬೇಗೆಯಲ್ಲಿ ಬೆಂದು ಹೋಗುವ ಮಕ್ಕಳು ಬೇಗನೇ ರೋಗಗಳಿಗೆ



ತುತ್ತಾಗುತ್ತಾರೆ. ಬೀದಿಬದಿ ವ್ಯಾಪಾರವೂ ಮಕ್ಕಳ ಪಾಲಿಗೆ ಆದಾಯದ ಮಾರ್ಗ. ಶಾಲೆಯಿಂದ ಬಂದ ಮೇಲೆ ಈ ಕಲೆಸಕ್ಕೆ ಹೋಗುವ ಅನೇಕ ಮಕ್ಕಳಿದ್ದಾರೆ. ತರಕಾರಿ, ಬಲೂನ್, ಆಟಸಾಮಾನುಗಳು, ಗುಟಕಾ, ಕಡಲೆಕಾಯಿ, ಹಣ್ಣುಗಳು, ಪಾನಿಪುರಿ ಮುಂತಾದ ಪದಾರ್ಥಗಳನ್ನು ಮಾರಾಟ ಮಾಡುತ್ತಾ ಒಂದಷ್ಟು ಸಂಪಾದನೆ ಮಾಡುತ್ತಾರೆ. ಮಾಲಿಕನ ಪರವಾಗಿ ಕೂಲಿಗೆ ವ್ಯಾಪಾರ ಮಾಡುವವರೂ ಇದ್ದಾರೆ.

### ಹೋಟೇಲು/ಟೀ ಅಂಗಡಿಯಲ್ಲಿ ಮಕ್ಕಳು

ಹೋಟೇಲುಗಳ ಮಾಲಿಕರು ಈಗ ಎಚ್ಚರಗೊಂಡು ಸಂಘಗಳನ್ನು ಮಾಡಿದ ಮೇಲೆ ಬಾಲಕಾರ್ಮಿಕರನ್ನು ಸಂಪೂರ್ಣವಾಗಿ ಹೊರಗಿಟ್ಟಿದ್ದಾರೆ. ಆದರೆ, ಇದು ಸಂಘದ ಸದಸ್ಯರು ಮಾತ್ರ ಪಾಲಿಸುತ್ತಿದ್ದಾರೆ. ಸಂಘಟಿತ ಹೋಟೇಲ್ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ಇಲ್ಲ ಎಂದೇ ಹೇಳಬಹುದು. ಆದರೆ, 14 ವರ್ಷಕ್ಕಿಂದ ದೊಡ್ಡವರನ್ನು ನೇಮಿಸಲಾಗುತ್ತದೆ. 2000ನೇ ಇಸವಿಯ ಬಾಲನ್ಯಾಯ ಕಾಯ್ದೆ ಪ್ರಕಾರ 18 ವರ್ಷದೊಳಗಿನವರೆಲ್ಲರೂ ಮಕ್ಕಳು. ಈ ಕಾಯ್ದೆ ಪ್ರಕಾರ ಮಕ್ಕಳ ದುಡಿಮೆ ನಿಷೇಧಿಸಲಾಗಿದೆ. ಮೂರು ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದಾದಂತಹ ಅಪರಾಧ. ಸಂಘದಲ್ಲಿ ಸದಸ್ಯರಲ್ಲದ ಸಣ್ಣ ಹೋಟೇಲುಗಳು ಮತ್ತು ಬೀದಿಬದಿ ಟೀ ಅಂಗಡಿಗಳು ಇನ್ನೂ ಮಕ್ಕಳನ್ನಿಟ್ಟುಕೊಂಡಿದ್ದಾರೆ. ಹೋಟೇಲಿನಲ್ಲಿ ಮಕ್ಕಳಿಗೆ ಆಹಾರಕ್ಕೇನೂ ಕೊರತೆಯಿಲ್ಲ. ಕೂಲಿಯೂ ಪರವಾಗಿಲ್ಲ. ಆದರೆ, ಬಿಡುವಿಲ್ಲದ ಕೆಲಸ. ಕೆಲಸದ ನಡುವೆ ವಿಶ್ರಾಂತಿ ನೀಡಬೇಕೆನ್ನುವುದು ಬಾಲಕಾರ್ಮಿಕ ನಿಷೇಧ ಕಾಯ್ದೆಯಲ್ಲಿ ಹೇಳಿದರೂ ಅದು ಎಲ್ಲಿಯೂ ನಡೆಯುತ್ತಿಲ್ಲ. ರಾತ್ರಿವೇಳೆಯಲ್ಲಿ ಮಕ್ಕಳ ಮೇಲೆ ಹಿರಿಯ ಕಾರ್ಮಿಕರ ಲೈಂಗಿಕ ಕಿರುಕುಳಗಳು ನಡೆಯುತ್ತದೆ. ಹೊಟೆಲುಗಳಲ್ಲಿ ಕೆಲಸ ಮಾಡುವವರಲ್ಲಿ

ಸಲಿಂಗರತಿ ಸಾಮಾನ್ಯವಾಗಿದೆ. ಮಕ್ಕಳು ಇದರ ಮೊದಲನೆಯ ಬಲಿಪಶುಗಳು. ಇದಲ್ಲದೆ, ಹೊಟೆಲಿನ ಮಾಲಿಕನ ಮನೆಯಲ್ಲಿ ಕೂಡಾ ಕೆಲಸಗಳು ಪೂರೈಸಬೇಕಾಗಿರುತ್ತದೆ. ಮಾಲಿಕರ ವಾಹನ ತೊಳೆಯುವುದು, ಮನೆಗೆ ಸಾಮಾನುಗಳನ್ನು ಸಾಗಿಸುವುದು, ನಾಯಿಯನ್ನು ಶುಚಿಗೊಳಿಸುವುದು ಮುಂತಾದವು ಕೂಡಾ ಬಾಲಕಾರ್ಮಿಕರ ಕೆಲಸದಲ್ಲಿ ಸೇರುತ್ತವೆ. ರಸ್ತೆಬದಿ ಡಾಬಾಗಳಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳ ಮೇಲೆ ಅಲ್ಲಿ ಬರುವ ಗಿರಾಕಿಗಳಿಂದ ಲೈಂಗಿಕ ದೌರ್ಜನ್ಯಗಳು ನಡೆಯುತ್ತವೆ. ಲಾರಿ ಚಾಲಕರು ಇಂತಹ ಮಕ್ಕಳನ್ನು ತಮ್ಮ ಲೈಂಗಿಕ ತೃಷೆಗೆ ಬಳಸಿಕೊಂಡಿರುವ ಪ್ರಕರಣಗಳು ಮಕ್ಕಳ ಮೂಲಕವೇ ಬಹಿರಂಗಗೊಂಡಿವೆ. ಮಕ್ಕಳ ಮಾರಾಟಜಾಲವೂ ಈ ಕ್ಷೇತ್ರದಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿನ ಸಂಕಷ್ಟದಲ್ಲಿರುವ ಮಕ್ಕಳನ್ನು ಪಟ್ಟಣಕ್ಕೆ ತಂದು ಹೊಟೇಲಿನಲ್ಲಿ ಸೇರಿಸುವಾಗ ಏಜಂಟರಿಗೆ ಹಣ ಬರುತ್ತದೆ. ಒಂದು ವರ್ಷದಲ್ಲಿ ಆತ ಬಾಲಕನನ್ನು ಅಲ್ಲಿಂದ ಬಿಡಿಸಿ ಇನ್ನೊಂದು ಹೊಟೇಲಿಗೆ ಸೇರಿಸಿ ಅಲ್ಲಿಂದಲೂ ಕಮಿಶನ್ ಪಡೆಯುತ್ತಾನೆ. ಹೀಗೆ ಹಲವು ಮಕ್ಕಳಿದ್ದರೆ, ಆತನ ದಂಧೆ ಸುಗಮವಾಗಿ ಸಾಗುತ್ತದೆ.

## ವಯೋಮಾನದ ಬಿಕ್ಕಟ್ಟು

1986ರ ಬಾಲಕಾರ್ಮಿಕ ನಿಷೇಧ ಕಾಯ್ದೆ ಪ್ರಕಾರ ಮಕ್ಕಳ ವಯಸ್ಸಿನ ಮಿತಿ 14 ವರ್ಷ. ಆದರೆ, 2000ದಲ್ಲಿ ಜಾರಿಯಾದ ಬಾಲನ್ಯಾಯ ಕಾಯ್ದೆ ಪ್ರಕಾರ 18 ವರ್ಷದೊಳಗಿನ ಮಕ್ಕಳನ್ನು ದುಡಿಸುವುದು 3 ವರ್ಷದ ಜೈಲು ಶಿಕ್ಷೆಗೊಳಗಾಗುವಂತಹ ಅಪರಾಧ. ದಂಡವೂ ವಿಧಿಸಬಹುದು. ವಿಶ್ವಸಂಸ್ಥೆಯ 1989ರ ಮಕ್ಕಳ ಹಕ್ಕುಗಳ ಒಡಂಬಡಿಕೆ ಪ್ರಕಾರ ಮಗುವೆಂದರೆ 18 ವರ್ಷಗೊಳಗಿನ ವ್ಯಕ್ತಿ ಎಂದಾಗಿದೆ. ಭಾರತ ಸರ್ಕಾರ ಈ ಒಡಂಬಡಿಕೆಗೆ ಸಹಿ ಹಾಕಿ, ಇದೇ ಮಾದರಿಯಲ್ಲಿ ನಮ್ಮ ದೇಶದಲ್ಲಿ ಕಾಯ್ದೆ, ನೀತಿ, ಯೋಜನೆಗಳು ರೂಪಿಸಲಾಗುವುದು ಎಂದು ಒಪ್ಪಿಕೊಂಡಿದೆ. ಅದರ ಪ್ರಕಾರ ಬಾಲನ್ಯಾಯ ಕಾಯ್ದೆ ಜಾರಿಯಾಯಿತು. ಆದರೆ, ಬಾಲಕಾರ್ಮಿಕ ಕಾಯ್ದೆ ಮಾತ್ರ ಯಾವುದೇ ಬದಲಾವಣೆಯಾಗದೆ ಹಾಗೆಯೇ ಮುಂದುವರೆದಿದೆ. ಬಾಲಕಾರ್ಮಿಕ ಪದ್ಧತಿಯನ್ನು ಪ್ರಶ್ನಿಸುವ ಸಂದರ್ಭದಲ್ಲಿ ಕಾನೂನಿನಲ್ಲಿರುವ ಈ ವೈರುಧ್ಯವು ಮಕ್ಕಳ ರಕ್ಷಣೆಯಲ್ಲಿ ತೊಡಕಾಗುತ್ತದೆ. ಬಾಲಕಾರ್ಮಿಕ ನಿಷೇಧ ಕಾಯ್ದೆಯನ್ನು ಒಡಂಬಡಿಕೆಯ ತಕ್ಕಂತೆ ತಿದ್ದುಪಡಿ ಮಾಡಿ ಕೂಡಲೇ ಜಾರಿಯಾದರೆ ಅನೇಕ ಮಕ್ಕಳನ್ನು ದುಡಿಮೆಯ ಸಂಕೋಲೆಯಿಂದ ರಕ್ಷಿಸಲು ಸಾಧ್ಯವಾಗುತ್ತದೆ. 14ರಿಂದ 18 ವರ್ಷದೊಳಗಿನ ಮಕ್ಕಳು ಹೆಚ್ಚು ಶೋಷಣೆಗೊಳಗಾಗುವಂತಹವರು. ಈ ವಯೋಮಾನದವರಿಗೆ 8ನೇ ತರಗತಿ ನಂತರ ಶಾಲೆ ಮುಂದುವರೆಸುವುದು ಅಸಾಧ್ಯವಾಗುತ್ತದೆ. ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ 6ರಿಂದ 14 ವರ್ಷದ ವರೆಗೆ ಮಾತ್ರ ಶಾಲಾ ಶಿಕ್ಷಣ ಉಚಿತವಾಗಿ ಪಡೆಯಬಹುದು. ನಂತರ, ಮಕ್ಕಳು ಶುಲ್ಕ ಪಾವತಿಸಿ ಕಲಿಯಬೇಕು. ಖಾಸಗಿ ಶಾಲೆಗಳಲ್ಲಿ ಶುಲ್ಕವಿಲ್ಲದೆ ಮುಂದುವರೆಯಲಾಗದು. ಅಂತಹ ಸಂದರ್ಭದಲ್ಲಿ ಶಾಲೆ ತೊರೆದು ಯಾವುದಾದರೂ ಕೆಲಸಕ್ಕೆ ಹೋಗುವುದೊಂದೇ ದಾರಿ. ಆಗ ಇವರು ಆಯ್ಕೆ ಮಾಡುವುದು ಪ್ರಮುಖವಾಗಿ ಊರಿನಲ್ಲಿರುವ ಹೊಲ-ತೋಟಗಳು.

## ಹೊಸ ಆರ್ಥಿಕ ನೀತಿಯ ಪರಿಣಾಮ


ಹೊಸ ಆರ್ಥಿಕ ನೀತಿಯ ಜಾಗತೀಕರಣ ಮತ್ತು ಖಾಸಗೀಕರಣದ ಪರಿಣಾಮವಾಗಿ ಅನೇಕರು ಉದ್ಯೋಗ ಕಳೆದುಕೊಂಡರು. ಕಾಯಂ ನೌಕರರ ಸಂಖ್ಯೆ ಕಡಿತಗೊಳಿಸಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸುವ ಕಾರ್ಯಕ್ಕೆ ಮಾಲೀಕರು ಮುಂದಾದರು. ಇದರ ಪರಿಣಾಮವಾಗಿ ಹುಟ್ಟಿಕೊಂಡ 'ಪೀಸ್ ವರ್ಕ್' ಅನೇಕರು ಒಪ್ಪಿಕೊಂಡಿರುವ ಪದ್ಧತಿ. ಇದರಿಂದ ಮನೆ ಮನೆ ಕಾರ್ಖಾನೆಯಾಗಿದೆ. ಎಲ್ಲರೂ ದುಡಿದರೆ ಹೆಚ್ಚು ಆದಾಯ. ಮನೆಯಲ್ಲಿರುವವರೆಲ್ಲರೂ ಕಾರ್ಮಿಕರಾದರು. ಮಕ್ಕಳೂ ಇದರ ಬಲಿಪಶುಗಳಾದರು. ಇದಕ್ಕೆ ಯಾವುದೇ ಸಾಮಾಜಿಕ ಸುರಕ್ಷೆ ಇಲ್ಲ. ಮಾಲೀಕರಿಗೆ ಯಾವುದೇ ಬದ್ಧತೆಯೂ ಇಲ್ಲ. ಉತ್ಪನ್ನಗಳನ್ನು ತಯಾರಿಸಿಕೊಡುವುದು ಒಬ್ಬ ದಲ್ಲಾಳಿಗೆ. ಆತನಿಂದ ಅದು ಕಂಪೆನಿ ಕೊಂಡುಕೊಳ್ಳುತ್ತದೆ. ಕಾರ್ಮಿಕರ ಜೊತೆಗೆ ನೇರ ಸಂಬಂಧ ಇಲ್ಲವೇ ಇಲ್ಲ. ಕಾರ್ಮಿಕರ ಆರೋಗ್ಯ ಸುರಕ್ಷೆ, ಸಾಮಾಜಿಕ ಸೌಲಭ್ಯಗಳು ಮಾಲೀಕರ ತಲೆನೋವೇ ಅಲ್ಲ. ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಮ್ಯಾನೇಜ್‌ಮೆಂಟುಗಳು ತಮ್ಮ ಜವಾಬ್ದಾರಿ/ಹೊಣೆಯಿಂದ ದೂರವಾದವು. ಪೋಷಕರ ಆರ್ಥಿಕ ಮತ್ತು ಸಾಮಾಜಿಕ ಸುರಕ್ಷೆ ಮಕ್ಕಳ



ಭವಿಷ್ಯವನ್ನು ನಿರ್ಧರಿಸುತ್ತದೆ. ಕನಿಷ್ಠ ಆದಾಯ, ಕೆಲಸದ ಒತ್ತಡ, ವಿಮೆಯ ಕೊರತೆ, ಆರೋಗ್ಯ ಸೇವೆಗಳ ಅಲಭ್ಯತೆ, ಬಾಡಿಗೆ ಮನೆ ಇತ್ಯಾದಿ ಸಮಸ್ಯೆಗಳು ಪೋಷಕರನ್ನು ಕಾಡುತ್ತಿರುತ್ತವೆ. ಇದು ಮಕ್ಕಳ ಶಿಕ್ಷಣ, ಶಾಂತಿಯುತ ವಾತಾವರಣಕ್ಕೆ ಚ್ಯುತಿ ತರುತ್ತದೆ. ಮಕ್ಕಳ ದುಡಿಮೆ ಎಂದರೆ ಮಕ್ಕಳ ನೇರ ಶೋಷಣೆ ಎಂದರ್ಥ. ಮಕ್ಕಳ ಹಕ್ಕುಗಳ ಉಲ್ಲಂಘನೆ; ಅವರ ಮೇಲೆ ನಡೆಸುವ ಕ್ರೌರ್ಯ. ದುಡಿಯುವ ಮಕ್ಕಳು ಕಳೆದುಕೊಳ್ಳುವುದು ಅಮೂಲ್ಯವಾದ ತಮ್ಮ ಬಾಲ್ಯವನ್ನು.

## ಮಾನವಹಕ್ಕುಗಳ ಸಂಸ್ಕೃತಿ ಜಾರಿಯಾಗಲಿ

ಮಕ್ಕಳು ಮುಗ್ಧರು. ಹೊರೆಯಿಲ್ಲದ ಬದುಕು ಸಾಗಿಸಲು ಮಕ್ಕಳಿಗೆ ಹಕ್ಕಿದೆ. ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಹಿರಿಯರ ಮೇಲಿದೆ. ಎಲ್ಲ ಹಕ್ಕುಗಳನ್ನೂ ಪಡೆದು ಬದುಕುವ ಮಕ್ಕಳು ದೊಡ್ಡವರಾದಾಗ ಉಳಿದೆಲ್ಲರ ಹಕ್ಕುಗಳನ್ನೂ ಗೌರವಿಸುತ್ತಾರೆ. ಮಾನವಹಕ್ಕುಗಳ ಈ ಸಂಸ್ಕೃತಿ ನಮ್ಮ ಸಮಾಜದಲ್ಲಿ ಬೇರೂರಬೇಕು. ಆಗ ಅಲ್ಲಿ ಮಕ್ಕಳ ದುಡಿಮೆಯಂತಹ ಶೋಷಣೆ ಇರುವುದೇ ಇಲ್ಲ. 1989ರಲ್ಲಿ ವಿಶ್ವಸಂಸ್ಥೆ ಘೋಷಿಸಿದ ಮಕ್ಕಳ ಹಕ್ಕುಗಳ ಒಡಂಬಡಿಕೆಯ 54 ಹಕ್ಕುಗಳೂ ಜಾರಿಯಾಗುವಂತೆ ಸರ್ಕಾರ, ಸಮುದಾಯ, ಪೋಷಕರು ನೋಡಿಕೊಂಡರೆ ನಮ್ಮ ಹೊಸ ಪೀಳಿಗೆ ಶೋಷಣೆಯಿಲ್ಲದ ಸಮಾಜವೊಂದಕ್ಕೆ ಪ್ರವೇಶಿಸಿದಂತಾಗುತ್ತದೆ. ನಮ್ಮೆಲ್ಲರ ಪ್ರಯತ್ನ ಆ ದಿಸೆಯಲ್ಲಿ ಸಾಗಲಿ. ❑

**ಪ್ರತಿಯೊಬ್ಬರೂ ತಮ್ಮ ಮಲವನ್ನು ತಾವೇ ಹೊರಬೇಕು.**

**ತಮ್ಮ ಮನೆಯ ಪಾಯಿಖಾನೆ ತಾವೇ ಸ್ವಚ್ಛಗೊಳಿಸಬೇಕು.**

# ಪಟಾಕಿ ಕಾರ್ಖಾನೆಗಳು; ಬಾಲಕಾರ್ಮಿಕರ ವಿನಾಶ

ದಾಸನೂರು ಕೂಸಣ್ಣ



ಬಾಲಕಾರ್ಮಿಕರು ದುಡಿಯಲು ಮುಂದಾದರೆ ಅವರ ಕನಸಿನ ಮನೋಭಿಲಾಷೆಗಳು ಕಮರಿಹೋಗುತ್ತವೆ. ಪ್ರೌಢ ವ್ಯವಸ್ಥೆ ತಲುಪುವ ವೇಳೆಗೆ ಅವನ ಆರೋಗ್ಯ ಮತ್ತು ಮನಃಸ್ಥಿತಿ ಸಂಪೂರ್ಣವಾಗಿ ಹಾಳಾಗಿರುತ್ತದೆ. ಇವುಗಳು ಮುಂದೆಯೂ ಸ್ವತಂತ್ರವಾಗಿ ದುಡಿಯಲು ಸಹಕರಿಸುವುದಿಲ್ಲ.

ಸಾಮಾನ್ಯವಾಗಿ ಮಾನವ ಸಮಾಜ ತನ್ನ ನಿರಂತರ ದುಡಿಮೆಯ ಮಧ್ಯದಲ್ಲಿ ವಿರಾಮ ಪಡೆದು ಆಗಾಗ ವಿವಿಧ ಆಚರಣೆಗಳನ್ನು ನಡೆಸುತ್ತಾ ಮನಸ್ಸಿಗೆ ಒಂದಷ್ಟು ಮುದವನ್ನು ಕಂಡು, ಪುನಃ ತನ್ನ ಮುಂದಿನ ಕಾರ್ಯದತ್ತ ಮಗ್ನವಾಗುತ್ತದೆ. ಇದು ವಿನೋದವನ್ನು ಹಂಚಿಕೊಳ್ಳಲು ಅನೇಕ ನಮೂನೆಯ ಮನರಂಜನೆಗಳನ್ನು ಪ್ರದರ್ಶನಗೊಳಿಸುತ್ತದೆ. ಕೆಲವೊಂದು ವಿಜಯೋತ್ಸವಗಳನ್ನು ಆಚರಿಸುವಾಗ ಸಿಡಿಮದ್ದುಗಳನ್ನು ಸುಟ್ಟು ಅದರಿಂದ ಬರುವ ಶಬ್ದ ಮತ್ತು ಬೆಳಕಿನ ಚಿತ್ತಾರ ಕಂಡು ಮಾನವ ಮತ್ತಷ್ಟು ಪುಳಕಗೊಳ್ಳುತ್ತಾನೆ. ಆದರೆ ಪುಳಕ ನೀಡುವ ಪಟಾಕಿ ಕಾರ್ಖಾನೆಗಳಲ್ಲಿ ದುಡಿಯುವ ಮುಗ್ಧ ಕಂದಮ್ಮಗಳ ಹಾಗೂ ಇತರೆ ವಯಸ್ಕರ ಬದುಕು ಸಹಾಯಕತೆಯತ್ತ ಕರೆದೊಯ್ಯುತ್ತಿರುತ್ತದೆ. ಅದರ ಮಂಡನೆಯೇ ಈ ಲೇಖನದ ಸಾರಾಂಶ.

**ಬಾಲಕಾರ್ಮಿಕತೆ ಸಾಮಾಜಿಕ ವ್ಯವಸ್ಥೆಯೊಳಗಿನ ಬಿಸಿಕೆಂಡ :**

ಮಕ್ಕಳು ಸಹಜವಾಗಿ ಆಟವಾಡಿ, ವ್ಯಾಸಂಗಮಾಡುತ್ತಾ ತಮ್ಮ ಜೀವನದ ಕನಸ್ಸುಗಳಿಗೆ ಆಯಾಮ ನೀಡಬೇಕಾದ ಸನ್ನಿವೇಶಗಳಲ್ಲಿ ಅಸಹಜವಾಗಿ ಅವರು ದುಡಿಯುವುದೆಂದರೆ ಅದೊಂದು ಅಮಾನವೀಯ ಸಾಮಾಜಿಕ ಪರಿಸರವಾಗಿರುತ್ತದೆ. ಇಂತಹ ದುಡಿಮೆಯು ಶೋಷಣೆಯ ಒಂದು ಪರಂಪರೆಯನ್ನೇ ಹೊಂದಿದೆ. ಮಕ್ಕಳನ್ನು ದುಡಿಸಿಕೊಳ್ಳುವ ಶೋಷಕ ಪ್ರವೃತ್ತಿ ಇರುವವರು ಸಾಮಾನ್ಯವಾಗಿ ಅವರನ್ನು ಅವಾಚ್ಯವಾಗಿ ನಿಂದಿಸುವುದು, ದೈಹಿಕವಾಗಿ ಹಿಂಸಿಸುವುದು, ಗದರಿಸಿ ಭಯಪಡಿಸುವುದು, ಮಾನಸಿಕವಾಗಿ ಘಾಸಿಮಾಡುವುದು ಮತ್ತು ಲೈಂಗಿಕ ಕಿರುಕುಳ ನೀಡುವುದು ಮತ್ತು ಕಳ್ಳತನದ ಆಪಾದನೆ ಮಾಡುವುದು ಸಾಮಾನ್ಯ ಸಂಗತಿಗಳಾಗಿರುತ್ತವೆ. ಕೆಲವು ಮಕ್ಕಳು ತಾವು ಮಾಡದ ತಪ್ಪುಗಳಿಗಾಗಿ ಬಾಲ ಆಪರಾಧಿಗಳಾಗಿದ್ದಾರೆ. ಒಟ್ಟಾರೆ, ಬಾಲ ಕಾರ್ಮಿಕತೆ ಕುರಿತು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯು ವ್ಯಾಖ್ಯಾನ ಮಾಡುವುದೇನೆಂದರೆ; 'ಅತಿಯಾದ ಕೆಲಸ, ಅದಕ್ಕೆ ಹೊಂದದ ಕೂಲಿ, ಬಾಲ್ಯ ಸಂತೋಷಿಸದ ದೈಹಿಕ – ಮಾನಸಿಕ ಅಪಾಯದ ಸ್ಥಿತಿ' ಈ ವ್ಯಾಖ್ಯಾನ ಮುಖಾಂತರ ಜಗತ್ತನ್ನು ಒಮ್ಮೆ ಅವಲೋಕಿಸಿದಾಗ, ಅಭಿವೃದ್ಧಿ, ಅಭಿವೃದ್ಧಿಶೀಲ ಮತ್ತು ಅನಭಿವೃದ್ಧಿ ರಾಷ್ಟ್ರಗಳಲ್ಲಿ ಸಹ ಬಾಲಕಾರ್ಮಿಕತೆಯು ಅವುಗಳ ಸಾಮಾಜಿಕ ಮತ್ತು ಆರ್ಥಿಕ ಹಾಗೂ ಸಾಂಸ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿರುತ್ತದೆ. ಜಗತ್ತಿನ ಒಟ್ಟು ಬಾಲಕಾರ್ಮಿಕರಲ್ಲಿ ಏಷಿಯಾ ಶೇ 61ರಷ್ಟು ಮತ್ತು ಆಫ್ರಿಕ ಖಂಡದಲ್ಲಿ ಶೇ 32ರಷ್ಟು ಹೊಂದಿವೆ.

ಯುನಿಸಿಫ್ ಅಂದಾಜಿನ ಪ್ರಕಾರ 5–14 ವಯೋಮಾನದ 250 ಮಿಲಿಯನ್ ಮಕ್ಕಳು ಬಾಲಕಾರ್ಮಿಕರಾಗಿದ್ದಾರೆ; ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ 120 ಮಿಲಿಯನ್ ಮಕ್ಕಳು ಪೂರ್ಣಾವಧಿಗೆ ದುಡಿಯುತ್ತಾರೆ. ಈ ರಾಷ್ಟ್ರಗಳ ಪೈಕಿ ಭಾರತದಲ್ಲಿ ಅತಿಹೆಚ್ಚು ಮಕ್ಕಳು ಬಾಲಕಾರ್ಮಿಕರಾಗಿದ್ದಾರೆ. ಇಲ್ಲಿ 14 ವಯೋಮಾನದೊಳಗಿನವರು

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ನಾಗರಬಾವಿ ಅಂಚೆ, ಬೆಂಗಳೂರು–72

12.6 ಮಿಲಿಯನ್ ಇದ್ದಾರೆಂದು ಅಂದಾಜಿಸಲಾಗಿದೆ.

14 ವರ್ಷ ವಯೋಮಾನದೊಳಗಿನ ಮಕ್ಕಳನ್ನು ವಿವಿಧ ಪ್ರಕಾರದ ಉತ್ಪಾದನಾ ವಲಯಗಳಲ್ಲಿ ಕಾಣಬಹುದು. ಉದಾಹರಣೆಗೆ, ಬೆಂಕಿಪೊಟ್ಟಣ, ಪಟಾಕಿ, ಮನೆಗೆಲಸ, ಹೊಟೇಲ್, ದಿನಸಿ ಅಂಗಡಿ, ಕಟ್ಟಡ ನಿರ್ಮಾಣ, ಕಂಬಳಿ ಮತ್ತು ಹಾಸಿಗೆ ತಯಾರಿಕೆ, ಇಟ್ಟಿಗೆ ತಯಾರಿಕೆ, ಕರಕುಶಲ ವಸ್ತುಗಳ ತಯಾರಿಕೆ, ಇತ್ಯಾದಿ ಕಾರ್ಖಾನೆಗಳಲ್ಲಿ ನಿರಂತರವಾಗಿ ದುಡಿಯುತ್ತಾರೆ. ಅದರಲ್ಲಿಯೂ ಪಟಾಕಿ ಕಾರ್ಖಾನೆಗಳಲ್ಲಿ ದುಡಿಯುವ ಮಕ್ಕಳ ಬದುಕಂತೂ ನರಕ ಸದೃಶ್ಯವಾಗಿರುತ್ತದೆ. ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಪಟಾಕಿಯಲ್ಲಿ ಶೇ. 90ರಷ್ಟು ತಮಿಳುನಾಡು ರಾಜ್ಯದ ರಾಮನಾಥಪುರಂ ಜಿಲ್ಲೆಯ ಶಿವಕಾಶಿಯಲ್ಲಿ ತಯಾರಾಗುತ್ತಿದೆ. ಸರಿಸುಮಾರು 750ಕ್ಕೂ ಅಧಿಕ ಕಾರ್ಖಾನೆಗಳಲ್ಲಿ 80,000 ಸಾವಿರಕ್ಕೂ ಮಿಗಿಲಾದಷ್ಟು ಕಾರ್ಮಿಕರಿದ್ದಾರೆಂದು ಧ್ರುವ ಕತೋರಿಯಾ ಮತ್ತು ಇತರ ತಜ್ಞರು ಅಭಿಮತಿಸಿದ್ದಾರೆ.

ಪಟಾಕಿ ಕಾರ್ಖಾನೆಗಳಲ್ಲಿ ದುಡಿಯುವವರು ಅತಿಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಗೂ ಹಿಂದುಳಿದ ಸಮುದಾಯಗಳಿಗೆ ಸೇರಿದವರಾಗಿದ್ದಾರೆಂದರೆ ತಪ್ಪಾಗದು. ಪಟಾಕಿ ಕೈಗಾರಿಕೆಗಳಿಗೆ ಮಾತ್ರ ಇಂದಿಗೂ ಆಧುನಿಕ ತಂತ್ರಜ್ಞಾನ ಅಳವಡಿಕೆಯಾಗದ ಕಾರಣ ಅವುಗಳೆಲ್ಲವೂ ಸಂಪ್ರದಾಯಿಕವಾಗಿ ಹೆಚ್ಚು ಹೆಚ್ಚು ಮಕ್ಕಳ ಕೈಗಳಿಂದ ಅವುಗಳನ್ನು ತಯಾರುಮಾಡಲಾಗುತ್ತಿದೆ. ಈ ಕ್ಷೇತ್ರದ ಮೇಲೆ ಪರೋಕ್ಷವಾಗಿ ಅವಲಂಬಿತರಾಗಿರುವ 2–3 ಲಕ್ಷ ಜನರಿಗೆ ಉದ್ಯೋಗ ನೀಡುತ್ತಿದೆ.

ಅತಿಯಾದ ಲಾಭಾಂಶದ ಉದ್ದೇಶದಿಂದಾಗಿ ಕಾರ್ಮಿಕ ಆಧಾರಿತವಾಗಿದೆ; ಇದು ಸಹ ಅತಿಯಾದ ಕಾರ್ಮಿಕರ ಶೋಷಣೆಗೆ ಅವಕಾಶ ನೀಡಿದೆ. ಈ ವಲಯದಲ್ಲಿ ದುಡಿಯುವ ಬಾಲ ಕಾರ್ಮಿಕರೊಳಗೆ ಶೇ 80ರಷ್ಟು ಅವಿದ್ಯಾವಂತರೆ ತೊಂಬಿದ್ದಾರೆ; ಶೇ.12ರಷ್ಟು ಮಂದಿ ಪ್ರಾಥಮಿಕ ಶಿಕ್ಷಣಪಡೆದವರಿದ್ದಾರೆ. ಮತ್ತು ಇನ್ನುಳಿದವರು ಶಾಲೆ ಬಿಟ್ಟವರಾಗಿದ್ದಾರೆ.

### ಪಟಾಕಿ ತಯರಿಕಾ ವಿಧಾನದಲ್ಲಿ ಜೀವಕ್ಕೆ ದುಗ್ಗಾಣಿ ಬೆಲೆಯಿಲ್ಲ

ವೈಜ್ಞಾನಿಕವಾಗಿ ಪಟಾಕಿ ತಯಾರಿಕೆಯಲ್ಲಿ ಪೈರೋತಾಂತ್ರಿಕ ರಾಸಾಯನಿಕ ಸಮಿಶ್ರಣ ಕ್ರಿಯಾ ವಿಧಾನಗಳನ್ನು ಅಳವಡಿಸಲಾಗುತ್ತದೆ. ಈ ಕ್ರಿಯೆಯಿಂದ ಶಾಖ ಬಿಡುವ ಕಾರಣದಿಂದ ಬೆಳಕು, ಶಬ್ದ ಮತ್ತು ಅನಿಲಗಳು ಏಕಕಾಲದಲ್ಲೇ ಹೊರಬರುತ್ತವೆ. ಅದಕ್ಕಾಗಿ ಇತರೆ ರಾಸಾಯನಿಕವಾದ ಆಕ್ಸೈಡೈಸಿಂಗ್ ಪ್ರತಿನಿಧಿ ಜೊತೆಯಲ್ಲಿ ಚಾರ್ಕೋಲ್ ಅನ್ನು ಅತಿಯಾಗಿ ಬಳಕೆಯಾಗುತ್ತದೆ. ಗಂಧಕಾಮ್ಲದ ಪ್ರಮಾಣ ತಗ್ಗಿಸಲು ಈ ವಿಧಾನ ಅನುಸರಿಸುತ್ತಾರೆ. ಬಣ್ಣಸೂಸಲು Strontium –Barium –Copper ಎಂಬ ರಾಸಾಯನಿಕಗಳನ್ನು ಮಿಶ್ರಣಮಾಡಿ ವಿವಿಧ ಆಕಾರದಲ್ಲಿ ಕಾಗದದಿಂದ ಕೊಳವೆ ಮತ್ತು ಬುಟ್ಟಿ ಕಟ್ಟುತ್ತಾರೆ. ಸಂಪ್ರದಾಯಿಕ ವಿಧಾನದಲ್ಲಿ ಮಾನವರು ನೇರವಾಗಿ ರಾಸಾಯನಿಕವನ್ನು ಮಿಶ್ರಣಮಾಡುವಾಗ ಮತ್ತು ಇತರೆ ಅಜಾಗರೂಕ ಕಾರಣಗಳಿಂದ ಅಪಘಾತಗಳು ಸಂಭವಿಸುತ್ತವೆ. ಕಾರಣಗಳು ಹೀಗಿವೆ: 1. ಘರ್ಷಣೆ, 2. ಆಕಸ್ಮಿಕ ವಿದ್ಯುತ್ ಸ್ಫೋಟ, 3. ಮಾನವನ ಅಲಕ್ಷ್ಯ, ಹಾಗೂ ಅನಾರೋಗ್ಯದಿಂದ 4. ಜಗಲಿಗಳ ಮೇಲೆ ಒಣಗಿಸುವಾಗ ಅತಿಯಾದ ಶಾಖದಿಂದಲೂ ಬೆಂಕಿ ಬರಬಹುದು 5. ಅಜಾಗರೂಕವಾಗಿ ಹಾಗೂ ಅತಿಯಾದ ಭಾರದ ವಸ್ತುಗಳ ಜೊತೆ ಸಾಗಿಸುವಾಗ ಅಥವಾ ಬೇರೆ ಸಾಮಾಗ್ರಿಗಳ ಒತ್ತಡಗಳಿಂದಲೂ ಬೆಂಕಿ ಕಾಣಿಸಿಕೊಳ್ಳಬಹುದು.



ಕೆಲವೊಂದು ಅಧ್ಯಯನಗಳ ಪ್ರಕಾರ ಹೇಳುವುದಾದರೆ, ಪಟಾಕಿ ಕಾರ್ಖಾನೆಗಳ ಮಾಲಿಕರು ಅವರವರ ಕಾರ್ಮಿಕರಿಗೆ ಮುಂಗಡ ಹಣವನ್ನು ನೀಡಿ ಅವರು ಬೇರೊಂದು ವೃತ್ತಿ ಆಯ್ಕೆ ಸ್ವಾತಂತ್ರ್ಯವನ್ನು ನಾಶಮಾಡುತ್ತಾರೆ. ಹೀಗೆ ನಿಯೋಜಿತರಾದವರು ಊಹಿಸಲಾಗದಂತಹ ಪರಿಸರದಲ್ಲಿ ದುಡಿಯಬೇಕಾಗುತ್ತದೆ. ಆದರಿಂದ ಅವರಿಗೆ ಸ್ವಾಭಾವಿಕವಾದ ಆರೋಗ್ಯ ನಶಿಸುತ್ತದೆ ಮತ್ತು ಬದುಕುವ ಸರಾಸರಿ ವಯೋಮಾನಗಳು ಕ್ಷೀಣಿಸುತ್ತವೆ. ಶೇ.90ರಷ್ಟು ಕಾರ್ಮಿಕರು ಗನ್ ಪುಡಿಯನ್ನು ಕೈಗಳಿಂದ ನೆರವಾಗಿ ತುಂಬುವುದರಿಂದ ಮೊದಲು ಆಸ್ತಮ ಮತ್ತು ಶ್ವಾಸಕೋಶ ಖಾಯಿಲೆಗಳಿಗೆ ಈಡಾಗುತ್ತಾರೆ. ಸಾಮಾನ್ಯವಾಗಿ ಪಟಾಕಿ ತಯಾರಕರು



ಯಾವುದೇ ಸುರಕ್ಷಾ ಕವಚಗಳನ್ನು ಧರಿಸಿರುವುದಿಲ್ಲ. ಆಗ ಗಂಧಕಾಮ್ಲ ಮತ್ತು ಅಲ್ಯುಮಿನಿಯಮ್ ರಾಸಾಯನಿಕಗಳು ಚರ್ಮದ ಮೇಲೆ ಬೀಳುವುದರಿಂದ ಚರ್ಮ ರೋಗಗಳು ಬರುತ್ತವೆ. ಅದರಲ್ಲೂ ಭಾರಿ ಪ್ರಮಾಣದಲ್ಲಿ ದುರ್ವಾಸನೆ ಸೂಸುವ ಹಾವಿನ ಗುಳಿಗಳನ್ನು ತಯಾರಿಸುವಾಗ ನೈಟ್ರಿಕ್ ಆಸಿಡ್ ಬಳಸುತ್ತಾರೆ. ಅದನ್ನು ಸುರಕ್ಷತೆಯಿಲ್ಲದೆ ಮುಟ್ಟುವುದರಿಂದ ಅಂತಹ ಕಾರ್ಮಿಕರಿಗೆ ಚರ್ಮರೋಗ ಬರುವುದಂತೂ ಖಚಿತ.

**ಆಟವಾಡುವವರಿಂದ ತಯಾರಾಗುವ ಪಟಾಕಿಯಿಂದಾಗುವ ಸಾಮಾಜಿಕ ಹಾನಿ**

ಪ್ರತಿಯೊಂದು ಸ್ವರೂಪದ ಉತ್ಪಾದನೆಗಳಿಂದ ಪರೋಕ್ಷ ಲಾಭ–ನಷ್ಟಗಳಿವೆ. ಅದರಲ್ಲಿ ಪಟಾಕಿ ಕಾರ್ಖಾನೆಗಳ ಉತ್ಪಾದನೆಯಿಂದ ಶೇ 80ರಷ್ಟು ಸಾಮಾಜಿಕ ಹಾನಿ ಸಂಭವಿಸುತ್ತಿದೆ. ಪಟಾಕಿ ತಯಾರಿಸುವವರು ಹತ್ತು ಮಕ್ಕಳಾದರೆ; ಅನಾಹುತಕ್ಕೆ ಈಡಾಗುವವರು ಅರವತ್ತು ಮಂದಿ. ಅತಿಯಾದ ಪಟಾಕಿ ತಯಾರಿಕೆಯಿಂದ ಸಮಾಜದ ಮೇಲೆ ನಕಾರಾತ್ಮಕ ಪರಿಣಾಮಗಳೆ ಹೆಚ್ಚಾಗಿರುತ್ತವೆ. ಪಟಾಕಿಯು 1000 ಸೆಂಟಿಗ್ರೇಡ್ ತಾಪಮಾನದಲ್ಲಿ ಸಿಡಿಯುತ್ತದೆ, ಇದರಿಂದ ಮಾನವ ಮತ್ತು ಅವನ ಮೌಲ್ಯಯುಳ್ಳ ಆಸ್ತಿಪಾಸ್ತಿಗಳಿಗೆ ಹಾಗೂ ಪರಿಸರಕ್ಕೂ ಹಾನಿಯಾಗುತ್ತದೆ. ಅದರಲ್ಲೂ ನಿರಂತರ ಸಿಡಿತದಿಂದ ಮಾನವರಿಗೆ ಗಂಭೀರ ಸ್ವರೂಪದ ಗಾಯಗಳಾಗುತ್ತವೆ ಮತ್ತು ಪ್ರಾಣಕ್ಕೂ ಅಪಾಯವಿರುತ್ತದೆ. ಪಟಾಕಿ ಸಿಡಿದಾಗ ಅದರಿಂದ ಬರುವ ಬಿಸಿ ಧೂಮ ಸೇವನೆಯಿಂದ ರಕ್ತದೊಳಗೆ ಕಾರ್ಬನ್ ಮೊನೋಕ್ಸೈಡ್ ಸೇರುವುದರಿಂದ ಅದು ಕಾರ್ಬೋಹಿಮೊಗ್ಲೋಬಿನ್ ಪ್ರಮಾಣ ಜಾಸ್ತಿಯಾಗುತ್ತದೆ. ಇದರಿಂದ ತಲೆನೋವು ಬರುತ್ತದೆ ಮತ್ತು ನರಮಂಡಲದ ಮೇಲೆ ದುಸ್ಪರಿಣಾಮವಾಗುವುದರಿಂದ ಸಾವುಗಳ ಪ್ರಮಾಣ ಸಹ ಹೆಚ್ಚಾಗುತ್ತದೆ. ಕಣ್ಣಿನೊಳಗೆ ಕಬ್ಬಿಣ, ತಾಮ್ರದ ಪುಡಿ ಸೇರುವುದರಿಂದ ದೃಷ್ಟಿಮಾಂಧ್ಯತೆ ಸಹ ಆಗಬಹುದೆಂದು ವೈದ್ಯಕೀಯ ಪರೀಕ್ಷೆಗಳು ದೃಢಪಡಿಸಿವೆ. ಸಿಡಿ ಮದ್ದಿನಿಂದ ಬರುವ ಪೋಟಾಸ್ಸಿಯಂ ನೈಟ್ರೇಟ್ ಸೇವನೆಯಿಂದ ಗಂಟಲು–ಮೂಗಿನ ಸಮಸ್ಯೆ ಹೆಚ್ಚಾಗಿ ಕಿಡ್ನಿ ಸಹ ತೊಂದರೆ ಅನುಭವಿಸುತ್ತದೆ.

ಅಲ್ಯುಮಿನಿಯಂ ರಾಸಾಯನಿಕ ಸೇವನೆಯಿಂದ. ಜ್ವರ, ತಲೆಬಾಧೆ, ಎದೆನೋವಿನ ಸಮಸ್ಯೆಯಿಂದ ಉಸಿರಾಟಕ್ಕೆ ಅಡಚಣೆಯಾಗುವುದು. ಬೇರಿಯಂ ನೈಟ್ರೇಟ್ ದೇಹದೊಳಗೆ ಸರಾಗವಾಗಿ ನುಗ್ಗುವುದರಿಂದ ಡಯೇರಿಯಾ, ಅನಿಯಮಿತ ಹೃದಯಬಡಿತ, ಮಾಂಸಖಂಡಗಳ ಸೆಳೆತ ಮತ್ತು ಪಾರ್ಶ್ವವಾಯು ಸಂಭವಿಸುವ ಸಾಧ್ಯತೆಯಿರುತ್ತದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಪಟಾಕಿ ಸಿಡಿತದಿಂದ ನೈಸರ್ಗಿಕ ಪರಸರದಲ್ಲಿ ಗಂಧಕಾಮ್ಲದ ಪ್ರಮಾಣ ಹೆಚ್ಚುತ್ತದೆ. ಶಬ್ಧಮಾಲೀನ್ಯದಿಂದ ಹಲವಾರು ಜನರ ಆರೋಗ್ಯದಲ್ಲಿ ಏರುಪೇರಾಗುವುದು. ದೊಡ್ಡ ಮಹಾನಗರಗಳಲ್ಲಿ ಕಸ ವಿಲೇವಾರಿ ಸಮಸ್ಯೆ ಮತ್ತಷ್ಟು ಹೆಚ್ಚಾಗುವುದು. ಅಲ್ಲದೆ ಪ್ರಾಣಿಗಳಾದ ನಾಯಿ, ಬೆಕ್ಕು, ಹಸು ಮತ್ತು ಇತರೆ ಪ್ರಾಣಿಗಳು ಬೆದರಿ ಓಡುವುದರಿಂದ ಜನರಿಗೆ ಅಪಘಾತಗಳಾಗುತ್ತವೆ. ಇಂತಹ ಸಮಸ್ಯೆಗಳ ಅರಿವು ಜನರಿಗೆ ಅಲ್ಪ–ಸ್ವಲ್ಪ ತಿಳಿದಿದ್ದರೂ ಸಹ ಪ್ರತಿ ದೀಪಾವಳಿ ಅಥವಾ ಅವರ ನೆಚ್ಚಿನ ಹಬ್ಬಗಳಲ್ಲಿ ಪಟಾಕಿ ಸಿಡಿಸುತ್ತಾರೆ. ಸಾಮಾನ್ಯ ಕೆಳ ವರ್ಗದ ಕುಟುಂಬವೊಂದು ವರ್ಷಕ್ಕೆ ಸರಾಸರಿ 500–750 ರೂಪಾಯಿಗಳನ್ನು ವ್ಯಯಿಸಿದರೆ; ಮಧ್ಯಮ ವರ್ಗದ ಉದ್ಯೋಗಸ್ಥ ಕುಟುಂಬ ಸರಾಸರಿ 1500–3000 ರೂಪಾಯಿಗಳನ್ನು ಮತ್ತು ಸ್ಥಿತಿವಂತ ಅಥವಾ ವ್ಯಾಪಾರಸ್ಥ ಕುಟುಂಬವೊಂದು ಸರಾಸರಿ 5000–15000 ರೂಪಾಯಿಗಳನ್ನು ಖರ್ಚುಮಾಡುತ್ತದೆ. ಈ ರೀತಿಯಾಗಿ ಆರ್ಥಿಕ ವಹಿವಾಟುಗಳು



ಸೃಷ್ಟಿಯಾದರೂ ಸಹ ಅದರ ವ್ಯತಿರಿಕ್ತ ಪರಿಣಾಮಗಳು ಪರೋಕ್ಷವಾಗಿ ಪಟಾಕಿ ಸಿಡಿಸದವರ ಮೇಲಾಗುತ್ತವೆ. ಪಟಾಕಿ ಕಾರ್ಖಾನೆಗಳಲ್ಲಿ ದುಡಿಯುವವರಿಗೆ ಮುಖ್ಯವಾಗಿ ಯಾವುದೇ ಜೀವನ ಭದ್ರತೆಗಳಿರುವುದಿಲ್ಲ. ಅಂತಹವರಿಗೆ ಆರೋಗ್ಯ ಸಮಸ್ಯೆಗಳು ತೀವ್ರಗತಿಯಲ್ಲಿ ಬಂದಾಗ ರಾಜ್ಯ ಸರ್ಕಾರಗಳು ಅದರ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಪ್ರತಿ ದೀಪಾವಳಿ ಅಥವಾ ಇತರೆ ಹಿಂದೂ ಹಬ್ಬಗಳು ಬಂದರೆ ಅಥವಾ ವಿಜಯೋತ್ಸವಗಳಲ್ಲಿ ಪಟಾಕಿ ಸಿಡಿಸುವ ನೆಪದಲ್ಲಿ ಸರ್ಕಾರಿ ಕರೆನ್ಸಿ ಸುಡುವಂತಹ ಆಚರಣೆ ಮಾಡುತ್ತಿದ್ದೇವೆಂಬ ಅರಿವು ಪ್ರತಿಯೊಬ್ಬ ನಾಗರಿಕರಲ್ಲಿ ಮೂಡುತ್ತಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

**ಅಪ್ರಾಪ್ತರ ಅಲ್ಪಗಳಿಕೆಯಿಂದ ಜೀವನೋತ್ಸವ ಕುಂದುವುದು**

ಶಿವಕಾಶಿ ಸುತ್ತಮುತ್ತಲಿನ ಬಡ ಕುಟುಂಬಗಳ ಮಕ್ಕಳು ಪಟಾಕಿ ಕಾರ್ಖಾನೆಗಳಲ್ಲಿ ದಿನದ 12 ಗಂಟೆ

| ತಪ್ಪು ಕಲ್ಪನೆ | ಪರೋಕ್ಷ ಸಾಮಾಜಿಕ ನಷ್ಟಗಳು |
|---|---|
| ಬಾಲ ಕಾರ್ಮಿಕರು ದುಡಿದರೆ, ಇವರ ದುಡಿಮೆಯ ಪ್ರತಿಫಲ ಅವರ ಕುಟುಂಬದವರಿಗೆ ಸಹಾಯ ನೀಡುತ್ತದೆ. | ಬಾಲಕಾರ್ಮಿಕರು ದುಡಿಯಲು ಮುಂದಾದರೆ ಅವರ ಕನಸಿನ ಮನೋಭಿಲಾಷೆಗಳು ಕಮರಿಹೋಗುತ್ತವೆ. |
| 5–14 ವಯೋಮಾನದ ಮಕ್ಕಳು ದಿನದ 12 ಗಂಟೆಗಳ ಕಾಲ ಮನೆಯಿಂದ ಹೊರಗಿದ್ದರೆ ಅವರ ತಂದೆ ತಾಯಿಗಳು ಸ್ವತಂತ್ರವಾಗಿ ಇರಬಲ್ಲರು ಅಥವಾ ಅವರ ದುಡಿಮೆಗೆ ಅವಕಾಶವಿರುತ್ತದೆ. | ಆಟವಾಡಿ, ವ್ಯಾಸಂಗಮಾಡಿ ಬದುಕಿನ ಹಂದರವನ್ನು ಸ್ವತಂತ್ರವಾಗಿ ಕಟ್ಟಿಕೊಳ್ಳಲು ವಿಫಲವಾಗುತ್ತಾರೆ. |
| ಎಳೆಯ ವಯಸ್ಸಿನಲ್ಲಿ ಮಕ್ಕಳು ದುಡಿಯಲಾರಂಭಿಸಿದರೆ, ಪ್ರೌಢ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ದುಡಿಯಬಲ್ಲರೆಂಬ ನಂಬಿಕೆಗಳು ಕುಟುಂಬದಾರರಲ್ಲಿ ಮನೆಮಾಡಿವೆ. | ಪ್ರೌಢ ವ್ಯವಸ್ಥೆ ತಲುಪುವ ವೇಳೆಗೆ ಅವನ ಆರೋಗ್ಯ ಮತ್ತು ಮನಃಸ್ಥಿತಿ ಸಂಪೂರ್ಣವಾಗಿ ಹಾಳಾಗಿರುತ್ತದೆ. ಇವುಗಳು ಮುಂದೆಯೂ ಸ್ವತಂತ್ರವಾಗಿ ದುಡಿಯಲು ಸಹಕರಿಸುವುದಿಲ್ಲ. |

ದುಡಿದರೂ ಕೈತುಂಬ ಹಣಗಳಿಸಲಾಗದ ಸ್ಥಿತಿಯಲ್ಲಿದ್ದಾರೆ. ಇತರೆ ಅಸಂಘಟಿತ ವಲಯಗಳಲ್ಲಿ ದುಡಿಯುವ ಮಕ್ಕಳ ಸ್ಥಿತಿಗತಿಗಳು ಇದಕ್ಕಿಂತ ಹೊರತಾಗಿರುವುದಿಲ್ಲ. ಅಸಮಾನತೆ ತುಂಬಿರುವ ಭಾರತದಂತಹ ರಾಷ್ಟ್ರಗಳಲ್ಲಿ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಲು ಬಲು ಪ್ರಯಾಸದ ಕಾರ್ಯ.

ಜಗತ್ತಿನಾದ್ಯಂತ ಬಾಲ ಕಾರ್ಮಿಕತೆಯನ್ನು ಸಂಪೂರ್ಣ ನಿಲ್ಲಿಸಿದರೆ ಇಪ್ಪತ್ತು ವರ್ಷಗಳಲ್ಲಿ ಜಗತ್ತಿನ ಆದಾಯದಲ್ಲಿ ಶೇ. 22ರಷ್ಟು ಹೆಚ್ಚಾಗುತ್ತದೆ ಎಂದು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಪ್ರತಿಪಾದಿಸಿದೆ. ಈ ರೀತಿಯ ಗಳಿಕೆಯು ನಾಲ್ಕು ಟ್ರಿಲಿಯನ್ ಡಾಲರ್ ಅಗಬಹುದೆಂದು ಅದು ಅಂದಾಜಿಸಿದೆ. ಪಟಾಕಿ ಕಾರ್ಖಾನೆಗಳಲ್ಲಿ ದುಡಿಯುವ ಮಕ್ಕಳು ಕೇವಲ ಪೌಷ್ಟಿಕಾಂಶರಹಿತ ಮೂರೊತ್ತಿನ ಊಟ ಗಳಿಸುತ್ತಾರೆಯೇ ಹೊರತು ಜೀವನುದ್ದಕ್ಕೂ ಶಿಕ್ಷಣದಿಂದ ವಂಚಿತರಾಗುತ್ತಾರೆ. ಪುಟ್ ಬಾಲ್ ತಯಾರಿಕಾ ಕಾರ್ಖಾನೆಗಳಲ್ಲಿ ದುಡಿಯುವ ಬಾಲಕಾರ್ಮಿಕರ ಸ್ಥಿತಿ–ಗತಿಗಳೂ ಸಹ ಇದೆ ಮಾದರಿಯಲ್ಲಿವೆ.

**ಪಟಾಕಿ ಚೀಟಿ ಹೆಸರಿನಡಿ ಅಕ್ರಮಗಳ ಸರಮಾಲೆ**

ದೇಶಾದ್ಯಂತ ಒಂದು ದೀಪಾವಳಿಯಿಂದ ಇನ್ನೊಂದು ದೀಪಾವಳಿ ತನಕ ಹನ್ನೆರಡು ತಿಂಗಳ ಚೀಟಿ ವ್ಯವಹಾರವನ್ನು ಅನಧಿಕೃತವಾಗಿ ಕೆಲವರು ನಡೆಸುತ್ತಾರೆ. ಈ ವ್ಯವಹಾರಕ್ಕೆ ಭಾಗಿದಾರರನ್ನಾಗಿಸಲು ಜನರಿಗೆ ವಿವಿಧ ಸ್ವರೂಪದ ಆಮಿಷಗಳನ್ನು ತೋರಿಸುತ್ತಾರೆ. ಅದರಲ್ಲೂ ಕ್ರಿಮಿನಲ್ ಹಿನ್ನೆಲೆ ಇರುವವರು ಈ ವ್ಯವಹಾರ ನಡೆಸಲು ಮುಂದಾರೆ, ಕುರಿ ಕಾಯಲು ತೋಳನನ್ನು ನೇಮಿಸಿದಂತಾಗುತ್ತದೆ. ಪಟಾಕಿ ಚೀಟಿ ವ್ಯವಹಾರಗಳಲ್ಲಿ ಭಾಗಿಯಾಗುವವರ ಪೈಕಿ ಶೇ. 40ರಷ್ಟು ಜನ ಮಾತ್ರ ಪ್ರಾಮಾಣಿಕವಾಗಿ ತಾವು ನೀಡಿದ ಕಾಸಿಗೆ ನಷ್ಟವಿಲ್ಲದಂತೆ ಪ್ರತಿಫಲ ಪಡೆಯುತ್ತಾರೆ. ಇನ್ನುಳಿದಷ್ಟು ಜನರಿಗೆ ತಿರು ನಾಮಾವಾಗುತ್ತದೆ.



ಎಷ್ಟೋ ಬಡ ಕುಟುಂಬಗಳು ತಮ್ಮ ತಿಂಗಳ ಕಡಿಮೆ ಆದಾಯದಲ್ಲಿ ಕೊಂಚ ಉಳಿಸಿ ಪಟಾಕಿ ಚೀಟಿ ಕಟ್ಟಿರುತ್ತಾರೆ. ಅಂತಹವರಿಗೆ ಅನ್ಯಾಯವಾಗುವುದೇ ಹೆಚ್ಚು.

ಇಂತಹ ಜನರು ನ್ಯಾಯ ಅರಸಿ ಪೊಲೀಸ್ ಠಾಣೆಗೆ ಹೋದರೂ ಸಹ ತಾವು ಕಟ್ಟಿದ ಮೊತ್ತವನ್ನು ಪುನಃ ಪಡೆಯಲಾರರು. ಪಟಾಕಿ ಹೇಗೆ ದೈಹಿಕವಾಗಿ ಹಾನಿಮಾಡುವುದೋ ಹಾಗೆಯೆ ಸಾಮಾಜಿಕ ಮತ್ತು ಸಾಂಸ್ಥಿಕ ಸಮಸ್ಯೆಗಳನ್ನು ಸಹ ಸೃಷ್ಟಿಸುತ್ತದೆ. ಇದು ರಾಜ್ಯಾಡಳಿತಕ್ಕೆ ತಲೆನೋವಾಗುತ್ತದೆ

**ಪಟಾಕಿ ತಯಾರಿಕೆ ಮತ್ತು ಅದರ ಬಳಕೆ ವಿರುದ್ಧ ಜನಾಂದೋಲನ ಅನಿವಾರ್ಯ**

ಜಗತ್ತಿನಾದ್ಯಂತ ಪಟಾಕಿ ಸುಡುವುದರ ವಿರುದ್ಧ ಗಟ್ಟಿ ದನಿ ಮೊಳಗಬೇಕಿದೆ. ಅದರಲ್ಲೂ ಭಾರತದಂತಹ ರಾಷ್ಟ್ರಗಳಲ್ಲಿ ಸಾಮಾಜಿಕ ಅಸಮತೋಲನತೆ ಇಂದಿಗೂ ಮನೆಮಾಡಿಕೊಂಡಿದೆ. ಇಲ್ಲಿ ಪಟಾಕಿ ವಿರುದ್ಧ ನಿತ್ಯ ಸಾಮಾಜಿಕ ಸಮರ ಜರುಗಬೇಕಿದೆ. ಇದರಿಂದ ದೇಶಕ್ಕೆ ಹಲವಾರು ಲಾಭಾಂಶ ದೊರೆಯುತ್ತವೆ. ಆರಂಭಿಕ ನಿಟ್ಟಿನಲ್ಲಿ ಮೊದಲು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಟಾಕಿ ಯಾರಿಂದ ತಯಾರಾಗುತ್ತದೆಂಬ ಮೂಲಭೂತ ಅಂಶವನ್ನು ಮನವರಿಕೆ ಮಾಡಿಕೊಡಬೇಕು. ಇದರೊಟ್ಟಿಗೆ ಅದನ್ನು ಸುಡುವುದರಿಂದ ನೈಸರ್ಗಿಕ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಪಾಠ–ಪ್ರವಚನಗಳ ಮೂಲಕ ಅರ್ಥೈಸಿಕೊಡಬೇಕು. ❑



# ಯೋಜನಾ

## ನವೆಂಬರ್ 2014 ಸಂಚಿಕೆ ವಿಷಯ

## ತಂತ್ರಜ್ಞಾನ, ಆವಿಷ್ಕಾರ ಮತ್ತು ಜ್ಞಾನ ಆರ್ಥಿಕತೆ

# ಗಾಂಧೀಜಿ ಕನಸಿದ ಹಳ್ಳಿಯ ಸಂಕಥನ

**ಡಾ. ಡೊಮಿನಿಕ್ ಡಿ.**



**"ನನ್ನ ದೃಷ್ಟಿಯಲ್ಲಿ ಗ್ರಾಮ ಸ್ವರಾಜ್ಯ ಎಂದರೆ ಅದೊಂದು ಪೂರ್ಣ ಪ್ರಮಾಣದ ಗಣರಾಜ್ಯವಾಗಿದ್ದು, ಸ್ವತಂತ್ರವಾಗಿಯೇ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವಂತಿದ್ದು, ಉಳಿದ ಸಂಗತಿಗಳಿಗೆ ಅನುಗುಣವಾಗಿ, ಪರಸ್ಪರಾವಲಂಬಿ ಬದುಕನ್ನು ನಡೆಸುವಂತಹದ್ದು".**

ಇವತ್ತಿನ ಸನ್ನಿವೇಶದಲ್ಲಿ 'ವ್ಯಕ್ತಿ-ವ್ಯಕ್ತಿತ್ವ'ವನ್ನು ನಿರೂಪಿಸಿರುವ ಗ್ರಾಮದ ಸಂಕಥನವನ್ನು ಕುರಿತು ಗಾಂಧೀಜಿಯವರು ಏನು ಹೇಳಿದ್ದಾರೆ ಎಂದು ಅರಿಯುವುದು ಈ ಲೇಖನದ ಮುಖ್ಯ ಗುರಿ. ಈ ಉದ್ದೇಶವನ್ನಿಟ್ಟುಕೊಂಡು ಅರಳಿರುವ 'ಗಾಂಧಿ' ಪ್ರಜ್ಞೆಯನ್ನು ಚಿಕಿತ್ಸಕ ದೃಷ್ಟಿಯಿಂದ ಗಮನಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇಂತಹ ಪಯಣ ಸ್ವಲ್ಪ ಕಷ್ಟವೇ ಸರಿ... ಆದರೂ ನಾಳಿನ ಭರವಸೆಗಳೊಡನೆ ಈ ಹೊತ್ತನ್ನು ನೋಡಿದಲ್ಲಿ 'ಭಾರತಕ್ಕೆ ಒಳ್ಳೇ ದಿನಗಳು ಬರಲಿವೆಯೆಂದು ಭಾವಿಸಬಹುದಲ್ಲವೇ? ಹಾಗಾದರೆ ನಾಳಿನ ನಮ್ಮ ದಿನಗಳು ಹೇಗಿರಬೇಕು? ದಿನನಿತ್ಯದ ನಮ್ಮ ಅಗತ್ಯಗಳಾದ ಕುಡಿಯುವ ನೀರು, ಆಹಾರ, ತೊಡಲು ಬಟ್ಟೆ, ಮಲಗಲು ಚೂರು ನೆಲೆ, ಓಡಾಡಲು ರಸ್ತೆ ಮತ್ತು ನನ್ನ ಆಯ್ಕೆಯ ಸಂಬಂಧಗಳು... ಈ ಅಗತ್ಯಗಳನ್ನು ಪೂರೈಸಿಕೊಳ್ಳಲು ಇನ್ನೆಷ್ಟು ಸರ್ಕಾರಗಳು ಬರಬೇಕು...? ಸ್ವತಂತ್ರ ಭಾರತದಲ್ಲಿ ನಾವು ನಿರೂಪಿಸಿಕೊಂಡ ನಾಗರಿಕ ಪ್ರಜೆ'ಯ ನಿರೂಪಣೆಗಳು ನಮ್ಮನ್ನು ಎತ್ತಕೊಂಡು ಹೋಗುತ್ತಿವೆ? ಎನ್ನುವ ಪ್ರಶ್ನೆಗಳಿಗೆ ಮುಖಾಮುಖಿಯಾಗಲು ತೊಡಗುವಾಗ ಆಧುನಿಕವಾಗಿ ಸಂಕಥಿಸಿರುವ ಗ್ರಾಮ ಸಮಾಜ' ಎನ್ನುವ ಕಲ್ಪನೆಯನ್ನು ನಾವು ಪರಿಶೀಲಿಸುವುದು ಸೂಕ್ತವಾದುದು. ಅದೆಲ್ಲೋ ಕೂತು ನಮ್ಮನ್ನು ಬಹುವಾಗಿ ಕಾಡುತ್ತಿದೆ. 'ಗ್ರಾಮ' ಎನ್ನುವ ವಿದ್ಯಮಾನವು ಆಧುನಿಕ ರಾಷ್ಟ್ರಗಳನ್ನು, ಅದರಲ್ಲೂ ಆಧುನಿಕ 'ಭಾರತ'ವನ್ನು ಬಹುವಾಗಿ ಪ್ರಭಾವಿಸಿರುವಂಥದ್ದು. ಆದ್ದರಿಂದಲೇ ಅದು ಸಾಮಾಜಿಕ ವಿಜ್ಞಾನಗಳಲ್ಲಿ ಒಂದು ಮಹತ್ವದ ಸಂಗತಿಯಾಗಿ ಇಂದಿಗೂ ಅಭಿವೃದ್ಧಿ ಚಿಂತನೆಯನ್ನು ಪ್ರಚೋದಿಸುತ್ತಲೇ ಇದೆ. ಆದರೆ, ಅದನ್ನು ಗಂಭೀರವಾದ ತಾತ್ವಿಕ ಚರ್ಚೆಗೆ ಒಳಪಡಿಸಿದ್ದು ಕಮ್ಮಿ ಎಂದೇ ಹೇಳಬೇಕಾಗುತ್ತದೆ. ಇಂಥ ಚರ್ಚೆಗಳಲ್ಲಿ ಎದ್ದು ಕಾಣುವ ಮುಖ್ಯ ಗ್ರಹಿಕೆಯೆಂದರೆ ಗಾಂಧಿಯ ವಿಚಾರಧಾರೆಯೇ ಆಗಿದೆ ಎಂದರೆ ತಪ್ಪಾಗಲಾರದು.

ಆದರೆ, ಬ್ರಿಟಿಶ್ ವಸಾಹತುಶಾಹಿ ಚರಿತ್ರಕಾರರು ಸೃಷ್ಟಿಸಿದ ಗ್ರಾಮ ಸಮಾಜ ಚಿತ್ರಣವನ್ನು ಇಲ್ಲಿ ಗಮನಿಸಿ, ತದ ನಂತರದಲ್ಲಿ ಗಾಂಧೀಜಿ ಕಂಡರಿಸಿದ 'ಹಳ್ಳಿ'ಯನ್ನು ನಾವು ಚರ್ಚಿಸಬಹುದೆಂದು ತೋರುತ್ತದೆ. ಅವರ (ಬ್ರಿಟಿಶ್ ವಸಾಹತುಶಾಹಿ ವಿದ್ವಾಂಸರು) ಪ್ರಕಾರ ಬ್ರಿಟಿಶರು ಭಾರತಕ್ಕೆ ಬರುವ ಮೊದಲು ಇಲ್ಲಿನ ಸಮಾಜ ಎಲ್ಲಾ ವಿಧದಲ್ಲೂ ಪತನವಾಗಿತ್ತು. ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಹೋಗಿತ್ತು. ರಾಜಕೀಯ ಅನೈಕ್ಯತೆಯಿಂದ, ಸಾಮಾಜಿಕ ಅರಾಜಕತೆಯಿಂದ, ಆರ್ಥಿಕವಾಗಿ ಹಿಂದುಳಿದಿರುವಿಕೆಯಿಂದ, ಸಾಂಸ್ಕೃತಿಕವಾಗಿ ಸೊರಗಿದ ಮೌಲ್ಯಗಳು ಇಲ್ಲಿದ್ದವು. ತಳಸಮುದಾಯಗಳು ಶೋಚನೀಯ ಸ್ಥಿತಿಯಲ್ಲಿದ್ದವು. ಇಂತಹ ಪರಿಸ್ಥಿತಿಯಲ್ಲಿ ಅಭಿವೃದ್ಧಿಯ ಹರಿಕಾರನಂತೆ, ಕೆಳಜಾತಿಗಳ ವಿಮೋಚನಾ ಶಕ್ತಿಯಂತೆ ಭಾರತಕ್ಕೆ ಯೂರೋಪಿನವರು ಬಂದರು, ಆಧುನಿಕತೆಯನ್ನು ಇಲ್ಲಿ ಪಸರಿಸಿದರು ಎನ್ನುವುದು. ಈ ತಿಳಿವಿನಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಭಾವಿಸಲಾಗಿದೆ.

ಇಂಥ ತಿಳಿವಿಗೆ ವಿರೋಧವಾಗಿ, ಮತ್ತೊಂದೆಡೆ ರಾಷ್ಟ್ರೀಯವಾದಿ

ಸಹ ಪ್ರಾಧ್ಯಾಪಕ, ಬೆಂ.ವಿ.ವಿ ಸ್ನಾತಕೋತ್ತರ ಕೇಂದ್ರ, ಕೋಲಾರ 563102.

ಬರಹಗಾರರು ಭಿನ್ನವಾದ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಹೇಳುವ ಪ್ರಕಾರ ಪ್ರಾಚೀನ ಭಾರತದಲ್ಲಿ ಸ್ವಯಂ ಸಮೃದ್ಧವೂ, ಸಾಮರಸ್ಯಪೂರ್ಣವೂ ಆದ ಗ್ರಾಮಸ್ವರಾಜ್ಯ ವಿಜೃಂಭಿಸುತ್ತಿತ್ತು. ಜನರೆಲ್ಲರೂ ಹುಟ್ಟಿನಿಂದ ನಿರ್ಧಾರಿತವಾದ ಸಹಜ ಧರ್ಮಗಳಿಗೆ ಅನುಗುಣವಾಗಿ, ಸ್ವಚ್ಛಂದವಾಗಿ ನಡೆದುಕೊಳ್ಳುತ್ತಿದ್ದರು. ವಿವಿಧ ಸಮೂಹಗಳ ಜನರು ಸಹಜೀವನ ನಡೆಸುತ್ತಿದ್ದರು. ಬ್ರಿಟಿಶರು ಆಗಮಿಸಿದ ನಂತರ ಈ ಜನರ ನಡುವೆ ವೈರುಧ್ಯದ ವಿಷಬೀಜವನ್ನು ಬಿತ್ತಿ ಶಾಂತಿಯುತ ವಾತಾವರಣವನ್ನು ಹಾಳುಮಾಡಿದರು ಎನ್ನುವುದು. ಆದರೂ ಸಹ ಈ ತಿಳುವುಗಳ ಕಚ್ಚಾಟದಲ್ಲಿ ಭಾರತದ ಪ್ರಜೆಗಳಾಗಿರುವ ಜನರಿಗೆ ಅಗತ್ಯವಾದ ಆಹಾರ, ಕುಡಿಯುವ ನೀರು, ಆರೋಗ್ಯ, ತುಂಡು ಬಟ್ಟೆ ಮತ್ತು ತುಂಡು ಸೂರು ಮತ್ತು ಅಗತ್ಯವಾದ ಮೂಲಭೂತ ಶಿಕ್ಷಣ ಇವು ದೊರಕಿದೆಯೇ?

ಹಾಗಾದರೆ ಮೇಲಿನ ತಿಳಿವಿಗೆ ಗಾಂಧೀಜಿಯವರು ಹೇಗೆ ಭಿನ್ನವಾಗುತ್ತಾರೆ? ಅವರೂ ಈ ಮೇಲಿನ ನಿಲುವುಗಳನ್ನೇ ಪ್ರತಿಪಾದಿಸಿದರೆ? ಖಂಡಿತವಾಗಿಯೂ ಅವರೆಂದೂ ಸಹ ಮೇಲಿನ ನಿಲುವುಗಳನ್ನು ಒಪ್ಪಿರಲಿಲ್ಲ. ಬದಲಾಗಿ ಅಂತಹ ನಿಲುವುಗಳು ನಮ್ಮನ್ನು ಮತ್ತಷ್ಟು ತೊಂದರೆಗೆ ಸಿಲುಕಿಸುತ್ತವೆ ಎಂದು ಮನಗಂಡು ಭಿನ್ನವಾದ ಬಿಡುಗಡೆಯ ದಾರಿಯನ್ನು ನಮ್ಮ ಮುಂದೆ ಇಟ್ಟಿದ್ದರು ಎನ್ನುವುದನ್ನು ಇನ್ನು ನಾವು ಚರ್ಚಿಸಬಹುದು.

"ನನ್ನ ದೃಷ್ಟಿಯಲ್ಲಿ ಗ್ರಾಮ ಸ್ವರಾಜ್ಯ ಎಂದರೆ ಅದೊಂದು ಪೂರ್ಣ ಪ್ರಮಾಣದ ಗಣರಾಜ್ಯವಾಗಿದ್ದು, ಸ್ವಾತಂತ್ರ್ಯವಾಗಿಯೇ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುಂತಿದ್ದು, ಉಳಿದ ಸಂಗತಿಗಳಿಗೆ ಅನುಗುಣವಾಗಿ, ಪರಸ್ಪರಾವಂಲಂಬಿ ಬದುಕನ್ನು ನಡೆಸುವಂತಹದ್ದು. ಆದ್ದರಿಂದ ಪ್ರತಿಯೊಂದು ಹಳ್ಳಿಯ ಆದ್ಯ ಕೆಲಸವೆಂದರೆ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಮತ್ತು ಬಟ್ಟೆಗೆ ಅಗತ್ಯವಾದ ಹತ್ತಿಯನ್ನು ಬೆಳೆದುಕೊಳ್ಳುವುದು. ದನಕರುಗಳಿಗೆ ಸಾಕಷ್ಟು ಮೇವು ಇಟ್ಟುಕೊಂಡಿರಬೇಕು ಮತ್ತು ವಯಸ್ಕರಿಗೆ ಮತ್ತು ಮಕ್ಕಳಿಗೆ ಆಟವಾಡಲು ಒಂದು ಮೈದಾನವಿರಬೇಕು. ಈ ಅಗತ್ಯಗಳನ್ನು ಪೂರೈಸಿ ಭೂಮಿ ಉಳಿದರೆ ಅಲ್ಲಿ ಲಾಭದಾಯಕ ಬೆಳೆಗಳನ್ನು ಬೆಳೆಯಬೇಕು. ಹಾಗೆಂದು ಅಲ್ಲಿ ಗಾಂಜಾ, ತಂಬಾಕು, ಅಫೀಮು ಇತ್ಯಾದಿಗಳನ್ನು ಬೆಳೆಯಕೂಡದು." ಈ ಮಾತುಗಳು ನಾಳಿನ ಹಳ್ಳಿಗಳು ಹೇಗಿರಬೇಕು ಎನ್ನುವದರ ಬಿಂಬವನ್ನು ಕಟ್ಟುತ್ತವೆ.



"ಪ್ರತಿ ಹಳ್ಳಿಯೂ ಸಹ ಒಂದು ರಂಗಭೂಮಿ, ಶಾಲೆ ಮತ್ತು ಸಮುದಾಯ ಭವನವನ್ನು ಹೊಂದಿರಬೇಕು. ಅಂತಹ ಗ್ರಾಮದಲ್ಲಿ ನೀರಿನ ಮೂಲಗಳಿದ್ದು, ಶುದ್ಧ ನೀರು ಸರಬರಾಜು ವ್ಯವಸ್ಥೆಯನ್ನು ಹೊಂದಿರಬೇಕು. ಇದನ್ನು ಬಾವಿಗಳ ಮೂಲಕ ಅಥವಾ ಕೆರೆಗಳ ಮೂಲಕ ಮಾಡಿಕೊಳ್ಳಬಹುದು. ಒಂದು ಹಂತದವರೆಗೆ ಅಂದರೆ ಪ್ರೌಢ ಶಿಕ್ಷಣದವರೆಗೆ ಶಿಕ್ಷಣವೆನ್ನುವುದು ಅಲ್ಲಿ ಕಡ್ಡಾಯವಾಗಿರುತ್ತದೆ. ಹಳ್ಳಿಯಲ್ಲಿ ಸಾಧ್ಯವಾದಷ್ಟೂ ಮಟ್ಟಿಗೆ ಯಾವುದೇ ಚಟುವಟಿಕೆಯನ್ನೂ ಸಹಕಾರದ ಆಧಾರದಲ್ಲಿ ನಡೆಸಬೇಕು. ಅಲ್ಲಿ ಶ್ರೇಣೀಕೃತ ಅಸ್ಪೃಶ್ಯತೆಯಾಚರಣೆಯ ಜಾತಿ ಇರಕೂಡದು. ಯಾವುದೇ ಸಂದರ್ಭದಲ್ಲಿ ಹಳ್ಳಿಯ ಸಮುದಾಯವು ಅಹಿಂಸೆಯನ್ನು ಆಧರಿಸಿದ ಸತ್ಯಾಗ್ರಹ ಮತ್ತು ಅಸಹಕಾರ ತಂತ್ರವನ್ನು ಜಾರಿಮಾಡುವಂತಿರಬೇಕು. ಹಳ್ಳಿಯಲ್ಲಿ ಒಂದು ಕಾವಲು ಪಡೆ ಸರದಿಯಂತೆ ಕಾರ್ಯ ನಿರ್ವಹಿಸುವಂತಿದ್ದು, ಅದಕ್ಕಾಗಿ ಒಂದು ಹೊತ್ತಗೆಯಲ್ಲಿ ಹೆಸರುಗಳನ್ನು ದಾಖಲಿಸಿಕೊಳ್ಳಬಹುದು. ಹಳ್ಳಿಯ ಆಡಳಿತವನ್ನು ನಡೆಸಲು ಹಳ್ಳಿಯ ವಯಸ್ಕ ಮಹಿಳೆ ಮತ್ತು ಪುರುಷರು ಸೇರಿ ಐದು ಮಂದಿಯ ಅರ್ಹತೆಯನ್ನಾಧರಿಸಿದ ಪಂಚಾಯಿತಿಯೊಂದನ್ನು ಮತ ಚಲಾವಣೆಯ ಮೂಲಕ ಒಂದು ವರ್ಷದ ಅವಧಿಗೆ ಆರಿಸಿಕೊಳ್ಳಬೇಕು. ಇವರಿಗೆ ಅಗತ್ಯವಾದ ಎಲ್ಲಾ ಅಧಿಕಾರ ಮತ್ತು ಉಸ್ತುವಾರಿ ಇರಬೇಕು. ಅಲ್ಲಿ ಯಾವುದೇ ರೀತಿಯ ಒಪ್ಪಿತ ಶಿಕ್ಷೆ ಇಲ್ಲದಿರುವುದರಿಂದ ಈ ಪಂಚಾಯತಿಯೇ ಪೂರ್ಣವಾಗಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗವಾಗಿ ಕಾರ್ಯ ನಿರ್ವಹಿಸಬೇಕು.

"ಈ ರೀತಿಯಲ್ಲಿ ಯಾವುದೇ ಹಳ್ಳಿ ಗಣರಾಜ್ಯವಾಗಿ ಕಾರ್ಯ ನಿರ್ವಹಿಸುವಾಗ ಇದೇ ಹಳ್ಳಿಯಿಂದ ರೆವೆನ್ಯು ವಸೂಲಿ ಮಾಡುವ ಸರ್ಕಾರವೂ ಸಹ ಮಧ್ಯ ಪ್ರವೇಶಿಸಬಾರದು.ಇಲ್ಲಿ ನಾನು ನೆರೆಯ ಹಳ್ಳಿಗಳೊಡನೆ ಇರಬೇಕಾದ ಮತ್ತು ಕೇಂದ್ರದೊಡನೆ ಇರಬೇಕಾದ ಸಂಬಂಧದ ಬಗ್ಗೆ ತಲೆಕೆಡಿಸಿಕೊಂಡಿಲ್ಲ ನನ್ನ ಉದ್ದೇಶ ಇರುವುದು ಹಳ್ಳಿಯ ಆಡಳಿತವನ್ನು ಅನಾವರಣಗೊಳಿದುವುದೇ ಆಗಿದೆ. ಇಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮೇಲೆ ನಿಂತ ನಿಜವಾದ ಪ್ರಜಾತಂತ್ರ ವ್ಯವಸ್ಥೆ ಇರಬೇಕು. ವ್ಯಕ್ತಿಯು ತನ್ನನ್ನು ತಾನೇ ಆಳಿಕೊಳ್ಳುವ ಸರ್ಕಾರವಾಗಿರಬೇಕು. ಈ ವ್ಯಕ್ತಿ ಮತ್ತು ಆ ವ್ಯಕ್ತಿ ಇರುವ ಹಳ್ಳಿ ಜಗತ್ತಿನ ಯಾವುದೇ ಶಕ್ತಿಯನ್ನು ಎದುರಿಸುವಂತಿರಬೇಕು. ಅಲ್ಲಿರುವ ದಿಟವಾದ ಕಾನೂನೆಂದರೆ ವ್ಯಕ್ತಿ ತನ್ನ ಹಳ್ಳಿಯ ಘನತೆಗಾಗಿ ಎಲ್ಲದಕ್ಕೂ ಸಿದ್ಧನಾಗಿರಬೇಕು. ಇಂತಹ ಮಾದರಿ ಹಳ್ಳಿ ಸಾಧ್ಯವಾಗಬೇಕಾದರೆ ಜೀವನ ಪೂರ್ತಿ

ಕಾಲ ಬೇಕಾಗಬಹುದು. ಪ್ರಜಾತಂತ್ರವನ್ನು ಪ್ರೀತಿಸುವ ಯಾವನೇ ಆದರೂ ಆತನಿಗೆ ಈ ಹಳ್ಳಿಯೇ ಜಗತ್ತು. ಅದೇ ಆತನ ಕರ್ಮ ಭೂಮಿ. ಆತನೇ ಹಳ್ಳಿಯ ಕಸ ತೆಗೆಯುವವನಾಗಿ, ನೂಲುವವನಾಗಿ, ಕಾವಲುಗಾರನಾಗಿ, ವೈದ್ಯನಾಗಿ ಮತ್ತು ಶಾಲಾ ಶಿಕ್ಷಕನಾಗಿ ಎಲ್ಲಾ ಪಾತ್ರವನ್ನು ವಹಿಸಬೇಕು. ಇಲ್ಲಿ ತಯಾರಾಗುವು ವಸ್ತುಗಳು ಗುಣಮಟ್ಟದ್ದಾಗಿದ್ದು ಅದಕ್ಕೆ ತಕ್ಷಣ ಮಾರುಕಟ್ಟೆ ದೊರೆಯುವಂತಿರಬೇಕು. ಈ ಹಳ್ಳಿಯಲ್ಲಿ ಕವಿಗಳು, ನಿರ್ಮಾಣಗಾರರು, ಭಾಷಾತಜ್ಞರು ಮತ್ತು ಸಂಶೋಧಕರು ಇರಬೇಕು.




"ಇಂದಿನ ನಮ್ಮ ಹಳ್ಳಿಗಳು ತಿಪ್ಪೆಗುಂಡಿಗಳಾಗಿ ಬಿಟ್ಟಿವೆ. ಆದರೆ ನಾಳಿನ ನಮ್ಮ ಹಳ್ಳಿಗಳು ನಂದನವನಗಳಾಗಿ ಅಲ್ಲಿ ಶೋಷಣೆ ಎನ್ನುವುದು ಇರಕೂಡದು. ಕರಕುಶಲ, ಕಲೆ, ಆರೋಗ್ಯ ಮತ್ತು ಶಿಕ್ಷಣ ಎಲ್ಲವೂ ಸಮಗ್ರವಾಗಿ ಮೇಳೈಸಿರಬೇಕು. ಇಂತಹ ನನ್ನ ಹಳ್ಳಿ ಸಶಕ್ತವಾಗಿದ್ದು, ಅಲ್ಲಿ 1000 ಮಂದಿ ಇರಬೇಕು. ಇಂತಹ ಘಟಕ ಮಾತ್ರ ಸಂಪೂರ್ಣ ಹೊಣೆಗಾರಿಕೆಯಿಂದ ಇದ್ದು ಸ್ವಾವಲಂಭಿಯಾಗಿ ಸಂಘಟಿತಗೊಂಡಿರುತ್ತದೆ".

"ಇಂತಹ ಮಾದರಿ ಹಳ್ಳಿಯಲ್ಲಿ ನೈರ್ಮಲ್ಯ ಎನ್ನುವುದು ಪರಿಪೂರ್ಣತೆಯಿಂದ ಕಂಗೊಳಿಸಬೇಕು. ಇಲ್ಲಿನ ಕುಟೀರ/ಮನೆಗಳು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಂದ ನಿರ್ಮಿತವಾಗಿದ್ದು, ಸಾಕಷ್ಟು ಬೆಳಕು ಮತ್ತು ಗಾಳಿಯನ್ನು ಹೊಂದಿರಬೇಕು. ಈ ಮನೆಯ ವಠಾರದಲ್ಲಿ ಮನೆಗೆ ಮತ್ತು ಜಾನುವಾರಗಳಿಗೆ ಅಗತ್ಯವಾದ ದೇಶೀಯ ತರಕಾರಿ ಮತ್ತು ಮೇವನ್ನು ಬೆಳೆಯುವಂತಿರಬೇಕು. ಹಳ್ಳಿಯ ಬೀದಿಗಳು ಧೂಳಿನಿಂದ ಕೂಡಿರದೆ ಶುಚಿಯಾಗಿರಬೇಕು. ಹಳ್ಳಿಯಲ್ಲಿರುವ ಸಾರ್ವಜನಿಕ ಬಾವಿಗಳು, ಕೆರೆ ಮತ್ತು ನದಿಗಳ ಶುಚಿತ್ವವನ್ನು ಕಾಪಾಡಿಕೊಳ್ಳಲು ಎಲ್ಲರೂ ಕಲಿತಿರಬೇಕು." ಈ ಕನಸಿನ ಹಳ್ಳಿ ನಮಗೆ ದೊರೆಯಬೇಕಾದರೆ ಮತ್ತೆ ನಾವು ಗಾಂಧೀಜಿಯನ್ನೇ ಗಮನಿಸಬೇಕು. ಈ ಕನಸು ಸಾಕಾರವಾಗಬೇಕಾದರೆ, ಗಾಂಧೀಜಿಯವರ ನಿಜವಾದ ಅಸ್ತ್ರಗಳು ಅಣುಬಾಂಬ್ ಅಲ್ಲ. ದೋಣ್ಣೆಯೂ ಅಲ್ಲ. ಅತ್ಯಾಧುನಿಕವಾದ ತಂತ್ರಜ್ಞಾನಗಳೂ ಅಲ್ಲ. ಬದಲಾಗಿ ಎಲ್ಲರೂ ಬಳಸುವ ಉಪ್ಪು ಮತ್ತು ಚರಕ. ಇವೆರಡರ ಮೇಳೈಸುವಿಕೆಯೇ ನಿಜವಾದ ಸ್ವರಾಜ್ಯದ ಹಳ್ಳಿ ನಿರ್ಮಾಣವಾಗುವುದು. ಅಂದರೆ ಇವೆರಡೂ ಸಹ ಬದುಕನ್ನು ಕಾಪಿಟ್ಟುಕೊಳ್ಳುವ ಅಸ್ತ್ರಗಳೇ ಆಗಿವೆ. ಇವೆರಡೇ ಜನರ ಆತ್ಮಶಕ್ತಿಯ ನಿಜ ಅಸ್ತ್ರಗಳು. ಆದರೆ ನಾವು ಈ ಎರಡು ಅಸ್ತ್ರಗಳನ್ನು ಬಳಸುವುದರಲ್ಲಿ ಸೋತುಬಿಟ್ಟಿದ್ದೇವೆಯಲ್ಲ! ನಮ್ಮ ಆಡಳಿತ ವ್ಯವಸ್ಥೆಗಳು ಏಣಿ-ಶ್ರೇಣಿ ವ್ಯವಸ್ಥೆಯಿಂದ ಕೂಡಿರುವಾಗ, ವ್ಯಕ್ತಿಯಿಂದ ಹಿಡಿದು ಸರ್ಕಾರದವರೆಗೆ ಅಧಿಕಾರದ ಪ್ರತಿ ಸ್ತರದಲ್ಲಿ, ಮೇಲಿನ ಸ್ತರದ ಅಧಿಕಾರ ಕೆಳಗಿನ ಸ್ತರಕ್ಕಿಂತ ಹಂತ ಹಂತವಾಗಿ ಹೆಚ್ಚುತ್ತಾ ಹೋಗುತ್ತದೆ. ಆದರೆ ಗಾಂಧಿಯವರ ಆಡಳಿತದ ಆಶಯ ಇದಾಗಿರಲಿಲ್ಲವಲ್ಲ. ಅವರ ಕಲ್ಪನೆಯಲ್ಲಿ ದೇಶದ ನಿಜವಾದಎಂದರೆ ಪ್ರತಿಯೊಬ್ಬ ಪ್ರಜೆಯೂ ತಮ್ಮನ್ನು ತಾವೇ ಆಳಿಕೊಳ್ಳುವುದು ಮತ್ತು ಅಲ್ಲಿ ಯಾವುದೇ ರಾಜ್ಯವೂ ಪ್ರಜೆಗಳ ಮೇಲೆ ತನ್ನ ಕಾನೂನನ್ನು ಹೇರದಿರುವ ಸ್ಥಿತಿ.ಇದನ್ನು ಕಾಲ ಕ್ರಮೇಣವಾಗಿ ಅಹಿಂಸಾತ್ಮಕ ಅಸ್ತ್ರಗಳಾದ "ಉಪ್ಪು ಮತ್ತು ಚರಕ"ದಿಂದ ಮಾತ್ರ ಸಾಧಿಸಬಹುದಲ್ಲವೇ? ಆದರೆ, ಗಾಂಧೀಜಿಯವರ ಕಂಡರಿಸಿದ ಹಳ್ಳಿಯ ಸಂಕಥನವನ್ನು 'ಉದಾರವಾದಿ ವರಸೆ'ಯಿಂದ ಬಿಡಿಸಿಕೊಂಡು ಅರ್ಥೈಸಬೇಕಾಗಿದೆ. ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯಲ್ಲಿ ಅಡಕವಾಗಿರುವ 'ಸ್ವರಾಜ್ಯ'ದ ಕಲ್ಪನೆ ಪಾಶ್ಚಿಮಾತ್ಯ ಸ್ವಯಂ ತಂತ್ರವಾದ ಪ್ರತಿಪಾದಿಸುವ ವ್ಯಕ್ತಿಯ ಕಲ್ಪನೆಗಿಂತ ಮೂಲಭೂತವಾಗಿ ಭಿನ್ನವಾದುದು. ಸ್ವಯಂ ತಂತ್ರವಾದ ಪ್ರತಿಪಾದಿಸುವ ವ್ಯಕ್ತಿ ಸಮಾಜದ ಜೊತೆಗೆ ಸಂಬಂಧವಿರಿಸಿಕೊಂಡು ಸಮಾಜಕ್ಕಿಂತ ಬೇರೆಯಾದ ಒಂದು ಘಟಕ. ಈ ವ್ಯಕ್ತಿ ಸಮಾಜದಲ್ಲಿ ಸಹಜವಾಗಿ ಕಂಡುಬರುವ ಸ್ಪರ್ಧೆಯ ಮೂಲಕ ತನ್ನ ಯಶಸ್ಸನ್ನು ಹಾಗೂ ಪ್ರತ್ಯೇಕತೆಯನ್ನು ಸಾಧಿಕೊಳ್ಳುತ್ತಾನೆ. ಸ್ವಯಂತಂತ್ರವಾದದ ಆರ್ಥಿಕ ಮುಖವಾದ ಬಂಡವಾಳಶಾಹಿ ವ್ಯವಸ್ಥೆ ಸ್ವಾರ್ಥಪರತೆ, ಸ್ಪರ್ಧೆ ಹಾಗೂ ಲಾಭ-ನಷ್ಟಗಳ ಲೆಕ್ಕಾಚಾರದಲ್ಲಿ ವ್ಯಕ್ತಿಯ ಕಲ್ಪನೆಯನ್ನು ರೂಪಿಸುತ್ತದೆ. ಸಮಾಜದಿಂದ ಪ್ರತ್ಯೇಕಗೊಂಡ ಈ ವ್ಯಕ್ತಿಯ ಶ್ರೇಯೋಭಿವೃದ್ಧಿಯೇ ಸ್ವಯಂತಂತ್ರವಾದಿ ರಾಜ್ಯದ ಆದ್ಯ ಕರ್ತವ್ಯವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಗಾಂಧೀಜಿ ಸ್ವ ಕಲ್ಪನೆಯನ್ನು ನಮ್ಮ ಮುಂದಿಡುತ್ತಾರೆ. ಹಿಂದ್ ಸ್ವರಾಜ್ಯದಲ್ಲಿ ಅವರು ಪ್ರತಿಪಾದಿಸುವ ವ್ಯಕ್ತಿ ಹೇಗಿರುತ್ತಾಳೆ/ನೆಂದರೆ ಒಂದು ನೈತಿಕ ನಡಾವಳಿಯನ್ನು ರೂಢಿಸಿಕೊಂಡಿದ್ದು, ಸಮುದಾಯದ ಒಳಿತಿನಲ್ಲಿ ತನ್ನ ಒಳಿತು ಅಡಗಿದೆ ಮತ್ತು ಅಲ್ಲೇ ತನ್ನ ವ್ಯಕ್ತಿತ್ವದ ಮಾಗುವಿಕೆ ಎನ್ನುವುದು ಇದೆ ಎಂಬ ಧೋರಣೆ ಉಳ್ಳವಾನಾಗಿರುತ್ತಾರೆ.

ಇನ್ನು ಕೊನೆಯಲ್ಲಿ ಜಿ.ಪಿ. ರಾಜರತ್ನಂರವರ ಹೇಳಿಕೆಯ ಮೂಲಕ ಗಾಂಧೀಜಿ ಕಂಡ ಹಳ್ಳಿ ನಮ್ಮ ನಾಳಿನ ಭರವಸೆಯಾಗಿ ನಮ್ಮೆಲ್ಲರ ನಗರೀಕರಣದ ಕೊಳಕಿನಿಂದ ಪಾರಾಗಬಹುದು!

ಯೇಳ್ಕೊಳ್ಳಾಕ್ ಒಂದು ಊರು
ತಲೇಮೇಗ್ ಒಂದ್ ಸೂರು
ಮಲಗಾಕೆ ಬೂಮ್ತಾಯಿ ಮಂಚ
(ರತ್ನನ ಪ್ರಪಂಚ). ❑



**ಅಂತರಂಗ ಮತ್ತು ಬಹಿರಂಗ ಶುದ್ಧಿ ನಮ್ಮನ್ನು ದೈವತ್ವದತ್ತ ಮುನ್ನಡೆಸುತ್ತದೆ.**

ಉತ್ತಮ ಅಭ್ಯಾಸ

# ಗ್ರಾಮಗಳಲ್ಲಿ ತ್ಯಾಜ್ಯ ನಿರ್ವಹಣೆ

ತುಕಾರಾಂ ರಾವ್ ಬಿ. ವಿ.



ಭಾರತ ಗ್ರಾಮ ಪ್ರಧಾನ ದೇಶವಾಗಿದ್ದು, ಜಾಗತೀಕರಣ ಮತ್ತು ನಗರೀಕರಣದಿಂದಾಗಿ, ದೇಶದಲ್ಲಿ ಕೃಷಿ ಭೂಮಿ ಕಡಿಮೆಯಾಗುತ್ತಾ ಸಾಗಿದ್ದು, ಅಲ್ಪ ಜಮೀನಿನಲ್ಲಿಯೇ ಅಧಿಕ ಇಳುವರಿ ಪಡೆಯಲು, ಆಧುನಿಕ ಕೃಷಿ ಪದ್ಧತಿಗಳ ಮೊರೆ ಹೋಗಲಾಗುತ್ತಿದೆ. ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಾಗಿದ್ದು, ಭೂಮಿಯ ಫಲವತ್ತತೆ ಹಾಳಾಗುತ್ತಿದ್ದು, ಜನರ ಆರೋಗ್ಯದ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ಸಾವಯವ ಕೃಷಿ ಪದ್ಧತಿಯಲ್ಲಿ ಆರೋಗ್ಯಕ್ಕೆ ಯಾವುದೇ ಪಾರ್ಶ್ವ ಪರಿಣಾಮ ಇಲ್ಲದಿರುವದರಿಂದ ಇತ್ತೀಚೆಗೆ ಸಾವಯವ ಕೃಷಿಯಿಂದ ಬೆಳೆಯುವ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದ್ದರೂ, ಈ ವ್ಯವಸ್ಥೆ ಅಪರೂಪವೆನಿಸಿದೆ. ಎರೆಹುಳು ಗೊಬ್ಬರ ಸಾವಯವ ಕೃಷಿಗೆ ಅತ್ಯುಪಯುಕ್ತವಾಗಿದ್ದು, ಇದಕ್ಕೆ ವ್ಯಾಪಕ ಬೇಡಿಕೆ ಇದೆ. ಜಾನುವಾರುಗಳ ಸಗಣಿಯ ತಿಪ್ಪೆ ಗೊಬ್ಬರಕ್ಕೂ ಕೃಷಿಕರು ಹೆಚ್ಚಿನ ಆದ್ಯತೆ ನೀಡುತ್ತಾರೆ. ಆದರೆ ಇದು ಬಳಕೆಗೆ ಯೋಗ್ಯವಾಗುವ ಗೊಬ್ಬರವಾಗಲು ಕನಿಷ್ಠ ಒಂದು ವರ್ಷವಾದರೂ ಬೇಕು. ಇದೀಗ ಕೊಪ್ಪಳ ಜಿಲ್ಲೆಯಲ್ಲಿ ಇದೇ ರೀತಿಯ ತ್ಯಾಜ್ಯವನ್ನು ಬಳಸಿಕೊಂಡು ಜೈವಿಕ ಗೊಬ್ಬರ ತಯಾರಿಸುವ ಗುಜರಾತ್ ಮಾದರಿಯ ಹೊಸ ತಂತ್ರ ಅನುಸರಿಸಿ, ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆಗೆ ಕೊಪ್ಪಳ ಜಿಲ್ಲಾ ಪಂಚಾಯತಿ ಮುಂದಾಗಿದೆ.

ಕಳೆದ ಬಾರಿ ರಾಜ್ಯದಲ್ಲಿಯೇ ಅತಿ ಹೆಚ್ಚು ಶೌಚಾಲಯ ನಿರ್ಮಾಣ ಮಾಡಿ ಪ್ರಥಮ ಸ್ಥಾನ ಪಡೆದು, ಶೌಚಾಲಯ ಕ್ರಾಂತಿಗೆ ಮುನ್ನುಡಿ ಬರೆದಿದ್ದ ಕೊಪ್ಪಳ ಜಿಲ್ಲೆ ಈ ಬಾರಿ ರೈತೋಪಯೋಗಿ ಜೈವಿಕ ಗೊಬ್ಬರ ತಯಾರಿಸಿ, ತ್ವರಿತ ತ್ಯಾಜ್ಯ ವಿಲೇವಾರಿಯ ವಿನೂತನ ಪ್ರಯತ್ನವನ್ನು ಕೈಗೆತ್ತಿಕೊಳ್ಳುವ ಮೂಲಕ ಎಲ್ಲರ ಗಮನ ಸೆಳೆದಿದೆ. 'ಮಾಧ್ಯಮ' ಎನ್ನುವ ವಿಶಿಷ್ಟ ಸೂಕ್ಷ್ಮಾಣು ಪುಡಿ ಬಳಸಿ ತಿಪ್ಪೆ ಗೊಬ್ಬರ ಮಾಡಲಾಗುತ್ತಿದೆ. ಪ್ರಾಯೋಗಿಕವಾಗಿ ಕೊಪ್ಪಳ ತಾಲೂಕಿನ ಹಿಟ್ನಾಳ ಮತ್ತು ಕಿನ್ನಾಳ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ವಿಸ್ತರಿಸಲು ಯೋಜಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ –ಸಂಜೀವಿನಿ ಮತ್ತು ನಿರ್ಮಲ ಭಾರತ ಅಭಿಯಾನ ಯೋಜನೆಗಳ ಸಂಯುಕ್ತಾಶ್ರಯದಲ್ಲಿ ಹಿಟ್ನಾಳ ಗ್ರಾಮದಲ್ಲಿ ಮಾಧ್ಯಮ ಜೈವಿಕ ಗೊಬ್ಬರ ಪ್ರಾತ್ಯಕ್ಷಿಕೆ ನಡೆಸಲಾಯಿತು.

### ಏನಿದು 'ಮಾಧ್ಯಮ' ಜೈವಿಕ ಪುಡಿ

ರೈತರಿಗೆ ಉಪಯುಕ್ತವಾಗುವಂತಹ ಸೂಕ್ಷ್ಮಾಣುಗಳು ಹಾಗೂ ಫಂಗೈ ವಸ್ತು ಬಳಸಿ, ಪುಡಿಯನ್ನು ತಯಾರಿಸಲಾಗುತ್ತದೆ. ಈ ಸೂಕ್ಷ್ಮಾಣುಗಳಿಂದ ಮನುಷ್ಯ, ಪ್ರಾಣಿ ಅಥವಾ ಯಾವುದೇ ಜೀವಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಇರುವುದಿಲ್ಲ. ಎರೆಹುಳುಗಳು ಮಣ್ಣನ್ನು ತಿಂದ ನಂತರ ಅವುಗಳ ತ್ಯಾಜ್ಯ ಹೇಗೆ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆಯೋ ಅದೇ ಮಾದರಿಯಲ್ಲಿ ಬರಿಗಣ್ಣಿಗೆ ಕಾಣದ ಈ ಸೂಕ್ಷ್ಮಾಣುಗಳು ಹಾಗೂ ಫಂಗೈ ವಸ್ತು, ತಿಪ್ಪೆಯ ತ್ಯಾಜ್ಯವನ್ನು ಫಲವತ್ತತೆಯ ಜೈವಿಕ ಗೊಬ್ಬರವನ್ನಾಗಿಸುತ್ತವೆ. ಇಂತಹ ಜೈವಿಕ ಪುಡಿಯನ್ನು ಗುಜರಾತ್ ಹಾಗೂ ಇತ್ತೀಚೆಗೆ ಮಹಾರಾಷ್ಟ್ರ ರಾಜ್ಯಗಳಲ್ಲಿ ತಯಾರಿಸಲಾಗುತ್ತಿದೆ. ಸದ್ಯ ಈ ಜೈವಿಕ ಪುಡಿ ಪ್ರತಿ ಕೆ.ಜಿ.ಗೆ ರೂ. 120 ರಂತೆ ಲಭ್ಯವಾಗುತ್ತಿದೆ.



### ಜೈವಿಕ ಗೊಬ್ಬರವಾಗುವ ಬಗೆ

ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರುಗಳ ಸಗಣಿ, ಕೊಟ್ಟಿಗೆಯ ಗೊಬ್ಬರ ಹಾಗೂ ತ್ಯಾಜ್ಯವನ್ನು ತಿಪ್ಪೆಗುಂಡಿಗಳಲ್ಲಿ ಹಾಕುತ್ತಾರೆ. ಇಂತಹ ತಿಪ್ಪೆಗುಂಡಿಗಳಲ್ಲಿ ಗೊಬ್ಬರ ಕಳಿತು, ಹೊಲಗಳಿಗೆ ಹಾಕಲು ಅಥವಾ ಬಳಕೆಗೆ ಯೋಗ್ಯವಾಗಲು ಕನಿಷ್ಠ ಒಂದು ವರ್ಷವಾದರೂ ಬೇಕು. ಇಂತಹ ತಿಪ್ಪೆಗುಂಡಿಗಳು ಹೆಚ್ಚಿನ ಸ್ಥಳವನ್ನು ಆಕ್ರಮಿಸುತ್ತವೆ ಅಲ್ಲದೆ ಈ ಪದ್ಧತಿಯಲ್ಲಿ ಸಮಯವೂ ವ್ಯರ್ಥವಾಗುತ್ತದೆ. ಗ್ರಾಮಗಳ ಪರಿಸರವೂ ತ್ಯಾಜ್ಯಮಯವಾಗುತ್ತದೆ. ವರ್ಷಾನುಗಟ್ಟಲೆ ರಾಶಿ ಬೀಳುವ ತಿಪ್ಪೆಗುಂಡಿಗಳಲ್ಲಿ ಕ್ರಿಮಿ,

(71ನೇ ಪುಟಕ್ಕೆ)

ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೊಪ್ಪಳ.

# ನಿಮಗಿದು ತಿಳಿದಿದೆಯೇ?

## ವಿಧಿವಿಧಾನ ಲೆಕ್ಕ ಪರಿಶೋಧನೆ

ಹಣಕಾಸು ರಂಗದಲ್ಲಿ ಕಳವು, ಮೋಸ ಮೊದಲಾದ ಅಕ್ರಮಗಳ ತನಿಖೆಯಲ್ಲಿ ಅಗತ್ಯ ಸಾಕ್ಷಿಗಳನ್ನು ಪಡೆಯಲು ಲೆಕ್ಕಪತ್ರ ತಾಂತ್ರಿಕ ನೈಪುಣ್ಯತೆ ಮತ್ತು ಪದ್ಧತಿಗಳನ್ನು ಅನ್ವಯಿಸುವುದಕ್ಕೆ ವಿಧಿವಿಧಾನ ಪರಿಶೋಧನೆ ಎನ್ನುತ್ತಾರೆ. ಈ ಕ್ರಮವನ್ನು ವಿಧಿವಿಧಾನ ಲೆಕ್ಕ ಪರಿಶೋಧನೆ ಎಂದೂ ಕರೆಯುತ್ತಾರೆ. ಅಪರಾಧ ನಡೆದಿದೆಯೊ ಇಲ್ಲವೊ ಎಂಬುದನ್ನು ನಿರ್ಧರಿಸಲು ಹಾಗೂ ಆಪಾದನೆಗೊಳಗಾದ ಸಂಶಯಿತ ವ್ಯಕ್ತಿಯ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ಸಂಗ್ರಹಿಸಲು ಈ ಕ್ರಮ ಬಳಸಲಾಗುತ್ತದೆ. ತನಿಖೆಯ ಪ್ರತಿಹಂತದಲ್ಲೂ ಹಣಕಾಸು ವಹಿವಾಟಿನ ಏರಿಳಿತಗಳನ್ನು ಸೂಕ್ಷ್ಮವಾಗಿ ಪರಿಶೀಲನೆಗೊಳಪಡಿಸಲಾಗುತ್ತದೆ. ತನಿಖೆಯಲ್ಲಿ ಸ್ಥಳ, ವೇಳೆ, ಅವಧಿ ಪ್ರಮಾಣ ಎಲ್ಲವೂ ಮುಖ್ಯವಾಗುತ್ತದೆ. ಅಕ್ರಮ ಚಟುವಟಿಕೆಯಿಂದ ಆಗಿರಬಹುದಾದ ಹಾನಿಯನ್ನು ಅಂದಾಜು ಮಾಡಲಾಗುತ್ತದೆ. ತನಿಖೆ ಎರಡು ಹಂತದ್ದಾಗಿರುತ್ತದೆ ಮೊದಲ ಯೋಜನಾ ಹಂತದಲ್ಲಿ ಮೋಸ ಎಷ್ಟು ವರ್ಷಗಳಿಂದ ಹಾಗೂ ಯಾವ ರೀತಿ ನಡೆದಿದೆ ಎಂಬುದನ್ನು ಕಂಡುಹಿಡಿಯಲಾಗುತ್ತದೆ.

ಎರಡನೇ ಹಂತದಲ್ಲಿ ಪರಿಪೂರ್ಣವಾಗಿ ಪರಿಶೀಲಿಸಿ, ಗ್ರಾಹಕರಿಗೆ ವರದಿ ನೀಡಲಾಗುತ್ತದೆ. ಮೋಸ ನಿಜವಾಗಿ ನಡೆದಿದೆಯೊ ಇಲ್ಲವೊ, ನಡೆದಿದ್ದರೆ, ಯಾರ‍್ಯಾರು ಶಾಮೀಲಾಗಿದ್ದಾರೆ, ಎಷ್ಟು ಪ್ರಮಾಣದಲ್ಲಿ ಹಣಕಾಸು ನಷ್ಟವಾಗಿದೆ ಎಂಬುದನ್ನು ನಿರ್ಧರಿಸಲಾಗುತ್ತದೆ.

ಗ್ರಾಹಕರು ನಂತರ ಪ್ರಮಾಣೀಕೃತ ವಿಧಿವಿಧಾನ ಲೆಕ್ಕಪತ್ರ ಪರಿಶೋಧನೆಯನ್ನು ಕಾನೂನು ಕ್ರಮಕ್ಕಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಾರೆ. ಉನ್ನತ ಮಟ್ಟದ ತರಬೇತಿ ಪಡೆದ ತಜ್ಞರು ಬೇಡಿಕೆಗೆ ಅನುಗುಣವಾಗಿ ವ್ಯಕ್ತಿ ಅಥವಾ ಸಂಸ್ಥೆಯ ವಹಿವಾಟಿನ ದಾಖಲೆಗಳನ್ನು ಪರಿಶೀಲಿಸುತ್ತಾರೆ.

2013 ರ ಕಂಪನಿ ಕಾಯ್ದೆ ಸೆಕ್ಷನ್ 177 ರ ಪ್ರಕಾರ ಲೆಕ್ಕಪತ್ರ ಪರಿಶೋಧನಾ ಸಮಿತಿಗೆ ಕಂಪನಿಯ ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುವ, ಅದನ್ನು ಪರಿಶೋಧಿಸುವ ಹಾಗೂ ಅಗತ್ಯವಿದ್ದರೆ, ಈ ನಿಟ್ಟಿನಲ್ಲಿ ಬಾಹ್ಯ ಮೂಲಗಳಿಂದ ವೃತ್ತಿಪರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುವ ಅಧಿಕಾರವಿದೆ. ಅಗತ್ಯಬಿದ್ದರೆ, ಕೇಂದ್ರ ಸರ್ಕಾರ ಒಂದು ಅಧಿಸೂಚನೆ ಮೂಲಕ 'ಗಂಭೀರ ಮೋಸ ತನಿಖಾ ಕಚೇರಿ' (ಎಸ್‌ಎಫ್‌ಐಒ) ಸ್ಥಾಪಿಸಿ, (ಓರ್ವ ನಿರ್ದೇಶಕನ ನೇತೃತ್ವದ ಈ ಕಚೇರಿ, ಬ್ಯಾಂಕಿಂಗ್, ತೆರಿಗೆ, ಹಣಕಾಸು ಅಪರಾಧ ಪರಿಶೋಧನಾ ತಜ್ಞರನ್ನು ಹೊಂದಿರುತ್ತದೆ) ಕಂಪನಿಯ ಬಗ್ಗೆ ತನಿಖೆ ನಡೆಸುವ ಅವಕಾಶವನ್ನು ಕಾಯ್ದೆಯಲ್ಲಿ ಕಲ್ಪಿಸಲಾಗಿದೆ. ಭಾರತದಲ್ಲಿ ಫೊರೆನ್ಸಿಕ್ ಆಡಿಟಿಂಗ್ ಸಂಸ್ಥೆ ಕೆಪಿಎಂಜಿನ ಶಾಖೆ ಇದ್ದು 691 ಸಿಬ್ಬಂದಿ ಹೊಂದಿದೆ. 2010–11 ರಲ್ಲಿ ಈ ಶಾಖೆ 77 ಪ್ರಕರಣಗಳ ತನಿಖೆ ನಡೆಸಿತ್ತು. 2013ರಲ್ಲಿ 1220 ಪ್ರಕರಣಗಳ ಬಗ್ಗೆ ತನಿಖೆ ನಡೆಸಿತು. ❑

(70ನೇ ಪುಟದಿಂದ)

## ಗ್ರಾಮಗಳಲ್ಲಿ ತ್ಯಾಜ್ಯ ನಿರ್ವಹಣೆ ವಿನೂತನ ತಂತ್ರ

ಕೀಟಗಳು ಉತ್ಪತ್ತಿಯಾಗಿ, ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆಗಳೂ ಹೆಚ್ಚು. ಇದನ್ನು ತಡೆಗಟ್ಟುವುದು ಜೊತೆಗೆ ಅತ್ಯಲ್ಪ ಅವಧಿಯಲ್ಲಿ ಫಲವತ್ತತೆಯ ಗೊಬ್ಬರ ರೈತರಿಗೆ ಲಭ್ಯವಾಗುವಂತೆ ಮಾಡುವ ವಿಶೇಷ ತಂತ್ರ ಇದಾಗಿದೆ. ಸೂಕ್ಷ್ಮಾಣುಗಳನ್ನು ಒಳಗೊಂಡಿರುವ 'ಮಾಧ್ಯಮ' ಎನ್ನುವ ಜೈವಿಕ ಪುಡಿಯನ್ನು ನೀರಿನಲ್ಲಿ ಬೆರೆಸಿ, ತಿಪ್ಪೆಗುಂಡಿಯ ತ್ಯಾಜ್ಯದ ರಾಶಿಯ ಮೇಲೆ ಸಿಂಪಡಿಸಿದರೆ, ಕೇವಲ 45 ದಿನಗಳಲ್ಲಿ ಜೈವಿಕ ಗೊಬ್ಬರ ಸಿದ್ಧವಾಗುತ್ತದೆ. ಅಲ್ಲದೆ ತಿಪ್ಪೆ ತ್ಯಾಜ್ಯದ ಪ್ರಮಾಣ ಶೇ. 30 ಕ್ಕೆ ಕುಸಿಯುತ್ತದೆ. ಪ್ರತಿ ಒಂದು ಟನ್ ತ್ಯಾಜ್ಯಕ್ಕೆ 1 ಕೆ.ಜಿ. ಯಷ್ಟು ಜೈವಿಕ ಮಾಧ್ಯಮ ಪುಡಿಯನ್ನು ನೀರಿನಲ್ಲಿ ಬೆರೆಸಿ ತ್ಯಾಜ್ಯದ ಮೇಲೆ ಸಿಂಪಡಿಸಿದರೆ, ಜೈವಿಕ ಕ್ರಿಯೆ ಆರಂಭವಾಗುತ್ತದೆ.

ಎರೆ ಹುಳುವಿನ ಮಾದರಿಯಲ್ಲಿ ಈ ಸೂಕ್ಷ್ಮಾಣು ಜೀವಿಗಳು ತ್ಯಾಜ್ಯವನ್ನು ತಿಂದು, ಗೊಬ್ಬರ ತಯಾರಿಸುತ್ತವೆ. ರಾಸಾಯನಿಕ ಕ್ರಿಯೆ ಇಲ್ಲದಿರುವುದರಿಂದ, ಯಾವುದೇ ಅಡ್ಡ ಪರಿಣಾಮವೂ ಇಲ್ಲ.

ಕೊಪ್ಪಳ ತಾಲೂಕಿನ ಹಿಟ್ನಾಳ ಮತ್ತು ಕಿನ್ನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ಪ್ರಾಯೋಗಿಕ ಅನುಷ್ಠಾನ, ಯಶಸ್ವಿಗೊಂಡಲ್ಲಿ, ಜಿಲ್ಲೆಯಾದ್ಯಂತ ಈ ವಿಧಾನವನ್ನು ವಿಸ್ತರಿಸಿ, ಅತ್ಯಲ್ಪ ದರದಲ್ಲಿ ರೈತರಿಗೆ ಈ ಜೈವಿಕ ಪುಡಿ ಲಭ್ಯವಾಗುವಂತೆ ಮಾಡಲು ಜಿಲ್ಲಾ ಪಂಚಾಯತಿ ಕ್ರಮ ಕೈಗೊಳ್ಳಲಿದೆ ಎನ್ನುತಾರೆ ಕೊಪ್ಪಳ ಜಿಲ್ಲಾ ಪಂಚಾಯತಿ ಅಧ್ಯಕ್ಷ ಶ್ರೀ ಅಮರೇಶ್ ಕುಳಗಿ ಅವರು.

ಈಗಾಗಲೆ ಈ ವಿಧಾನ ಗುಜರಾತ್ ರಾಜ್ಯದಲ್ಲಿ ಯಶಸ್ವಿಯಾಗಿದೆ. ಜೈವಿಕ ಗೊಬ್ಬರ ತಯಾರಿಕೆ ವಿಧಾನದ ಬಗ್ಗೆ ರೈತರಿಗೆ ಮನವರಿಕೆಯಾಗಿ ಬೇಡಿಕೆ ಬಂದಲ್ಲಿ, ಜಿಲ್ಲೆಯಾದ್ಯಂತ ಈ ಯೋಜನೆ



ವಿಸ್ತರಿಸಲಾಗುವುದು ಎನ್ನುತ್ತಾರೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಕೃಷ್ಣ ಡಿ ಉದಪುಡಿ ಅವರು. ಈ ಜೈವಿಕ ಗೊಬ್ಬರವು ಕಡಿಮೆ ಹಣ ಮತ್ತು ಕಡಿಮೆ ಅವಧಿಯಲ್ಲಿ ರೈತರಿಗೆ ಉತ್ತಮ ಗೊಬ್ಬರವಾಗಿ ಮಾರ್ಪಾಡು ಆಗುವುದಲ್ಲದೆ ಪರಿಸರ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುತ್ತಾರೆ, ಮಾಧ್ಯಮ ಜೈವಿಕ ಗೊಬ್ಬರ ಪ್ರಾತ್ಯಕ್ಷಿಕೆಯ ಮುಖ್ಯ ರೂವಾರಿ ಹಾಗೂ ಈ ಕುರಿತು ವಿಶೇಷ ತರಬೇತಿ ಪಡೆದು ಬಂದಿರುವ ಸಂಜೀವಿನಿ ಯೋಜನೆಯ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕ ಶ್ರೀ ಬಸವರಾಜ್ ಸಿ. ಪಾಟೀಲ್ ರವರು. ❑

## ವಾರ್ತಾ ವಿಶೇಷ

ರೈತರು ಶ್ರಮವಹಿಸಿ ಬೆಳೆದ ಆಹಾರ ಧಾನ್ಯ / ವಸ್ತುಗಳು ಪೋಲಾಗದಂತೆ ಕ್ರಮ ಕೈಗೊಳ್ಳುವ ಅಗತ್ಯವನ್ನು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಒತ್ತಿ ಹೇಳಿದ್ದಾರೆ.

ದೇಶದ ಮೊದಲ ಫುಡ್ ಪಾರ್ಕ್ ಎನಿಸಿದ ತುಮಕೂರಿನ ವಸಂತನರಸಾಪುರ ಫುಡ್ ಪಾರ್ಕ್‌ಅನ್ನು ಇತ್ತೀಚೆಗೆ ಲೋಕಾರ್ಪಣೆ ಮಾಡಿ ಮಾತನಾಡಿದ ಪ್ರಧಾನಮಂತ್ರಿಯವರು ಪ್ರತಿವರ್ಷ ಸುಮಾರು 30 ರಿಂದ 40 ಸಾವಿರ ಕೋಟಿ ರೂಪಾಯಿ ಮೌಲ್ಯದ ಆಹಾರ ವಸ್ತು ಪೋಲಾಗುತ್ತಿದೆ / ಹಾಳಾಗುತ್ತಿದೆ. ಇದನ್ನು ತಡೆಯಬೇಕು. ದೇಶದ ಆರ್ಥಿಕ ವಿಕಾಸಕ್ಕೆ ಕೃಷಿ ಕ್ಷೇತ್ರದ ಕೊಡುಗೆ ಅತಿಮುಖ್ಯ.

ದೇಶದ ಕೃಷಿ ವ್ಯವಸ್ಥೆಗೆ, ಮುಂದಿನ ದಿನಗಳಲ್ಲಿ ಹೊಸ ಆಯಾಮ ನೀಡಲಾಗುವುದು ಎಂದು ಹೇಳಿದರು. ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಿಸಿದ ಎಲ್ಲ ಇಲಾಖೆಗಳಿಂದ ತ್ವರಿತ ಮಂಜೂರಾತಿಗೆ ಅನುವು ಮಾಡಿಕೊಡಲು ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ ತರಲಾಗುವುದು ಎಂದರು.

ತುಮಕೂರಿನಲ್ಲಿ ಸ್ಥಾಪನೆಯಾಗಿರುವ ಫುಡ್‌ಪಾರ್ಕ್‌ನಿಂದ 6 ಸಾವಿರ ರೈತರಿಗೆ ನೇರವಾಗಿ 25 ಸಾವಿರ ಜನರಿಗೆ ಪರೋಕ್ಷವಾಗಿ ಸಹಾಯವಾಗಲಿದೆ. ಸುಮಾರು 30 ಸಾವಿರ ಮಂದಿಗೆ ಉದ್ಯೋಗಾವಕಾಶ ಸಿಗಲಿದೆ ಎಂದರು.

* * *

ಜುಲೈನಲ್ಲಿ ಶೇ 7.96ರಷ್ಟಿದ್ದ ಚಿಲ್ಲರೆ ಹಣದುಬ್ಬರ ಆಗಸ್ಟ್‌ನಲ್ಲಿ ಶೇ 7.8ಕ್ಕೆ ಇಳಿಕೆಯಾಗಿದೆ.

ವರ್ಷದ ಹಿಂದಿನ (2013ರ ಆಗಸ್ಟ್‌ನಲ್ಲಿ ಶೇ 9.52) ಪರಿಸ್ಥಿತಿಗೆ ಹೋಲಿಸಿದರಂತೂ ಈ ಬಾರಿ ಹಣದುಬ್ಬರ ಸಮಾಧಾನ ತರುವಂತಿದೆ. ತರಕಾರಿಗಳು, ಏಕದಳ ಧಾನ್ಯಗಳು ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ತಗ್ಗಿರುವುದರಿಂದ ಚಿಲ್ಲರೆ ಹಣದುಬ್ಬರ ಇಳಿಮುಖವಾಗಲು ಅವಕಾಶವಾಗಿದೆ.

* * *

ಭಾರತ ಪ್ರಸಕ್ತ ಹಣಕಾಸು ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ರೂ 4 ಸಾವಿರ ಕೋಟಿಗೂ ಅಧಿಕ ಮೌಲ್ಯದ ಸಂಬಾರ ಪದಾರ್ಥಗಳನ್ನು ರಫ್ತು ಮಾಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿನ ರಫ್ತು ವಹಿವಾಟಿಗೆ ಹೋಲಿಸಿದರೆ ಶೇ 11 ರಷ್ಟು ಹೆಚ್ಚಳ ಕಂಡುಬಂದಿದೆ.

ಏಪ್ರಿಲ್ ಜುಲೈ ಅವಧಿಯಲ್ಲಿ 72.10 ಕೋಟಿ ಡಾಲರ್‌ಗಳಷ್ಟು (ರೂ 4339 ಕೋಟಿ) ಮೌಲ್ಯದ ಸಂಬಾರ ಮತ್ತು ಸಂಬಾರದಿಂದ ತಯಾರಾದ ವಿವಿಧ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ 68.28 ಕೋಟಿ ಡಾಲರ್ (ರೂ 3,892.72 ಕೋಟಿ) ಸರಕು ರಫ್ತಾಗಿತ್ತು. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number

# ಭರತೇಂದು ಹರಿಶ್ಚಂದ್ರ ಪ್ರಶಸ್ತಿ ಪ್ರದಾನ



ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಶ್ರೀ ಪ್ರಕಾಶ್ ಜಾವಡೇಕರ್‌ರವರು ಪ್ರಕಾಶನ ವಿಭಾಗದ ಪ್ರತಿಷ್ಠಿತ ಭರತೇಂದು ಹರಿಶ್ಚಂದ್ರ ಪುರಸ್ಕಾರಗಳನ್ನು ನವದೆಹಲಿಯಲ್ಲಿ ಪ್ರದಾನ ಮಾಡಿದರು. ಚಿತ್ರದಲ್ಲಿ ಪ್ರಕಾಶನ ವಿಭಾಗದ ಹೆಚ್ಚುವರಿ ಮಹಾನಿರ್ದೇಶಕಿ ಡಾ. (ಶ್ರೀಮತಿ) ಸಾಧನಾ ರಾವತ್ ಅವರನ್ನೂ ಕಾಣಬಹುದು.

## ಕಿಶೋರಿಯರಿಗೆ ಸಂಬಂಧಿಸಿದ ಬರವಣಿಗೆಗಳಿಗೆ ನೂತನ ಪುರಸ್ಕಾರ : ಪ್ರಕಾಶ್ ಜಾವಡೇಕರ್

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ರಾಜ್ಯ ಸಚಿವ ಶ್ರೀ ಪ್ರಕಾಶ್ ಜಾವಡೇಕರ್ ನವದೆಹಲಿಯಲ್ಲಿ 2011 ಮತ್ತು 2012 ನೇ ಸಾಲಿನ 'ಭರತೇಂದು ಹರಿಶ್ಚಂದ್ರ ಪುರಸ್ಕಾರ'ಗಳನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಕಿಶೋರಿಯರ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದ ಮೂಲ ಬರವಣಿಗೆಗಳನ್ನು ಪ್ರೋತ್ಸಾಹಿಸುವ ನೂತನ ಪುರಸ್ಕಾರವೊಂದನ್ನು ಮುಂದಿನ ವರ್ಷ ಪರಿಚಯಿಸಲಾಗುತ್ತದೆ ಎಂದರು. ಕಿಶೋರಾವಸ್ಥೆಯಲ್ಲೇ ಬಾಲಕಿಯರಲ್ಲಿ ಮಹಿಳಾ ಸಬಲೀಕರಣದ ಆಲೋಚನೆಯನ್ನು ಪ್ರೋತ್ಸಾಹಿಸಲು ಈ ನೂತನ ಪ್ರಶಸ್ತಿಯನ್ನು ಪ್ರಾರಂಭಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.


ಪ್ರತಿ ವರ್ಷ ಖ್ಯಾತ ಬರಹಗಾರ ಭರತೇಂದು ಹರಿಶ್ಚಂದ್ರ ಅವರ ಜನ್ಮ ದಿನದಂದು ಭರತೇಂದು ಹರಿಶ್ಚಂದ್ರ ಪುರಸ್ಕಾರಗಳನ್ನು ಪ್ರದಾನ ಮಾಡಲಾಗುತ್ತದೆ. ಈ ಪ್ರಶಸ್ತಿಯ ಜತೆ ಕೊಡಲಾಗುವ ನಗದು ಬಹುಮಾನದ ಮೊತ್ತವನ್ನು ಮುಂಬರುವ ವರ್ಷಗಳಲ್ಲಿ ಹೆಚ್ಚಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಪ್ರಕಾಶನ ಉದ್ಯಮವು ವಿಷಯ ಮತ್ತು ತಂತ್ರಜ್ಞಾನ ಇವೆರಡರಲ್ಲೂ ತೀವ್ರ ಬದಲಾವಣೆ ಹೊಂದಿರುವ ನಿಟ್ಟಿನಲ್ಲಿ ಸರ್ಕಾರದ ಪ್ರಕಾಶನ ವಿಭಾಗದ ಪಾತ್ರದ ಕುರಿತಂತೆ ಯುವಜನತೆಯಿಂದ ಸಚಿವರು ಸಲಹೆ ಸೂಚನೆಗಳನ್ನು ಈ ಸಂದರ್ಭದಲ್ಲಿ ಕೋರಿದರು.

◆◆◆

ಬಾಹ್ಯಾಕಾಶದಲ್ಲಿ ಭಾರತದ ಹಿರಿಮೆ

# ಮಂಗಳನ ಅಂಗಳದಲ್ಲಿ ಮಾಮ್ ನೌಕೆ




2014ರ ಸೆಪ್ಟೆಂಬರ್ 24, ಭಾರತದ ಬಾಹ್ಯಾಕಾಶ ಇತಿಹಾಸದಲ್ಲಿ ಸುವರ್ಣಾಕ್ಷರದ ದಿನ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಇಸ್ರೊ ಕಳಿಸಿದ ನೌಕೆ, ಯಶಸ್ವಿಯಾಗಿ ಮಂಗಳನ ಕಕ್ಷೆ ಸೇರಿದೆ. ಬೆಂಗಳೂರಿನಲ್ಲಿರುವ ಇಸ್ರೊ ಪ್ರಧಾನ ಕಚೇರಿಯಲ್ಲಿ ಈ ಐತಿಹಾಸಿಕ ಘಟನೆಗೆ ಸಾಕ್ಷಿಯಾದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸಾಧನೆಗೆ ಕಾರಣರಾದ ವಿಜ್ಞಾನಿ ವೃಂದವನ್ನು ಅಭಿನಂದಿಸಿದರು.

ಬುಧವಾರ ಭಾರತೀಯರ ಪಾಲಿಗದು 'ಮಂಗಳ'ಕರ ದಿನವಾಗಿತ್ತು. ನಮ್ಮ ಇಸ್ರೊ ವಿಜ್ಞಾನಿಗಳ ಸತತ ಮೂರು ವರ್ಷಗಳ ಶ್ರಮ, ಕನಸುಗಳು ಸಾಕ್ಷಾತ್ಕಾರವಾದ ಕ್ಷಣಗಳನ್ನು ವಿಶ್ವದ ವಿಜ್ಞಾನಿಗಳೊಂದಿಗೆ, ಜನಸಾಮಾನ್ಯರೂ ಸಂಭ್ರಮಿಸಿದರು. ಅಂತರ ಗ್ರಹ ಕಾರ್ಯಾಚರಣೆಯ ಮೊದಲ ಪ್ರಯತ್ನದಲ್ಲೆ ಯಶಸ್ಸು ಗಳಿಸಿದ ಮೊದಲ ದೇಶವೆಂಬ ಕೀರ್ತಿಗೆ ಭಾರತ ಭಾಜನವಾಯಿತು. ಮಂಗಳಯಾನದ ಯಶಸ್ಸನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂತೋಷದಿಂದ ಜಗತ್ತಿಗೆ ಸಾರುತ್ತಾ "ಭವಿಷ್ಯದಲ್ಲಿ, ಭಾರತ ವಿಜ್ಞಾನದಲ್ಲಿ ಜಗದ್ಗುರುವಿನ ಸ್ಥಾನ ಅಲಂಕರಿಸುವ ಮುನ್ಸೂಚನೆಯಿದು, ನಮಗೆ ತಿಳಿಯದ ಹಾದಿಯನ್ನು, ಅಸಾಧ್ಯವಾದುದನ್ನು ಸಾಧಿಸುವುದೇ ಭಾರತೀಯರ ಹವ್ಯಾಸ. ನಮ್ಮ ವಿಜ್ಞಾನಿಗಳ ಈ ಸಾಧನೆಗಾಗಿ ನಾವೆಲ್ಲರೂ ಹೆಮ್ಮೆ ಪಡಬೇಕು" ಎಂದರು.



ಮಾಮ್ ತೆಗೆದ ಮೊದಲ ಛಾಯಚಿತ್ರ

ಅಮೆರಿಕದ ನಾಸಾ, ರಷ್ಯಾ, ಯುರೋಪಿಯನ್ ಏಜೆನ್ಸಿಗಳ ಜೊತೆಯಲ್ಲಿ ಸರಿಸಮಾನವಾಗಿ ನಿಲ್ಲುವಂತಹ ಸಾಧನೆಗೈದ ಭಾರತವು ಸ್ವತಂತ್ರವಾಗಿ ಮಂಗಳಯಾನ ಮಾಡಿದ ಏಕೈಕ ದೇಶವಾಗಿದೆ.

ಭಾರತದ ಮಾರ್ಸ್ ಆರ್ಬಿಟರ್ ಮಿಷನ್‌ನನ್ನು ಮಾಮ್ ಎಂದಿದ್ದಾರೆ. ಇದರ ಹುಟ್ಟು 2010, 2013ರಲ್ಲಿ ಅದು ಮಂಗಳದತ್ತ ಪ್ರಯಾಣ ಆರಂಭಿಸಿತು. ಅದು ಮಂಗಳನ ಕಕ್ಷೆ ಸೇರಿದ್ದು 24–9–14ರಂದು, ಈ ಸಾಧನೆಗಾಗಿ ಖರ್ಚಾಗಿರುವುದು ರೂ 450 ಕೋಟಿ. ಕೆಂಪು ಗ್ರಹದ ಮೇಲ್ಮೆಯುನ್ನು, ಅಲ್ಲಿನ ವಾತಾವರಣವನ್ನು ತಿಳಿಸುವುದು ಮಾಮ್ ಕೆಲಸ. ಮಂಗಳನ ಎಲ್ಲಾ ಮಗ್ಗಲುಗಳನ್ನು ಶೋಧಿಸಲು ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಿದ್ದಾರೆ. ಮಂಗಳನ ಮೇಲ್ಮೈಯ ವಿವಿಧ ಭಾಗಗಳಿಂದ ಹೊರಹೊಮ್ಮುವ ಅವಕೆಂಪು ಕಿರಣಗಳನ್ನು ಅಧ್ಯಯನ ಮಾಡಿ, ಮಣ್ಣು–ಕಲ್ಲಿನ ಸಂಯೋಜನೆಯನ್ನು ನಮಗೆ ತಿಳಿಸುವುದು ಇದರ ಮುಖ್ಯ ಕಾಯಕ! ಈಗಾಗಲೇ ಮೊದಲ ಫೋಟೋವನ್ನು ಕ್ಲಿಕ್ಕಿಸಿ ಕಳುಹಿಸಿದೆ, ಜೈ ಹೋ..... ಮಾಮ್ !!